33

2E

ಉರಿಲಿಂಗ ಪೆದ್ದಿಯ
ವಚನಗಳು.

ಉರಿಲಿಂಗ ಪೆದ್ದಿಯ
ವಚನಗಳು.

೮ ಸಂಪಾದನ ಕಾರ್ಯ

I ವಚನ ಸಂಪಾದನೆ

820
52

ಶಿವಾನುಭವ ಗ್ರಂಥಮಾಲಾ ನಂ. ೪೩.

# ಉರಿಲಿಂಗಪೆದ್ದಿಯ ವಚನಗಳು.

ಸಂಪಾದಕರು

**ರಾ॥ ಸಾ॥ ಫ. ಗು. ಹಳಕಟ್ಟಿ**

ಬಿ. ಎ. ಎಲ್. ಎಲ್. ಬಿ.

**ವಿಜಾಪುರ.**

ಶಿವಬಸವ ನಗರ
ಬೆಳಗಾವಿ

**ಬೆಲೆ ೧ ರೂಪಾಯಿ.**

820
521

(...ಗಳನ್ನು ಗ್ರಂಥಕರ್ತರು ತಮ್ಮ
...ಟ್ಟುಕೊಂಡಿರುತ್ತಾರೆ.)

ಶಿವಾನುಭವ ಗ್ರಂಥಮಾಲಾ ನಂ. ೪೩

# ಉರಿಲಿಂಗಪೆದ್ದಿಯ ವಚನಗಳು.


ಸಂಪಾದಕರು

**ರಾ|| ಸಾ|| ಫ. ಗು. ಹಳಕಟ್ಟಿ**

ಬಿ. ಎ. ಎಲ್. ಎಲ್. ಬಿ.

**ವಿಜಾಪುರ.**



ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಅರಿವೇ ಗುರು
ಕ್ರಮಾಂಕ 521.
ಶಿವಬಸವ ನಗರ
ಬೆಳಗಾವಿ.೧೦
ನಾಗನೂರ ಶ್ರೀ ರುದ್ರಾಕ್ಷಿಮಠ


ಬೆಲೆ ೧ ರೂಪಾಯಿ.

# ಪ್ರಸ್ತಾವನೆ.

ಉರಿಲಿಂಗಪೆದ್ದಿಯ ವಚನಗಳು ಒತ್ತಟ್ಟಿಗೆ ಎಲ್ಲಿಯೂ ದೊರೆಯುವದಿಲ್ಲ. ಆದರೆ ಆತನ ವಚನಗಳನ್ನು ಅನೇಕ ಸಂಗ್ರಹಕಾರರು ತಮ್ಮ ಗ್ರಂಥಗಳಲ್ಲಿ ಹೇರಳವಾಗಿ ಉದಹರಿಸಿರುವರು. ಅಂಥ ವಚನಗಳನ್ನು ನಾನು ಬೇರೆಯಾಗಿ ಆರಿಸಿ ತೆಗೆದು ಅವುಗಳನ್ನು ವಿಷಯನುಸಾರವಾಗಿ ವ್ಯವಸ್ಥೆಗೊಳಿಸಿ ಈ ಗ್ರಂಥವನ್ನು ರಚಿಸಿದ್ದೇನೆ. ಈ ಗ್ರಂಥದಲ್ಲಿ ಸಂಸ್ಕೃತ ಆಧಾರ ಶ್ಲೋಕಗಳು ಬಹಳವಾಗಿ ಬಂದಿರುತ್ತವೆ. ಅವೆಲ್ಲವೂ ಬಹುತರ ಅಶುದ್ಧವಾಗಿವೆ. ಅವುಗಳನ್ನು ಶುದ್ಧ ಪಡಿಸುವದು ಬಹು ಕಷ್ಟಕರವಾದ ಕೆಲಸವು. ಇದನ್ನು ವಾಚಕರು ಗ್ರಹಿಸಿ, ಈ ದೋಷವನ್ನು ಕ್ಷಮಿಸುವರೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಪ್ರತಿಯೊಂದು ವಚನದ ಭಾವವನ್ನು ಅದರ ಕೆಳಗೆಯೇ ಕೊಟ್ಟಿರುತ್ತೇನೆ. ಈ ಗ್ರಂಥದ ಮಹತ್ವವನ್ನು ವಾಚಕರು ಅರಿತುಕೊಂಡು, ಅದನ್ನು ಆದರಿಸುವರೆಂದು ನಂಬಿದ್ದೇನೆ.

ವಿಜಾಪುರ. ೧೬-೨-೩೬.

ಫ. ಗು. ಹಳಕಟ್ಟಿ.
ಸಂಪಾದಕ.

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಕ್ರಮಾಂಕ 521.
ಶಿವಬಸವ ನಗರ
ಬೆಳಗಾವಿ.೧೦
ನಾಗನೂರ ಶ್ರೀ ರುದ್ರಾಕ್ಷಿಮಠ

# ಉರಿಲಿಂಗ ಪೆದ್ದಿಗಳ ವಚನಗಳು.

## ದೇವರ ಸ್ವರೂಪು.

**ವಿವರಣೆ:**— ಈ ವಿಷಯವನ್ನು ವಿವರಿಸುವ ಮುಂದಿನ ವಚನಗಳು ಅತ್ಯಂತ ಮಹತ್ವದವವೆ. ಇವುಗಳಲ್ಲಿ ಪರಮಾತ್ಮನೆಂದರೇನು, ಪರಮಾತ್ಮನಿಗೂ ಜಗತ್ತಿಗೂ ಏನು ಸಂಬಂಧವಿದೆ, ಅಂಗ, ಲಿಂಗಗಳೆಂದರೇನು, ಪರಮಾತ್ಮನು ಜಗತ್ತಿನಲ್ಲಿ ಹ್ಯಾಗೆ ವ್ಯವಹರಿಸುತ್ತಾನೆ, ಪರಮಾತ್ಮನಿಗೆ ಜೀವಾತ್ಮನಿಗೂ ಏನು ಸಂಬಂಧವಿದೆ ಈ ಮಹತ್ವದ ವಿಷಯಗಳು ವಿವರಿಸಲ್ಪಟ್ಟವೆ. ಹಾಗೂ ಮೋಕ್ಷವೆಂದರೇನು, ಅದನ್ನು ಹ್ಯಾಗೆ ಪಡೆಯಬೇಕು ಎಂಬುದೂ ಕೂಡ ನಿರ್ದೇಶಿಸಲ್ಪಟ್ಟಿದೆ.

**ವಚನ:**— ೧. ಒಂದೇ ವಸ್ತು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮನಾಯಿತ್ತು. ಪರಮಾತ್ಮನೇ ಲಿಂಗ, ಜೀವಾತ್ಮನೇ ಅಂಗ, ಸಂಗವೇ ಏಕಾತ್ಮ. ತತ್‌ಪದವೆ ಪರಮಾತ್ಮ, ತ್ವಂ ಪದವೇ ಜೀವಾತ್ಮ, ಅಸಿಪದವೇ ತಾದಾತ್ಮ್ಯವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಪರಮಾತ್ಮನೊಬ್ಬನೇ ಇದ್ದಾನೆ, ಅನೇಕ ದೇವತೆಗಳಿಲ್ಲೆಂದು ವಚನಕಾರರು ಯಾವಾಗಲೂ ಅಭಿಪ್ರಾಯಪಡುವದುಂಟು. ಆದ್ದರಿಂದ ಜಗತ್ತನ್ನು ನಿರ್ಮಾಣಮಾಡಿದವನು ಒಬ್ಬನೇ ದೇವನು ಎಂದು ಅವರು ನಂಬಿದ್ದಾರೆ. ಈತನನ್ನು ಅವರು ಪರಶಿವ, ಲಿಂಗ, ಪರಮಾತ್ಮ, ಶೂನ್ಯ, ಬಯಲು, ನಿರವಯ, ಶಿವ, ಪರಬ್ರಹ್ಮ ಎಂದು ಮೊದಲಾದ ಹೆಸರುಗಳಿಂದ ಕರೆದಿದ್ದಾರೆ.

ಈ ಪರಬ್ರಹ್ಮ ವಸ್ತುವಿನ ಒಂದು ಲೀಲೆಯ ಮೂಲಕ ಅದೇ ಎರಡು ತೆರನಾಗುತ್ತದೆ. ಒಂದನ್ನು ಪರಮಾತ್ಮನೆಂತಲೂ ಎರಡನೆಯದನ್ನು ಜೀವಾತ್ಮನೆಂತಲೂ ಇಲ್ಲಿ ಉರಿಲಿಂಗ ಪೆದ್ದಿಗಳು ಕರೆದಿದ್ದಾರೆ. ಈ ಎರಡು ಶಬ್ದಗಳಿಗೆ ಷಟ್‌ಸ್ಥಲದಲ್ಲಿ ಅನುಕ್ರಮವಾಗಿ ಲಿಂಗ ಮತ್ತು ಅಂಗ ಎಂಬ ಹೆಸರುಗಳೂ ಇವೆ.

ಕ್ರಮಾಂಕ 521.
ಶಿವಬಸವ ನಗರ
ಬೆಳಗಾವಿ ೧೦

ಈ ಅಂಗಲಿಂಗಗಳು ಒಂದನ್ನೊಂದು ಬಿಟ್ಟು ಜಗತ್ತಿನಲ್ಲಿ ವ್ಯವಹರಿಸಲಾರವು. ಜಗತ್ತಿನಲ್ಲಿ ನಡೆದಿರುವ ಕಾರ್ಯಗಳೆಲ್ಲ ಇವೆರಡೂ ಕೂಡಿ ನಡೆವದ್ದರ ಮೂಲಕವಾಗಿಯೇ ಉಂಟಾಗುತ್ತವೆ.

ಹೀಗೆ ವ್ಯವಹರಿಸುವಲ್ಲಿ ಅಂಗವು ತಾನೆಲ್ಲಿಂದ ಬಂದಿದೆಂಬದನ್ನು ಲಕ್ಷಿಸದೆ ವರ್ತಿಸಿದ್ದಾದರೆ ಅದು ಅನೇಕ ಯಾತನೆಗಳನ್ನು ಅನುಭವಿಸುತ್ತ ಜನ್ಮಾಂತರಗಳನ್ನು ಹೊಂದುತ್ತ ಹೋಗುವದು. ಆದರೆ ಅದು ತಾನಾರೆಂಬದನ್ನು ತಿಳಿದುಕೊಂಡು ಲಿಂಗಾಭಿಮುಖವಾಗಿದ್ದುಕೊಂಡು ಕಾರ್ಯಗಳನ್ನು ಮಾಡುತ್ತ ಹೋದರೆ, ಲಿಂಗದ ಗುಣಗಳು ಅದರಲ್ಲಿ ಬಂದು ಕಡೆಗೆ ಅದು ಲಿಂಗವೇ ಆಗುವದು.

ಈ ವಿಷಯವನ್ನು ವಚನಕಾರನು ವಚನದ ಅಂತ್ಯಭಾಗದಲ್ಲಿ ತತ್‌ತ್ವಮಸಿ ಎಂಬ ವಾಕ್ಯದ ಮೂಲಕ ಸೂಚಿಸಿರುವನು. ತತ್ ಎಂದರೆ ಪರಮಾತ್ಮ ಅಥವಾ ಲಿಂಗ, ತ್ವಂ ಎಂದರೆ ಜೀವಾತ್ಮ ಅಥವಾ ಅಂಗ, ಅಸಿ ಎಂದರೆ ಈ ಉಭಯ ವಸ್ತುಗಳ ಸಾಮೃಶ್ಯತ್ವವನ್ನು ಸೂಚಿಸುವ ಶಬ್ದ ಎಂದು ಹೇಳಿರುವನು.

ವಚನಕಾರನು ಈ ವಚನದಲ್ಲಿ ಪರಮಾತ್ಮನು ಒಬ್ಬನೇ ಇದ್ದು ಅವನಿಂದಲೇ ಸೃಷ್ಟಿಯು ಆಯಿತು. ಮತ್ತು ಮನುಷ್ಯನಿಗೆ ಅಂತಿಮ ಧ್ಯೇಯವು ಲಿಂಗಾಂಗ ಸಾಮೃಶ್ಯವೆಂಬುದಿರಬೇಕೆಂತಲೂ ಇದರಲ್ಲಿ ಸೂಚಿಸಿರುವನು.

**ವಚನ:**— ೨. ಜಲದೊಳಗಣ ಸೂರ್ಯನಂತೆ ಇರ್ಪನಯ್ಯಾ ಶಿವನು. ಲೋಕಾದಿಲೋಕಂಗಳೊಳಗಿರ್ದೊಡೇನು? ಜಗದ ಪುಣ್ಯಪಾಪ ಸ್ವರ್ಗ ನರಕ ಬಂಧ ಮೋಕ್ಷಕ್ಕೆ ಒಳಗಾದಾತನೇ? ಅಲ್ಲ. ಅದೆಂತೆಂದೊಡೆ, ಜಲದೊಳಗಣ ಪ್ರಕೃತಿ ವಿಕೃತಿಗಳು ಜಲಕ್ಕಲ್ಲದೆ ಸೂರ್ಯಂಗಿಲ್ಲವಾಗಿ. ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ, ಶಿವಂಗಿಲ್ಲವಾಗಿ. ಅನಂತಕೋಟಿ ಬ್ರಹ್ಮಾಂಡಗಳು ತನ್ನ ಒಡಲೊಳಗಿರ್ಪವೆಂದೊಡೆ, ತಾ ಹೊರಗಾಗಿ, ಅಡಗಲೆಡೆಯುಂಟೇ? ಇದು ಕಾರಣ ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ. ವಿಶ್ವಾಧಿಪತಿಯಾಗಲೂ ಬಲ್ಲ.

**ಭಾವ:**— ಹಿಂದಿನ ವಚನದಲ್ಲಿ ಅಂಗಲಿಂಗಗಳು ಹ್ಯಾಗೆ ಉದ್ಭವಿಸಿದವೆಂಬದನ್ನು ವಚನಕಾರನು ಹೇಳಿರುವನು. ಈ ವಚನದಲ್ಲಿ ಅಂಗಲಿಂಗ



ಗಳು ಜಗತ್ತಿನಲ್ಲಿ ಯಾವ ಬಗೆಯ ಸಂಬಂಧವುಳ್ಳವೆಂಬದನ್ನು ಹೇಳಿರುವನು. ಇವುಗಳಲ್ಲಿ ಅಂಗವು ಅನೇಕ ನ್ಯೂನತೆಗಳುಳ್ಳದ್ದಿರುತ್ತದೆ. ಆದ್ದರಿಂದ ಲಿಂಗಕ್ಕೂ ಕೂಡ ಇದೇ ಸ್ಥಿತಿಯೋ ಹ್ಯಾಗೆ, ಮತ್ತು ಅವೆರಡೂ ಪರಸ್ಪರ ಕೂಡಿಕೊಂಡು ವ್ಯವಹರಿಸುವದು ಹ್ಯಾಗೆ ಶಕ್ಯವು ಎಂಬ ಸಂಶಯವು ಉತ್ಪನ್ನವಾಗುತ್ತದೆ. ಈ ಸಂಶಯದ ಪರಿಹಾರವನ್ನು ವಚನಕಾರನು ಈ ವಚನದಲ್ಲಿ ಮಾಡಿರುವನು. ಅವನು ಈ ವಿಷಯದಲ್ಲಿ ಅನ್ನುವದೇನೆಂದರೆ, ಜಲದಲ್ಲಿ ಹ್ಯಾಗೆ ಸೂರ್ಯನು ಪ್ರತಿಬಿಂಬಿಸಿ ಅದರಲ್ಲಿ ಕಾಣುತ್ತಾನೋ, ಹಾಗೆಯೇ ಲಿಂಗವೂ ಕೂಡ ಅಂಗದಲ್ಲಿ ಪ್ರತಿಬಿಂಬಿಸಿ ಹೊಳೆಯುತ್ತದೆ. ಜಲದಲ್ಲಿ ಹ್ಯಾಗೆ ಸೂರ್ಯನ ಸ್ವರೂಪವನ್ನು ಕಾಣಬಹುದೋ ಹಾಗೆಯೇ ಅಂಗದಲ್ಲಿ ಲಿಂಗದ ಸ್ವರೂಪವನ್ನು ಕಾಣಬಹುದು. ಯಾವ ಬಗೆಯ ಸಂಬಂಧವು ಜಲ ಮತ್ತು ಸೂರ್ಯ ಇವುಗಳ ಮಧ್ಯದಲ್ಲಿ ಇರುತ್ತದೋ ಆದೇ ಬಗೆಯ ಸಂಬಂಧವು ಅಂಗ ಲಿಂಗದಲ್ಲಿ ಅಥವಾ ಜಗತ್ತು ಮತ್ತು ಪರಮಾತ್ಮ ಇವುಗಳಲ್ಲಿ ಇರುತ್ತದೆಂದು ಹೇಳಿರುವನು.

ಈ ಸಂಬಂಧವನ್ನು ಕುರಿತು ಅವನು ಅನ್ನುವದೇನೆಂದರೆ, ಶಿವನು ಮೇಲ್ಕಂಡ ರೀತಿಯಿಂದ ಅನಂತ ಲೋಕಗಳಲ್ಲಿ ಇದ್ದರೂ, ಆ ಲೋಕಗಳಿಗೆ ಇರುವ ಬಂಧಮೋಕ್ಷಗಳೂ ಅವುಗಳಲ್ಲಿಯ ಪಾಪಪುಣ್ಯಗಳೂ ಸ್ವರ್ಗ ನರಕಗಳೂ ಪರಶಿವನಿಗೆ ಉಂಟಾಗುವದಿಲ್ಲ. ನೀರಿನ ಪ್ರಾಕೃತಿಕ ಗುಣಗಳು ಹ್ಯಾಗೆ ಸೂರ್ಯನಿಗೆ ಸಂಬಂಧಪಡುವದಿಲ್ಲವೋ ಆದೇ ಮೇರೆಗೆ ಲೋಕದಲ್ಲಿಯ ಕುಂದುಕೊರತೆಗಳು ಲೋಕಕ್ಕೆ ಮಾತ್ರ ಸಂಬಂಧಪಡುತ್ತವೇ ಹೊರ್ತು ಪರಮಾತ್ಮನಿಗೆ ಸಂಬಂಧಪಡುವದಿಲ್ಲ. ಲೋಕದ ಸ್ಥಿತಿಗತಿಗಳು ಲೋಕಕ್ಕಲ್ಲದೆ ಶಿವಂಗೆ ಇರಲಾರವು.

ಬ್ರಹ್ಮಾಂಡಗಳು ಅನಂತಕೋಟಿ ಇದ್ದು ಅವು ಎಷ್ಟು ವಿಸ್ತೀರ್ಣವಾಗಿದ್ದರೂ ಅವೆಲ್ಲವೂ ಪರಮಾತ್ಮನ ಕುಕ್ಷಿಯೊಳಗೆ ಮಾತ್ರ ಇರುತ್ತವೆ. ಪರಮಾತ್ಮನು ಬಾಹ್ಯ ಸೃಷ್ಟಿಗೆ ಅತೀತನಾಗಿರುತ್ತಾನೆ. ಆದ್ದರಿಂದ ಇಂಥವನು ಈ ಸೃಷ್ಟಿಯೊಳಗೆ ಒಂದು ವಿಶಿಷ್ಟ ಸ್ಥಾನದಲ್ಲಿ ಇರುತ್ತಾನೆಂತಲೂ ಅನ್ನಲಿಕ್ಕೆ ಬರಲಾರದು. ಹೀಗೆ ತಿಳಿಯುವದು ತಪ್ಪು ಇರುತ್ತದೆ. ಯಾಕಂದರೆ, ಬಹು ವಿಸ್ತೀರ್ಣವಾದ ಪರಮಾತ್ಮನು ಕಿಂಚಿತ್ತಾದ ಸೃಷ್ಟಿಯಲ್ಲಿ ಇರಲಿಕ್ಕೆ ಇದರಲ್ಲಿ ಸ್ಥಳವೆಲ್ಲಿದೆ?

ಆದ್ದರಿಂದ ಪರಮಾತ್ಮನು ಜಗತ್ತಿನಲ್ಲಿ ಕೇವಲ ಪ್ರತಿಬಿಂಬರೂಪನಾಗಿ ವಾಸಿಸುತ್ತಾನೆ. ಅವನು ಜಗತ್ತಿನ ಬಂಧಮೋಕ್ಷಗಳಿಗೆ ಹೊರಗಾಗಿರು

ತ್ತಾನೆ. ಮತ್ತು ಅವನು ಜಗತ್ತಿಗೆ ಮೀರಿದವನಾಗಿರುತ್ತಾನೆ. ಮೀರಿದವನಾದರೂ ಜಗತ್ತನ್ನು ಬಿಟ್ಟಿಲ್ಲ. ಅದರಲ್ಲಿಯೇ ಇದ್ದಾನೆ. ಅದರಲ್ಲಿ ಇದ್ದರೂ ಅದರಲ್ಲಿ ಬೆರಿಸದೆ ಇದ್ದಾನೆ. ಬೆರಿಸದೆ ಇದ್ದರೂ ಜಗತ್ತನ್ನು ತನ್ನ ಅಂಕಿತದಲ್ಲಿಟ್ಟುಕೊಂಡಿರುತ್ತಾನೆ. ಜಗತ್ತಿನ ವ್ಯಾಪಾರಗಳೆಲ್ಲವೂ ಪರಮಾತ್ಮನ ಅಧೀನತೆಯಲ್ಲಿಯೇ ಸಾಗಿರುತ್ತವೆ ಎಂದು ವಚನಕಾರನು ಹೇಳಿರುವನು.

**ವಚನಃ**— ೩. ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು. ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೇ? ಇಲ್ಲ. ವಿಶ್ವಮಯ ತಾನಾದನು. ವಿಶ್ವವೆಲ್ಲವೂ ತಾನಾದೊಡೆ ವಿಶ್ವದುತ್ಪತ್ತಿ ಸ್ಥಿತಿ ಲಯಕ್ಕೊಳಗಾದನೇ? ಇಲ್ಲ. ಅದೇನುಕಾರಣವಂದೊಡೆ, ಅಜಾತನಾಗಿ ಉತ್ಪತ್ತಿ ಇಲ್ಲ. ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ. ಮರಣರಹಿತನಾಗಿ ಲಯಕ್ಕೊಳಗಲ್ಲ. ಇಂತೀ ಗುಣತ್ರಯಂಗಳ ಹೊದ್ದಲರಿಯ. ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ ಇದಿರಿಲ್ಲ. ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ. ಅರಸು ಕಾಲಾಳಾಗ ಬಲ್ಲ ತನ್ನ ವಿನೋದಕ್ಕೆ ಮರಳಿ ಅರಸಾಗಬಲ್ಲ. ನಿಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲನಯ್ಯ.

**ಭಾವಃ**— ವಚನಕಾರನು ಹಿಂದಿನ ವಚನದ ಭಾವವನ್ನು ಹೆಚ್ಚಿಗೆ ಸ್ಪಷ್ಟವಾಗಿ ಇಲ್ಲಿ ಉಲ್ಲೇಖಿಸಿರುವನು. ಪರಮಾತ್ಮನು ತನ್ನ ವಿನೋದಕ್ಕೆ ಈ ಅನಂತವಾದ ವಿಶ್ವವನ್ನು ರಚಿಸಿದ್ದಾನೆ. ಹೀಗೆ ರಚಿಸಿದ ಪರಮಾತ್ಮನು ವಿಶ್ವಕ್ಕೆ ಹೊರಗಾಗಿಲ್ಲ. ಅವನು ವಿಶ್ವಮಯನಾಗಿ ಇದ್ದಾನೆ. ಅಂದರೆ ವಿಶ್ವದಲ್ಲೆಲ್ಲ ತುಂಬಿಕೊಂಡಿರುವನು. ಹೀಗೆ ಅವನು ವಿಶ್ವದಲ್ಲೆಲ್ಲ ತುಂಬಿಕೊಂಡರೂ ವಿಶ್ವದ ಉತ್ಪತ್ತಿ ಸ್ಥಿತಿ ಲಯಕ್ಕೆ ಒಳಗಾಗಿರುವದಿಲ್ಲ. ಅದು ಹ್ಯಾಗೆಂದರೆ ಪರಮಾತ್ಮನಿಗೆ ತಂದೆ ತಾಯಿಗಳಿಲ್ಲಾದ್ದರಿಂದ ಅವನಿಗೆ ಉತ್ಪತ್ತಿ ಇಲ್ಲ. ಹಾಗೆಯೇ ಅವನು ಕರ್ಮರಹಿತನಾಗಿರುವನು. ಆದ್ದರಿಂದ ಅವನಿಗೆ ಸ್ಥಿತಿಯು ಇಲ್ಲ ಅವನಿಗೆ ಮರಣವೂ ಇಲ್ಲ. ಆದ್ದರಿಂದ ಲಯವೂ ಇಲ್ಲ.

ಅದೇ ಪ್ರಕಾರ ಪರಮಾತ್ಮನು ವಿಶ್ವದಿಂದ ದೂರನಿಲ್ಲ. ಆದಕ್ಕೆ ಅವನ ಸಂಬಂಧವದೆ. ಈ ಸಂಬಂಧವು ಇಲ್ಲದೆ ಹೋದದ್ದಾದರೆ ವಿಶ್ವವು ನಡೆಯಲಾರದು. ಅದು ನಿಂತುಹೋಗುವದು. ಯಾಕಂದರೆ ವಿಶ್ವದಲ್ಲಿ ಸ್ವತಂತ್ರತ್ವವು ಇಲ್ಲ.



ಅದರಂತೆಯೇ ಪರಮಾತ್ಮನಿಗೆ ಇದಿರಿಲ್ಲ. ಅಂದರೆ ಅವನನ್ನು ಸರಿಗಟ್ಟಿ ಅವನು ಮಾಡುವ ಕಾರ್ಯಗಳನ್ನು ಮಾಡಿ ಜಗತ್ತಿನಲ್ಲಿ ವ್ಯವಹರಿಸುವ ಬೇರೊಂದು ವಸ್ತುವಿಲ್ಲ. ಪರಮಾತ್ಮನಲ್ಲಿ ತೋರತಕ್ಕ ವಸ್ತುವು ಪರಮಾತ್ಮನ ಹೊರ್ತು ಬೇರೆ ಯಾವದಿರಬಹುದು? ಅವನಲ್ಲಿ ಅವನ ಹೊರ್ತು ಬೇರೆ ಯಾವ ವಸ್ತುವೂ ಇರಲಾರದು.

ಹೀಗೆ ಪರಮಾತ್ಮನಿಗೆ ಇದಿರೆಂಬುದು ಇಲ್ಲದ್ದರಿಂದ ಪರಮಾತ್ಮನು ವಿಶ್ವಮಯನಾಗಿರುವನೆಂದು ತಾನಾಗಿಯೇ ಸಿದ್ಧವಾಗುತ್ತದೆಂದು ವಚನಕಾರನು ಹೇಳುತ್ತಾನೆ.

ಈ ಪ್ರಕಾರ ವಚನಕಾರನು ತನ್ನ ಅಭಿಪ್ರಾಯವನ್ನು ಹೇಳಿ ಅದನ್ನು ಸ್ಪಷ್ಟಪಡಿಸಲಿಕ್ಕೆ ಒಂದು ಉದಾಹರಣೆಯನ್ನು ಕೊಟ್ಟಿರುವನು. ಅರಸಾದವನು ಅರಸನಂತೆ ವ್ಯವಹರಿಸುವದಲ್ಲದೆ, ಕಾಲಾಳಿನಂತೆಯೂ ವ್ಯವಹರಿಸ ಬಲ್ಲನ. ಅವನು ಹೀಗೆ ತನ್ನ ವಿನೋದಕ್ಕಾಗಿ ವ್ಯವಹರಿಸಬಹುದು. ಆದರೆ ಹೀಗೆ ವ್ಯವಹರಿಸಿದಾಕ್ಷಣಕ್ಕೆ ಅರಸನೆಂಬ ಅವನ ಮಹತ್ವಕ್ಕೆ ಚ್ಯುತಿಯು ಬರಲಾರದು. ಯಾಕಂದರೆ ಅವನು ತನ್ನ ಮನಸ್ಸಿಗೆ ಬಂದಾಗ ಕಾಲಾಳಿನ ಸ್ಥಿತಿಯನ್ನು ಬಿಟ್ಟು ಅರಸನ ಸ್ಥಿತಿಯನ್ನು ಕೂಡಲೆ ತಾಳಬಹುದು. ಅದೇ ಪ್ರಕಾರ ಲಿಂಗಕ್ಕೂ ಅಂಗಕ್ಕೂ ಪರಮಾತ್ಮನಿಗೂ ಜಗತ್ತಿಗೂ ಸಂಬಂಧವಿದೆ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನಃ**— ೪. ಲಿಂಗದ ಮರ್ಮವನರಿವುದರಿದು. ಲಿಂಗದ ಸಂಜ್ಞೆಯರಿವುದರಿದು. ಲಿಂಗವಂತಹದಿಂತಹದೆಂದರಿವುದರಿದು ನೋಡಾ! ಲಿಂಗದಲ್ಲಿಯೇ ಆಗಮುವಯ್ಯ. ಭೂಮಿಯೇ ಪೀಠಿಕೆ, ಆಕಾಶವೇ ಲಿಂಗವೆಂದರಿದಾತನು ಲಿಂಗವನರಿದವನಲ್ಲ. ಲಿಂಗದಲ್ಲಿಯೇ ಆಗಮುವಯ್ಯ. ಲಿಂಗದಾದಿ ಬ್ರಹ್ಮ, ಮಧ್ಯ ವಿಷ್ಣು, ಅಂತ್ಯ ರುದ್ರ. ಇಂತು ತ್ರೈಲಿಂಗವೆಂದರಿದಾತನು ಲಿಂಗವನರಿವನಲ್ಲ. ಲಿಂಗದಲ್ಲಿಯೇ ಆಗಮುವಯ್ಯ. ಲಿಂಗಮಧ್ಯೇ ಜಗತ್ಸರ್ವಂ ಎಂಬ ಭಾವರಹಿತ ಲಿಂಗ. ಬ್ರಹ್ಮಾ ವಿಷ್ಣು ಸ್ಸರ್ವೇ ದೇವೈರಪ್ಯಗೋಚರಂ ಎಂದು, ಮಹೇಶ್ವರ ಜ್ಯೋತಿರಾಪಾತಾಳೆ ವ್ಯವಸ್ಥಿತಾ। ಅತೀತಂ ಸತ್ಯ ಲೋಕಾದಿರನಂತ ದಿವ್ಯಮೀಶ್ವರಂ। ಇಂತಾದನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೆಂದರಿದ ಶರಣಂಗೆ ಸುಲಭ. ಮಿಕ್ಕಿನವರ್ಗೆ ಅಸುಲಭ.

**ಭಾವಃ**— ಈ ವರೆಗೆ ವಚನಕಾರನು ಅನೇಕ ಬಗೆಯ ಸಾದೃಶ್ಯಗಳನ್ನು ಹೇಳಿ ದೇವರ ಸ್ವರೂಪನ್ನು ತಿಳಿಸಲಿಕ್ಕೆ ಪ್ರಯತ್ನಿಸಿದನು. ಆದರೆ ಹೀಗೆ ಹೆರವರಿಗೆ ತಿಳಿಸುವದು ಕಷ್ಟವು ಮತ್ತು ಹೀಗೆ ತಾನು ಜ್ಞಾನಮಾಡಿಕೊಳ್ಳುವದೂ ಕಷ್ಟವೆಂದು ಈ ವಚನದಲ್ಲಿ ಹೇಳಿರುವನು. ಅವನು ಇಲ್ಲಿ ಅನ್ನುವದೇನೆಂದರೆ, ಲಿಂಗದ ಮರ್ಮವನರಿಯುವದು ಕಠಿಣವು. ಲಿಂಗದ ಗುರ್ತುಗಳನ್ನು ಕಂಡುಹಿಡಿಯುವದು ಅಸಾಧ್ಯವು. ಮತ್ತು ಲಿಂಗವು ಅಂತಹದು ಇಂತಹದು ಎಂದು ಗೊತ್ತುಮಾಡಿಕೊಳ್ಳುವದೂ ಆಗದ ಮಾತು. ಅನೇಕರು ಆಗಮ ಗ್ರಂಥಗಳಿವೆ, ಅವುಗಳಿಂದ ದೇವರನ್ನು ತಿಳಿಯಬಹುದು ಎಂದು ತಿಳಿಯುತ್ತಾರೆ. ಆದರೆ ನಿಜವಾದ ಆಗಮಗಳು ಲಿಂಗದಲ್ಲಿಯೇ ಇವೆ. ಅಂದರೆ ಪರಮಾತ್ಮನ ಜ್ಞಾನವು ಪುಸ್ತಕದಲ್ಲಿ ಇಲ್ಲ. ಲಿಂಗದಲ್ಲಿಯೇ ತಿಳಿಯಬೇಕೆಂದು ವಚನಕಾರನ ಅಭಿಪ್ರಾಯವು. ಬೇರೆ ಕೆಲವರು ಪರಮಾತ್ಮನ ಸ್ವರೂಪನ್ನು ಹೇಳುವಲ್ಲಿ ಅವನಿಗೆ ಭೂಮಿಯೇ ಪೀಠ, ಆಕಾಶವೇ ಲಿಂಗ ಎಂದು ಹೇಳುತ್ತಾರೆ. ಬೇರೆ ಕೆಲವರು ಲಿಂಗದ ಆದಿ ಬ್ರಹ್ಮ, ಲಿಂಗದ ಮಧ್ಯ ವಿಷ್ಣು ಎಂದು ಮೊದಲಾಗಿ ಹೇಳುವದುಂಟು. ಮತ್ತು ಈ ವಿಧಾನಗಳಿಗೆ ಆಗಮದ ಆಧಾರಗಳನ್ನೂ ಕೊಡುವದುಂಟು. ಆದರೆ ಇದು ಲಿಂಗದ ತಿಳುವಳಿಕೆಯಲ್ಲ. ಲಿಂಗದ ಒಳಗೆ ಹೀಗೆ ಇದೆ ಹೊರಗೆ ಹೀಗೆ ಇದೆ, ಅದರಲ್ಲಿ ಜಗತ್ತು ಇದೆ ಎಂದು ವಿವರಿಸಲಿಕ್ಕೆ ಬರಲಾಗದು. ಯಾಕಂದರೆ ಇಂಥ ವಿಚಾರಗಳಿಗೆ ಲಿಂಗವು ಅತೀತವಾಗಿರುವದು. ನಿಜವಾಗಿ ಲಿಂಗವು ಬ್ರಹ್ಮ ವಿಷ್ಣು ಮತ್ತು ಇತರ ದೇವತೆಗಳಿಗೆ ಅಗೋಚರವಾಗಿರುವದು. ಅದು ಲೋಕಾದಿ ಲೋಕಗಳನ್ನು ಮೀರಿರುವದು. ಅದು ಅನಂತವಾಗಿರುವದು. ಅದು ಪರಾ ವಸ್ತುವು. ಈ ರೀತಿ ಅದರ ಸ್ವರೂಪವು. ಇದನ್ನು ತಿಳಿದುಕೊಂಡು ವರ್ತಿಸುವವನೇ ಶರಣನು. ಇಂಥವನಿಗೆ ಮಾತ್ರ ಲಿಂಗವು ಸುಲಭವಾಗುವದು, ಉಳಿದವರಿಗೆ ಕಠಿಣವಾಗುವದೆಂದು ಹೇಳಿರುವನು.

**ವಚನಃ**—೫. ತನ್ನ ತಾನರಿದಿಹವೆ ಪರಮಾತ್ಮಯೋಗ. ತನ್ನ ತಾ ಮರೆದಿಹವೆ ಮಾಯಾಸಂಬಂಧ. ಅಂತರಂಗ ಬಹಿರಂಗ ಪರಮಾಕಾಶ ಮಧ್ಯದಲ್ಲಿ ಪರಮಾತ್ಮನು ಪರಬ್ರಹ್ಮ ಸ್ವರೂಪನು ನಿತ್ಯನಿರಂಜನವು ಉಪಮಾತೀತ ನಿಃಪತಿ ಕೇವಲ ನಿಷ್ಕಲ ಸ್ವರೂಪನು. ಭ್ರೂಮಧ್ಯದಲ್ಲಿ ಪರಮಾತ್ಮನೆ ಅಂತರಾತ್ಮನಾಗಿ ಸಕಲ ನಿಷ್ಕಲನಾಗಿಪ್ಪನು. ಹೃದಯಸ್ಥಾನದಲ್ಲಿ ಆ ಪರಮಾತ್ಮನೆ ಜೀವಾತ್ಮನಾಗಿ ಕೇವಲ ಸಕಲನಾಗಿಪ್ಪನು. ಬ್ರಹ್ಮರಂಧ್ರಸ್ಥಾನದಲ್ಲಿ ನಿಷ್ಕಲ ಗುರುಮೂರ್ತಿಲಿಂಗ, ಭ್ರೂಮಧ್ಯಸ್ಥಾನದಲ್ಲಿ ಸಕಲ ಪರಂಜ್ಯೋತಿರ್ಲಿಂಗ, ಹೃದಯಸ್ಥಾನದಲ್ಲಿ ಕೇವಲ ಸಕಲ ಜಂಗಮಲಿಂಗ. ಇಂತು ಪರಮಾತ್ಮನೆ ಅಂತರಾತ್ಮ, ಪರಮಾತ್ಮನೆ ಜೀವಾತ್ಮ, ಪರಮಾತ್ಮನೆ ಗುರುಲಿಂಗ, ಪರಮಾತ್ಮನೆ ಶಿವಲಿಂಗ, ಪರಮಾತ್ಮನೆ ಜಂಗಮಲಿಂಗ, ಇಂತು ಪರಬ್ರಹ್ಮವೆ ಪರಮಾತ್ಮ, ಪರಮಾತ್ಮನೆ ಸರ್ವಾತ್ಮ ಪರಮಾತ್ಮನೆ ಸರ್ವಗತ, ಪರಮಾತ್ಮನೆ ಆತ್ಮಗತ. ಇದು ಕಾರಣ ಪರಮಾತ್ಮನೆ ಅಂತರಂಗ ಬಹಿರಂಗ ಭರಿತ ಪ್ರಾಣಲಿಂಗ. ಇಂತು ಅರಿದುದೆ ಪರಮಾತ್ಮಯೋಗ, ಮರೆವೆಯೇ ಮಾಯಾಸಂಬಂಧವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.



**ಭಾವಃ**— ಇದರಲ್ಲಿ ವಚನಕಾರನು ತನ್ನನ್ನು ತಾನು ಅರಿಯುವದು ಹೇಗೆ? ಹೀಗೆ ಅರಿಯತಕ್ಕ ಪರಮಾತ್ಮನ ಸ್ವರೂಪು ತನ್ನಲ್ಲಿ ಆವುದು ಎಂಬದನ್ನು ಹೇಳಿರುವನು.

ಮನುಷ್ಯನಲ್ಲಿ ಮುಖ್ಯ ಸ್ಥಾನಗಳು ಮೂರು ಇವೆ. ಅವು ಹೃದಯ, ಭ್ರೂಮಧ್ಯ, ಮತ್ತು ಬ್ರಹ್ಮರಂಧ್ರ ಹೀಗೆ ಇವೆ. ಇವು ಮನುಷ್ಯನ ಮುಖ್ಯ ಕೇಂದ್ರಸ್ಥಾನಗಳೆಂದು ತಿಳಿಯಬಹುದು. ಪರಮಾತ್ಮನು ಈ ಮೂರೂ ಸ್ಥಾನಗಳಲ್ಲಿ ಇರುತ್ತಾನೆ. ಇವುಗಳಲ್ಲಿ ಅವನನ್ನು ಕಾಣುವದೇ ತನ್ನನ್ನು ತಾನು ತಿಳಿಯುವದು. ಇದೇ ಪರಮಾತ್ಮಯೋಗವೆನಿಸುವದು. ತಿಳಿಯದೆ ಹೋದರೆ ಮಾಯಾಸಂಬಂಧವೆಂದು ವಚನಕಾರನು ಹೇಳುತ್ತಾನೆ.

ಬ್ರಹ್ಮರಂಧ್ರಕ್ಕೆ ವಚನಕಾರನು ಇಲ್ಲಿ ಪರಮಾಕಾಶವೆಂಬ ಹೆಸರನ್ನು ಕೊಟ್ಟಿರುವನು. ಇದರ ಮಧ್ಯದಲ್ಲಿ ಪರಮಾತ್ಮನು ವಾಸಿಸುತ್ತಿದ್ದು ಅಲ್ಲಿ ಅವನು ಪರಬ್ರಹ್ಮಸ್ವರೂಪನು, ನಿತ್ಯನು. ನಿರಂಜನನು ಎಂದರೆ ಅತ್ಯಂತ ಶುದ್ಧನು, ಹಾಗೂ ಉಪಮಾತೀತನು, ನಿಃಪತಿಯು ಎಂದರೆ ಜೋಡಿಲ್ಲದವನು, ಮತ್ತು ಕೇವಲ ನಿಷ್ಕಲ ಸ್ವರೂಪನು ಆಗಿರುತ್ತಾನೆ. ಎಂದರೆ ಪರಮಾತ್ಮನು ಜಗತ್ತಿನ ಆರಂಭಸ್ಥಿತಿಯಲ್ಲಿ ಯಾವ ಬಗೆಯಾಗಿ ಕಲಾರಹಿತನಾಗಿ ಇರುತ್ತಾನೋ ಅದೇ ಬಗೆಯಾಗಿ ಅವನು ಈ ಬ್ರಹ್ಮರಂಧ್ರದಲ್ಲಿ ವಾಸಿಸುತ್ತಾನೆ. ಅವನು ಭ್ರೂಮಧ್ಯದಲ್ಲಿಯೂ ಇದ್ದು ಅಲ್ಲಿ ಸಕಲನಿಷ್ಕಲ ಸ್ವರೂಪನಾಗಿರುತ್ತಾನೆ. ಎಂದರೆ ಇಲ್ಲಿ ಅವನು ಕೇವಲ ನಿಷ್ಕಲನೂ ಅಲ್ಲ ಕೇವಲ ಸಕಲನೂ ಅಲ್ಲ, ಉಭಯ ಸ್ಥಿತಿಗಳನ್ನು ಕೂಡಿಕೊಂಡು ಇರುತ್ತಾನೆ. ಅಲ್ಲಿ ಅವನಿಗೆ ಅಂತರಾತ್ಮನೆಂಬ ಹೆಸರು. ಹೃದಯಸ್ಥಾನದಲ್ಲಿ ಪರಮಾತ್ಮನು ಕೇವಲ ಸಕಲ ರೂಪನಾಗಿ

ಇರುತ್ತಾನೆ. ಅಲ್ಲಿ ಅವನಿಗೆ ಜೀವಾತ್ಮನೆಂಬ ಹೆಸರು. ಈ ಜೀವಾತ್ಮನು ಅಲ್ಲಿ ಜಗತ್ತಿಗೆ ಸಂಬಂಧಪಟ್ಟವನಾಗಿ ವ್ಯವಹರಿಸುತ್ತಾನೆ.

ಈ ಮೂರು ಸ್ಥಳಗಳಲ್ಲಿ ಲಿಂಗದ ಸ್ವರೂಪು ಯಾವ ಬಗೆಯಾಗಿ ಇರುತ್ತದೆಂಬದನ್ನು ಅವನು ಈ ವಚನದಲ್ಲಿ ವಿವರಿಸಿದ್ದು ಹ್ಯಾಗೆಂದರೆ, ಅವನು ಬ್ರಹ್ಮರಂಧ್ರದಲ್ಲಿ ನಿಷ್ಕಲ ಗುರುಮೂರ್ತಿ ಲಿಂಗವಾಗಿರುವನು. ಎಂದರೆ ಬೋಧಾಶಕ್ತಿಯುಳ್ಳವನಾಗಿ ಉಚ್ಚತಮ ಸ್ಥಿತಿಯಲ್ಲಿ ಕೇವಲ ನಿಷ್ಕಲಸ್ವರೂಪನಾಗಿ ಇರುತ್ತಾನೆ. ಭ್ರೂಮಧ್ಯದಲ್ಲಿ ಜ್ಯೋತಿರ್ಲಿಂಗ ರೂಪದಿಂದ ಇರುತ್ತಾನೆ. ಇದು ಅತ್ಯಂತ ಪ್ರಕಾಶಮಾನವಾದ ಸ್ಥಿತಿಯು. ಅದು ಅಲ್ಲಿ ಓಂಕಾರರೂಪವು. ಅದಕ್ಕೆ ಮಹಾಲಿಂಗವೆಂತಲೂ ಹೆಸರುಂಟು. ಹೃದಯಸ್ಥಾನದಲ್ಲಿ ಪರಮಾತ್ಮನು ಜಂಗಮಲಿಂಗವೆಂಬ ಹೆಸರನ್ನು ಪಡೆದಿದ್ದಾನೆ. ಈ ಲಿಂಗವು ಚೈತನ್ಯಾತ್ಮಕವಾದದ್ದು. ಇದು ಶರೀರದ ಬಹಿರಂಗದ ವ್ಯಾಪಾರಗಳಿಗೆ ಸಂಬಂಧಪಟ್ಟದ್ದಿರುತ್ತದೆ.

ಈ ಪ್ರಕಾರ ಈ ಸ್ಥಾನಗಳಲ್ಲಿ ಪರಮಾತ್ಮನು ಎರಡು ಬಗೆಯ ಸ್ಥಿತಿಗಳಲ್ಲಿ ಕೂಡಿಕೊಂಡಿರುತ್ತಾನೆ. ಮನುಷ್ಯನು ತನ್ನನ್ನು ಸಂಬಂಧಿಸಿ ಮಾಡುವ ಕಾರ್ಯಗಳು ಹಾಗೂ ಜಗತ್ತನ್ನು ಸಂಬಂಧಿಸಿ ಮಾಡುವ ಕಾರ್ಯಗಳು ಹೀಗೆ ಎರಡು ವಿಧವಾಗಿವೆ. ಇವೆರಡೂ ಪರಸ್ಪರ ಸಂಬಂಧವುಳ್ಳವು. ಹ್ಯಾಗೆಂದರೆ, ಜೀವಾತ್ಮನು ಜಂಗಮಲಿಂಗ ಸ್ವರೂಪನಾಗಿ, ಅಂತರಾತ್ಮನು ಮಹಾಲಿಂಗಸ್ವರೂಪನಾಗಿ, ಪರಮಾತ್ಮನು ಕೇವಲ ನಿಷ್ಕಲ ಲಿಂಗಸ್ವರೂಪನಾಗಿ ಇರುತ್ತಾನೆ. ಈ ಮರ್ಮವನ್ನು ತಿಳಿದು ವರ್ತಿಸಿದಾಗಲೇ ಪರಮಾತ್ಮಯೋಗವೆಂದು ವಚನಕಾರನು ಅಂದಿದ್ದಾನೆ.

ಈ ಪ್ರಕಾರ ವಚನಕಾರನು ಹೇಳಿ ಈ ಬಗೆಯ ವಿಚಾರಗಳಿಂದ ಪರಮಾತ್ಮನಲ್ಲಿ ಭಿನ್ನತೆಯನ್ನು ಕಲ್ಪಿಸಿದಂತಾಗಲಿಲ್ಲ ಎಂದು ಅಂದಿದ್ದಾನೆ. ಎಂದರೆ ಪರಮಾತ್ಮನೇ ಅಂತರಾತ್ಮನು ಮತ್ತು ಜೀವಾತ್ಮನು. ಪರಮಾತ್ಮನೇ ಗುರುಲಿಂಗ ಶಿವಲಿಂಗ ಜಂಗಮಲಿಂಗರೂಪಾದಾತನು. ಪರಬ್ರಹ್ಮನು ಮನುಷ್ಯನಲ್ಲಿ ಪರಮಾತ್ಮಸ್ವರೂಪನಾಗಿ ವಾಸಿಸುತ್ತಾನೆ. ಮತ್ತು ಜಗತ್ತಿನಲ್ಲೆಲ್ಲ ಸರ್ವಾತ್ಮನಾಗಿ ಸರ್ವಗತನಾಗಿ ಆತ್ಮಗತನಾಗಿ ಇರುತ್ತಾನೆ. ಜಗತ್ತಿನ ಒಳಗೂ ಹೊರಗೂ ಅವನು ಪ್ರಾಣಲಿಂಗನಾಗಿ ಇದ್ದಾನೆ ಎಂದು ಇಲ್ಲಿ ಹೇಳಿರುವನು.



ಈ ವಿಚಾರಗಳನ್ನು ಅರಿಯುವದೇ ಪರಮಾತ್ಮ ಯೋಗ, ಮರೆಮದೇ ಮಾಯಾ ಸಂಬಂಧವೆಂದು ಅಂದಿದ್ದಾನೆ.

## ಪರಮಾತ್ಮನ ಕಾರ್ಯಗಳು.

ಪರಮಾತ್ಮನ ಮೂಲಕ ಜಗತ್ತಿನಲ್ಲಿ ಯಾವ ಕ್ರಿಯೆಗಳು ಉತ್ಪನ್ನವಾಗುತ್ತವೆ, ಅವನು ಜಗತ್ತಿನಲ್ಲಿ ಹ್ಯಾಗೆ ವ್ಯವಹರಿಸುತ್ತಾನೆ, ಅವನ ವಿಶೇಷ ಗುಣಗಳಾವವು ಎಂಬದನ್ನು ವಚನಕಾರರು ಮುಂದಿನ ವಚನಗಳಲ್ಲಿ ಸವಿಸ್ತಾರವಾಗಿ ವರ್ಣಿಸಿರುವನು. ಹೀಗೆ ವರ್ಣಿಸುವಲ್ಲಿ ಅವನು ಶ್ರುತಿ ಸ್ಮೃತಿ ಪುರಾಣಾಗಮಗಳಲ್ಲಿಯ ಅನೇಕ ಆಧಾರಗಳನ್ನು ತೆಗೆದುಕೊಂಡು ಇವುಗಳನ್ನು ವಿವರಿಸಿರುವನು. ಇಂಥ ಪರಮಾತ್ಮನಲ್ಲಿ ವಿಶ್ವಾಸವನ್ನು ತಾಳಿ ಅವನ ಪೂಜೆಯನ್ನು ಮಾಡಿ ಭಕ್ತನು ಉಚ್ಚಸ್ಥಾನವನ್ನು ಹೊಂದಬೇಕು. ಪರಮಾತ್ಮನು ಜಗತ್ತಿನಲ್ಲಿ ವ್ಯವಹರಿಸುವಾಗ ಲಿಂಗರೂಪಾಗಿ ಅವನು ಪ್ರಕಟವಾಗುವದುಂಟು. ಇದರ ವಿವರಣೆಯೂ ಕೆಲಮಟ್ಟಿಗೆ ಕೆಳಗಿನ ವಚನಗಳಲ್ಲಿ ಬಂದಿರುವದು.

**ವಚನ:**— ೬. ಲಿಂಗವೆಂಬುದು ಪರಶಿವಶಕ್ತಿಯ ನಿಜ ನಿವಾಸ. ಲಿಂಗವೆಂಬುದು ಪರಶಿವನ ಪರಮ ಜ್ಞಾನತೇಜ. ಲಿಂಗವೆಂಬುದು ಅಖಂಡ ಸ್ವರೂಪು. ಲಿಂಗವೆಂಬುದು ಹರಿಬ್ರಹ್ಮರ ನಡುವೆ ನೆಗಳ್ದ ಜ್ಯೋತಿರ್ಲಿಂಗ. ಲಿಂಗವೆಂಬುದು ಚರಾಚರ ಲಯ ಗಮನಸ್ಥಾನ. ಲಿಂಗವೆಂಬುದು ಪಂಚಸಂಜ್ಞೆಯನುಳ್ಳುದು. ಅದೆಂತೆಂಡೊಡೆ ಜ್ವಾಲಾಮಾಲಾವೃತಂ ಜ್ವಲನಸ್ತಂಭರೂಪಿಣೆ। ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ॥ ಲೀಯ್ಯತೆ ಗಮ್ಯತೆ ಯತ್ರ। ಏನ ಸರ್ವಂ ಚರಾಚರಂ । ತದೇ ತಲ್ಲಿಂಗಮಿತ್ಯುಕ್ತಂ। ಲಿಂಗತತ್ವ ಪರಾಯಣೈಃ॥ ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್॥ ಯಥಾ ದಿವ್ಯಮೀಶ್ವರಂ ತೇಜಂ । ತಲ್ಲಿಂಗಂ ಪಂಚಸಂಜ್ಞಿಕಂ। ಎಂದುದಾಗಿ ಇದು ಲಿಂಗದ ಮರ್ಮ. ಈ ಲಿಂಗವನರಿದಾತನೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

**ಭಾವ:**— ಇದರಲ್ಲಿ ವಚನಕಾರನು ಲಿಂಗದ ಲಕ್ಷಣಗಳನ್ನು ಹೇಳಿರುವನು. ಪರಬ್ರಹ್ಮ ವಸ್ತುವಿಗೆ ಯಾವ ಅದ್ಭುತ ಶಕ್ತಿ ಇರುತ್ತದೋ

ಆ ಶಕ್ತಿಗೆ ಈ ಲಿಂಗವು ಆವಾಸಭೂಮಿಯಾಗಿರುತ್ತದೆ. ಆ ಶಕ್ತಿಯೇ ಲಿಂಗವೆಂದು ವಚನಕಾರನ ಅಭಿಪ್ರಾಯವು. ಆ ಶಕ್ತಿಗೆ ಚಿತ್‌ಶಕ್ತಿ ಎಂಬ ಹೆಸರೂ ಇದೆ. ಇದಕ್ಕೆ ಜ್ಞಾನ ಅಥವಾ ಮೂಲಜ್ಞಾನ ಅಥವಾ ಪರಮಜ್ಞಾನವೆಂತಲೂ ಅನ್ನುವದುಂಟು. ಪರಶಿವನ ಹೊಳಹೇ ಲಿಂಗವೆಂದು ವಚನಕಾರನು ಇಲ್ಲಿ ಹೇಳಿರುವನು. ಇಂಥ ಲಿಂಗದಲ್ಲಿ ಖಂಡತ್ವ ಎಂದರೆ ಭಿನ್ನತೆ ಇಲ್ಲ. ಅದು ಒಂದೇ ಒಂಬಾಗಿರುವದು. ಈ ಲಿಂಗವು ಹರಿಯೂ ಅಲ್ಲ ಬ್ರಹ್ಮವೂ ಅಲ್ಲ. ಅವರ ಮಧ್ಯದಲ್ಲಿ ಪ್ರಸಿದ್ಧವಾಗಿ ಹೊರಹೊರಟ ಜ್ಯೋತಿರ್ಲಿಂಗವೆಂದು ವರ್ಣಿಸಿರುವನು. ಈ ಲಿಂಗದಿಂದಲೇ ಬ್ರಹ್ಮಾಂಡದಲ್ಲಿಯ ವಸ್ತುಗಳು ಉತ್ಪನ್ನವಾಗಿರುವವು. ಮತ್ತು ಅವು ಕಡೆಗೆ ಅಲ್ಲಿಯೇ ಲಯವಾಗುವವು. ಈ ಪ್ರಕಾರ ವಚನಕಾರನು ಲಿಂಗದ ಗುಣಗಳನ್ನು ಸಾಮಾನ್ಯವಾಗಿ ಹೇಳಿ, ಲಿಂಗದ ಐದು ಮುಖ್ಯ ಲಕ್ಷಣಗಳನ್ನು ಹೇಳಿದ್ದಾನೆ. ಅವು ಯಾವವೆಂದರೆ:--

ಪರಃ— ಎಂದರೆ ಲಿಂಗವು ಜಗತ್ತಿನಲ್ಲಿ ಎಲ್ಲವನ್ನು ಮೀರಿದ ವಸ್ತುವಾಗಿದೆ. ಅದರ ನಿಲುಕಡೆಯನ್ನು ಯಾರೂ ಅರಿಯರು. ಎಂದರೆ ಅದು ಪರ ವಸ್ತುವಾಗಿದೆ.

ಗೂಢಃ— ಇದು ಅದರ ಎರಡನೇ ಲಕ್ಷಣವು. ಲಿಂಗವು ಅವ್ಯಕ್ತವಾಗಿದೆ. ಎಂದರೆ ದೃಷ್ಟಿಗೆ ಅಗೋಚರವು. ಜಗತ್ತಿನಲ್ಲಿಯ ಎಲ್ಲ ಚರಾಚರ ವಸ್ತುಗಳನ್ನು ಅದು ತನ್ನಲ್ಲಿ ಅಡಗಿಸಿಕೊಂಡು ಇರುತ್ತದೆ. ಆದ್ದರಿಂದ ಅದು ಗೂಢವೆನಿಸಿಕೊಳ್ಳುತ್ತದೆ.

ಶರೀರಸ್ಥಃ— ಲಿಂಗವು ತನ್ನ ಶಕ್ತಿಯ ಮೂಲಕ ಜಗತ್ತನ್ನು ಸೃಷ್ಟಿಸುವದಕ್ಕೆ ಕಾರಣವಾಗಿರುತ್ತದೆ. ಮತ್ತು ಅದು ಹೀಗೆ ಜಗತ್ತನ್ನು ಹುಟ್ಟಿಸಿ ಎಲ್ಲದರಲ್ಲಿಯೂ ಸರ್ವವ್ಯಾಪಿಯಾಗಿರುತ್ತದೆ. ಆದ್ದರಿಂದ ಅದಕ್ಕೆ ಶರೀರಸ್ಥವೆಂಬ ಹೆಸರು ಬಂದಿದೆ.

ಲಿಂಗಕ್ಷೇತ್ರಃ— ಸಮಸ್ತ ಪ್ರಪಂಚವು ವರ್ತಿಸುವದಕ್ಕೆ ಅದು ತಾನೇ ಕಾರಣವಾಗಿರುವದು. ಈ ಲಿಂಗದ ಮೂಲಕವೇ ಜಗತ್ತು ನಡೆದಿದೆ. ಆದ್ದರಿಂದ ಅದು ಲಿಂಗಕ್ಷೇತ್ರವೆಂದೆನಿಸಿಕೊಂಡಿರುತ್ತದೆ.

ಅನಾದಿಃ—ಸೃಷ್ಟಿಯ ಉದಯಕ್ಕೆ ಲಿಂಗವೇ ಕಾರಣವಾಗಿದೆಯೇ ಹೊರ್ತು ಲಿಂಗಕ್ಕೆ ಆವುದೂ ಆದಿ ಇಲ್ಲ. ಆದ್ದರಿಂದ ಅದು ಅನಾದಿ ಎನಿಸಿಕೊಂಡಿದೆ.



ಈ ಪ್ರಕಾರ ಲಿಂಗದ ಐದು ಗುಣಗಳಿವೆ. ಹೀಗೆ ವಚನಕಾರನು ಲಿಂಗದ ಗುಣಗಳನ್ನು ವಿವರಿಸಿ ಲಿಂಗವು ಜ್ವಾಲಮಾಲೆಯಿಂದ ಆವೃತವಾದದ್ದು, ಜ್ವಲಿಸುತ್ತಿರುವ ಸ್ತಂಭದ ಆಕೃತಿಯುಳ್ಳದ್ದು, ಮತ್ತು ಯಾವುದರಿಂದ ಜಗತ್ತು ಉತ್ಪನ್ನವಾಗಿ ಕಡೆಗೆ ಅದರಲ್ಲಿಯೇ ಲಯವಾಗುತ್ತದೋ ಅಂಥ ವಸ್ತುವು ಎಂದು ಲಿಂಗವನ್ನು ಹೊಗಳಿ, ಲಿಂಗದ ಮರ್ಮವನ್ನು ಅರಿದಾತನೇ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರನು ಎಂದರೆ ಪರಬ್ರಹ್ಮ ವಸ್ತುವು ಎಂದು ಹೇಳಿರುವನು

**ವಚನಃ—** ೭. ಶಿವಶಿವಾ ಶಿವಲಿಂಗವು ಕೊಟ್ಟ ಆಯುಷ್ಯದಲ್ಲಿ ನಿಮಿಷಾರ್ಧವ ಹೆಚ್ಚಿಸಬಾರದು. ನಿಮಿಷಾರ್ಧವ ಕುಂದಿಸಬಾರದು. ಶಿವಶಿವಾ, ಶಿವಲಿಂಗವು ಕೊಟ್ಟ ಭಾಷೆಯಲ್ಲಿ ಕಾಣಿಯ ಹೆಚ್ಚಿಸಬಾರದು. ಕಾಣಿಯ ತಗ್ಗಿಬಾರದು. ಹರಿಬ್ರಹ್ಮಾದಿಗಳಿಗಾದರೂ ತೃಣದಂತಪ್ಪ ಕಾರ್ಯವ ಮಾಡಬಾರದು. ಅದೆಂತೆಂದೊಡೆ ತೇನ ವಿನಾ ತೃಣಾಗ್ರಮಪಿನ ಚಲತಿ ಇಂತೆಂದುದಾಗಿ, ಉತ್ಪತ್ತಿ ಸ್ಥಿತಿಲಯಂಗಳಿಗೆ ಶಿವನೇ ಕರ್ತನಲ್ಲದೆ, ಮತ್ತಾರೂ ಇಲ್ಲ. ಇದು ಕಾರಣ ಅನ್ಯರು ಆಯುಷ್ಯ ಭಾಷೆಯ ಕೊಟ್ಟಿಹರೆಂಬ ಆಶೆ ಬೇಡ. ಕೊಡರೆಂಬ ಕ್ಲೇಶ ಬೇಡ. ಸರ್ವವೂ ಶಿವಾಧೀನವೆಂದರಿದು ಪರಿಣಾಮಿಸಿ ವಿಶ್ವಾಸದಿಂದ ಲಿಂಗಾರ್ಚನೆಯ ಮಾಡಿದೊಡೆ ಬೇಡಿದ್ದನೀವ. ಇಹಪರ ಸಿದ್ಧಿಯ ನಂಬು ಮನವೇ ಉರಿಲಿಂಗ ಪೆದ್ದಿಪ್ರಿಯವಿಶ್ವೇಶ್ವರಯ್ಯ.

**ಭಾವಃ—** ಪರಮಾತ್ಮನು ಅತ್ಯಂತ ಶಕ್ತಿವಂತಸಿದ್ದಾನೆ. ಅವನ ಅಧೀನತೆಯಲ್ಲಿಯೇ ಜಗತ್ತಿನ ಎಲ್ಲ ವ್ಯವಹಾರಗಳು ನಡೆಯುತ್ತವೆ. ಅವನು ಇಟ್ಟ ಮರ್ಯಾದೆಯಲ್ಲಿಯೇ ಎಲ್ಲ ಜೀವಜಂತುಗಳು ಇರತಕ್ಕದ್ದು ಮತ್ತು ಬಾಳತಕ್ಕದ್ದು. ಉದಾಃ— ಮನುಷ್ಯನ ಆಯುಷ್ಯವು ಇಂತಿಷ್ಟಿರಬೇಕೆಂದು ಪ್ರತಿಯೊಬ್ಬನ ಸಂಬಂಧವಾಗಿ ಕಟ್ಟಳೆಯುಂಟು. ಆದ್ದರಿಂದ ಆ ಆಯುಷ್ಯದಲ್ಲಿ ಒಂದು ನಿಮಿಷವನ್ನಾದರೂ ಹೆಚ್ಚಿಸಲಿಕ್ಕೆ ಬರಲಾರದು ಅಥವಾ ಕುಂದಿಸಲಿಕ್ಕೆ ಬರಲಾರದು. ಹಾಗೆಯೇ ಮನುಷ್ಯನು ಇಂತಿಂತಹ ಕಾರ್ಯಗಳನ್ನು ಮಾಡಿದ್ದಾದರೆ ಇಂತಿತಹ ಪರಿಣಾಮಗಳಾಗಬೇಕೆಂತಲೂ ಪರಮಾತ್ಮನ ನಿಯಮ ಉಂಟು. ಈ ವ್ಯವಹಾರಗಳು ಪರಮಾತ್ಮನು ಭಾಷೆ ಕೊಟ್ಟಂತೆ ನಡೆಯುತ್ತಲಿವೆ. ಇವುಗಳಲ್ಲಿ ಒಂದು ಕಾಣಿಸಹ ಹೆಚ್ಚು ಮಾಡಲಿಕ್ಕಾಗದು. ಅಥವಾ ಕಡಿಮೆಮಾಡಲಿಕ್ಕಾಗದು. ದೇವರ ನಿಯ

ಮುಗಳನ್ನು ಉಲ್ಲಂಘಿಸಿಹೆನೆಂದರೆ ಯಾರಿಗೂ ಆಗದು. ಈ ನಿಯಮುಗಳು ಬರೇ ಮನುಷ್ಯರಿಗಷ್ಟೇ ಅಲ್ಲ, ಹರಿಬ್ರಹ್ಮಾದಿಗಳಿಗೂ ಸಹ ಹತ್ತುತ್ತವೆಂದು ವಚನಕಾರನು ಅನ್ನುತ್ತಾನೆ. ಹರಿಬ್ರಹ್ಮಾದಿಗಳು ಷಟ್‌ಸ್ಥಲಶಾಸ್ತ್ರದ ಪ್ರಕಾರ ಆಯಾ ಸಾದಾಖ್ಯಗಳಲ್ಲಿದ್ದುಕೊಂಡು ಜಗತ್ತಿನ ವ್ಯವಹಾರಗಳನ್ನು ಸಾಗಿಸುತ್ತಲಿದ್ದಾರೆ. ಹೀಗೆ ಅವರು ತಮ್ಮ ಕಾರ್ಯಗಳನ್ನು ಮಾಡುವಲ್ಲಿ ಪರಮಾತ್ಮನ ಕಟ್ಟಳೆಗಳನ್ನು ಮೀರಕೂಡದು. ಒಂದು ತೃಣವು ಸಹ ಪರಮಾತ್ಮನ ಇಚ್ಛೆಯಂತೆಯೇ ಜಗತ್ತಿನಲ್ಲಿ ನಡೆಯುತ್ತಲಿದೆ. ಜಗತ್ತಿನಲ್ಲಿ ಪ್ರತಿಯೊಂದು ಪದಾರ್ಥಕ್ಕೆ ಉತ್ಪತ್ತಿ, ಸ್ಥಿತಿ, ಲಯಗಳುಂಟು. ಇವುಗಳೆಲ್ಲವು ಪರಮಾತ್ಮನ ಆಜ್ಞೆಯಂತೆ ಸಾಗುತ್ತವೆ. ಇದರಲ್ಲಿ ಬೇರೆ ಯಾರ ಆಟವೂ ಸಾಗಲಾರದು. ಆದ್ದರಿಂದ ಇತರೇ ಜನರು ಅಥವಾ ದೇವತೆಗಳು ತಮಗೆ ಆಯುಷ್ಯಕೊಡುವರು ಅಥವಾ ವರಗಳನ್ನು ಕೊಡುವರು ಎಂದು ಯಾವನೂ ಆಶೆ ಮಾಡಕೂಡದು. ಅಥವಾ ಅವರು ಕೊಡಲಿಲ್ಲವೆಂತಲೂ ಕ್ಲೇಶಪಡಬಾರದು. ಯಾಕಂದರೆ ಅವರಿಗೆ ಯಾವ ಸ್ವತಂತ್ರತೆಯೂ ಇಲ್ಲ. ಈ ಸ್ವತಂತ್ರತೆಯು ಶಿವನೊಬ್ಬನಿಗೆ ಮಾತ್ರ ಇದೆ. ಇದನ್ನು ತಿಳಿದುಕೊಂಡು ಪ್ರತಿಯೊಬ್ಬನು ಅತ್ಯಂತ ಆನಂದದಿಂದ ಶಿವನಲ್ಲಿ ಭಕ್ತಿಯನ್ನಿಟ್ಟು ಪೂಜಿಸಬೇಕು. ಇದರಿಂದ ಪರಮಾತ್ಮನ ಕಾರುಣ್ಯವು ಒದಗಿ ಅವನು ಬೇಡಿದ್ದನ್ನು ಕೊಡುವನು. ಮತ್ತು ಇಹಪರದಲ್ಲಿ ಸಿದ್ಧಿಯನ್ನೂ ಕೊಡುವನು. ಇಂತಹ ಅತ್ಯಂತ ಸರ್ವಶಕ್ತಿವಂತನಾದ ವಿಶ್ವೇಶ್ವರನನ್ನು ನಂಬು ಎಂದು ವಚನಕಾರನು ಉಪದೇಶಿಸಿರುವನು.

**ವಚನ:**— ೮ ಸಕಲ ಶೃತಿಗಳ ಮುಂದಿರ್ದವರ ಸವಿಮಾತಿನ ವಶಕ್ಕತೀತವಾದ ವಸ್ತುವ ಬೇಡಿಕೊಳ್ಳಿರೊ. ಸಕಲಾತ್ಮರ ಮುಂದಿರ್ದವರ ತರ್ಕಕ್ಕೆಯೂ ಲಿಂಗವಾಗಿ ಸಿಕ್ಕದ ಅತೀತವಾದ ವಸ್ತುವ ಬೇಡಿಕೊಳ್ಳಿರೊ. ಇಂತು ಸಕಲಾತ್ಮರ ಹೊದ್ದದ ನಿತ್ಯ ಸಿಂಹಾಸನದ ಮೇಲೆ ನಿತ್ಯವಾಗಿರ್ದ ನಮ್ಮ ಉರಿಲಿಂಗದೇವನ ಬೇಡಿ ಕೊಳ್ಳಿರೊ.

**ಭಾವ:**— ಇಲ್ಲಿ ವಚನಕಾರನು ಪರವಸ್ತುವನ್ನು ಕುರಿತು ವರ್ಣಿಸಿರುವದು ಹೇಗೆಂದರೆ:— ಪರಮಾತ್ಮನು ಯಾವತ್ತು ಶೃತಿಗಳಿಗೆ ವಿಷಯನಾಗಿದ್ದಾನೆ. ಅಂದರೆ ಅವೆಲ್ಲವೂ ಅವನು ಎಂಥವನು ಹೇಗೆ ಇದ್ದಾನೆ



ಎಂಬದನ್ನು ಕುರಿತು ಹೇಳುತ್ತಲಿವೆ. ಆದರೆ ಪರಮಾತ್ಮನು ಅವುಗಳ ಸವಿ ಮಾತಿನ ವಶಕ್ಕೆ ಅತೀತವಾದ ವಸ್ತುವಾಗಿರುವನು. ಪರಮಾತ್ಮನು ಯಾವತ್ತು ಆತ್ಮರ ಇದಿರಿಗೆ ಇರುವನು. ಅವನು ಸರ್ವವ್ಯಾಪಿಯಾಗಿರುವನು. ಇಂಥ ಆತ್ಮನನ್ನು ತಾವು ಹ್ಯಾಗೆ ಕಾಣುವೆನೆಂದು ಎಲ್ಲರೂ ಅಭಿಲಾಷೆ ತೊಟ್ಟಿದ್ದಾರೆ. ಆದರೂ ಆತನು ಎಲ್ಲರ ತರ್ಕಕ್ಕೆ ನಿಲುಕಲಾರದವನಾಗಿದ್ದಾನೆ. ಪರಮಾತ್ಮನು ಮೀರಿದ ವಸ್ತುವು. ಆತನನ್ನೇ ಎಲ್ಲರೂ ಬೇಡಿಕೊಳ್ಳತಕ್ಕದ್ದು. ಅವನು ಯಾರನ್ನೂ ಹೊದ್ದಿರುವದಿಲ್ಲ. ಆದರೆ ಆತನು ಯಾವದು ಜಗತ್ತಿನಲ್ಲಿ ನಿತ್ಯವಾದದ್ದು ಇದೆಯೋ ಆದರಲ್ಲಿ ಶಾಶ್ವತವಾಗಿ ವ್ಯಾಪಿಸಿರುತ್ತಾನೆ. ಇಂಥ ಪರಮಾತ್ಮನನ್ನು ನಂಬಿ ಬೇಡಿಕೊಳ್ಳಬೇಕೆಂದು ವಚನಕಾರನು ಇಲ್ಲಿ ಉಪದೇಶಿಸಿರುವನು.

**ವಚನ:**— ೯. ಹರನೇ, ನಿಮ್ಮನು ದುಷ್ಟನಿಗ್ರಹ ಶಿಷ್ಟಪರಿಪಾಲನ ವಿಚಕ್ಷಣನೆಂದೆಂಬರು. ನಿಮಗೆ ಅಹಂಕರಿಸಿದ ಬ್ರಹ್ಮ, ವಿಷ್ಣು, ದಕ್ಷಾದಿಗಳ ಶಿಕ್ಷಿಸಿದಿರಿ. ನಿಮಗೆರಗದೆ ದುರ್ವೃತ್ತಿಯ ನಡೆದ ಗಜಾಸುರ, ವ್ಯಾಘ್ರಾಸುರ, ಗುಹ್ಯಾಸುರರುಗಳ ಕೊಂದು ಕಳೆದಿರಿ. ಇದನರಿದು ಸ್ತೋತ್ರವ ಮಾಡಿದರೆ ನೀವು ಕರುಣಿಸದೆ ಇಲ್ಲಯ್ಯಾ. ಇಂತಹ ಕರ್ತರಿನ್ನುಂಟೆ? ನಿಮ್ಮಂತಹ ಬಲಿಷ್ಠರಿನ್ನುಂಟೆ? ನಿಮ್ಮಂತಹ ಪುರುಷರುಗಳಿನ್ನುಂಟೆ? ಶಿವಶಿವಾ, ದುಷ್ಟರುಗಳೆಲ್ಲರ ಶಿಕ್ಷಿಸಿದಿರಿ. ಎನ್ನ ಮನವ ಶಿಕ್ಷಿಸಲಾರೆ. ಶಿವಶಿವಾ, ನಿಮ್ಮಿಂದ ಎನ್ನ ಮನ ಸಾಮರ್ಥ್ಯವುಳ್ಳದು. ಎನ್ನಿಂದ ನೀವು ಸಾಮರ್ಥ್ಯವಿಲ್ಲದಡೆ ಶಿವಭಕ್ತ ಅಪರಾಧಿಗಳ ಶಿಕ್ಷಿಸುವಂತಹ ಇರಿಭಕ್ತರು ಕಾಲಾಗ್ನಿರುದ್ರ ಮಡಿವಾಳ ಮಾಚಯ್ಯಂಗೆ ಮೊರೆಯಿಟ್ಟು ಕಳೆವೆನು. ಶಿವಧೋ ಎನ್ನ ಮೊರೆಯ ಕೇಳಿರಣ್ಣಾ. ಹರನೇ ನೀನು ದುಷ್ಟನಿಗ್ರಹ ಶಿಷ್ಟಪರಿಪಾಲಕನೆಂಬ ಬಿರಿದು ಬಿಟ್ಟು ಕಳೆ. ಬಳಿಕ ನಾ ನಿಮ್ಮ ವರದ ಹಸ್ತನೆಂಬೆ, ಶಶಿಧರನೆಂಬೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯನೆಂಬೆ.

**ಭಾವ:**— ಪರಮಾತ್ಮನು ದುಷ್ಟನಿಗ್ರಹ, ಶಿಷ್ಟಪರಿಪಾಲಕನೆನಿಸಿಕೊಳ್ಳುತ್ತಾನೆ. ಅಂದರೆ ಕೆಡಕಾದುದನ್ನು ನಿಗ್ರಹಮಾಡುವವನು ಮತ್ತು ಉತ್ತಮನಾದುದನ್ನು ಪಾಲಿಸುವವನು ಎಂದು ಹೇಳಲ್ಪಡುತ್ತಾನೆ. ಈ ಬಗ್ಗೆ ಪುರಾಣಗಳಲ್ಲಿ ಉದಾಹರಣೆಗಳೂ ಇವೆ. ಬ್ರಹ್ಮ, ವಿಷ್ಣು, ದಕ್ಷಾದಿಗಳು ಪರಮಾತ್ಮನನ್ನು ವಿರೋಧಿಸಿದರು. ಆಗ ಅವರು ಶಿಕ್ಷಿಸಲ್ಪಟ್ಟರು. ಹಾಗೆಯೇ ಪರಮಾತ್ಮನಿಗೆ ನಮಸ್ಕರಿಸದೆ ಅಹಂಕರಿಸಿ ನಡೆದಂಥ ಗಜಾಸುರ ವ್ಯಾಘ್ರಾ

ಸುರ, ಗುಹ್ಯಾಸುರ, ಮೊದಲಾದವರು ಸಂಹರಿಸಲ್ಪಟ್ಟರು. ಆದರೆ ಯಾರು ಪರಮಾತ್ಮನನ್ನು ಪ್ರೀತಿಸಿ ಅವನ ಸ್ತೋತ್ರಮಾಡಿರುವರೋ ಅವರಿಗೆ ಅವನು ಕರುಣಿಸಿರುವನು. ಹೀಗೆ ಅವನು ಕರುಣಿಸದೆ ಇದ್ದವರು ಯಾರೂ ಇರ ಲಿಕ್ಕಿಲ್ಲ. ಈ ಬಗೆಯು ಕರ್ತರು ಯಾರಾದರೂ ಇರಬಹುದೇ? ಯಾರೂ ಇಲ್ಲವೆಂದು ವಚನಕಾರನ ಅಭಿಪ್ರಾಯ. ಪರಮಾತ್ಮನಷ್ಟು ಬಲಿಷ್ಠರಾ ದವರೂ ನಿಜವಾದ ಗಂಡಸರೂ ಯಾರೂ ಇಲ್ಲ. ಅವನು ನಿಜವಾಗಿ ದುಷ್ಟರನ್ನು ಶಿಕ್ಷಿಸಿಯೇ ಬಿಟ್ಟಿರುವನು.

ಈ ಪ್ರಕಾರ ವಚನಕಾರನು ಹೇಳಿ, ಪರಮಾತ್ಮನಿಗೆ ಶಿಕ್ಷಿಸಲಿಕ್ಕೆ ಆಗದಂಥ ಒಂದು ವಸ್ತುವಿದೆ ಎಂದು ಹೇಳಿ, ಆ ವಸ್ತುವು ಯಾವದೆಂ ದರೆ ಮನುಷ್ಯನ ಮನಸ್ಸು ಎಂದು ಎಂದಿರುವನು. ಈ ಮನಸ್ಸನ್ನು ಶಿಕ್ಷಿಸಲು ಪರಮಾತ್ಮನಿಗೆ ಆಗದೆಂದು ಅವನ ಅಭಿಪ್ರಾಯ. ಯಾಕಂದರೆ ಮನಸ್ಸು ಯಾರನ್ನೂ ಕೇಳುವದಿಲ್ಲ. ಅದನ್ನು ಶಿಕ್ಷಿಸಲೂ ಆಗುವದಿಲ್ಲ. ಆದ್ದರಿಂದ ಈ ಮನಸ್ಸು ಪರಮಾತ್ಮನಕಿಂತಲೂ ಸಾಮರ್ಥ್ಯವುಳ್ಳದ್ದು. ಅಂದ ಬಳಿಕ ಈ ಮನಸ್ಸನ್ನು ತಿದ್ದುವದು ಹೇಗೆ ಎಂಬ ಪ್ರಶ್ನೆಯು ಹೊರಡುತ್ತದೆ. ಇದಕ್ಕೆ ವಚನಕಾರನು ಉತ್ತರಕೊಡುವದೇನೆಂದರೆ ಶಿವ ಭಕ್ತ ಅಪರಾಧಿಗಳನ್ನು ಶಿಕ್ಷಿಸುವಂಥವರು ಇರಿಭಕ್ತ, ಕಾಲಾಗ್ನಿರುದ್ರ, ಮಡಿವಾಳಮಾಚಿದೇವ ಇಂಥವರು ಇದ್ದಾರೆ. ಇಂಥವರಿಗೆ ಶರಣುಹೊ ಕ್ಕದ್ದಾದರೆ ಮನಸ್ಸಿನ ಡೊಂಕು ಹೋಗುವದು. ಅಂದ ಬಳಿಕ ಪರಮಾ ತ್ಮನು ದುಷ್ಟನಿಗ್ರಹ ಶಿಷ್ಟಪರಿಪಾಲಕ ಎಂಬ ತನ್ನ ಬಿರುದನ್ನು ಬಿಟ್ಟು ಕೊಡಬೇಕೆಂದು ವಚನಕಾರನು ಇಲ್ಲಿ ಹೇಳುತ್ತಾನೆ. ಹೀಗೆ ಪರಮಾ ತ್ಮನು ತನ್ನ ಬಿರುದನ್ನು ಬಿಟ್ಟುಕೊಟ್ಟದ್ದಾದರೆ ಅವನು ವರದ ಹಸ್ತ, ಶಶಿಧರ ಮತ್ತು ನಿಜವಾದ ಪರಬ್ರಹ್ಮ ವಸ್ತು ಎಂದು ಕರೆಯುವನೆಂದು ವಚನಕಾರನು ಚೇಷ್ಟೆಯಿಂದ ನುಡಿದಿರುವನು.

**ವಚನ**:— ೧೦. ಕೊಡುವ ಲಿಂಗವ ಬೇಡಿಕೊಳಲರಿಯದೆ ಕೊಡ ಲರಿಯದ ಮಾನವರನಾಶೆ ಮಾಡಿ ಕೆಡಬೇಡ ಕೆಡಬೇಡ ಕೇಳಿರಣ್ಣಾ. ಪುರಾತನರು ಗುರುಲಿಂಗ ಜಂಗಮವನರ್ಚಿಸಿ ದಾಸೋಹವ ಮಾಡಿ, ಕೇವಲ ವಿಶ್ವಾಸದಿಂದೆ ಲಿಂಗವನೆ ಬೇಡಿ ಲಿಂಗದಲ್ಲಿ ವರವ ಪಡೆದುದಕ್ಕೆ ದೃಷ್ಟವ ನೋಡಿರೇ. ಅದು ಎಂತೆಂದೊಡೆ, ಲಿಂಗವು ಮಾರ್ಕಂಡೇಯ ಮಳೆಯರಾಜಂಗೆ ಆಯುಷ್ಯವ ಕೊಟ್ಟ ನೋಡಿರೇ. ಸುರಿಗೆಯ ಚೌಡಯ



ಬಸವರಾಜದೇವರ ಹೋದ ಪ್ರಾಣಂಗಳ ಬೇಡಿದೊಡೆ, ಕೊಟ್ಟ ನೋಡಿರೇ. ಇನ್ನು ಲಿಂಗವು ಭಾಷೆಯ ಕೊಟ್ಟುದಕ್ಕೆ ದೃಷ್ಟವ ನೋಡಿರೇ. ಜೋಳಂಗೆ ಹೊನ್ನ ಮಳೆಯ ಕರೆಸಿದ. ದಾಸಂಗೆ ತವನಿಧಿಯ ಕೊಟ್ಟ. ದೇವದಾನವ ಮಾನವರಿಗೆಯೂ ಅವರವರು ಬೇಡಿದ ಪದಂಗಳ ಕೊಟ್ಟ ನೋಡಿರೇ. ಇಂತಿವು ಮೊದಲಾದ ಆಯುಷ್ಯ ಭಾಷೆಯ ಪ್ರಾಣಂಗಳು ಮತ್ತೇನೇನು ಪದಂಗಳಂ ಬೇಡಿದೊಡೆ ಕೊಡುವಂತಹ ಮಹಾದಾನಿಯನೆ ಬೇಡಿಕೊ ಳ್ಳಿರೇ. ಅನಾಥನಾಥನನು, ಅನಾಥಬಂಧುವನು, ಕರುಣಾಕರನನು, ವರ ಮೂರ್ತಿಯನು, ದಾನಗುಣಶೀಲನನು, ಭಕ್ತದೇಹಿಕ ದೇವನನು, ಭಕ್ತ ದೇಹಿಕ ಚಿಂತಾಮಣಿಯನು, ಭಕ್ತದೇಹಿಕ ಕಾಮಧೇನುವನು, ಭಕ್ತ ದೇಹಿಕ ಕಲ್ಪವೃಕ್ಷನನು ಬೇಡಿಕೊಳ್ಳಿರೇ ನಮ್ಮ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರನನು.

**ಭಾವ**:— ಪರಮಾತ್ಮನು ದಯಾಶೀಲನಾಗಿರುವನು. ಆದ್ದರಿಂದ ಅವನನ್ನು ಪುನಃಪೂರ್ವಕವಾಗಿ ಯಾಚಿಸಿದರೆ, ಅವನು ಯಾಚಿಸಿದ್ದನ್ನು ನಿಶ್ಚಯವಾಗಿ ಕೊಡುವನು. ಅನೇಕರು ಕೊಡತಕ್ಕಂಥ ಇಂಥ ಪರಮಾ ತ್ಮನನ್ನು ಬೇಡದೆ ಮಾನವರು ಕೊಡುವರೆಂದು ಅವರನ್ನು ಆಶೆಮಾಡು ವರು. ಇದು ಅನುಚಿತವೆಂದು ವಚನಕಾರನು ಅನ್ನುತ್ತಾನೆ. ಹಿಂದಿನ ಪುರಾತನರು ತಮ್ಮ ತನುಮನ ಧನದಿಂದ ಗುರುಲಿಂಗ ಜಂಗಮವನ್ನು ಅರ್ಚಿಸಿ, ದಾಸೋಹ ಭಾವದಿಂದ ವರ್ತಿಸಿ ತಮ್ಮ ಶರೀರದ ಒಳಹೊ ರಗನ್ನು ಶುದ್ಧ ಮಾಡಿಕೊಂಡು ಕೇವಲ ವಿಶ್ವಾಸದಿಂದ ಪರಮಾತ್ಮನನ್ನು ಬೇಡಿ, ಅನೇಕ ಬಗೆಯ ವರಗಳನ್ನು ಪಡೆದುಕೊಂಡರು. ಉದಾ:— ಮಾರ್ಕಂಡೇಯ, ಮಳೆಯ ರಾಜರು ತಮ್ಮ ಭಕ್ತಿ ವಿಶ್ವಾಸಗಳಿಂದ ತಮ್ಮ ಆಯುಷ್ಯವನ್ನು ಹೆಚ್ಚಿಸಿಕೊಂಡರು. ಸುರಿಗಿಯ ಚೌಡಯ್ಯ, ಬಸವರ ಸರು ಹೋದ ಪ್ರಾಣಗಳನ್ನು ಬರಮಾಡಿಕೊಂಡರು. ಪರಮಾತ್ಮನು ಜೋಳನಿಗೆ ಹೊನ್ನ ಮಳೆ ಗರೆದನು. ದೇವರದಾಸಿಮಯ್ಯನಿಗೆ ತವನಿಧಿ ಯನ್ನು ಕೊಟ್ಟನು. ಹೀಗೆ ಪರಮಾತ್ಮನು ದೇವ ದಾನವ ಮಾನವರಿಗೆ ಅವರು ಬೇಡಿದ ವರಗಳನ್ನು ಕೊಟ್ಟಿರುವನು. ಆದ್ದರಿಂದ ಇಂಥ ಮಹಾ ದಾನಿಯನ್ನು ಬೇಡಿಕೊಳ್ಳಬೇಕು. ಅವನು ಅನಾಥನಾಥನೂ ಅನಾಥ ಬಂಧುವೂ ಆಗಿದ್ದಾನೆ. ಅವನು ಕರುಣಾಕರನು, ದಾನಗುಣಶೀಲನು ಇದ್ದಾನೆ. ಅವನು ಭಕ್ತದೇಹನೇ ತನ್ನ ದೇಹವಾಗಿರುವನು. ಅವನು

ಭಕ್ತರ್ದೇಹಿಕ ಚಿಂತಾಮಣಿಯು, ಕಾಮಧೇನುವು, ಕಲ್ಪವೃಕ್ಷನು ಆಗಿರುತ್ತಾನೆ. ಇಂಥ ಪರಮಾತ್ಮನನ್ನು ಬೇಡಿಕೊಳ್ಳಿರೆಂದು ವಚನಕಾರನು ಬೋಧಿಸಿರುವನು.

**ವಚನಃ**--- ೧೧. ಸಾಕಾರವಿಡಿದು ಪರಬ್ರಹ್ಮವೆಂದೆಂಬಿರಿ. ಪರಬ್ರಹ್ಮವ ನುಡಿವಿರಿ. ಪರಬ್ರಹ್ಮವನರಿವೆವೆಂಬಿರಿ. ಪರಬ್ರಹ್ಮವನರಿಯದೆ ನುಡಿವಿರಿ. ಬ್ರಹ್ಮದೊಡಕು ಅರಿದು ಕಾಣಿರಣ್ಣಾ. ಈ ಬ್ರಹ್ಮದೊಡಕಿನಿಂದ ಮುನ್ನೊಮ್ಮೆ ದೇವಜಾತಿಗಳು ಋಷಿಜನಂಗಳು ಬ್ರಹ್ಮನನು ಪರಬ್ರಹ್ಮವ ಬೆಸಗೊಳಲು ಅಹಂ ಬ್ರಹ್ಮವೆಂದು ತಲೆಯ ಹೋಗಾಡಿಕೊಂಡು ಸರ್ವಪುರಾಣ ಪ್ರಸಿದ್ಧ ಇನ್ನು ತಲೆಯು ಮೋಟುಕಾಣಬರುತ್ತಿದೆ. ಬ್ರಹ್ಮನ ಶಿರ ಆ ಪರಬ್ರಹ್ಮನ ಹಸ್ತದಲ್ಲದೆ. ನಾನೇ ಬ್ರಹ್ಮವೆಂದು ಸನತ್ಕುಮಾರ ಒಂಟೆಯಾದ. ಸ್ಕಂದಪುರಾಣ, ಪ್ರಸಿದ್ಧ, ಅವರಂತೆ ನೀವಾಗದೆ ಪರಬ್ರಹ್ಮದ ನೆಲೆಯ ಕೇಳಿರಣ್ಣಾ! ಲಿಂಗವೇ ಪರಬ್ರಹ್ಮವೆಂದು ಅಥರ್ವಣವೇದ ನುಡಿವುತ್ತಿದೆ. ಶೃತಿ॥ ಓಂ ಸ ಏಕೋ ರುದ್ರಸ್ಸ ಈಶಾನಸ್ಸ ಭಗವಾನ್ ಸ ಮಹೇಶ್ವರಸ್ಸ ಮಹಾದೇವ ಇತಿ॥ ಎಂದುದಾಗಿ ಮತ್ತೆಯೂ ಈ ಪ್ರಕಾರದಲ್ಲಿ ಯಜುರ್ವೇದ ನುಡಿಯಿತ್ತು. ಶೃತಿ॥ ಋತಂ ಸತ್ಯ ಪರಬ್ರಹ್ಮ ಪುರುಷಂ ಕೃಷ್ಣ ಪಿಂಗಳಂ। ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ॥ ಮತ್ತೆಯೂ ಈ ಪ್ರಕಾರದಲ್ಲಿ ಶಿವಸಂಕಲ್ಪೋಪನಿಷತ್ತು ನುಡಿಯಿತ್ತು. ಶೃತಿ॥ ಋತಂ ಸತ್ಯಂ ಪರಬ್ರಹ್ಮಪುರುಷಂ ಕೃಷ್ಣಪಿಂಗಳಂ। ಊರ್ಧ್ವರೇತಂತಮೀಶಾನಂ ತನ್ಮೆ ಮನಶ್ಶಿವ ಸಂಕಲ್ಪಮಸ್ತು। ಎಂದುದಾಗಿ ಲಿಂಗವೇ ಪರಬ್ರಹ್ಮ. ಮುನ್ನೊಮ್ಮೆ ಹರಿಬ್ರಹ್ಮರ ಸಂವಾದದಲ್ಲಿ ಉರಿಲಿಂಗ ಉದ್ಭವವಾದಲ್ಲಿ ಹರಿಬ್ರಹ್ಮಾದಿಗಳು ಸ್ತೋತ್ರವ ಮಾಡಿದರು. ಲೈಂಗ್ಯೆ ॥ಜ್ವಾಲಾಮಾಲಾ ವೃತಾಂಗಾಯ ಜ್ವಲನಸ್ತಂಭರೂಪಿಣೆ। ನಮಶ್ಶಿವಾಯ ಶಾಂತಾಯ ಬ್ರಹ್ಮಣೆ ಲಿಂಗಮೂರ್ತಯೆ॥ ಎಂದುದಾಗಿ ಇದು ಕಾರಣ ಲಿಂಗವೇ ಪರಬ್ರಹ್ಮವೆಂದು ಮತ್ತು ಯಜುರ್ವೇದದಲ್ಲಿ ನುಡಿವುತ್ತಿದೆ॥ ಓಂ ಈಶಾನಸ್ಸರ್ವವಿದ್ಯಾನಾಮೀಶ್ವರಸ್ಸರ್ವಭೂತಾನಾಂ। ಬ್ರಹ್ಮಾಧಿಪತಿಃ ಬ್ರಾಹ್ಮಣೊಧಪತಿ ಬ್ರಹ್ಮಾ ಶಿವೋಮೆ ಅಸ್ತುಸದಾಶಿವೋ। ಮತ್ತಂ ಆದಿತ್ಯ ಪುರಾಣದಲ್ಲಿ॥ ಪರಬ್ರಹ್ಮ ಸ ಈಶಾನ ಏಕೋ ರುದ್ರಸ್ಸ ಏವಚ। ಭಗವಾನ್ಮಹೇಶ್ವರಸ್ಸಾಕ್ಷಾನ್ಮಹಾದೇವೊ ನ ಸಂಶಯಃ॥ "ಯಸ್ಯಾಂತಸ್ಥಾನಿ ಭೂತಾದಿ ಬ್ರಹ್ಮೇತಿಯಜುರ್ವೇದಸ್ತಂ ರುದ್ರಂ ಶರಣಂ ವ್ರಜೇತಿ" ಎಂದುದಾಗಿ ಲಿಂಗವೇ ಪರಬ್ರಹ್ಮ ಮತ್ತಂ ಕೂರ್ಮಪುರಾಣೆ ॥ ಈಶ್ವರ ಗೀತೆಯಲ್ಲಿ॥ ಅವ್ಯಕ್ತಂ ಕಾರಣಂ ಪ್ರಾಹುರಾನಂದ ಜ್ಯೋತಿರಕ್ಷರಂ। ಅಹಮೇವ ಪರಬ್ರಹ್ಮ ಮತ್ತೋಹ್ಯನ್ಯಂ ನ ವಿದ್ಯತೆ। ಏತಸ್ಮಾದ್ವಿಶ್ವರೂಪತ್ವಂ ನಿಶ್ಚಿತಂ ಪರಮಾತ್ಮಭಿಃ। ಏಕತ್ವೆ ಚ ಪೃಥಕ್ತ್ವೆ ಚ ಪ್ರೋಕ್ತಮೇವಮನಾಮಯಂ। ಅಹಂ ತತ್ಪರಮಂ ಬ್ರಹ್ಮ ಪರಮಾತ್ಮಾ ಸನಾತನಃ॥ ಎಂದುದಾಗಿ ಲಿಂಗವೇ ಪರಬ್ರಹ್ಮ. ಮತ್ತಂ ಮಾನವಪುರಾಣೆ॥ ಋತಂ ಸತ್ಯಂ ಪರಬ್ರಹ್ಮ ಪುರುಷಂ ಸೋಮಮೀಶ್ವರಂ। ಊರ್ಧ್ವರೇತಂ ಸಮುತ್ಪತ್ತಿಸ್ಥಿತಿ ಸಂಹಾರ ಕಾರಣಂ। ವಿಶ್ವರೂಪಂ ವಿರೂಪಾಕ್ಷಂ ಚಂದ್ರಮೌಲಿಂ ಘೃಣಾಸಿಧಿಂ। ಹಿರಣ್ಯ ಬಾಹುಮದ್ವಂದ್ವಂ ಹಿರಣ್ಯ ಪತಿಮೀಶ್ವರಂ। ಅಂಬಿಕಾಯಾಃ ಪತಿಂ ಸಾಕ್ಷಾದುಮಾಯಾಃ ಪತಿಮಕ್ರಿಯಂ। ಪರತತ್ವ ಸಮಾಖ್ಯಾತಂ ಶಿವಂ ಧ್ಯಾಯಂತಿ ಸಂತತಂ। ಎಂದುದಾಗಿ ಲಿಂಗವೇ ಪರಬ್ರಹ್ಮ. "ವಿಶ್ವತಶ್ಚಕ್ಷುದೇವ ಏಕ ಏವ" ಎಂದುಬಾಗಿ, ಬಹಳ ಬಹಳ ಚಕ್ಷು, ಬಹಳ ಬಹಳ ಮುಖನು, ಬಹಳ ಬಹಳ ಪಾದನು, ಇಂತಹ ಬಹಳವುಳ್ಳ ಲಿಂಗವೇ ಪರಬ್ರಹ್ಮ ಕಾಣಿರಣ್ಣಾ. ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ। ನಾದಬಿಂದು ಕಳಾತೀತಂ ಗುರುಣಾ ಲಿಂಗಮುದ್ಭವಂ" ಎಂದುದಾಗಿ ಮನ, ವಾಕ್ಕು, ನಾದ ಬಿಂದುಗಳಿಗತೀತವಾದ ಮಹಾ ಬಹುಳ ಲಿಂಗವನು ಶ್ರೀಗುರು ನಿರೂಪಿಸಿಕೊಟ್ಟನಾಗಿ ಈ ಲಿಂಗವೇ ಪರಬ್ರಹ್ಮ ಕಾಣಿಂಣ್ಣಾ. ಇದು ಕಾರಣ ಲಿಂಗವೇ ಪರಬ್ರಹ್ಮವೆಂದು ಅರಿದು ಧ್ಯಾನಿಸಿ ಪೂಜಿಸಿ ಮಹದಾನಂದ ಮುಕ್ತಿಯನೆಯ್ದಿದರು ಬ್ರಹ್ಮ ವಿಷ್ಣು ಮುಖ್ಯವಾದ ದೇವಜಾತಿ ಋಷಿಜನಂಗಳು. ಇದು ಪುರಾಣಪ್ರಸಿದ್ಧ. ಇನ್ನು ಕಲಿಯುಗದಲ್ಲಿ ದೃಷ್ಟವ ನೋಡಿರೇ. ಬಸವರಾಜದೇವರು ಮುಖ್ಯವಾದ ಅಸಂಖ್ಯಾತ ಪುರಾತನರು ಇದನರಿದು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ಲಿಂಗವೇ ಸಾಕಾರ ನಿರಾಕಾರ ಸಂಸಿದ್ಧನೆಂದು ಅರಿದು ಧ್ಯಾನಿಸಿ ಪೂಜಿಸಿ ಮಹದಾನಂದ ಮುಕ್ತಿಯನೈದಿದರು ಕಾಣಿರಣ್ಣಾ.



ಭಾವಃ— ಬ್ರಹ್ಮದ ಸ್ವರೂಪದ ವಿಷಯವಾಗಿ ಅನೇಕರು ಬಹುವಾಗಿ ಹೇಳುವದುಂಟು. ಸಾಕಾರದಿಂದಲೇ ಪರಬ್ರಹ್ಮವನ್ನು ಸಾಧಿಸಬೇಕೆಂದು ಅನೇಕರು ತರ್ಕಿಸುವದುಂಟು. ಬೇರೆ ಕೆಲವರು ಪರಬ್ರಹ್ಮವನ್ನು ಜ್ಞಾನದಿಂದ ಅರಿಯಬೇಕೆಂತಲೂ ಹೇಳುವದುಂಟು. ಆದರೆ ಈ ಬಗೆಯಾಗಿ ಪರಬ್ರಹ್ಮವು ಸಿಕ್ಕದು. ಅದರ ತೊಡಕು ಬಲು ಹೆಚ್ಚಿನದು, ಆಶ್ಚರ್ಯಕರವಾದದ್ದು. ಬ್ರಹ್ಮನು ಸಹ ಇದನ್ನು ಕುರಿತು ಅಹಂಕರಿಸಿ

ನುಡಿಯಲು ತನ್ನ ತಲೆಯನ್ನು ಕಳೆದುಕೊಂಡನು. ಮತ್ತು ಆ ತಲೆಯು ಶಿವನ ಹಸ್ತದಲ್ಲಿ ಕಂಗೊಳಿಸುತ್ತಲಿದೆ. ಸನತ್ಕುಮಾರನು ಅದೇ ಬಗೆಯ ಅಹಂಕಾರದಿಂದ ಒಂಟೆಯ ಸ್ವರೂಪನಾದ. ಆದ್ದರಿಂದ ಪರಬ್ರಹ್ಮನ ನಿಜಸ್ಥಿತಿಯನ್ನು ತಿಳಿದುಕೊಂಡು ಸರಿಯಾದ ಮಾರ್ಗದಿಂದ ನಡೆಯಿರೆಂದು ವಚನಕಾರನು ಇಲ್ಲಿ ಎಚ್ಚರು ಕೊಟ್ಟಿರುವನು.

ಅನೇಲೆ ವಚನಕಾರನು ಪರಬ್ರಹ್ಮದ ಸ್ವರೂಪವನ್ನು ಕುರಿತು ವೇದಾಗಮೋಪನಿಷತ್ತುಗಳು ಏನು ಹೇಳುತ್ತಲಿವೆಂಬದನ್ನು ಕುರಿತು ಇಲ್ಲಿ ಸವಿಸ್ತಾರವಾಗಿ ನಿರೂಪಿಸಿರುವನು. ಪರಬ್ರಹ್ಮನು ಒಬ್ಬನೇ ಇದ್ದಾನೆಂನು ಅಥರ್ವಣವೇದವು ಹೇಳುತ್ತಲಿದೆ. ಪರಬ್ರಹ್ಮನು ಸತ್ಯನಾಗಿದ್ದಾನೆ, ಆತನೊಬ್ಬನೇ ಪುರುಷನು. ಅವನಿಗೆ ಅನೇಕ ವರ್ಣಗಳಿದ್ದರೂ ಅವೆಲ್ಲವುಗಳ ಸ್ವರೂಪವು ಆತನೇ. ಆತನು ಉರ್ಧ್ವರೇತುವು ವಿರೂಪಾಕ್ಷನು ವಿಶ್ವರೂಪನು ಇದ್ದಾನೆಂದು ಶೃತಿಗಳೂ ಉಪನಿಷತ್ತುಗಳೂ ಹೇಳುತ್ತಲಿವೆ. ಹರಿಬ್ರಹ್ಮರ ನಡುವೆ ಲಿಂಗದ ಸ್ವರೂಪದ ಬಗ್ಗೆ ವಾದವು ಉಂಟಾಗಲು ಆ ಉಭಯತರು ಪರಬ್ರಹ್ಮನ ಆಡಿಮುಡಿಯನ್ನು ತಿಳಿಯದೆ ಹೋದರು. ಲಿಂಗಪುರಾಣದಲ್ಲಿ, ಪರಮಾತ್ಮನು ಜ್ವಾಲಾಮಾಲೆಯಿಂದ ಆವೃತನಾಗಿ ಅತ್ಯಂತ ಕಾಂತಿಮಯನಾಗಿದ್ದಾನೆ. ಪ್ರಕಾಶಮಾನವಾದ ಒಂದು ಕಂಭದಂತೆ ಹೊಳೆಯುತ್ತಿದ್ದಾನೆ. ಆದರೂ ಕೂಡ ಆತನು ಶಾಂತಮೂರ್ತಿಯು. ಇಂಥ ಲಿಂಗಮೂರ್ತಿಗೆ ನಮಸ್ಕಾರವೆಂದು ಹೇಳಿದೆ. ಯಜುರ್ವೇದದಲ್ಲಿ ಕೂಡ, ಈಶ್ವರನು ಎಲ್ಲ ವಿದ್ಯೆಗಳಿಗೆ ಸ್ವಾಮಿಯು, ಎಲ್ಲ ಸೃಷ್ಟ ಪದಾರ್ಥಗಳಿಗೂ ಒಡೆಯನು, ಬ್ರಹ್ಮ ಬ್ರಾಹ್ಮಣರಿಗೆಲ್ಲರಿಗೂ ಅಧಿಪತಿಯು ಎಂದು ಹೇಳಿದೆ. ಆದಿತ್ಯ ಪುರಾಣದಲ್ಲಿ, ಪರಬ್ರಹ್ಮನು ಎಂದರೆ ಈಶಾನ, ರುದ್ರ, ಭಗವಾನ್ಮಹೇಶ್ವರ, ಮಹಾದೇವ ಮೊದಲಾದ ಹೆಸರುಗಳುಳ್ಳವನಾಗಿ ಒಬ್ಬನೇ ಇದ್ದಾನೆಂದು ಹೇಳಿವೆ. ಕೂರ್ಮ ಪುರಾಣದಲ್ಲಿ ಮತ್ತು ಈಶ್ವರ ಗೀತೆಯಲ್ಲಿ ಪರಬ್ರಹ್ಮನು ಕಣ್ಣಿಂದ ಕಾಣಲಿಕ್ಕೆ ಅಸಾಧ್ಯನು, ಎಲ್ಲ ಪದಾರ್ಥಗಳಿಗೂ ಕಾರಣನು, ಭಗವಾನ್ ಮಹೇಶ್ವರನು, ಸಾಕ್ಷಾತ್ ಮಹಾದೇವನು ಎಂಬುದು ನಿಃಸಂಶಯವೆಂದು ಹೇಳಿದೆ. ಹಾಗೆಯೇ ಲಿಂಗದೊಳಗೆ ಜಗತ್ತೆಲ್ಲ ಅಡಗಿಕೊಂಡಿದೆ, ಅಂಥ ರುದ್ರನಿಗೆ ಶರಣು ಹೋಗಬೇಕೆಂದು ಹೇಳಿದೆ. ಕೂರ್ಮ ಪುರಾಣ ಮತ್ತು ಈಶ್ವರ ಗೀತೆಯಲ್ಲಿ ಪರಮಾತ್ಮನು ಅವ್ಯಕ್ತನು. ಎಲ್ಲದಕ್ಕೂ ಕಾರಣನು, ಆನಂದ



ಸ್ವರೂಪನು, ಜ್ಯೋತಿಯಂತೆ ಪ್ರಕಾಶಮಾನನು, ಕ್ಷಯರಹಿತನು, ಇಂಥ ಸ್ವರೂಪದವನಿದ್ದರೂ ಪರಮಾತ್ಮನೆಂದರೆ ತಾನೇ, ಅವನು ತನ್ನನ್ನು ಬಿಟ್ಟಿಲ್ಲ. ಅದುಕಾರಣ ಪರಮಾತ್ಮನು ವಿಶ್ವರೂಪನೆಂದು ತಿಳಿದುಬರುತ್ತದೆ. ಅವನು ಒಬ್ಬನೇ ದೇವನಿದ್ದಾನೆ. ಒಬ್ಬನೇ ಇದ್ದರೂ ಎಲ್ಲದರಲ್ಲಿಯೂ ಪ್ರತ್ಯೇಕವಾಗಿ ವಾಸಿಸುತ್ತಾನೆ. ಅವನಿಗೆ ದೋಷಾದಿ ಗುಣಗಳು ತಾಕಲಾರವು. ಹೀಗಿದ್ದರೂ ಮನುಷ್ಯನು ತಾನೇ ಪರಬ್ರಹ್ಮ ವಸ್ತುವು, ಸನಾತನನು. ಹೀಗೆ ತನಗೂ ಪರಬ್ರಹ್ಮನಿಗೂ ಇರುವ ಸಂಬಂಧವು ಇದರಲ್ಲಿ ತೋರಿಸಲ್ಪಟ್ಟಿದೆ. ಮಾನವಪುರಾಣದಲ್ಲಿ ಪರಮಾತ್ಮನು ಸತ್ಯನು, ಪುರುಷನು, ಸೋಮನು, ಈಶ್ವರನು, ಉರ್ಧ್ವರೇತುವು, ಉತ್ಪತ್ತಿ ಸ್ಥಿತಿ ಸಂಹಾರ ಕಾರಣನು, ವಿಶ್ವರೂಪನು, ಚಂದ್ರಮೌಲಿಯು, ವಿರೂಪಾಕ್ಷನು, ಹಿರಣ್ಯಬಾಹುವು, ಅದ್ವಂದ್ವನು, ಹಿರಣ್ಯಪತಿಯು, ಅಂಬಿಕಾಪತಿಯು, ಉಮಾಪತಿಯು, ಕ್ರಿಯಾರಹಿತನು ಎಂದು ಮೊದಲಾಗಿ ಹೊಗಳಲ್ಪಟ್ಟವನಾಗಿ ಎಲ್ಲರ ಧ್ಯಾನಕ್ಕೆ ಪಾತ್ರನೆಂದು ವರ್ಣನೆಯು ಕಂಡುಬರುತ್ತದೆ. ಪರಮಾತ್ಮನಿಗೆ ಬಹಳ ಬಹಳ ಚಕ್ಷುಗಳು, ಬಹಳ ಬಹಳ ಮುಖಗಳು, ಬಹಳ ಬಹಳ ಪಾದಗಳು ಇರುತ್ತವೆಂದು ಒಂದು ವಚನದಲ್ಲಿ ಇಲ್ಲಿ ಹೇಳಿದ್ದಾನೆ. ಶೃತಿಗಳಲ್ಲಿ ಪರಬ್ರಹ್ಮನು ಮಾತಿಗೆ ನಿಲುಕದವನು, ಮನಸ್ಸಿಗೂ ಸಹ ಹತ್ತದವನು, ನಾದ ಬಿಂದು ಕಳಾತೀತನು ಎಂದು ಹೇಳಿದೆ. ಗುರುವು ಕೊಟ್ಟಂಥ ವಸ್ತುವು ಈ ಪರಬ್ರಹ್ಮ ವಸ್ತುವೇ ಇದೆ, ಆದ್ದರಿಂದ ಈ ಲಿಂಗವು ಸಹ ಪರಬ್ರಹ್ಮನೇ ಎಂದು ಹೇಳಿದ್ದಾನೆ. ಇಂಥ ಲಿಂಗವನ್ನು ಭಜಿಸಿ ಪೂಜಿಸಿ ಹರಿಬ್ರಹ್ಮಾದಿಗಳೂ ಋಷಿಜನಗಳೂ ಮಹದಾನಂದ ಮುಕ್ತಿಪದವನ್ನು ಹೊಂದಿದರು. ಇದೇ ರೀತಿಯು ಕಲಿಯುಗದಲ್ಲಿಯೂ ಕಂಡುಬರುತ್ತದೆ. ಈ ಪಾಪಮಯವಾದ ಯುಗದಲ್ಲಿಯೂ ಕೂಡ ಪರಮಾತ್ಮನನ್ನು ತಿಳಿದು ಅವನನ್ನು ಸೇವಿಸಿದರೆ ಮುಕ್ತಿಪದವು ದೊರೆಯುತ್ತದೆ ಎಂದು ವಚನಕಾರನು ಹೇಳಿ, ಬಸವರಾಜ ದೇವರು ಹಾಗೂ ಅಸಂಖ್ಯಾತ ಪುರಾತನರು ಈ ಮಾರ್ಗವನ್ನು ಅನುಸರಿಸಿ ಮೋಕ್ಷಪದವನ್ನು ಹೊಂದಿದರೆಂದು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರನು ಸಾಕಾರನೂ ಹೌದು, ನಿರಾಕಾರನೂ ಹೌದು. ಇಂಥ ಪರಮಾತ್ಮನನ್ನು ಧ್ಯಾನಿಸಿ, ಪೂಜಿಸಿ, ಮಹದಾನಂದ ಮುಕ್ತಿ ಪದವನ್ನು ಪಡೆಯಿರೆಂದು ವಚನಕಾರನು ಇಲ್ಲಿ ಉಪದೇಶಿಸಿದ್ದಾನೆ.

**ವಚನ:** — ೧೨. ಶ್ರೀಗುರು ಸ್ವಾಮಿ ಕರುಣಿ ಕೊಟ್ಟ ಪ್ರಾಣ
ಲಿಂಗವು ಪಂಚಬ್ರಹ್ಮ ಮುಖವುಳ್ಳ ವಸ್ತುವೆಂದರಿವುದು. ಆ ಪಂಚ
ಬ್ರಹ್ಮ ಮುಖ ಸಂಜ್ಞೆಯ ಭೇದವೆಂತೆಂದೊಡೆ, ಆವುದಾನೊಂದು ಶಿವ
ಸಂಬಂಧವಾದ ಪರಮ ತೇಜೋ ಲಿಂಗವು ತನ್ನ ಭೋಗಾದಿ ಕಾರಣ
ಮೂರ್ತಿಗಳಿಂದುದಯವಾದ ಬ್ರಹ್ಮಾದಿ ತೃಣಾಂತವಾದ ದೇಹಿಗಳಿಂದಲು
ವ್ಯೋಮಾದಿ ಭೂತಂಗಳಿಂದಲು ಇತ್ಯಾದಿ ಸಮಸ್ತ ತತ್ವಂಗಳಿಂದಲು
ಮೇಲಣ ತತ್ವವಪ್ಪುದೇ ಕಾರಣವಾಗಿ ಪರವೆಂಬ ಸಂಜ್ಞೆಯದುಳ್ಳದಾಗಿ
ಹುದು. ಅನಂತಕೋಟಿ ಬ್ರಹ್ಮಾಂಡಂಗಳ ತನ್ನೊಳಗಡಗಿಸಿಕೊಂಡು
ಸಮಸ್ತ ಜಗಜ್ಜನನಕ್ಕೆ ತಾನೇ ಕಾರಣವಾಗಿ ಅವ್ಯಕ್ತ ಲಕ್ಷಿತವಾದ
ನಿಮಿತ್ತಂ ಗೂಢವೆಂಬ ಸಂಜ್ಞೆಯದುಳ್ಳುದಾಗಿಹುದು. ತಾನು ಶೂನ್ಯ
ಶಿವತತ್ವ ಭೇದವಾಗಿ ಅಯಸ್ಕಾಂತ ಸನ್ನಿಧಿಯಿಂದ ಲೋಹವೇ ಹೇಗೆ
ಭ್ರಮಿಸುವುದೋ ಹಾಗೆ ಬ್ರಹ್ಮಾದಿಗಳ ಕೃತ್ಯಮುಲ ಮಧ್ಯದಲ್ಲಿದ್ದು
ತನ್ನ ಚಿಚ್ಛಕ್ತಿಯ ಸನ್ನಿಧಿ ಮಾತ್ರದಿಂದ, ಅಹಮಾದಿಗಳಿಂ ವ್ಯೋಮಾದಿ
ಭೂತಗಳಿಂ, ಸೃಷ್ಟಿಸುವದಕ್ಕೆ ತಾನೇ ಕಾರಣವಪ್ಪುದರಿಂದ ಶರೀರಸ್ಥ
ವೆಂಬ ಸಂಜ್ಞೆಯದುಳ್ಳುದಾಗಿಹುದು. ತನ್ನ ಸೃಷ್ಟಿ ಶಕ್ತಿಯಿಂದ ದಯ
ವಾದ ಸಮಸ್ತ ಸಂಸಾರಾದಿ ಪ್ರಪಂಚವು, ತನ್ನಿಂದವೇ ಕಾರಣವಪ್ಪು
ದರಿಂ ಅನಾದಿವತ್ತೆಂಬ ಸಂಜ್ಞೆಯದುಳ್ಳುದಾಗಿಹುದು. ತನ್ನ ಮಾಯಾ
ಶಕ್ತಿಯಿಂದುದಯವಾದ ಸ್ತ್ರೀಲಿಂಗ ಪುಲ್ಲಿಂಗ ನಪುಂಸಕಲಿಂಗವೆಂಬ
ತ್ರಿಲಕ್ಷಿತವಾದ ಸಮಸ್ತ ಪ್ರಪಂಚವು ವರ್ತಿಸುವುದಕ್ಕೆ ತಾನೇ ಕ್ಷೇತ್ರ
ವಾದ ಕಾರಣ, ಲಿಂಗಕ್ಷೇತ್ರವೆಂಬ ಸಂಜ್ಞೆಯದುಳ್ಳುದಾಗಿಹುದು. ಈ
ಪ್ರಕಾರದಿಂ ಪರಬ್ರಹ್ಮ ಲಿಂಗವು ಪಂಚಮುಖ ಸಂಜ್ಞೆಯನುಳ್ಳುದಾಗಿಹು
ದೆಂದರಿವುದು. ಅದೆಂತೆಂದೊಡೆ, ಅದಕ್ಕೆ ವಾತುಳಾಗಮದಲ್ಲಿ, ಅಖಿಳಾ
ರ್ಣವಲಾಯಾನಾಂ ಲಿಂಗತತ್ವಂ ಪರಂ ತತಃ ಶ್ಲೋ॥ ಪರಂ ಗೂಢಂ
ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್ । ಯಥಾದಿವೈಶ್ವರಂ ತೇಜಸ್ತ
ಲ್ಲಿಂಗಂ ಪಂಚಸಂಜ್ಞಕಂ॥ ಎಂದೆನಿಸುವ ಲಿಂಗವು. ಮತ್ತಂ, ವಾಶಿಷ್ಠ
ದಲ್ಲಿ ಶ್ಲೋ॥ ಪಿಂಡಬ್ರಹ್ಮಾಂಡಯೋರೈಕ್ಯಂ ಲಿಂಗಸೂತ್ರಾತ್ಮನೋರಪಿ ।
ಸ್ವಬಾಹ್ಯಕೃತಯೋರೈಕ್ಯಂ ಕ್ಷೇತ್ರಜ್ಞ ಪರಮಾತ್ಮನೇಃ॥ ಎಂದೆನಿಸುವ
ಲಿಂಗವು. ಮತ್ತಂ ಬ್ರಹ್ಮಾಂಡ ಪುರಾಣದಲ್ಲಿ ॥ಶ್ಲೋ॥ ಅಧಿಷ್ಠಾನಾಂ
ಸಮಸ್ತಸ್ಯ ಸ್ಥಾವರಸ್ಯ ಚರಸ್ಯ ಚ । ಜಗತೋ ಯದ್ಭವೇತ್ತತ್ವಂ ತದ್ದಿವ್ಯ



ಸ್ಥಲಮುಚ್ಯತೇ॥ ಎಂದೆನಿಸುವ ಲಿಂಗವು. ಮತ್ತಂ ಶಿವರಹಸ್ಯ ॥ಶ್ಲೋ॥
ಮಹಾಲಿಂಗಮಿದಂ ದೇವೀ ಮನೋತೀತಮಗೋಚರಂ । ನಿರ್ನಾಮಂ
ನಿರ್ಗುಣಂ ನಿತ್ಯಂ ನಿರಂಜನಂ ನಿರಾಮಯಂ॥ ಎಂದೆನಿಸುವ ಲಿಂಗವು.
ಮತ್ತಂ ಉತ್ತರವಾತುಳದಲ್ಲಿ ॥ಶ್ಲೋ॥ ಆದ್ಯಂತಶೂನ್ಯಮಮಲಂ ಪರಿ
ಪೂರ್ಣಮೇಕಂ ಸೂಕ್ಷ್ಮಂ ಪರಾತ್ಪರಮನಾಮಯಮಪ್ರಮೇಯಂ ।
ಭಾವೈಕಗಮ್ಯಮಜಡಂ ಶಿವತತ್ವಮಾಹುಶ್ಚಿಚ್ಛಕ್ತಿಸಂಸ್ಫುರಣ ರೂಢ ಮಹಾ
ತ್ಮಲಿಂಗಂ॥ ಎಂದೆನಿಸುವ ಲಿಂಗವು. ಮತ್ತಂ ಅಥರ್ವಣ ವೇದದಲ್ಲಿ
॥ಶ್ಲೋ॥ ಶಿವಾತ್ಪರಾತ್ಪರಂ ಸೂಕ್ಷ್ಮಂ ನಿತ್ಯಂ ಸರ್ವಗತಾವ್ಯಯಂ । ಅನಿಂ
ದಿತಮನೌಪಮ್ಯಮಪ್ರಮಾಣಮನಾಮಯಂ॥ ಶುದ್ಧತ್ವಾಚ್ಛಿವಮುದ್ದಿಷ್ಟಂ
ಪರಾದೂರ್ಧ್ವಂ ಪರಾತ್ಪರಂ॥ ಎಂದೆನಿಸುವ ಲಿಂಗವು, ಮತ್ತಂ ಸಾಮ
ವೇದದಲ್ಲಿ ॥ಶ್ಲೋ॥ ಅನಂತಮವ್ಯಕ್ತಮಚಿಂತ್ಯಮೇಕಂ ಹರಂತಮಾಶಾಂ
ಬರ ಮಂಬರಾಗಂ! ಲೋಕೈಕನಾಥಂ ಭುಜಗೇಂದ್ರಹಾರಂ। ಅಜಂ
ಪುರಾಣಂ ಪ್ರಣಮಾಮಿ ನಿತ್ಯಂ॥ "ಅಣೋರಣೀಯಾನ್ಮಹತೋಮಹೀ
ಯಾನ್" ಎಂದೆನಿಸುವ ಲಿಂಗವು. ಮತ್ತಂ ಶಿವಧರ್ಮಪುರಾಣದಲ್ಲಿ
ಶ್ಲೋ॥ ಆಕಾಶಂ ಲಿಂಗಮಿತ್ಯಾಹುಃ ಪೃಥ್ವೀ ತಸ್ಯಾದಿಪೀಠಿಕಾ । ಆಲಯ
ಸ್ಸರ್ವ ಭೂತಾನಾಂ ಲಯನಾಲ್ಲಿಂಗಮುಚ್ಯತೆ॥ ಎಂದೆನಿಸುವ ಲಿಂಗವು.
ಮತ್ತಂ ಗಾರುಡ ಪುರಾಣದಲ್ಲಿ ಶ್ಲೋ॥ ಲಿಂಗಮಧ್ಯೆ ಜಗತ್ಸರ್ವಂ ತ್ರೈ
ಲೋಕ್ಯಂ ಸಚರಾಚರಂ। ಲಿಂಗ ಬಾಹ್ಯಾತ್ಪರಂ ನಾಸ್ತಿ ತಸ್ಮೈ ಶ್ರೀಗು
ರವೇ ನಮಃ ಎಂದೆನಿಸುವ ಲಿಂಗವು. ಮತ್ತಂ ಯಜುರ್ವೇದದಲ್ಲಿ ಶ್ಲೋ॥
ವಿಶ್ವತಶ್ಚಕ್ಷುರುತ ವಿಶ್ವತೋಮುಖ ವಿಶ್ವತೋಬಾಹುರುತ ವಿಶ್ವತೋಪಾತ್
ಸ ಬಾಹುಭ್ಯಾಂ ದಮತಿ ಸಂಪದಸ್ತ್ರೈರ್ದ್ಯಾವಾಭೂಮೀ ಜನಯನ್ನೇವ
ಏಕಏವ॥ ಎಂದೆನಿಸುವ ಲಿಂಗವು. ಮತ್ತಂ ಗಾಯತ್ರೀ॥ ಓಂ ಭೂಃ ಓಂ
ಭುವಃ ಓಂ ಸುವಃ ಓಂ ಮಹಃ ಓಂ ಜನಃ ಓಂ ತಪಃ ಓಂ ಸತ್ಯಂ
ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧೀಯೋ ಯೋನಃ
ಪ್ರಚೋದಯಾತ್ । ಎಂದೆನಿಸುವ ಲಿಂಗವು. ಮತ್ತಂ ಸ್ಕಂದಪುರಾಣ
ದಲ್ಲಿ ಶ್ಲೋ॥ ಲೀಯತೆ ಗಮ್ಯತೆ ಯತ್ರ ಏನ ಸರ್ವಂ ಚರಾಚರಂ ತದೇವ ಲಿಂ
ಗಮಿತ್ಯುಕ್ತಂ ಲಿಂಗ ತತ್ವಪರಾಯಣೈಃ ಎಂದೆನಿಸುವ ಲಿಂಗವು ಮತ್ತಂ
ಜ್ಞಾನವೈಭವಖಂಡದಲ್ಲಿ ಶ್ಲೋ॥ ಲೀಯತೆ ಲಯ ಸಂಪ್ರೋಕ್ತಂ ಗಕಾರಂ
ಸೃಷ್ಟಿರುಚ್ಯತೆ। ಲಯನಾದ್ಗಮನಂ ಚೈವ ಲಿಂಗ ಶಬ್ದಮಿಹೋಚ್ಯತೆ

ಎಂದೆನಿಸುವ ಲಿಂಗವು. ಮತ್ತಂ ಮಹಿಮ್ನದಲ್ಲಿ ಶ್ಲೋ॥ ಚಕಿತಮಭಿಧತ್ತೆ ಶೃತಿರಪಿ॥ ಎಂದೆನಿಸುವ ಲಿಂಗವು. ಮತ್ತಂ ಶಿವಧರ್ಮೋತ್ತರದಲ್ಲಿ॥ ನ ಜಾನಂತಿ ಪರಂ ಭಾವಂ ಯಸ್ಯ ಬ್ರಹ್ಮ ಸುರಾದಯಃ॥ ಎಂದೆನಿಸುವ ಲಿಂಗವು. ಮತ್ತಂ ಪುರುಷಸೂಕ್ತದಲ್ಲಿ॥ ಅತ್ಯತಿಷ್ಠದ್ದಶಾಂಗುಲಂ ಎಂದೆನಿಸುವ ಲಿಂಗವು. ಮತ್ತಂ ಉಪನಿಷತ್ತಿನಲ್ಲಿ॥ ಯತೋವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ॥ ಎಂದೆನಿಸುವ ಲಿಂಗವು. ಮತ್ತಂ ಕೂರ್ಮಪುರಾಣದಲ್ಲಿ॥ ವಾಚಾತೀತಂ ಮನೋತೀತಂ ಭಾವಾತೀತಂ ನಿರಂಜನಂ। ಅವರ್ಣಮಕ್ಷರಂ ಬ್ರಹ್ಮನಿತ್ಯಂ ಧ್ಯಾಯಂತಿ ಯೋಗಿನಃ॥ ಎಂದೆನಿಸುವ ಲಿಂಗವು. ಮತ್ತಂ ಋಗ್ವೇದದಲ್ಲಿ॥ ಅಯಂ ಮೇ ಹಸ್ತೋ ಭಗವಾನ್ ಅಯಂ ಭಗವತ್ತರಃ। ಅಯಂ ಮೇ ವಿಶ್ವಭೇಷಜಃ ಅಯಂ ಶಿವಾಭಿಮರ್ಶನಃ। ಅಯಂ ಮಾತಾ ಅಯಂ ಪಿತಾ ಅಯಂ ಜೀವಾತುರಾಗಮತ್॥ ಎಂದೆನಿಸುವ ಲಿಂಗವು. ಮತ್ತಂ ಉತ್ತರ ವಾತುಳದಲ್ಲಿ॥ ಸ ಬಾಹ್ಯಾಭ್ಯಂತರಂ ಸಾಕ್ಷಾಲ್ಲಿಂಗ ಜ್ಯೋತಿ ಪರಂ ಸ್ವಕಂ ತಿಲೆ ತೈಲಮಿವ ಭಾತಿಮರಣ್ಯಾಮಿವ ಪಾವಕಃ। ಕ್ಷೀರೇ ಸರ್ಪಿರಿವ ಸ್ರೋತ್ರೆ ಶಂಭುಸ್ಸುಸ್ಥಿರ ಮಾತ್ಮನಿ। ಏಕೋ ಯಂ ಪುರುಷೋ ವಿಶ್ವಸ್ತೈಜಸಃ ಪ್ರಾಜ್ಞರೂಪಕಃ ಸರ್ವೇಷ್ವಂಗೇಷು ಸಂಯುಕ್ತಮುಪಾಸ್ತೆ ಲಿಂಗಮದ್ವಯಂ॥ ಎಂದೆನಿಸುವ ಲಿಂಗವು. ಮತ್ತಂ ಶಿವರಹಸ್ಯದಲ್ಲಿ॥ ಹರರೂಪಂ ಕಾಯ ಸಂಬಂಧ ಗುರುರೂಪಂ ಪ್ರಾಣ ಸಂಯುತಂ। ಅಶರೀರಾತ್ಮ ಸಂಬಂಧ ಗುರುಶಿಷ್ಯಮನುಗ್ರಹಂ॥ ಎಂದೆನಿಸುವ ಲಿಂಗವು. ಮತ್ತಂ ಲೈಂಗ್ಯದಲ್ಲಿ॥ ಅನಯೋರ್ದೃಷ್ಟಿ ಸಂಯೋಗಾಜ್ಜಾಯತೆ ಜ್ಞಪ್ತಿ ರೂಪಿಣೀ। ತಯೈವ ವೇದದೀಕ್ಷಾ ಸ್ಯಾನ್ಮಂತ್ರ ರೂಪೇಣ ತಾಂ ಶೃಣು॥ ಎಂದೆನಿಸುವ ಲಿಂಗವು. ಮತ್ತಂ ಸೌರಪುರಾಣದಲ್ಲಿ॥ ಹಸ್ತ ಮಸ್ತಕ ಸಂಯೋಗಾತ್ಕಲಾ ವೇದೇತಿ ಗೀಯತೆ। ಗುರುಣೋದೀರಿತಾಕರ್ಣಯಾ ಮಾಸ ಮಂತ್ರೇತಿ ಕಥ್ಯತೆ। ಶಿಷ್ಯ ಪಾಣಿ ತತಿ ದತ್ತಯಾ ದೀಕ್ಷಾ ಸಾ ಕ್ರಿಯೋಚ್ಯತೆ॥ ಎಂದೆನಿಸುವ ಲಿಂಗವು. ಮತ್ತಂ ಕಾಳಿಕಾ ಖಂಡದಲ್ಲಿ॥ ಅಂಗಂಚ ಲಿಂಗಂಚ ಮುಖಂಚ ಹಸ್ತೆ ಶಕ್ತಿಶ್ಚ ಭಕ್ತಿಶ್ಚ ತಥಾರ್ಪಣಂಚ। ಆನಂದಮೇವ ಸ್ವಯಮರ್ಪಣಂಚ ಪ್ರಸಾದರೂಪೇಣ ಭವೇತ್ರಿ ತತ್ವಂ॥ ಎಂದೆನಿಸುವ ಲಿಂಗವು. ಮತ್ತಂ ಶಂಕರಸಂಹಿತೆಯಲ್ಲಿ॥ ತದೇವ ಹಸ್ತಾಂಬುಜ ಪೀಠ ಮಧ್ಯೇ ನಿಧಾಯ ಲಿಂಗಂ ಪರಮಾತ್ಮ ಚಿನ್ಹಂ। ಸಮರ್ಚಯೇದೇಕಧಿಯೋಪಚಾರೈರ್ನರಶ್ಚ



ಬಾಹ್ಯಾಂತರ ಭೇದ ಭಿನ್ನಂ॥ ಎಂದೆನಿಸುವ ಲಿಂಗವು. ಮತ್ತಂ ವೀರಾಗಮದಲ್ಲಿ॥ ಭಾವಸ್ಥಾನಾಂಗ ಲಿಂಗೇಷು ಪ್ರಾಣೇ ಲಿಂಗಾಂತರದ್ವಯಂ। ಸನ್ನಿಧಾನಾತ್ಪರಂ ಲಿಂಗಂ ಸ್ಥಾಪ್ಯಂ ತತ್ರೈವ ಧೀಮತಾಂ॥ ಎಂದೆನಿಸುವ ಲಿಂಗವು. ಮತ್ತಂ ಶಿವರಹಸ್ಯದಲ್ಲಿ॥ ಕರ್ಣದ್ವಾರೇ ಯಥಾ ವಾಕ್ಯಂ ಗುರುಣಾ ಲಿಂಗಮೀರ್ಯತೆ। ಇಷ್ಟ ಪ್ರಾಣಸ್ತಥಾ ಭಾವ ಸ್ತ್ರಿಧಾವೈಕ್ಯಂ ವರಾನನೆ॥ ಎಂದೆನಿಸುವ ಲಿಂಗವು. ಮತ್ತಂ ಶಿವರಹಸ್ಯದಲ್ಲಿ॥ ಏಕಮೂರ್ತಿಸ್ತ್ರಯೋ ಭಾಗಂ ಗುರುರ್ಲಿಂಗಂತು ಜಂಗಮಂ। ಜಂಗಮಂಚ ಗುರುರ್ಲಿಂಗಂ ತ್ರಿವಿಧಂ ಲಿಂಗಮುಚ್ಯತೆ॥ ಎಂದೆನಿಸುವ ಲಿಂಗವು. ಗುರು ಲಿಂಗ ಜಂಗಮ ರೂಪಾಗಿ ಎನ್ನ ಕರಸ್ಥಲಕ್ಕೆ ಬಿಜಯಂಗೈದು ಕರತಲಾಮಲಕವಾಗಿ ತೋರುತೈದಾನೆ. ಆಹಾ ಎನ್ನ ಪುಣ್ಯವೇ! ಆಹಾ ಎನ್ನ ಭಾಗ್ಯವೇ! ಆಹಾ ಎನ್ನ ಸತ್ಯವೇ! ಆಹಾ ಎನ್ನ ನಿತ್ಯವೆ! ಶಿವ ಶಿವ ಮಹಾದೇವ ಮಹಾದೇವ ಮಹಾದೇವ ನೀನೇ ಬಲ್ಲೆ ನೀನೇ ಬಲ್ಲೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ ॥ ೩ ॥

ಭಾವಃ— ಗುರುವು ಕೊಡುವಂಥ ಲಿಂಗವು ಪ್ರಾಣಲಿಂಗವಾಗಿದೆ. ಹೇಗೆಂದರೆ ಪರಬ್ರಹ್ಮವು ಎಲ್ಲ ವಸ್ತುಗಳಲ್ಲಿ ಚೈತನ್ಯಾತ್ಮಕವಾಗಿರುವದರಿಂದ ಅದೇ ಪ್ರಾಣಲಿಂಗವಾಗಿ ಮನುಷ್ಯನಲ್ಲಿ ತೋರುತ್ತದೆ. ಆ ಪ್ರಾಣಲಿಂಗವೇ ಗುರುಮುಖದಿಂದ ಇಷ್ಟಲಿಂಗವಾಗಿ ಭಕ್ತನ ಹಸ್ತದಲ್ಲಿ ಉತ್ಪನ್ನವಾಗುತ್ತದೆ. ಇಂಥ ಲಿಂಗವೇ ಪರಬ್ರಹ್ಮ ವಸ್ತುವು. ಈ ವಸ್ತುವು ಪಂಚಮುಖಸಂಜ್ಞೆಯುಳ್ಳುದಾಗಿದೆ. ಇದು ಐದು ತೆರದ ಗುಣಗಳಿಂದ ಗುರುತಿಸಲ್ಪಡುತ್ತಿದೆ.

ಪರಬ್ರಹ್ಮ ವಸ್ತುವು ಪರವಾಗಿದೆ. ಹೇಗೆಂದರೆ, ಇದು ತನ್ನ ಲೀಲಾಮಾತ್ರದಿಂದ ಈ ಸೃಷ್ಟಿಯನ್ನು ಕಲ್ಪಿಸಿದ್ದು ಈ ಸೃಷ್ಟಿಯಲ್ಲಿ ಬ್ರಹ್ಮ ಮೊದಲ್ಗೊಂಡು ತೃಣದ ವರೆಗೂ ಅನೇಕ ವಸ್ತುಗಳೂ ಜೀವಜಂತುಗಳೂ ಉತ್ಪನ್ನವಾಗಿವೆ. ಇವುಗಳ ಉತ್ಪತ್ತಿಯು ಪಂಚಭೂತಗಳಿಂದ ಇದ್ದು ಈ ಭೂತಗಳಿಗೆ ಮೇಲೆ ಇರುವಂಥಾದ್ದೇ ಪರಬ್ರಹ್ಮವೆನಿಸುವದು ಇದರಿಂದ ಪರಬ್ರಹ್ಮ ವಸ್ತುವು ಪರವೆಂದು ಹೇಳಲ್ಪಟ್ಟಿದೆ.

ಹಾಗೆಯೇ ಅದು ಗೂಢ ಲಕ್ಷಣವುಳ್ಳುದಾಗಿದೆ. ಯಾಕಂದರೆ ಯಾವತ್ತು ಬ್ರಹ್ಮಾಂಡವನ್ನು ತನ್ನೊಳಗೆ ಅಡಗಿಸಿಕೊಂಡು ಸಮಸ್ತ ಜಗಜ್ಜನನಕ್ಕೆ ತಾನೇ ಕಾರಣವಾಗಿದೆ.

ಅದು ಶರೀರಸ್ಥವಾಗಿದೆ. ಶರೀರಸ್ಥವೆಂದರೆ, ಶಿವತತ್ವವು ಶೂನ್ಯ ಸ್ಥಿತಿಯಲ್ಲಿ ಪ್ರಾರಂಭದಲ್ಲಿ ಇದ್ದು ಅದು ಮುಂದೆ ಶಿವ ಶಕ್ತಿ ಎಂದು ಭೇದವನ್ನು ಹೊಂದುವದು. ಹೀಗೆ ಉತ್ಪನ್ನವಾದ ಶಕ್ತಿಯು ಪದಾರ್ಥಗಳ ಹೃದಯದಲ್ಲಿದ್ದು ಅಲ್ಲಿ ತನ್ನ ಸನ್ನಿಧಿಮಾತ್ರದಿಂದ ಜಗತ್ತನ್ನು ಹುಟ್ಟಿಸಲಿಕ್ಕೆ ಕಾರಣವಾಗುವದರಿಂದ ಅದು ಶರೀರಸ್ಥವೆಂದು ಹೇಳಲ್ಪಟ್ಟಿದೆ.

ಪರಮಾತ್ಮನಿಗೆ ಅನಾದಿವತ್ ಎಂಬ ಸಂಜ್ಞೆಯೂ ಇದೆ. ಯಾಕಂದರೆ ಪರಮಾತ್ಮನ ಸೃಷ್ಟಿಶಕ್ತಿಯಿಂದ ಸಮಸ್ತ ಸಂಸಾರಾದಿ ಪ್ರಪಂಚವು ಮೊದಲು ಹುಟ್ಟುವದರಿಂದ ಅನಾದಿ ಎಂದು ಪರಮಾತ್ಮನು ಹೇಳಲ್ಪಟ್ಟಿದ್ದಾನೆ.

ಪರಮಾತ್ಮನಲ್ಲಿರುವ ಈ ಸೃಷ್ಟಿಶಕ್ತಿಗೆ ಮಾಯಾಶಕ್ತಿ ಎಂತಲೂ ಒಂದು ಹೆಸರು ಇದೆ. ಈ ಮಾಯಾ ಶಕ್ತಿಯಿಂದ ಪುಲ್ಲಿಂಗ, ಸ್ತ್ರೀಲಿಂಗ ನಪುಂಸಕಲಿಂಗ ಎಂಬ ತ್ರಿವಿಧ ಲಿಂಗಗಳುಳ್ಳ ಸಮಸ್ತ ಪ್ರಪಂಚವು ವ್ಯವಹರಿಸುತ್ತದೆ. ಈ ವ್ಯವಹರಣೆಗೆ ತಾನೇ ಸ್ಥಾನವಾದ್ದರಿಂದ ಲಿಂಗಕ್ಷೇತ್ರವೆಂಬ ಸಂಜ್ಞೆಯು ಪರಮಾತ್ಮನಿಗೆ ಬಂದಿದೆ.

ಮೇಲ್ಕಂಡ ವಿಷಯಗಳಿಗೆ ಅನುಸರಿಸಿ ವಚನಕಾರನು ಅನೇಕ ಗ್ರಂಥಾಧಾರಗಳನ್ನು ಮುಂದೆ ವಿವರಿಸಿರುವನು. ಅವು ಯಾವವೆಂದರೆ:—

ವಾತುಳಾಗಮದಲ್ಲಿ ಪರಮಾತ್ಮನಿಗೆ ಈ ಸಂಜ್ಞೆಗಳಿವೆ ಎಂದು ಹೇಳಿದ ಒಂದು ಉಕ್ತಿಯನ್ನು ವಚನಕಾರನು ಇಲ್ಲಿ ಉದಹರಿಸಿರುವನು. ಅದರಲ್ಲಿ ಈ ಆರೂ ಸಂಜ್ಞೆಗಳ ಹೆಸರುಗಳು ಬಂದಿವೆ. ವಾಶಿಷ್ಠದಲ್ಲಿ ಪರಮಾತ್ಮನು ಕ್ಷೇತ್ರಜ್ಞನೆಂದು ಹೇಳಲ್ಪಟ್ಟಿದ್ದಾನೆ. ಯಾಕೆಂದರೆ ಇಲ್ಲಿಯೇ ಪಿಂಡ ಬ್ರಹ್ಮಾಂಡಗಳ ಐಕ್ಯತೆಯು ಇದೆ. ಈ ಲಿಂಗದ ಸಂಬಂಧವು ಎಲ್ಲದರಲ್ಲಿಯೂ ಇದೆ. ಅಂತರಂಗ ಮತ್ತು ಬಹಿರಂಗ ಇವುಗಳಲ್ಲಿಯೂ ಐಕ್ಯತೆಯು ಇದರ ಮೂಲಕವಾಗಿಯೇ ಉಂಟಾಗುತ್ತದೆ. ಬ್ರಹ್ಮಾಂಡ ಪುರಾಣದಲ್ಲಿ ಹೇಳಿದ್ದೇನೆಂದರೆ, ಪರಬ್ರಹ್ಮವು ಸಮಸ್ತ ಸ್ಥಾವರಾದಿಗಳ ವ್ಯವಹಾರಕ್ಕೆ ಸ್ಥಾನವಾಗಿದೆ. ಈ ಸ್ಥಾನವು ಪ್ರಪಂಚಾತ್ಮಕವಾದುದಲ್ಲ. ದಿವ್ಯ ಲಕ್ಷಣವುಳ್ಳುದು ಇದೆ. ಶಿವರಹಸ್ಯದಲ್ಲಿ ಪರಬ್ರಹ್ಮವು ಮಹಾಲಿಂಗವು, ಮನಸ್ಸಿಗೆ ಅತೀತವು, ಅಗೋಚರವು, ಹೆಸರಿಲ್ಲದ್ದು, ನಿರ್ಗುಣವು, ನಿತ್ಯವು, ಶುದ್ಧವು, ದೋಷರಹಿತವು ಎಂದು ವರ್ಣಿಸಲ್ಪಟ್ಟಿದೆ. ಉತ್ತರವಾತುಳದಲ್ಲಿ ಪರಬ್ರಹ್ಮವು ಆದ್ಯಂತ ಶೂನ್ಯವು, ಮಲರಹಿತವು,



ಪರಿಪೂರ್ಣವು, ಏಕವಾದದ್ದು, ಸೂಕ್ಷ್ಮವು, ಪರಕ್ಕೆ ಪರವಾದದ್ದು, ಅಪಕ್ವ ಸ್ಥಿತಿ ರಹಿತವು, ಉಪಮೆಗೆ ನಿಲುಕದ್ದು, ಭಾವದಿಂದ ಮಾತ್ರ ಕಾಣತಕ್ಕದ್ದು, ಜಡರಹಿತವು, ಹೀಗೆ ಈ ಶಿವತತ್ವವು ಇದೆ. ಇದರ ಸಂಸ್ಫುರಣವೇ ಮಹಾಲಿಂಗವು, ಅಥರ್ವಣ ವೇದದಲ್ಲಿ ಶಿವನು ಪರಕ್ಕೆ ಪರನಾಗಿದ್ದಾನೆ, ಸೂಕ್ಷ್ಮನಾಗಿದ್ದಾನೆ, ಸೂಕ್ಷ್ಮನಲ್ಲದೆ ನಿತ್ಯನು, ಸರ್ವದರಲ್ಲಿಯೂ ಇರತಕ್ಕವನು, ಅವ್ಯಯನು, ನಿಂದೆಗೆ ನಿಲುಕದವನು, ಉಪಮಾರಹಿತನು, ಇಂತಿಷ್ಟು ಪ್ರಮಾಣದವನೆಂದು ಹೇಳಲಿಕ್ಕೆ ಬಾರದವನು, ಪರಿಶುದ್ಧನು ಇದ್ದದರಿಂದ ಶಿವನೆಂಬ ಹೆಸರುಳ್ಳವನು, ಉರ್ಧ್ವನು, ಪರಕ್ಕೆ ಪರನು ಇರುವನು. ಸಾಮವೇದದಲ್ಲಿ ಪರಮಾತ್ಮನಿಗೆ ಅಂತವಿಲ್ಲ, ಅವನು ಧ್ಯಾನಕ್ಕೆ ನಿಲುಕದವನು, ಒಬ್ಬನೇ ಇದ್ದಾನೆ, ಅವನು ಹೊದೆಯುವ ಬಟ್ಟೆಗಳು ಅಷ್ಟ ದಿಕ್ಕುಗಳೇ ಇವೆ, ಲೋಕಕೆಲ್ಲಕ್ಕೆ ಒಡೆಯನು, ಅವನಿಗೆ ಆಭರಣವು ಮಹಾಶೇಷನು ಇದ್ದಾನೆ, ಅವನಿಗೆ ಹುಟ್ಟು ಇಲ್ಲ, ಬಹಳ ಹಿಂದಿನವನು, ಇಂಥವನಿದ್ದು ಇವನಿಗೆ ನಮಸ್ಕಾರವೆಂಬ ವರ್ಣನೆಯು ಇದೆ. ಲಿಂಗವು ಸಣ್ಣದರಲ್ಲಿ ಸಣ್ಣದು, ದೊಡ್ಡದರಲ್ಲಿ ದೊಡ್ಡದು ಎಂದು ಶೃತಿಯಲ್ಲಿ ಹೇಳಿದೆ. ಶಿವಧರ್ಮ ಪುರಾಣದಲ್ಲಿ, ಆಕಾಶವೇ ಅದರ ತುದಿ, ಪೃಥ್ವಿಯೇ ಆದರ ಪೀಠ, ಹೀಗೆ ಲಿಂಗವಿದ್ದು, ಹುಟ್ಟಿದ ಎಲ್ಲ ಪದಾರ್ಥಗಳು ಅದರಲ್ಲಿ ಲಯವಾಗುವದರಿಂದ ಲಿಂಗವೆಂಬ ಹೆಸರು ಅದಕ್ಕೆ ಬಂದಿದೆ ಎಂದು ಹೇಳಿದೆ. ಗಾರುಡ ಪುರಾಣದಲ್ಲಿ ಲಿಂಗದಲ್ಲಿಯೇ ಎಲ್ಲ ಜಗತ್ತು, ತ್ರಿಲೋಕದಲ್ಲೆಲ್ಲಿಯೂ ಲಿಂಗವು ಇದೆ, ಅಲುಗಾಡುವದೂ ಅಲುಗಾಡದೆ ಇರುವದೂ ಇದರಲ್ಲಿಯೇ ಇವೆ, ಲಿಂಗದ ಹೊರಗೆ ಆವುದೂ ಇಲ್ಲ, ಇಂಥ ಶ್ರೇಷ್ಠ ವಸ್ತುವಿಗೆ ನಮಸ್ಕಾರವೆಂದು ಹೇಳಿದೆ. ಯಜುರ್ವೇದದಲ್ಲಿ ವಿಶ್ವವೇ ಲಿಂಗಕ್ಕೆ ಕಣ್ಣಾಗಿದೆ, ಅದೇ ಅದರ ಮುಖ, ಬಾಹು, ಕಾಲು ಆಗಿವೆ. ಇದೇ ಸ್ವರ್ಗ. ಪೃಥ್ವಿ, ಪಾತಾಳ. ಸುಖಸಂಪತ್ತುಗಳು ಆಗಿವೆ. ಗಾಯತ್ರೀ ಮಂತ್ರದಲ್ಲಿಯೂ ಇದೇ ಭಾವವು ಬಂದಿವೆ. ಗಾರುಡ ಪುರಾಣದಲ್ಲಿ ಲಿಂಗ ಮಧ್ಯದಲ್ಲಿ ಜಗತ್ತು ಇದೆ, ತ್ರಿಲೋಕಗಳಿವೆ, ಎಲ್ಲ ಚರಾಚರ ವಸ್ತುಗಳು ಇವೆ, ಲಿಂಗದ ಹೊರಗೆ ಆವುದೂ ಇಲ್ಲ, ಅಂಥ ಲಿಂಗಕ್ಕೆ ನಮಸ್ಕಾರವು ಎಂದು ಹೇಳಿದೆ. ಯಜುರ್ವೇದದಲ್ಲಿ ವಿಶ್ವವೆಲ್ಲವೂ ಕಣ್ಣು ವಿಶ್ವವೆಲ್ಲವೂ ಮುಖ, ವಿಶ್ವವೆಲ್ಲವೂ ಬಾಹು, ವಿಶ್ವವೆಲ್ಲವೂ ಕಾಲು, ಆತನೊಬ್ಬನೇ ಇದ್ದಾನೆ ಎಂದು ಹೇಳಿದೆ. ಸ್ಕಂದ ಪುರಾಣದಲ್ಲಿ ಯಾವ ವಸ್ತುವಿನಲ್ಲಿ ಯಾವತ್ತು ಅಡಗಿರುತ್ತದೋ ಯಾವುದರಿಂದ ಅದು ಹೊರ

ಪಡುತ್ತದೋ, ಯಾವದು ಚರಾಚರ ವಸ್ತುವೋ ಅದೇ ಲಿಂಗವೆನಿಸಿಕೊಳ್ಳಲ್ಪಡುತ್ತದೆಂದು ಲಿಂಗಪಾರಾಯಣರು ಹೇಳುತ್ತಾರೆಂದು ಕಾಣಿಸಿದೆ. ಜ್ಞಾನವೈಭವ ಖಂಡದಲ್ಲಿ ಲಿಂಗ ಶಬ್ದದಲ್ಲಿಯ 'ಲ' ಕಾರವು ಲೀನ ಎಂಬರ್ಥವನ್ನು 'ಗ' ಕಾರವು ಸೃಷ್ಟಿ ಎಂಬ ಅರ್ಥವನ್ನೂ ಕೊಡುವದರಿಂದ ಲಿಂಗ ಎಂಬ ಶಬ್ದವಾಗಿದೆ ಎಂದು ಹೇಳಿದೆ. ಮಹಿಮ್ನದಲ್ಲಿ ಲಿಂಗದ ವಿಷಯವನ್ನು ಶೃತಿಗಳು ಬೆರಗಾಗಿ ಹೇಳುತ್ತಿವೆ ಎಂದು ಬರೆದಿದೆ. ಶಿವಧರ್ಮೋತ್ತರದಲ್ಲಿ ಯಾವದರ ನಿಜ ತತ್ವವನ್ನು ಬ್ರಹ್ಮ ಮೊದಲಾದ ದೇವತೆಗಳು ಅರಿಯರೋ ಅಂಥ ಈ ವಸ್ತುವು ಅತ್ಯಂತ ಮೇಲಿನ ಸ್ಥಿತಿಯನ್ನು ಹೊಂದಿದೆ ಎಂತಲೂ ಪುರುಷ ಸೂಕ್ತದಲ್ಲಿ ಜಗತ್ತನ್ನು ಮೀರಿ ಹತ್ತು ಬೆರಳು ಮುಂದೆ ಅದು ಚಾಚಿದೆ ಎಂತಲೂ, ಉಪನಿಷತ್ತಿನಲ್ಲಿ ಯಾವದು ಮಾತಿಗೆ ಹಾಗೂ ಮನಸ್ಸಿಗೆ ಮೀರಿದ್ದಿರುತ್ತದೋ ಅಂಥ ಲಿಂಗವು ಎಂತಲೂ ಕೂರ್ಮಪುರಾಣದಲ್ಲಿ ವಾಕ್ಕು ಮನ ಭಾವ ಇವುಗಳಿಗೆ ಮೀರಿದ್ದೂ, ಶುದ್ಧವೂ, ವರ್ಣ ಮತ್ತು ಅಕ್ಷರವಿಲ್ಲದ್ದೂ, ನಿತ್ಯವೂ, ಆಗಿದ್ದು ಇದನ್ನು ಯೋಗಿಗಳು ಯಾವಾಗಲೂ ಧ್ಯಾನಿಸುತ್ತಾರೆಂದು ಹೇಳಿದೆ. ಋಗ್ವೇದದಲ್ಲಿ ಕೂಡ ಇದರ ವರ್ಣನೆಯು ಬಂದಿದೆ. ಇದು ನನ್ನ ಹಸ್ತವು, ದೈವತವು, ಜಗದ್ವ್ಯಾಪಿಯು, ಶುಭವನ್ನು ಕೊಡುವಂತಹದು. ಇದೇ ನನ್ನ ತಾಯಿಯು ತಂದೆಯು ಜೀವವು ಎಂಬ ಅಭಿಪ್ರಾಯವು ಇದೆ. ಉತ್ತರವಾತುಳದಲ್ಲಿ ಲಿಂಗವು ಒಳಗೂ ಹೊರಗೂ ವ್ಯಾಪಿಸಿದೆ. ಸಾಕ್ಷಾದ್ವಸ್ತುವು, ಜ್ಯೋತಿರೂಪವು, ಎಲ್ಲದಕ್ಕು ಮೀರಿದ್ದು ಎಂದು ಇದೆ. ಅದು ಎಳ್ಳಿನಲ್ಲಿಯ ಎಣ್ಣೆಯಂತೆ ಅರಣ್ಯದಲ್ಲಿಯ ಅಗ್ನಿಯಂತೆ, ಹಾಲಿನಲ್ಲಿಯ ತುಪ್ಪದಂತೆ ವ್ಯಾಪಿಸಿರುತ್ತದೆ. ಪರಮಾತ್ಮನು ಅತ್ಯಂತ ಸ್ಥಿರನು. ಅವನಿಗೆ ಇದಿರೆಂಬುದಿಲ್ಲ, ಅವನೊಬ್ಬನೇ ಪುರುಷನು, ಜಗದ್ವ್ಯಾಪಿಯು, ಅತ್ಯಂತ ತೇಜಸ್ಸುಳ್ಳವನು, ಜ್ಞಾನಸ್ವರೂಪನು, ಎಲ್ಲ ಅಂಗಗಳಲ್ಲಿ ವಾಸಿಸುವಂತಹನು, ಅದ್ವಯನು ಎಂತಲೂ ಇದರಲ್ಲಿ ಇದೆ. ಲೈಂಗ್ಯಪುರಾಣದಲ್ಲಿ ಲಿಂಗದೊಳಗೆ ದೃಷ್ಟಿಸಂಯೋಗವಾಗಲು ಜ್ಞಾನವು ಉದ್ಭವಿಸುತ್ತದೆ, ಪರಮಾತ್ಮನು ಮಂತ್ರರೂಪನಾಗಿರುತ್ತಾನೆ, ಮಂತ್ರಮೂಲಕವೇ ದೀಕ್ಷೆಯು ಎಂಬ ಅಭಿಪ್ರಾಯವಿದೆ. ಸೌರಪುರಾಣದಲ್ಲಿ ಹಸ್ತಮಸ್ತಕ ಸಂಯೋಗದಿಂದ ಕಲೆಯು ಉದ್ಭವಿಸುತ್ತದೆ, ಗುರುವು ಕರ್ಣದಲ್ಲಿ ಉಪದೇಶಿಸುವನು, ಉಪದೇಶದಿಂದ ಮಾಂಸಪಿಂಡವು ಹೋಗಿ ಮಂತ್ರಪಿಂಡವಾಗುವದು, ಶಿಷ್ಯನ ಕಯ್ಯಲ್ಲಿ ದೀಕ್ಷೆಯ ಮೂಲಕ ಪರಮಾತ್ಮನು ತಲೆದೋರುತ್ತಾನೆ. ಎಂದು ಇದೆ. ಕಾಳಿಕಾ



ಖಂಡದಲ್ಲಿ, ಅಂಗದಲ್ಲಿ ಶಕ್ತಿಯಾಗಿಯೂ ಲಿಂಗದಲ್ಲಿ ಆ ಶಕ್ತಿಯೇ ಭಕ್ತಿಯಾಗಿಯೂ ಮುಖದಲ್ಲಿ ಪ್ರಸಾದರೂಪಾಗಿಯೂ, ಪ್ರಸಾದವೇ ಆನಂದ ರೂಪಾಗಿಯೂ, ಆ ಆನಂದವೇ ತಾನಾಗಿಯೂ ಇರುವದೇ ಲಿಂಗದ ಸ್ವಭಾವವು ಎಂದು ಹೇಳಿದೆ. ಶಂಕರಸಂಹಿತೆಯಲ್ಲಿ ಲಿಂಗವು ಹಸ್ತಾಂಬುಜಪೀಠ ಮಧ್ಯದಲ್ಲಿ ಇದ್ದುಕೊಂಡು ಅಲ್ಲಿ ಪರಮಾತ್ಮ ಚಿನ್ಹವಾಗಿದ್ದುಕೊಂಡಿದೆ. ಈ ಒಂದನ್ನೇ ಅತ್ಯಂತ ಪೂಜ್ಯ ಮನಸ್ಸಿನಿಂದ ಪೂಜೆಮಾಡತಕ್ಕದ್ದು. ಇದರಲ್ಲಿ ಒಳಗೂ ಹೊರಗೂ ಏನೊಂದು ಭೇದವಿಲ್ಲ. ವೀರಾಗಮದಲ್ಲಿ ಭಾವದಲ್ಲಿ ಪ್ರಾಣದಲ್ಲಿ ಅಂಗದಲ್ಲಿ ಲಿಂಗವು ತುಂಬಿಕೊಂಡು ಅದ್ವಯವಾಗಿದೆ, ಅದೇ ಪರಲಿಂಗಸ್ವರೂಪವಾಗಿದೆ, ಇದೇ ಅಂಗದಲ್ಲಿ ಸ್ಥಾಪಿಸಲ್ಪಡುತ್ತದೆ ಎಂದು ಹೇಳಿದೆ. ಶಿವರಹಸ್ಯದಲ್ಲಿ ಕರ್ಣದ್ವಾರದಲ್ಲಿ ಗುರು ಉಪದೇಶವಾಗಲು ಅದು ಲಿಂಗವಾಗಿ ಪರಿಣಮಿಸುವದು. ಇದರಲ್ಲಿ ಇಷ್ಟ, ಪ್ರಾಣ, ಭಾವವೆಂದು ಮೂರು ಭೇದಗಳಿವೆ. ಒಂದೇ ಮೂರ್ತಿಯು ಮೂರು ವಿಧವಾಗಿದೆ. ಗುರುಲಿಂಗಜಂಗಮವೇ ಈ ವಿಧಗಳಾಗಿದೆ. ಹೀಗೆ ಗ್ರಂಥಗಳಲ್ಲಿ ಅನೇಕ ಉಕ್ತಿಗಳು ಇವೆ. ಲಿಂಗವು ಗುರುಲಿಂಗಜಂಗಮರೂಪಾಗಿ ದೇಹದಲ್ಲಿದ್ದರೂ ಕರಸ್ಥಲಕ್ಕೆ ಬಂದು ಕರತಲಾಮಲಕವಾಗಿದೆ. ಇದು ನನ್ನ ಪುಣ್ಯ ಭಾಗ್ಯವು. ಇದರ ನಿಜವನ್ನು ಎಲೋ ಪರಮಾತ್ಮನೇ ನೀನೇ ಬಲ್ಲೆ ಎಂದು ಅತ್ಯಂತ ಹರುಷಿತವಾಗಿ ವಚನಕಾರನು ತನ್ನ ಧನ್ಯವಾದವನ್ನು ಮಾಡಿಕೊಂಡಿರುವನು.

# ದೇವರು ಒಬ್ಬನೇ ಇದ್ದಾನೆ.

**ವಿವರಣೆ:**— ಹಿಂದಿನ ವಚನಗಳಲ್ಲಿ ಪರಮಾತ್ಮನ ಸ್ವರೂಪವನ್ನು ವಚನಕಾರನು ವರ್ಣಿಸಿ ಆತನು ಒಬ್ಬನೇ ಇದ್ದಾನೆ ಎಂದು ಮುಂದಿನ ವಚನಗಳಲ್ಲಿ ಹೇಳಿರುವನು. ಆದ್ದರಿಂದ ಭಕ್ತನು ಅನೇಕ ದೇವತೆಗಳನ್ನು ಎಂದೂ ಪೂಜೆ ಮಾಡಕೂಡದು. ಪರಮಾತ್ಮನೊಬ್ಬನೇ ಶ್ರೇಷ್ಠನೆಂದು ಭಾವಿಸಿ ಪೂಜಿಸಬೇಕು. ಅನ್ಯ ದೇವತೆಗಳ ಪೂಜೆ ಮಾಡಕೂಡದು. ಹಾಗೂ ಅವುಗಳಿಗೆ ಸಂಬಂಧಿಸಿದ ಗುರುತುಗಳನ್ನು ಇಟ್ಟುಕೊಳ್ಳಬಾರದು. ಹೀಗೆ ವರ್ತಿಸದೆ ಹೋದರೆ ಭಕ್ತನಿಗೆ ಮೋಕ್ಷವು ಪ್ರಾಪ್ತವಾಗಲಾರದು. ಅವನು ಅನೇಕ ಜನ್ಮಗಳಲ್ಲಿ ಬಂದು ಸಂಸಾರದಲ್ಲಿ ತೊಳಲಾಡುವನು ಎಂದು ಮುಂದಿನ ವಚನಗಳಲ್ಲಿ ಹೇಳಿರುವನು.

**ವಚನ:**— ೧೩. ಲಿಂಗವಂತ ಲಿಂಗವಂತ ಎಂಬಿರಿ. ಎಂತು ಲಿಂಗವಂತರಾದಿರೋ, ಅನ್ಯ ದೈವದ ಭಜನೆ ಮಾಣದನ್ನಕ್ಕ? ಭವಿಗಳ ಸಂಗವ ಮಾಣದನ್ನಕ್ಕ, ಎಂತು ಲಿಂಗವಂತರಾದಿರೋ ನೀವು? ಅದೆಂತೆಂದೊಡೆ "ಶಿವಾಚಾರ ಸಂಪನ್ನೋ ಅನ್ಯ ದೈವಂ ತು ಪೂಜನಃ। ಶ್ವಾನ ಯೋನಿ ಶತಂ ಗತ್ವಾ ಚಾಂಡಾಲಗೃಹಮಾಚರೇತ್ ॥೧॥ ಅಶನೇ ಶಯನೇ ಯಾನೆ ಸಂಪರ್ಕೇ ಸಹ ಭೋಜನೆ । ಸಂಚರಂತಿ ಮಹಾ ಘೋರೇ ನರಕೇ ಕಾಲಮಕ್ಷಯಂ ॥೨॥ ಇಂತೆಂದುದಾಗಿ ಅನ್ಯ ದೈವ ಭವಿ ಉಳ್ಳನಕ ನೀವು ಲಿಂಗವಂತರೆಂತಾದಿರೋ ಮರುಳುಗಳಿರಾ? ಇದನರಿತು ಭಕ್ತಿಪಥವ ಸೇರದಿರ್ದಡೆ ನೀವೆಂದೆಂದಿಗೂ ಭವಭವದ ಲೆಂಕರು. ಇದು ಕಾರಣ ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಲಿಂಗ ಮುನ್ನವೇ ದೂರವಯ್ಯ.

**ಭಾವ:**— ನಾವು ಲಿಂಗವುಳ್ಳವರು ನಾವು ಲಿಂಗವುಳ್ಳವರು ಎಂದು ನೀವು ಅಹಂಕರಿಸಿ ನುಡಿವಿರಿ. ಆದರೆ ನಿಮಗೆ ಅನ್ಯ ದೈವದ ಭಜನೆ ಬಿಡದು. ಈ ಸ್ಥಿತಿಯು ನಿಮಗೆ ಇರುವ ವರೆಗೆ ನೀವು ಲಿಂಗವಂತರಾಗುವ ಬಗೆ ಹೇಗೆ? ಹಾಗೂ ನೀವು ದುರಾಚಾರಿಗಳಾದಂಥ ಮತ್ತು ಭವದಲ್ಲಿ ಮಗ್ನರಾದಂಥ ಜನರ ಸಹವಾಸವನ್ನು ಮಾಡುವಿರಿ. ಈ ಸಹವಾಸವಿರುವ ವರೆಗೆ ನೀವು



ಲಿಂಗವಂತರೆಂಬುದು ಹೇಗೆ? ಧರ್ಮ ಶಾಸ್ತ್ರದಲ್ಲಿ ಶಿವಾಚಾರವುಳ್ಳವರು ಅನ್ಯ ದೈವ ಪೂಜೆ ಮಾಡಬಾರದು. ಮಾಡಿದ್ದಾದರೆ ನೂರಾರು ಬಾರೆ ನಾಯಿಯ ಜನ್ಮದಲ್ಲಿ ಹುಟ್ಟಿ ಹುಟ್ಟಿ ಕಡೆಗೆ ಚಾಂಡಾಲರಾಗಿ ಜನಿಸುವರು ಎಂದು ಹೇಳಿದೆ. ಆದ್ದರಿಂದ ಎಲೋ ಮರುಳುಗಳಿರಾ ನೀವು ಅನ್ಯ ದೈವ ಮತ್ತು ಭವಿಸಂಗ ಇವುಗಳನ್ನು ಬಿಡದ ವರೆಗೆ ನೀವು ಲಿಂಗವಂತರೆನಿಸಿಕೊಳ್ಳುವದು ಹೇಗೆ? ಇದನ್ನು ತಿಳಿದುಕೊಂಡು ನೀವು ಭಕ್ತಿ ಪಥವನ್ನು ಹಿಡಿಯಬೇಕು. ಇಲ್ಲದಿದ್ದರೆ ನೀವು ಯಾವಾಗಲೂ ಭವ ಭವದ ಸೇವಕರು. ಮತ್ತು ಪರಬ್ರಹ್ಮನ ಪದವನ್ನು ಎಂದೂ ಕಾಣಲಾರಿರಿ ಎಂದು ವಚನಕಾರನು ಇದರಲ್ಲಿ ಹೇಳಿರುವನು.

**ವಚನ:**— ೧೪. ಅರ್ಹತ, ಚಾರ್ವಾಕ, ಬೌದ್ಧ, ಮೀಮಾಂಸಕ, ನೀಲಪಟರೆಂಬವರು ಕಾಯದ ದರ್ಶನಂಗಳಲ್ಲಿ ದೀಕ್ಷಿತರಾಗಿ, ಸೌರ, ಶಾಕ್ತೇಯ ವೈಷ್ಣವ, ಗಾಣಪತ್ಯ, ಕಾಪಾಲಿಕ ದರ್ಶನಂಗಳಂ ಪೊಕ್ಕು ಒಡಲು ಮುಡುಹಂ ಸುಟ್ಟು ಮಟ್ಟೆಯನಿಟ್ಟು ಉಭಯಗೆಟ್ಟು, ಶಿವಪೂಜೆ ಶಿವಧ್ಯಾನವಿಲ್ಲದೆ ನರಕಕ್ಕಿಳಿದು ಅಧಮರಾಗಿ ಹೋಗಿ ಎಂದು ಹೇಳಿತ್ತೇ ವೇದ? "ಶಿವಾರ್ಚನ ವಿಹೀನೋಪಿ ಜನ್ಮ ಮೃತ್ಯುರ್ನ ಉಚ್ಯತೆ" ಎಂದುದಾಗಿ, ಮರಳಿ ಮರಳಿ ಜನ್ಮಕ್ಕೆ ಬಂದು ಮಗ್ನರಾಗ ಹೇಳಿತ್ತೇ ವೇದ? "ಓಂ ಅಪ್ರಶಿಖಾಯಾಂ ತ್ವಮಯಾ ಜೀವಾಗಮಾತ್" ಇಂತೆಂಬ ಶ್ರುತಿಯರ್ಥವು, ಹೋತನ ಕೊಂದು ಹೋಮವ ಬೇಳಿ ಚಾಂಡಾಲರಾಗ ಹೇಳಿತ್ತೇ ವೇದ? ಸಾಕ್ಷಿ ಶ್ಲೋ॥ ಶಿವಾರ್ಚಕ ಪದದ್ವಂದ್ವ ಮರ್ಚನೋದ್ಧಾರಣಾದಪಿ॥ ಶಿವನಾಮ ಸದಾಕಾಲಂ ಜಪೇದ್ವಿಪ್ರಸ್ಯ ಲಕ್ಷಣಂ॥ ಎಂಬರ್ಥವರಿಯದೆ ನರಕಕ್ಕಿಳಿಯ ಹೇಳಿತ್ತೇ ವೇದ? ಶ್ರುತಿ॥ ಏವಂ ರುದ್ರಾಣಾಂ ವಿಶ್ವ ದೇವತಾನಾಂ ರುದ್ರಪಾದೇ ದತ್ತಮಸ್ತು ಎಂದುದಲ್ಲದೆ ವಿಷ್ಣು ಪಾದೆ ದತ್ತಮಸ್ತು ಎಂದುಳ್ಳೊಡೆ ಹೇಳಿರೆ? ಕಾಶೀ ಖಂಡದಲ್ಲಿ ಹೇಳಿದ ಪುರಾಣದರ್ಥದ ಹಾಗೆ ವ್ಯಾಧನ ಕೈಯಿಂದ ವಿಷ್ಣು ಹತನಾದನೆಂದಡೆ ಪರಿಣಾಮಿಸುವರು. ವೀರಭದ್ರ ದೇವರ ಕೈಯ್ಯಿಂದ ವಿಷ್ಣು ಅಳಿದನೆಂದರೆ ಅದು ಮಿಥ್ಯವೆಂಬರು. ಮಹಾಭಾರತದಲ್ಲಿ ವಿಷ್ಣು ಈಶ್ವರಂಗೆ ಬಿನ್ನಹವಂ ಮಾಡಿದುದು ಕೇಳಿರೇ. ಶೋ॥ ಮನ್ಮಾಥಂ ಲೋಕನಾಥಂ ಚ ಆದ್ಯಕ್ಷರ ಸಮಾಯುತಂ। ಏಕಮೇವ ಮಹಾದೇವಂ ಮಹೇಶಾನಾಂ ಪರಂ ಸ್ಥಿತಿಂ। ಈಶ್ವರಸ್ಯ ಸಮೋ ನಾಸ್ತಿ ಬ್ರಹ್ಮ ವಿಷ್ಣುಸ್ಯ ಕಿಂಕರಃ। ಶಿವವಾಕ್ಯ ಸಮೋ

ನಾಸ್ತಿ ವೇದ ಶಾಸ್ತ್ರಗವೇಷುಚ ॥ ಇಂತೆಂಬ ಮಹಾವಿಷ್ಣುವಿನ ಮಹಾಭಾರತವ ಕೇಳಿಯರಿಯಿರೇ? ಓದಿದ ಮಾತು ತಥ್ಯವೇ? ಅಲ್ಲ. ತಮ್ಮ ಅಧಿದೇವತೆಯಾದ ವಿಷ್ಣುವಿನ ಮಾತು ಮಿಥ್ಯವೆಂಬ ಚಾಂಡಾಲರ ಮುಖವ ನೋಡಲಾಗದು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಅನೇಕರು ಜಿನದೇವತೆಗಳನ್ನು ಭಜಿಸುವರು. ಬೇರೆ ಕೆಲವರು ಚಾರ್ವಾಕರಂತೆ ವರ್ತಿಸುವರು. ಬೌದ್ಧ, ಮೀಮಾಂಸಕ ಶಾಸ್ತ್ರಗಳನ್ನು ನಂಬುವವರೂ ಇರುವರು. ನೀಲಪಟರೆಂತಲೂ ಇರುವರು. ಆದರೆಇವರಾರೂ ಪರಮಾತ್ಮನನ್ನು ಕಾಣರು. ಇವರು ಕೇವಲ ಭವಸಂಬಂಧಿಗಳು. ಇವರು ಮೋಕ್ಷವನ್ನು ಹೊಂದರು. ಅದರಂತೆಯೇ ಸೂರ್ಯನನ್ನು ಪೂಜಿಸುವ ಸೌರರೂ, ವಿಷ್ಣುವಿನನ್ನು ಪೂಜಿಸುವ ವೈಷ್ಣವರೂ, ಗಣಪತಿಯನ್ನು ಪೂಜಿಸುವ ಗಾಣಪತ್ಯರೂ, ಕಾಪಾಲಿಕರೂ ಉಂಟು. ಇವರು ತಮ್ಮ ತಮ್ಮ ದರ್ಶನಗಳನ್ನು ಓದಿ, ಅವುಗಳಲ್ಲಿ ಮನಸ್ಸಿಟ್ಟು, ಹೊಟ್ಟೆ, ಹಣೆ ಇವುಗಳಲ್ಲಿ ತಪ್ತ ಮುದ್ರೆಗಳನ್ನು ಧಾರಣಮಾಡಿಕೊಂಡು ಕಡೆಗೆ ಇಹಪರಕ್ಕೆ ದೂರಾಗಿ ಹೋಗುವರು. ಇವರಿಗೆ ಶಿವಪೂಜೆ ಶಿವಧ್ಯಾನವಿಲ್ಲ. ಇವರು ಕಡೆಗೆ ನರಕಕ್ಕೆಯೇ ಇಳಿದುಹೋಗುವರು. ಈ ಬಗೆಯಾಗಿ ಭಕ್ತರು ವರ್ತಿಸಬೇಕೆಂದು ವೇದವು ಹೇಳಿತ್ತೇ? ಅದು ಹಾಗೆ ಹೇಳಿಲ್ಲ. ಭಕ್ತರು ಶಿವಾರ್ಚನೆಯನ್ನು ಬಿಟ್ಟುಕೊಟ್ಟದ್ದಾದರೆ ಜನ್ಮ ಮೃತ್ಯುಗಳು ಹೋಗಲಾರವು ಎಂದು ವೇದಗಳು ಹೇಳಿವೆ. ಹೀಗೆ ವರ್ತಿಸಿದರೆ ತಿರುತಿರುಗಿ ಜನ್ಮಕ್ಕೆ ಬಂದು ಕರ್ಮಗಳನ್ನು ಮಾಡುತ್ತಹೋಗುವರು. ಹೀಗೆ ವೇದಗಳು ಎಂದೂ ನುಡಿದಿಲ್ಲವೆಂದು ವಚನಕಾರನು ಹೇಳಿರುತ್ತಾನೆ. ಬೇರೆ ಕೆಲವರು ದೇವರಿಗೆ ಶಾಂತಿಮಾಡಬೇಕೆಂದು ಯಜ್ಞಯಾಗಾದಿಗಳನ್ನು ಮಾಡಿ ಹೋತಿನ ಬಲಿ ಕೊಡುವರು. ಹೀಗೆ ಮಾಡಬೇಕೆಂದು ವೇದಗಳು ಎಂದಾದರೂ ಹೇಳಿರುವವೋ? ಅವು ಹಾಗೆ ಎಂದೂ ಹೇಳಿಲ್ಲ. ಆದರೆ ವಿಪ್ರನಾದವನು ಶಿವಾರ್ಚನೆಯಲ್ಲಿ ನಿರತನಾಗಿರಬೇಕು, ಯಾವಾಗಲೂ ಶಿವನಾಮವನ್ನು ಜಪಿಸಬೇಕು ಎಂದು ಇವು ಹೇಳಿವೆ. ಹಾಗೆಯೇ ರುದ್ರನೊಬ್ಬನನ್ನೇ ಭಜಿಸಬೇಕೆಂದು ಶೃತಿಗಳು ಹೇಳುತ್ತವೆ. ಈ ಪ್ರಕಾರ ಉಕ್ತಿಗಳು ಕಾಶೀ ಖಂಡದಲ್ಲಿ ಉಂಟು. ಇದರಲ್ಲಿಯೂ ಮಹಾಭಾರತದಲ್ಲಿಯೂ ಶಿವನೇ ಶ್ರೇಷ್ಠನೆಂದು ಹೇಳಿದೆ. ಮತ್ತು ಹಾಗೆ ಕಥಾಂತರಗಳೂ ಉಂಟು. ಹೀಗೆ ನಂಬದ ಮತ್ತು ಆಚರಿಸದ ಜನರು ಚಾಂಡಾ



ಲರು ಇಂಥವರ ಮುಖವನ್ನು ನೋಡಲಾಗದೆಂದು ವಚನಕಾರನು ಇಲ್ಲಿ ಹೇಳಿರುವನು.

**ವಚನಃ**— ೧೫. ಶಿವಶಿವಾ ಮಹದೇವಾ ಉರಿಲಿಂಗದೇವನೆ ಚಲುವನು. ಶಿವಶಿವ ಮಹದೇವ ಉರಿಲಿಂಗದೇವನೆ ಗುರು. ಶಿವಶಿವ ಮಹದೇವ ಉರಿಲಿಂಗ ದೇವನೆ ಹಿರಿಯನು. ಶಿವಶಿವ ಮಹದೇವ ಉರಿಲಿಂಗದೇವನೆ ಪುರುಷನು. ಶಿವಶಿವ ಮಹದೇವ ಉರಿಲಿಂಗದೇವನೆ ದೇವನು.

**ಭಾವಃ**— ಹಿಂದಿನ ವಚನಗಳಲ್ಲಿ ವಚನಕಾರನು ಪರಮಾತ್ಮನೊಬ್ಬನನ್ನೇ ಪೂಜಿಸಬೇಕು, ಅವನೊಬ್ಬನನ್ನೇ ನಂಬಬೇಕು ಎಂದು ಹೇಳಿದೆ. ಪರಮಾತ್ಮನಲ್ಲಿ ಅತ್ಯಂತ ಭಕ್ತಿಭಾವವನ್ನು ಹೊಂದಿದವನಾಗಿ ಈ ವಚನದಲ್ಲಿ ಉರಿಲಿಂಗದೇವನೇ ಚಲುವನು, ಅವನೇ ಗುರುವು ಅವನೇ ಮಹಾದೇವನು, ಅವನೇ ಹಿರಿಯನು, ಅವನೇ ಪುರುಷನು, ಅವನೇ ನಿಜವಾದ ದೇವನೆಂದು ಇದರಲ್ಲಿ ಹೇಳಿರುವನು.

# ಲಿಂಗಧಾರಣೆ.

---

**ವಿವರಣೆಃ**— ಹಿಂದಿನ ವಚನಗಳಲ್ಲಿ ವಚನಕಾರನು ದೇವರೊಬ್ಬನೇ ಇದ್ದಾನೆ ಎಂದು ಪ್ರತಿಪಾದಿಸಿ ಅವನು ಜಗತ್ತಿನಲ್ಲಿ ಹ್ಯಾಗೆ ವ್ಯಾಪಿಸಿರುವನು ಎಂಬದನ್ನೂ ನಿರೂಪಿಸಿದ್ದಾನೆ. ಈ ವಿಧವಾಗಿರುವ ಪರಮಾತ್ಮನನ್ನು ಹ್ಯಾಗೆ ಕಾಣಬೇಕೆಂಬುದನ್ನು ಮುಂದಿನ ವಚನಗಳಲ್ಲಿ ಅವನು ಹೇಳುತ್ತಹೋಗಿದ್ದಾನೆ.

ಪರಮಾತ್ಮನನ್ನು ಕಾಣಬೇಕಾದರೆ ಗುಡಿಗುಂಡಾರ, ಅರಣ್ಯಗಳನ್ನು ಪ್ರವೇಶಿಸುವ ಅವಶ್ಯವಿಲ್ಲ. ಆತನು ಜಗದ್ವ್ಯಾಪಿಯಾಗಿದ್ದಾನೆ. ಅವನು ತನ್ನ ಒಳಗೂ ಹೊರಗೂ ವ್ಯಾಪಿಸಿಕೊಂಡಿರುವನು. ಅವನು ತನ್ನಲ್ಲಿಯೇ ಇದ್ದಾನೆ. ಆದ್ದರಿಂದ ಅವನನ್ನು ಕಾಣಬೇಕಾದರೆ ತನ್ನನ್ನು ಬಿಟ್ಟು ಬೇರೊಂದೆಡೆಗೆ ಹೋಗುವ ಕಾರಣವಿಲ್ಲ. ಪರಮಾತ್ಮನು ಎಳ್ಳೊಳಗಣ ಎಣ್ಣೆಯಂತೆ ಕಾಷ್ಠದೊಳಗಿನ ಅಗ್ನಿಯಂತೆ ತನ್ನಲ್ಲಿಯೇ ಅಡಗಿಕೊಂಡಿರುತ್ತಾನೆಂದು ವಚನಕಾರರು ಆಗಿಂದಾಗ್ಗೆ ಹೇಳುವದುಂಟು. ಹೀಗಿದ್ದರೂ ಅವನು ಸುಲಭನಲ್ಲ. ನೆನೆದಾಕ್ಷಣವೇ ಕಣ್ಣಿಗೆ ಕಾಣಲಾರನು. ಆದರೆ ಮನುಷ್ಯನು ತನ್ನ ಸತ್ಕ್ರಿಯೆ ಸದಾಚರಣೆಗಳ ಮೂಲಕ ಭವಸಂಬಂಧದ ವಿಷಯಗಳನ್ನು ತನ್ನಿಂದ ಮೊದಲು ದೂರಮಾಡಿಕೊಳ್ಳಬೇಕು. ಹೀಗೆ ದೂರಮಾಡುತ್ತ ಹೋದಹಾಗೆ ಪರಮಾತ್ಮನು ತನ್ನಲ್ಲಿಯೇ ಕಾಣಿಸಿಕೊಳ್ಳಹತ್ತುವನು. ಇದು ಗುರುಮುಖದಿಂದಲ್ಲದೆ ಆಗದೆಂದು ಎಲ್ಲ ವಚನಕಾರರ ಅಭಿಪ್ರಾಯವಿದೆ. ಗುರುವು ಉಪದೇಶಮಾಡುವಾಗ್ಗೆ ಲಿಂಗಾಂಗ ಸಾಮ್ಯರಸ್ಯದ ಈ ಹೊಸ ಹಾದಿಯನ್ನು ತೋರಿಸುವನು. ಈ ಹೊಸ ಹಾದಿಗೆ ಲಿಂಗಧಾರಣವೇ ಮೊದಲು. ಈ ಲಿಂಗಧಾರಣದ ಮೂಲಕ ಪರಮಾತ್ಮನ ಕಳೆಯು ಭಕ್ತನ ಪ್ರಾಣ, ಮನ, ಬುದ್ಧಿ, ಇವುಗಳಲ್ಲಿ ಹರಿದಾಡತೊಡಗುವದು. ಈ ಸ್ಥಿತಿಯು ಉಂಟಾದ ಕೂಡಲೆ ಭಕ್ತನಿಗೆ ಪುನರ್ಜನ್ಮವೆಂದು ತಿಳಿಯಬೇಕು. ಅಂದಿನಿಂದ ಅವನು ತನ್ನ ಆಚರಣೆಗಳ ಮೂಲಕ ಲಿಂಗದ ಶಕ್ತಿಯನ್ನು ತನ್ನಲ್ಲಿ ದೃಢಪಡಿಸಿಕೊಳ್ಳುತ್ತ ಹೋಗಬೇಕು. ಹೀಗೆ ದೃಢಪಡಿಸಿಕೊಳ್ಳುವ ರೀತಿಗಳು ಷಟ್‌ಸ್ಥಲಶಾಸ್ತ್ರದಲ್ಲಿ ಹೇಳಲ್ಪಟ್ಟಿವೆ. ಈ ಷಟ್‌ಸ್ಥಲ ಮಾರ್ಗಕ್ಕೆ ಮೇಲೆ ಹೇಳಿದಂತೆ ಲಿಂಗ



ಧಾರಣೆಯೇ ಮೊದಲನೆಯ ಪಾವಟಿಗೆಯು. ಇದನ್ನು ಮೊದಲು ಹತ್ತಿ ಶಿವಾನುಭವದ ಮಹಾದ್ವಾರದೆದುರಿಗೆ ಬಂದು ನಿಲ್ಲಬೇಕು. ಮುಂದೆ ಈ ದ್ವಾರದ ಒಳಹೊಕ್ಕು ಭಕ್ತನು ತನ್ನ ಅನುಭವ, ಜ್ಞಾನ, ರೀತಿ ನಡತೆಗಳಿಂದ ಲಿಂಗದ ಗುಣಗಳನ್ನು ತನ್ನಲ್ಲಿ ಕ್ರಮೇಣ ಬರಮಾಡಿಕೊಳ್ಳುತ್ತ ಹೋಗಿ ಕಡೆಗೆ ಲಿಂಗಾಂಗ ಸಾಮ್ಯರಸ್ಯತ್ವವನ್ನು ಹೊಂದಬೇಕು.

**ವಚನಃ**— ೧೬. ಅಂತರಂಗ ಬಹಿರಂಗವೆಂದೆಂಬರು. ಆವುದು ಹಿಂದು ಆವುದು ಮುಂದು ಎಂದರಿಯರು. ಎಳ್ಳೊಳಗಣ ಎಣ್ಣೆಯಂತೆ, ಕಲ್ಲೊಳಗಣ ಹೇಮದಂತೆ, ಹಾಲೊಳಗಣ ತುಪ್ಪದಂತೆ, ಕಾಷ್ಠದೊಳಗಣ ಅಗ್ನಿಯಂತೆ, ಪುಷ್ಪದೊಳಗಣ ಪರಿಮಳದಂತೆ, ಭಾವದೊಳಗೆ ಶಿವನಿಪ್ಪನೆಂದಡೆ ಆ ಶಿವನು ತನಗೆ ಕಾಣಿಸಿಕೊಳ್ಳನು, ಮಥನದಿಂದಲ್ಲದೆ. ಅದೆಂತೆಂದೊಡೆ ಶ್ಲೋ॥ ತಿಲಮಧ್ಯೇ ಯಥಾ ತೈಲಂ ಕ್ಷೀರಮಧ್ಯೇ ಯಥಾ ಘೃತಂ । ಪುಷ್ಪಮಧ್ಯೆ ಯಥಾ ಗಂಧೋ ಭಾವಮಧ್ಯೆ ತಥಾ ಶಿವಃ॥ ಎಂದುದಾಗಿ ಇಂತಪ್ಪ ಚಿನ್ಮೂರ್ತಿಯನು, ಮನ್ಮಸ್ತಕದಲ್ಲಿ ಶ್ರೀಗುರು ತನ್ನಹಸ್ತಾಬ್ಜ ಮಥನದಿಂದ, ಆಕರ್ಷಣವ ಮಾಡಿ ತೆಗೆದು, ತಲ್ಲಿಂಗವನಂಗದಲ್ಲಿ ಸ್ಥಾಪ್ಯವ ಮಾಡಿ, ಸುಜ್ಞಾನ ಕ್ರಿಯೋಪದೇಶವಂ ಮಾಡಲು, ಘಟದ ಹೊರಗಿಹ ಅನಲ ಘಟವ ವೇಧಿಸಿ ತಜ್ಜಲವ ಹಿಡಿದು ತೆಗೆದುಕೊಂಬಂತೆ, ಬಾಹ್ಯದಲ್ಲಿ ಮಾಡುವ ಸತ್ಕ್ರಿಯಾ ಮಥನದಿಂದ ಶಿವಜೀವ ಸಂಯೋಗವಹ ಬಟ್ಟೆಯನರಿಯದೆ ಕೆಟ್ಟರಲ್ಲಾ ಅದ್ವೈತಿಗಳು. ಅದೆಂತೆಂದೊಡೆ ॥ಶ್ಲೋ॥ "ಘಟಮಧ್ಯಸ್ಥಿತಂ ತೋಯಂ ಅಗ್ನಿರ್ಜ್ವಲತಿಬಾಹ್ಯತಃ । ಅಗ್ನಿಜ್ವಲನ ಸಂಯೋಗೆ ಉಷ್ಣಂ ಭವತಿ ವಾರಿಣಾಂ॥ ಎಂದುದಾಗಿ ಈ ವರ್ಮಕುಳಸ್ಥಳವನರಿಯದೆ ಶಿವಲಿಂಗ ಪೂಜೆಯ ಬಿಟ್ಟು, ಅನ್ಯಬಟ್ಟೆಯಲ್ಲಿ ಹರಿವರು, ಕರ್ಮನಿರ್ಮೂಲವಾಗದ ಜಡರುಗಳು, ಗುರುವಚನ ಪರಾಂಙ್ಮುಖರು, ಲಿಂಗನಿಷ್ಠಾವಿರಹಿತರು. ಗುರುಕೊಟ್ಟ ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂ ಕ್ರಿಯೆವಿಡಿದು ಮಾಡಿ, ಪ್ರಾಣವೇಧಿಸಿ ಪ್ರಾಣಲಿಂಗ ಸಂಬಂಧಿಗಳಾಗಲರಿಯದೆ ಕೆಟ್ಟರಲ್ಲಾ ಅದ್ವೈತಿಗಳು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ**— ವಚನಕಾರನು ಈ ವಚನದಲ್ಲಿ ಲಿಂಗಧಾರಣವೆಂದರೇನು ಎಂಬದನ್ನು ತಿಳಿಸಲು ಯತ್ನಿಸಿರುವನು. ಹಾಗೂ ಮಾಯಾವಾದಿಗ

ಳಾದ ಅದ್ವೈತಿಗಳು ಲಿಂಗಧಾರಣವು ಶಕ್ಯವಲ್ಲವೆಂದು ಪ್ರತಿಪಾದಿಸುವದುಂಟು. ಅವರಿಗೂ ಸಹ ಯೋಗ್ಯ ಉತ್ತರವನ್ನು ಇದರಲ್ಲಿ ಕೊಟ್ಟಿರುವನು.

ಜಗತ್ತಿನಲ್ಲಿ ಒಳಗು ಹೊರಗು, ಎಂತಲೂ ಶರೀರ ಶಕ್ತಿ, ಅಂಗ, ಲಿಂಗ, ಜ್ಞಾನ ಕ್ರಿಯೆ ಎಂತಲೂ ಬೇರೆ ಬೇರೆ ಮಾಡಿ ಹೇಳುವದುಂಟು. ಆದರೆ ಈ ವಿಧವಾಗಿ ಅವುಗಳಲ್ಲಿ ಭಿನ್ನತೆ ಇರುವದಿಲ್ಲ. ಇವೆಲ್ಲವೂ ಪರಸ್ಪರಾವಲಂಬಿಗಳು. ಒಂದನ್ನು ಬಿಟ್ಟು ಮತ್ತೊಂದು ವ್ಯವಹರಿಸಲಾರದು. ಒಂದರ ಚೈತನ್ಯವು ಮತ್ತೊಂದರಲ್ಲಿ ಪರಿಣಾಮಮಾಡುತ್ತದೆ. ಹೀಗೆ ಅವುಗಳಲ್ಲಿ ಪರಸ್ಪರ ಸಂಬಂಧವಿದೆ.

ಹ್ಯಾಗೆ ಎಳ್ಳಿನಲ್ಲಿ ಎಣ್ಣೆಯು, ಕಲ್ಲಿನಲ್ಲಿ ಬಂಗಾರವು, ಹಾಲಿನಲ್ಲಿ ತುಪ್ಪವು, ಕಟ್ಟಿಗೆಯಲ್ಲಿ ಅಗ್ನಿಯು, ಹೂವಿನಲ್ಲಿ ಮಕರಂದವು ಇರುತ್ತದೋ ಹಾಗೆ ಭಾವದಲ್ಲಿ ಶಿವನಿರುವನು. ಷಟ್‌ಸ್ಥಲ ಶಾಸ್ತ್ರದಲ್ಲಿ ಈ ಶಿವನಿಗೆ ಲಿಂಗವೆಂತಲೂ ಅಭಿಧಾನವಿದೆ. ಈ ಲಿಂಗವನ್ನು ಕಂಡುಹಿಡಿಯುವದೇ ಭಕ್ತನ ಜೀವಿತದ ಮುಖ್ಯ ಕರ್ತವ್ಯವಾಗಿದೆ. ಆದರೆ ಈ ಲಿಂಗವು ಬರೇ ಧ್ಯಾನದಿಂದ ಅಂದರೆ ಬರೇ ನೆನೆದಾಕ್ಷಣವೆ ಮನುಷ್ಯನಿಗೆ ಸಿಕ್ಕಲಾರದು. ಆದರೆ ಹಾಲಿನಿಂದ ತುಪ್ಪವನ್ನು ಕೆಲವು ಕ್ರಿಯೆಗಳ ಮೂಲಕ ಹ್ಯಾಗೆ ಹೊರಗೆ ತರುವದು ಶಕ್ಯವೋ ಹಾಗೆ ಭಕ್ತನು ತನ್ನ ಆಚರಣೆಗಳ ಮೂಲಕ ಈ ಲಿಂಗವನ್ನು ತನ್ನಲ್ಲಿ ಕಾಣಿಸಿಕೊಳ್ಳುವದು ಶಕ್ಯವಿದೆ. ಈ ರೀತಿಯನ್ನು ಗುರುವು ಹೇಳುವನು. ಅವನು ತನ್ನ ಉಪದೇಶದ ಮೂಲಕ ಇದನ್ನು ಭಕ್ತನಿಗೆ ತಿಳಿಯಪಡಿಸುವನು. ಇದರ ಮರ್ಮವನ್ನು ವಚನಕಾರನು ಇಲ್ಲಿ ಹೇಳಿರುವನು.

ಲಿಂಗಧಾರಣೆಯ ಕಾಲದಲ್ಲಿ ಗುರುವು ತನ್ನ ಹಸ್ತವನ್ನು ಶಿಷ್ಯನ ಮಸ್ತಕದಲ್ಲಿ ಇರಿಸುವನು. ಏಕೆಂದರೆ ಮಸ್ತಕದಲ್ಲಿ ಲಿಂಗವು ಚಿನ್ಮೂರ್ತಿಯಾಗಿ ಸ್ಥಾಪಿತವಾಗಿರುತ್ತದೆ. ಇಲ್ಲಿಂದಲೇ ಮನುಷ್ಯನ ಕ್ರಿಯೆಗಳಿಗೆ ಚಾಲನೆಯುಂಟಾಗುತ್ತದೆ. ಗುರುವು ಈ ಪ್ರಕಾರ ತನ್ನ ಹಸ್ತವನ್ನು ಮಸ್ತಕದ ಮೇಲೆ ಇರಿಸಿದ ಕೂಡಲೆ ಭಕ್ತನ ಲಿಂಗ ಕಳೆಯು ಪ್ರಜ್ವಲಿಸಹತ್ತುತ್ತದೆ. ಇದು ಗುರುವಿನ ಲಿಂಗ ಶಕ್ತಿಯ ಪ್ರಭಾವವು. ಆಗ ಭಕ್ತನಲ್ಲಿ ಆ ವರೆಗೆ ಸ್ತಬ್ಧವಾಗಿದ್ದ ಲಿಂಗ ಶಕ್ತಿಯು ಹೊರಹೊಮ್ಮಹತ್ತುವದು. ಹೀಗೆ ಈ ಲಿಂಗಶಕ್ತಿಯನ್ನು ಗುರುವು ಆಕರ್ಷಿಸಿ ತೆಗೆದು ಅದನ್ನು ಅಂಗದಲ್ಲಿ



ಸ್ಥಾಪಿಸುವನು. ಮತ್ತು ಆ ಲಿಂಗಶಕ್ತಿಯು ಅಂಗದಲ್ಲಿ ದೃಢಪಡಬೇಕೆಂದು ಸುಜ್ಞಾನ ಕ್ರಿಯೋಪದೇಶವನ್ನೂ ಮಾಡುವನು. ಈ ರೀತಿಗಳು ಲಿಂಗಧಾರಣದಲ್ಲಿ ಅಡಕವಾಗಿರುವವು.

ಈ ಮರ್ಮದ ವಿವರಣೆಯನ್ನು ವಚನಕಾರನು ಒಂದು ಉದಾಹರಣೆಯನ್ನು ಕೊಟ್ಟು ಹೆಚ್ಚಿಗೆ ಸ್ಪಷ್ಟಮಾಡಿ ಇಲ್ಲಿ ತೋರಿಸಿರುವನು. ನೀರು ತುಂಬಿದ ಒಂದು ಪಾತ್ರೆಯನ್ನು ಒಲೆಯ ಮೇಲಿಟ್ಟು ಕಾಸಿದ್ದಾದರೆ ಆ ಕಾವು ಆ ಪಾತ್ರೆಯನ್ನು ಬೆಚ್ಚಗೆ ಮಾಡಿ ಒಳಗಿನ ತಂಪು ನೀರನ್ನು ಕಾಯಿಸುತ್ತಾ ಹೋಗುವದು. ಅದೇ ರೀತಿಯಾಗಿ ಲಿಂಗಧಾರಣೆಯು ಅಂತರಂಗವನ್ನು ಪ್ರವೇಶಿಸಿ ಅಲ್ಲಿಯ ಪ್ರಾಣಲಿಂಗವನ್ನೂ ಪ್ರಜ್ವಲಿಸಹತ್ತುವದು.

ಬಾಹ್ಯದಲ್ಲಿ ಮಾಡುವ ಸತ್ಕ್ರಿಯೆಗಳು ಅಂತರಂಗವನ್ನು ಪ್ರವೇಶಿಸುತ್ತವೆ. ಮತ್ತು ಅವು ಮನುಷ್ಯನ ಗುಣಗಳನ್ನು ಉಚ್ಚಸ್ಥಿತಿಗೆ ತರುತ್ತ ಹೋಗುವವು. ಇದರಿಂದ ಅವನು ಉತ್ತರೋತ್ತರ ಅಭಿವೃದ್ಧಿ ಸ್ಥಿತಿಯನ್ನು ಹೊಂದುತ್ತ ಕಡೆಗೆ ಶಿವಜೀವೈಕ್ಯಸ್ಥಿತಿಯನ್ನು ಹೊಂದುವನು.

ಈ ರೀತಿಯನ್ನು ಅದ್ವೈತಿಗಳು ಅರಿಯರೆಂದು ವಚನಕಾರನು ಅನ್ನುತ್ತಾನೆ. ಅವರು ಇದರ ಮರ್ಮಕುಳ ಸ್ಥಳವನ್ನು ಅರಿಯರು. ಈ ಕಾರಣ ಅವರು ಶಿವಲಿಂಗದಲ್ಲಿ ವಿಶ್ವಾಸವಿಡದೆ ಬೇರೊಂದು ಹಾದಿಯನ್ನು ಹಿಡಿಯುವರು. ಇದರಿಂದ ಅವರ ಕರ್ಮನಾಶವಾಗದು. ಅದ್ವೈತಿಗಳು ಕೇವಲ ಜಡರುಗಳೆಂದು ವಚನಕಾರನು ಇಲ್ಲಿ ಅನ್ನುತ್ತಾನೆ. ಇವರು ಗುರುವಚನ ಪರಾಙ್ಮುಖರು, ಲಿಂಗನಿಷ್ಠಾವಿರಹಿತರು ಎಂದು ಹೇಳಿ ಅದ್ವೈತಿಗಳಾದವರು ಗುರುವಿನಿಂದ ಉಪದೇಶವನ್ನು ಹೊಂದಿ ಇಷ್ಟ ಲಿಂಗದಲ್ಲಿ ವಿಶ್ವಾಸವಿಟ್ಟು, ಅದರ ಕ್ರಿಯೆಗಳನ್ನು ತಿಳಿದುಕೊಂಡು ಆಚರಿಸಬೇಕು. ಅವರು ಹೀಗೆ ಆಚರಿಸಿದ್ದಾದರೆ ಅವರ ಅಂತರಂಗವು ಪರಿಶುದ್ಧತೆಯನ್ನು ಹೊಂದಿ ಪ್ರಾಣಲಿಂಗ ಸಂಬಂಧಿಗಳಾಗುವರು. ಈ ಮಾರ್ಗವನ್ನು ಅದ್ವೈತಿಗಳು ಅರಿಯದೆ ಕೆಟ್ಟರಲ್ಲಾ ಎಂದು ವಚನಕಾರನು ವಿಷಾದಿಸುತ್ತಾನೆ.

**ವಚನ:**— ೧೭. ಶಿವಲಿಂಗದ ಮಹಾತ್ಮೆಯನು ಶಿವಲಿಂಗದ ಮರ್ಮವನು, ಶಿವಲಿಂಗದ ನಿಶ್ಚಯವನು ಅದಾರಯ್ಯ ಬಲ್ಲವರು, ಅದಾರಯ್ಯ ಅರಿದವರು, ಶ್ರೀಗುರು ತೋರಿಕೊಡದನ್ನಕ್ಕರ? ಸರ್ವೈಶ್ವರ್ಯ

ಸಂಪನ್ನ ಮಾದ್ಯಂತ ತತ್ವಾಧಿಕಂ ಎಂದುದಾಗಿ, ಅಣೋರಣೀಯಾನ್ ಮಹತೋ ಮಹಿಯಾನ್ ಎಂದುದಾಗಿ, ಯತೋವಾಚೋ ನಿವರ್ತಂತೆ ಎಂದುದಾಗಿ, ಅತ್ಯತಿಷ್ಠದ್ದಶಾಂಗುಲಂ ಎಂದುದಾಗಿ, ಈ ಪ್ರಕಾರದಲ್ಲಿ ವೇದಾಗಮಂಗಳು ಸಾರುತ್ತಿರಲು ಲಿಂಗವು ಹರಿಬ್ರಹ್ಮಾದಿ ದೇವದಾನವ ಮಾನವರಿಗೆಯು ಅರಿಯಬಾರದು. ಚಕಿತಮಭಿಧತ್ತೆ ಶೃತಿರಪಿ ಎಂದುದಾಗಿ ವೇದಪುರುಷರಿಗೆಯೂ ಅರಿಯಬಾರದು. ಅರಿಯಬಾರದ ವಸ್ತುವ ರೂಪಿಸಲೆಂತುಬಾರದು. ರೂಪಿಸಬಾರದ ವಸ್ತುವ ಪೂಜಿಸಲೆಂತುಬಾರದು. ಪೂಜೆಗಿಲ್ಲವಾಗಿ ಭಕ್ತಿಗಿಲ್ಲ. ಭಕ್ತಿಗಿಲ್ಲವಾಗಿ ಪ್ರಸಾದಕ್ಕಿಲ್ಲ. ಪ್ರಸಾದಕ್ಕಿಲ್ಲವಾಗಿ ಮುಕ್ತಿಗಿಲ್ಲ. ಮುಕ್ತಿಗಿಲ್ಲದೆ ದೇವದಾನವಮಾನವರೆಲ್ಲರು ಕೆಡುವರು ಕೆಡುವರು. ಕೆಡದಂತೆ ಮಾಡಿ ರಕ್ಷಿಸಿದನು ಸದ್ಗುರು ಮಹಾಗುರು ಶ್ರೀಗುರು. "ನಗುರೋರಧಿಕಂ" ಎಂದುದಾಗಿ ಮಹಾಘನ ಗುರುಶಾಂತಮೂರ್ತಿ ಕೃಪಾಮೂರ್ತಿ ಲಿಂಗಪ್ರತಿಷ್ಠೆಯಂ ಮಾಡಿದನು. ಅದೆಂತೆನಲು ಕೇಳಿರೇ. ಯತೋವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ, ನಾದಬಿಂದು ಕಳಾತೀತಂ ಗುರೂಣಾಂ ಲಿಂಗಮುದ್ಭವಂ ಎಂದುದಾಗಿ, ಸದ್ಗುರುರ್ಲಿಂಗಭಾವಂಚ। ಸರ್ವಬ್ರಹ್ಮಾಂಡವಾಸಿನಾಂ। ಸರ್ವಲೋಕಸ್ಯವಾಸಸ್ಯ। ಮುಕ್ತಿಕ್ಷೇತ್ರಸುವಾಸಿನಾಂ। ಎಂದುದಾಗಿ, ಸದ್ಗುರುರ್ದೀಯತೆ ಲಿಂಗಂ। ಸದ್ಗುರುರ್ದೀಯತೆ ಕ್ರಿಯಾ। ಸದ್ಗುರುರ್ದೀಯತೆ ಮಂತ್ರಂ। ಸದ್ಗುರುಸ್ಸರ್ವಕಾರಣಂ ಎಂದುದಾಗಿ, ಸರ್ವಲೋಕಕ್ಕೆಯು ಸರ್ವರಿಗೆಯು ಲಿಂಗಪ್ರತಿಷ್ಠೆಯಂ ಮಾಡಿ ಕೊಟ್ಟನು. ಆರೂಪಭಾವನೋ ನಾಸ್ತಿ। ಯದ್ದೃಷ್ಟಂ ತದ್ವಿನಶ್ಯತಿ। ದೃಷ್ಟಾದೃಷ್ಟ ಸ್ವರೂಪತ್ವಂ। ತಥಾಪ್ಯೇವಂ ಸಮಾಭ್ಯಸೇತ್। ಎಂದುದಾಗಿ ನಿಃಕಲರೂಪ ನಿರವಯ ಧ್ಯಾನ ಪೂಜೆಗನುವಲ್ಲ. ಸಕಲತತ್ವಸಾಮಾನ್ಯನೆಂದು ಸಕಲನಿಷ್ಕಲವನೊಂದಾಗಿ ಲಿಂಗವ ಮಾಡಿದನು. ಶ್ಲೋ॥ ಲಿಂಗಂ ತಾಪತ್ರಯಹರಂ ಲಿಂಗಂ ದಾರಿದ್ರ್ಯನಾಶನಂ। ಲಿಂಗಂ ಪಾಪವಿನಾಶಂಚ। ಲಿಂಗಂ ಸರ್ವತ್ರಸಾಧನಂ। ಎಂದುದಾಗಿ, ಲಿಂಗವು ಪರಂಜ್ಯೋತಿರ್ಲಿಂಗವು, ಪರಬ್ರಹ್ಮವೆಂದು ಲಿಂಗವನೇ ಪೂಜಿಸಿ ಭಕ್ತಿ ಪ್ರಸಾದ ಮುಕ್ತಿಯ ಪಡೆಯಲೆಂದು ಮಹಾಘನ ಗುರು ಲಿಂಗ ಪ್ರತಿಷ್ಠೆಯ ಮಾಡಿ ತೋರಿಕೊಟ್ಟನು. ಅದೆಂತೆಂದೊಡೆ। ಬ್ರಹ್ಮಾವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ। ಸರ್ವೇ ಲಿಂಗಾರ್ಚನೆರತಾ। ಜಾತಾ ಸ್ತ್ರೀಲಿಂಗ ಪೂಜಕಾಃ। ಎಂದುದಾಗಿ ಮತ್ತಂ। ಗೌರೀಪತಿರುಮಾನಾಥೊ। ಅಂಬಿಕಾಪಾರ್ವತೀ

ಅರ್ಥಿ ಗುಡಿ…
ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦
ನಾಗನೂರ ಶ್ರೀ ರುದ್ರಾಕ್ಷಿಮಠ
820
521.



ಪತಿ:। ಗಂಗಾಪತಿರ್ಮಹಾದೇವೋ। ಸತತಂ ಲಿಂಗಂ ಪೂಜಕಂ। ಎಂದುದಾಗಿ ಈ ಮಹಾಪುರುಷರಪ್ಪ ದೇವಗಣ ರುದ್ರಗಣ ಪ್ರಮಥಗಣಂಗಳು ವಿಷ್ಣ್ವಾದಿ ದೇವ ದಾನವ ಮಾನವಾದಿಗಳು ಮಹಾಲಿಂಗವನೆ ಧ್ಯಾನಿಸಿ ಪೂಜಿಸಿ ಪರಮ ಸುಖ ಪರಿಣಾಮವ ಹಡೆವರೆಂದು ಮಾಡಿದನು ಕೇವಲ ಸದ್ಭಕ್ತ ಜನಂಗಳಿಗೆ. ಅದೆಂತೆಂದೊಡೆ, ಇಷ್ಟ ಪ್ರಾಣಂಸ್ತಥಾ ಭಾವಂ ತ್ರಿಧಾಮೇಕಂ ವರಾನನೆ ಎಂದುದಾಗಿ ಆ ಸದ್ಗುರು ಆ ಪರಶಿವನನು ತತ್ಪ್ರಾಣವನು ಏಕೀಭವಿಸಿ ಸದ್ಭಾವದಿಂ ಲಿಂಗಪ್ರತಿಷ್ಠೆಯಂ ಮಾಡಿ ಪ್ರಾಣಲಿಂಗವಾಗಿ ಕರಸ್ಥಲದಲ್ಲಿ ಬಿಜಯಂಗೈದು ಅಂತರಂಗ ಬಹಿರಂಗ ಭರಿತನಾಗಿ ಪೂಜೆಗೊಳಲೆಂದು ಕರುಣಿಸಿದನು. ಮತ್ತಂ ಏಕಮೂರ್ತಿ ಸ್ತ್ರಿಧಾಭೇದಂ ಎಂದುದಾಗಿ ಗುರುಲಿಂಗಜಂಗವು ಲಿಂಗ ಪರಶಿವಲಿಂಗ ಒಂದೇ. ದೇಶಿಕಾಚಾರ ಲಿಂಗಂಚ। ತ್ರಿವಿಧಂ ಲಿಂಗ ಮುಚ್ಯತೆ। ಎಂದುದಾಗಿ ಲಿಂಗದ ಮರ್ಮವನು ಲಿಂಗದ ಸ್ವರೂಪವನು ಲಿಂಗದ ನಿಶ್ಚಯವನು ಆದಿಯಲ್ಲಿ ಧ್ಯಾನಪೂಜೆಯ ಮಾಡಿದವರನು ಭಕ್ತಿಪ್ರಸಾದ ಮುಕ್ತಿಯ ಪಡೆದವರನು ವೇದಶಾಸ್ತ್ರ ಪುರಾಣಾಗಮಂಗಳು ಹೇಳುತ್ತಿವೆ. ಶಿವನ ವಾಕ್ಯಂಗಳಿಗಿದೇ ದಿಟ. ಮನವೇ ನಂಬು ಕೆಡಬೇಡ, ಕೆಡಬೇಡ. ಮಹಾಸದ್ಭಕ್ತರ ನಂಬುವುದು. ಶಿವಲಿಂಗಾರ್ಚನೆಯ ನಿರಂತರ ಮಾಡುವುದು. ಇದು ನಿಶ್ಚಯ. ಶಿವನು ಬಲ್ಲನಯ್ಯ. ಈ ಕ್ರಿಯೆಯಲ್ಲಿ ಲಿಂಗಜಂಗಮವನರಿದು ವಿಶ್ವಾಸವಂ ಮಾಡಿ ಕೇವಲ ಸದ್ಭಕ್ತಿ ಕ್ರಿಯೆಯನರಿದು ಮರ್ಮವನರಿದು ಸದ್ಭಾವದಿಂ ಲಿಂಗಾರ್ಚನೆಯಂ ಮಾಡುವುದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಉರಿಲಿಂಗಪೆದ್ದಿಯು ಈ ವಚನದಲ್ಲಿ ಶಿವಲಿಂಗ ಧಾರಣದ ಮಹತ್ವವನ್ನು ಮತ್ತು ಅದರ ಸ್ವರೂಪವನ್ನು ವರ್ಣಿಸುವ ವೇದಾಗಮಗಳಲ್ಲಿಯ ಉಕ್ತಿಗಳನ್ನು ವಿಶೇಷವಾಗಿ ಉದಹರಿಸಿರುವನು. ಅವನು ಅನ್ನುವದೇನೆಂದರೆ:— ಶಿವಲಿಂಗದ ಮಹಾತ್ಮೆಯನ್ನು ಅದರ ಮರ್ಮವನ್ನು ಅದರ ನಿಶ್ಚಯವನ್ನು ಬಲ್ಲವರು ಯಾರು? ಯಾರೂ ಸಿಕ್ಕಲಾರರು. ಅದು ಗುರು ತೋರಿಸಿಕೊಟ್ಟಲ್ಲಿ ಮಾತ್ರ ತಿಳಿಯುವದು. ವೇದಾಗಮಂಗಳು ಈ ಲಿಂಗವು ಸರ್ವೈಶ್ವರ್ಯಸಂಪನ್ನವಾಗಿದೆ, ಅದು ಎಲ್ಲದಕ್ಕೂ ಆದಿಯು, ಎಲ್ಲ ತತ್ವಗಳಿಗೂ ಅಧಿಕವಾಗಿದೆ, ಅದು ಅಣುವಿಗೆ ಅಣುವೂ, ಮಹತ್ತಿಗೆ ಮಹತ್ತೂ ಆಗಿ ಸರ್ವವ್ಯಾಪಿಯಾಗಿದೆ, ಅದು ವಾಚಕ್ಕೆ ಅತೀತವಾಗಿದೆ, ಮತ್ತು ಜಗತ್ತನ್ನು ದಾಟಿ ೧೦ ಅಂಗುಲ ಪ್ರಮಾಣವಾಗಿ

ಮುಂದೆ ಹೋಗಿದೆ ಎಂದು ನಾನಾ ಬಗೆಯಾಗಿ ವರ್ಣಿಸುತ್ತವೆ. ಇಂಥ ಲಿಂಗದ ಮರ್ಮವನ್ನು ಹರಿಬ್ರಹ್ಮಾದಿ ದೇವತೆಗಳೂ ದೇವದಾನವ ಮಾನವರೂ ಸಹ ಅರಿಯರು. ವೇದಗಳು ಅತ್ಯಂತ ಚಕಿತವೃತ್ತಿಯಿಂದ ಪರಮಾತ್ಮನನ್ನು ವಿವರಿಸುತ್ತವೆ ಎಂದು ಹೇಳುತ್ತಿರುವದರಿಂದ ವೇದಗಳೂ ಕೂಡ ಪರಮಾತ್ಮನನ್ನು ಅರಿಯವು ಎಂದು ಪರಮಾತ್ಮನ ಮೂಲಸ್ಥಿತಿಯನ್ನು ವಚನಕಾರನು ಇಲ್ಲಿ ವರ್ಣಿಸಿರುವನು.

ಹೀಗೆ ವರ್ಣಿಸಿ ಇಂಥ ನಿರಾಕಾರವಾದ ವಸ್ತುವನ್ನು ರೂಪಕ್ಕೆ ತರಲಿಕ್ಕೆ ಹೇಗೆ ಬರುವದು? ಹೀಗೆ ರೂಪಕ್ಕೆ ತರದೆ ಹೋದಲ್ಲಿ ಅದನ್ನು ಪೂಜಿಸುವದು ಹೇಗೆ? ಪೂಜಿಸಲಿಕ್ಕೆ ಬಾರದಿದ್ದರೆ, ಅದರ ಮೇಲೆ ಭಕ್ತಿ ಹುಟ್ಟುವ ಬಗೆ ಹೇಗೆ? ಭಕ್ತಿ ಇಲ್ಲದಿದ್ದರೆ ಪ್ರಸಾದವಾಗುವ ಬಗೆ ಹೇಗೆ? ಪ್ರಸಾದವಿಲ್ಲದೆ ಹೋದರೆ ಮುಕ್ತಿಯಾಗುವದು ಹೇಗೆ? ಮುಕ್ತಿ ಇಲ್ಲದೆ ಹೋದರೆ ದೇವದಾನವ ಮಾನವರೆಲ್ಲರು ಕೆಟ್ಟುಹೋಗಬೇಕಲ್ಲವೇ? ಈ ಶಂಕೆಗಳನ್ನು ನಿರಸನ ಮಾಡುವಲ್ಲಿ ವಚನಕಾರನು ಅನ್ನುವದೇನೆಂದರೆ, ಇದರಲ್ಲಿ ಗುರುವು ರಕ್ಷಣೆ ಮಾಡುತ್ತಾನೆ. ಅವನೇ ದಾರೀ ತೋರಿಸುವವನು. ಅದು ಹೇಗೆಂದರೆ ಈ ಗುರುವು ಅತ್ಯಂತ ಶ್ರೇಷ್ಠನಾಗಿದ್ದಾನೆ. ಅವನಿಗಿಂತ ಯಾರೂ ಅಧಿಕರಿಲ್ಲ. ಹೀಗೆ ವೇದಾಗಮಗಳಲ್ಲಿ ಉಕ್ತಿಗಳಿವೆ. ಗುರುವು ಶಾಂತಮೂರ್ತಿಯು. ಕೃಪಾಮೂರ್ತಿಯು ಅವನು ಭಕ್ತರ ಉದ್ಧಾರವಾಗಲೆಂದು ಲಿಂಗಪ್ರತಿಷ್ಠೆಯನ್ನು ಮಾಡುವನು ಎಂದು ಹೇಳಿದ್ದಾನೆ.

ಅದು ಹೇಗೆಂದರೆ, ಲಿಂಗವು ವಾಚಕ್ಕೂ ಮನಸ್ಸಿಗೂ ಮೀರಿದ್ದಿದ್ದು ನಾದಬಿಂದುಕಳಾತೀತವಾಗಿದೆ. ಇಂಥ ಲಿಂಗವು ಗುರುವಿನಿಂದಲೇ ಉದ್ಭವಿಸುತ್ತದೆ. ಲಿಂಗವು ಬರೇ ಅಂಗದಲ್ಲಿಯಷ್ಟೇ ಅಲ್ಲ, ಸರ್ವ ಬ್ರಹ್ಮಾಂಡದಲ್ಲಿಯೂ ತುಂಬಿದೆ. ಅದು ಎಲ್ಲ ಲೋಕಗಳಲ್ಲಿಯೂ ಇದೆ. ಇದು ಸದ್ಗುರುವಿನಿಂದ ಇಷ್ಟಲಿಂಗವಾಗಿ ಭಕ್ತನಿಗೆ ಕೊಡಲ್ಪಡುತ್ತದೆ. ಈ ಗುರುವಿನಿಂದಲೇ ಕ್ರಿಯೆಯು ಉತ್ಪನ್ನವಾಗುತ್ತದೆ, ಮಂತ್ರೋಪದೇಶವಾಗುತ್ತದೆ. ಹೀಗೆ ಈ ಗುರುವೇ ಎಲ್ಲದಕ್ಕೂ ಕಾರಣನಾಗಿದ್ದಾನೆ. ಇಂಥ ಶ್ರೇಷ್ಠ ಗುರುವು ಲಿಂಗಪ್ರತಿಷ್ಠೆಯನ್ನು ಮಾಡುವನು.

ರೂಪಿಲ್ಲದರಮೇಲೆ ಭಾವನೆಯು ಉಂಟಾಗದು. ಮತ್ತು ರೂಪುಳ್ಳದು ನಾಶವಾಗುತ್ತದೆ. ಆದ್ದರಿಂದ ಈ ಉಭಯವನ್ನು ಏಕೀಭವಿಸಿ ಲಿಂಗಸಾಧನೆ ಮಾಡತಕ್ಕದ್ದೆಂದು ವಚನಕಾರನ ಭಾವವಿದೆ.



ಲಿಂಗಧಾರಣದ ಅವಶ್ಯಕತೆಯನ್ನು ಮುಂದೆ ಹೇಳುವಲ್ಲಿ ವಚನಕಾರನು ಅನ್ನುವದೇನೆಂದರೆ, ನಿಃಕಲರೂಪಾಗಿ ಅವಯವ ವಿರಹಿತವಾದ್ದರಿಂದ ಅದು ಧ್ಯಾನಪೂಜೆಗೆ ಶಕ್ಯವಲ್ಲ. ಆದ್ದರಿಂದ ಸಕಲ ಮತ್ತು ನಿಃಕಲ ಇವೆರಡನ್ನೂ ಇಷ್ಟಲಿಂಗದಲ್ಲಿ ಒಂದಾಗಿ ಗುರುವು ಮಾಡುವದರಿಂದ ಅದನ್ನೇ ಪೂಜಿಸಬೇಕು. ಇಂಥ ಲಿಂಗವು ತಾಪತ್ರಯವನ್ನು ಹರಿಯುವದು. ದಾರಿದ್ರ್ಯತೆಯನ್ನು ದೂರಮಾಡುವದು. ಸಾವನ್ನು ವಿನಾಶಮಾಡುವದು. ಇಂಥ ಲಿಂಗವು ಎಲ್ಲದಕ್ಕೆ ಸಾಧನವಾಗಿದೆ ಎಂಬದಕ್ಕೆ ವಚನಕಾರನು ಅನೇಕ ಆಧಾರಗಳನ್ನು ಕೊಟ್ಟು ಅನ್ನುವದೇನೆಂದರೆ, ಹೀಗೆ ಗುರು ಕೊಟ್ಟ ಲಿಂಗವು ಪರಂಜ್ಯೋತಿ ಸ್ವರೂಪವು ಪರಬ್ರಹ್ಮವು ಎಂದು ಭಾವಿಸಿ ಭಕ್ತರು ಪೂಜಿಸಬೇಕು. ಹೀಗೆ ಪೂಜಿಸಿ ಪ್ರಸಾದವನ್ನು ಪಡೆಯಬೇಕು. ಮತ್ತು ಪ್ರಸಾದದಿಂದ ಮುಕ್ತಿಯನ್ನು ಹೊಂದಬೇಕು ಎಂದು ಹೇಳಿರುವನು.

ಇದಕ್ಕೆ ಅನೇಕ ಆಧಾರಗಳಿವೆ ಎಂದು ವಚನಕಾರನು ಹೇಳಿ, ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವರೆಲ್ಲರೂ ಇಂಥ ಲಿಂಗಾರ್ಚನೆಯಲ್ಲಿಯೇ ರತರಾಗಿರುವರು. ಇಷ್ಟೇ ಅಲ್ಲ, ಗೌರೀಪತಿಯೂ ಉಮಾಪತಿಯೂ ಆದ ಮಹಾದೇವನು ಸಹ ಲಿಂಗಪೂಜಕನಾಗಿರುವನು. ಮಹಾಪುರುಷರೂ ದೇವಗಣಗಳೂ ರುದ್ರ ಪ್ರಮಥಗಣಗಳೂ ದೇವದಾನವ ಮಾನವರೂ ಮಹಾಲಿಂಗವನ್ನೇ ಧ್ಯಾನಿಸಿ ಪೂಜಿಸಿ ಪರಮ ಪರಿಣಾಮವನ್ನು ಹೊಂದಿರುವರೆಂದು ಅನೇಕ ಪುರಾತನ ಆಧಾರಗಳನ್ನು ಇಲ್ಲಿ ಕೊಟ್ಟಿರುವನು.

ಇಷ್ಟ, ಪ್ರಾಣ, ಭಾವಗಳು ಒಂದೇ ಇವೆ. ಆದ್ದರಿಂದ ಸದ್ಗುರುವು ಲಿಂಗವನ್ನೂ ಪ್ರಾಣವನ್ನೂ ಒಂದೇ ಮಾಡಿ ತನ್ನ ಸದ್ಭಾವದಿಂದ ಲಿಂಗಪ್ರತಿಷ್ಠೆಯನ್ನು ಮಾಡಿ ಪ್ರಾಣಲಿಂಗವನ್ನು ಇಷ್ಟವಾಗಿ ಕರಸ್ಥಲದಲ್ಲಿ ನಿಲ್ಲಿಸಿ, ಅಂತರಂಗ ಬಹಿರಂಗ ಇವೆರಡರಲ್ಲಿಯೂ ಅದನ್ನು ತುಂಬುವನು.

ಗುರು, ಲಿಂಗ, ಜಂಗಮ ಹಾಗೂ ಲಿಂಗ ಪರಶಿವ ಇವೆಲ್ಲವುಗಳು ಒಂದೇ ಎಂಬದಾಗಿ ವಚನಕಾರನು ಉದಹರಿಸಿ ಈ ಪ್ರಕಾರ ಯಾವದು ಲಿಂಗದ ಮರ್ಮವು, ಲಿಂಗದ ಸ್ವರೂಪು, ಲಿಂಗದ ನಿಶ್ಚಯವು ಇದೆ ಎಂಬದನ್ನು ತಿಳಿದು ಧ್ಯಾನ ಪೂಜೆಗಳಲ್ಲಿ ಆಸಕ್ತರಾಗಿರುತ್ತಾರೋ ಅವರಿಗೆ ಭಕ್ತಿ, ಪ್ರಸಾದ, ಮತ್ತು ಮುಕ್ತಿಗಳಿವೆ. ಇದಕ್ಕೆ ವೇದಶಾಸ್ತ್ರಾಗಮಗಳ ಆಧಾರಗಳಿವೆ. ನಿಶ್ಚಯವಾಗಿ ಶಿವನ ವಾಕ್ಯಗಳಿವೆ. ಇದು ನಿಶ್ಚ

ಯುವು ಎಂದು ವಚನಕಾರನು ಹೇಳಿ, ತನ್ನ ಮನಸ್ಸಿಗೆ ತಾನೇ ಅನ್ನುವದೇನೆಂದರೆ, ಎಲೋ ಮನವೇ, ಈ ರೀತಿಯನ್ನು ನಂಬು, ನಂಬದೆ ಕೆಟ್ಟು ಹೋಗಬೇಡ, ಹೀಗೆ ಆಚರಿಸುವ ಸದ್ಭಕ್ತರನ್ನು ನಂಬು, ಶಿವಲಿಂಗಾರ್ಚನೆಯನ್ನು ಯಾವಾಗಲೂ ಮಾಡು, ಈ ಪ್ರಕಾರ ಆಚರಿಸಿ ಲಿಂಗಜಂಗಮವಾವುದೆಂಬನ್ನು ಅರಿ, ಇವರಲ್ಲಿ ವಿಶ್ವಾಸವನ್ನಿಡು, ಕೇವಲ ಸದ್ಭಕ್ತಿ ಕ್ರಿಯೆಗಳನ್ನು ಅರಿ, ಸದ್ಭಾವದಿಂದ ಲಿಂಗಾರ್ಚನೆಯನ್ನು ಮಾಡು ಎಂದು ತನಗೆ ತಾನೇ ಹೇಳಿಕೊಳ್ಳುತ್ತಾನೆ.

**ವಚನ:—** ೧೮. ಕಕ್ಷೆ ಕರಸ್ಥಲ ಉತ್ತಮಾಂಗ ಉರಸ್ಥಲಕೆ ಮೊದಲಾದ ಸ್ಥಾನಂಗಳಂ ಶುದ್ಧವಂ ಮಾಡಿ, ಯಾತೆ ರುದ್ರ ಶಿವ ತನೂರ ಘೋರ ಪಾಪ ನಾಶಿನೀ ಎಂಬ ಶಿವಲಿಂಗ ಮೂರ್ತಿಯಂ ಸ್ಥಾಪಿಸಿ, ತಚ್ಛಿಷ್ಯನ ಶರೀರವೇ ನಡೆ ಶಿವಾಲಯವೆಂಬಂತೆ ಶ್ರೀಗುರು ಪಾವನವ ಮಾಡಿ ತೋರಿದನಾಗಿ, ಆಂಗದ ಮೇಲೆ ಲಿಂಗ ಉಳ್ಳವರ ಕಂಡು, ಮರಳಿ ಮಾನವರೆಂವರೆ ನಾಯಕ ನರಕ ತಪ್ಪದಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ—** ಈ ವಚನದಲ್ಲಿ ವಚನಕಾರನು ಇಷ್ಟಲಿಂಗವನ್ನು ಧಾರಣ ಮಾಡುವ ಸ್ಥಳಗಳನ್ನು ನಿರ್ದೇಶಿಸಿ ಅವುಗಳನ್ನು ಶುದ್ಧಮಾಡಿ ಅಲ್ಲಿ ಶಿವಲಿಂಗಮೂರ್ತಿಯನ್ನು ಸ್ಥಾಪಿಸಬೇಕೆಂದು ಹೇಳಿರುವನು. ಆ ಸ್ಥಳಗಳು ಯಾವವೆಂದರೆ ಬಗಲು, ಕರಸ್ಥಲ, ತಲೆ, ಎದೆ ಇವೇ ಮೊದಲಾದವುಗಳಿರುತ್ತವೆ. ಹೀಗೆ ಶಿವಲಿಂಗ ಮೂರ್ತಿಯನ್ನು ಸ್ಥಾಪಿಸಿದಲ್ಲಿ ಶರೀರವು ಒಂದು ಬಗೆಯ ನಡೆದೇವಾಲಯವೆಂತಲೇ ಹೇಳಬೇಕು. ಅದು ಸ್ಥಿರವಾದ ದೇವಾಲಯವಿರದೆ ಚರ ದೇವಾಲಯವೆಂಬ ಅರ್ಥವು. ಇಂಥ ಶರೀರವು ಪಾವನವಾದದ್ದು. ಹೀಗೆ ಇಷ್ಟಲಿಂಗ ಧಾರಣ ಮಾಡುವವರು ಮಾನವರೆಂದು ಬಗೆಯಬಾರದು. ಬಗೆದರೆ ನರಕವೆಂದು ವಚನಕಾರನು ಅನ್ನುತ್ತಾನೆ.

**ವಚನಃ—** ೧೯. ಎಂಬತ್ತುನಾಲ್ಕು ಲಕ್ಷ ಜೀವರಾಶಿಯ ಯೋನಿಯಲ್ಲಿ ಜನಿಸಿ ನಾನಾ ಯಾತನೆಯಲ್ಲಿ ತೊಳಲಿ ಬಳಲುತ್ತಿಹನು. ಆ ಪರಿಭವಂಗಳಂ ಕಳೆದು, ಆಯೋನಿಜನಂ ಮಾಡಿ ಶ್ರೀಗುರು ತನ್ನ ಕರುಣಾಕಟಾಕ್ಷ ನಿರೀಕ್ಷಣೆಯಿಂದ ಕಂಕಮಲದಲ್ಲಿ ಬೆಸಲಾದನಾಗಿ, ಅಂತಹ ಅನಂತ ಯೋನಿ ಮುಖ ಜನ್ಮಂಗಳಂ ಕಳಿದುಳಿದ ಶರಣಂಗೆ ಇನ್ನು ಭವಮಾಲೆಯುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?



**ಭಾವ!—** ಮನುಷ್ಯನು ೮೪ ಲಕ್ಷ ಜೀವರಾಶಿಗಳ ಯೋನಿಗಳಲ್ಲಿ ಅನಂತ ಜನ್ಮಗಳನ್ನು ತಾಳಿ ಅನೇಕ ಬಗೆಯ ಕಷ್ಟಗಳನ್ನು ಹೊಂದುವನು. ಈ ಕಷ್ಟಗಳು ದೂರಾಗಬೇಕೆಂದು ಗುರುವು ಲಿಂಗಧಾರಣ ಮಾಡುವನು. ಹೀಗೆ ಲಿಂಗಧಾರಣೆ ಮಾಡಿದೊಡನೆಯೇ ಅವನು ಅಯೋನಿಜನಾಗುವನು. ಯಾಕಂದರೆ ಅವನ ಜನ್ಮವು ಗುರುವಿನಿಂದಾಯಿತೆಂತಲೇ ತಿಳಿಯಬೇಕು. ಹೀಗೆ ಭಕ್ತನು ಗುರುವಿನ ಕೃಪಾಕಟಾಕ್ಷದ ಮೂಲಕ ಅವನ ಕರಕಮಲದಲ್ಲಿ ಪುನರ್ಜಾತನಾಗುವನು. ಹೀಗೆ ಹುಟ್ಟಿದವನಿಗೆ ಭವಮಾಲೆಯು ಹೊದ್ದಲಾರದು. ಈತನು ಶರಣನೆಂದು ತಿಳಿಯಬೇಕು ಎಂದು ವಚನಕಾರನು ಇಲ್ಲಿ ಹೇಳುತ್ತಾನೆ.

**ವಚನ!—** ೨೦. ಲಿಂಗವು ಸರ್ವಾಂಗದಲ್ಲಿ ಭರಿತವಾಗಿರಲು ಮನವರಿಯದು, ತನು ಸೋಂಕದು, ಜ್ಞಾನ ಕಾಣಿಸದು, ಭಾವ ಮುಟ್ಟದು. ಶಿವಶಿವಾ ವಿಶ್ವಾಸದಿಂದ ಗ್ರಹಿಸಿ ಹಿಡಿಯದು. ಶಿವಶಿವಾ ಕೆಟ್ಟೆ ಕೆಟ್ಟೆ. ಅಂತರಂಗ ಬಹಿರಂಗ ಭರಿತವಾಗಿ ಲಿಂಗವಿದ್ದಾನೆ. ಮನ ವಿಶ್ವಾಸದಿಂದ ಗ್ರಹಿಸಿದಡೆ, ಸತ್ಯನಪ್ಪೆ ನಿತ್ಯನಪ್ಪೆ ಮುಕ್ತನಪ್ಪೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ—** ಲಿಂಗಧಾರಣೆಯ ಪರಿಣಾಮಗಳನ್ನು ಇಲ್ಲಿ ವಚನಕಾರನು ವಿವರಿಸಿರುವನು ಇದರಿಂದ ಲಿಂಗದ ಉಚ್ಚ ಮತ್ತು ಉದಾತ್ತ ಗುಣಗಳು ಸರ್ವಾಂಗದಲ್ಲೆಲ್ಲ ತುಂಬಿಹೋಗುವವು. ಮತ್ತು ದೇಹಸಂಬಂಧದ ಗುಣಗಳು ಅಡಗುವವು. ಅಂದರೆ ಮನ, ತನು, ಜ್ಞಾನ, ಭಾವ, ಇವೆಲ್ಲವುಗಳ ಕೆಡಕು ಮತ್ತು ದುಷ್ಟ ಒಲವುಗಳು ನಿಂತುಹೋಗಿ ಅವುಗಳಲ್ಲಿ ಲಿಂಗದ ಶ್ರೇಷ್ಠ ಒಲವುಗಳು ತುಂಬುವವು. ಆದರೆ ಮನುಷ್ಯನಲ್ಲಿ ಲಿಂಗಸಂಬಂಧವಾಗಿ ವಿಶ್ವಾಸಭಾವವು ಇರದ್ದರಿಂದ ಈ ಸ್ಥಿತಿಯುಂಟಾಗುವದಿಲ್ಲ. ಅವನು ಭವದತ್ತವೇ ಹೊರಳುವನು. ಆದ್ದರಿಂದ ಪರಶಿವನೇ ನಾನು ಕೆಟ್ಟೆನೆಂದು ವಚನಕಾರನು ಇಲ್ಲಿ ಪರಮಾತ್ಮನಿಗೆ ಹೇಳಿಕೊಳ್ಳುತ್ತಾನೆ. ವಿಚಾರಮಾಡಿ ನೋಡಿದಲ್ಲಿ ಪರಮಾತ್ಮನು ದೇಹದ ಒಳಗೂ ಹೊರಗೂ ತುಂಬಿಕೊಂಡಿದ್ದಾನೆ. ಈ ರೀತಿಯನ್ನು ಮನುಷ್ಯನು ವಿಶ್ವಾಸಪೂರ್ವಕವಾಗಿ ಗ್ರಹಿಸಿದರೆ, ಅವನು ಸತ್ಯನೂ ನಿತ್ಯನೂ ಮುಕ್ತನೂ ಆಗುವನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

# ಲಿಂಗಭಕ್ತಿ.

**ವಿವರಣೆಃ**— ಲಿಂಗಧಾರಣೆಯಾದ ಬಳಿಕ ಯಾವಾಗಲೂ ಲಿಂಗಭಕ್ತಿಯಿಂದಿರಬೇಕೆಂದು ವಚನಕಾರನು ಮುಂದಿನ ವಚನಗಳಲ್ಲಿ ಹೇಳಿದ್ದಾನೆ. ಇವುಗಳಲ್ಲಿ ಆತನು ಲಿಂಗಭಕ್ತಿ ಏನೆಂಬುದನ್ನು ಬಹು ವಿಶದವಾಗಿ ವಿವರಿಸಿದ್ದಾನೆ.

ಭಕ್ತಿ ಎಂದರೆ ಪರಮಾತ್ಮನನ್ನು ಕುರಿತು ಹಂಬಲಿಸುವದು, ಆವನ ಉಚ್ಚಸ್ಥಿತಿಗೆ ಮೋಹಿತನಾಗಿ ತನ್ನಲ್ಲಿ ಲಿಂಗದ ಗುಣಗಳನ್ನು ಪ್ರಜ್ವಲಿಸುವದು ಮತ್ತು ಕಡೆಗೆ ಪರಮಾತ್ಮನನ್ನು ಹೊಂದುವದು. ಈ ಉದ್ದೇಶಗಳನ್ನಿಟ್ಟುಕೊಂಡೇ ಭಕ್ತನು ಪರಮಾತ್ಮನನ್ನು ನೆನೆಯಬೇಕು. ಈ ನೆನಹೇ ಭಕ್ತನ ಪ್ರಾರ್ಥನೆಯಲ್ಲಿ ಕೂಡಿರಬೇಕು. ಲಿಂಗಾಂಗಿಯು ತನ್ನ ಪ್ರಾರ್ಥನೆಗಳಲ್ಲಿ ಬಾಹ್ಯ ಸುಖಗಳನ್ನು ಎಂದಿಗೂ ಅಪೇಕ್ಷಿಸಬಾರದು. ಆ ಕಾಲದಲ್ಲಿ ಅವನು ಅತ್ಯಂತ ಶ್ರೇಷ್ಠ ಮತ್ತು ಉಚ್ಚ ಭಾವಗಳಿಂದ ಪೂರಿತನಾಗಿರಬೇಕು. ಈ ವಿಚಾರಗಳು ಮುಂದಿನ ವಚನಗಳಲ್ಲಿ ಬಂದಿವೆ.

**ವಚನಃ**— ೨೧. ವಟಬೀಜ ವಟವೃಕ್ಷ ಕೋಟಿಯ ನುಂಗಿಪ್ಪಂತೆ ಸಟೆಯಿಂದಾದ ಅಜಾಂಡ ಬ್ರಹ್ಮಾಂಡ ಕೋಟಿಯನೊಳಕೊಂಡಿಪ್ಪ ಲಿಂಗವೇ ದಿಟಪುಟವಾಗಿ ಎನ್ನ ಕಣ್ಗೆ ಮನ ಕರ ಸ್ಥಲಕ್ಕೆ ಬಂದು ಪ್ರಕಟವಾದೆ. ಮಝು ಭಾಪು ಮಝು ಭಾಪು ಲಿಂಗವೇ. ನ ಚ ರೇಣು ನ ಚಕ್ಷುವೆಂದೆನಿಸುವ ಲಿಂಗವೇ. ನಿನ್ನುವ ಮುಟ್ಟಿ ಉತ್ಪತ್ತಿ ಸ್ಥಿತಿ ಲಯಕ್ಕೆ ಹೊರಗಾದೆನು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ**— ಪ್ರಾರ್ಥನೆಯ ಕಾಲದಲ್ಲಿ ಭಕ್ತನು ಪರಮಾತ್ಮನ ದಿವ್ಯ ಸ್ವರೂಪಕ್ಕೋಸ್ಕರ ಆಶ್ಚರ್ಯಚಕಿತನಾಗಿರಬೇಕು. ಆಗ ಅವನು ಬೆರಗುಗೊಂಡು ತಾನು ಯಾರು ತನ್ನದು ಆವುದು ಎಂಬದನ್ನು ಮರೆತು ನುಡಿಯುತ್ತಾನೆ. ವಚನಕಾರನಲ್ಲಿ ಈ ಸ್ಥಿತಿಯು ತಲೆದೋರಿದಾಗ ಈ ವಚನವನ್ನು ಆವನು ನುಡಿದಿರುವನೆಂದು ಭಾಸವಾಗುತ್ತದೆ. ಲಿಂಗವನ್ನು ಕುರಿತು ಅವನು ಮಝು ಭಾಪು ಮಝು ಭಾಪು ಎಂದು ಉದ್ಗಾರಗಳನ್ನು ಹೊರಡಿಸಿದ್ದಾನೆ. ಭಕ್ತನಲ್ಲಿ ಈ ಬಗೆಯ ಉದ್ಗಾರಗಳು ಅವನ



ಅಂತಃಕರಣದಿಂದ ಹೃದಯದಿಂದ ಹೊರಹೊರಡಬೇಕು. ಲಿಂಗದ ನಿಜಸ್ವರೂಪು ಹೀಗೆ ಸ್ಪಷ್ಟವಾಗಿ ಗೋಚರವಾದಾಗಲೇ ಇಂಥ ಉದ್ಗಾರಗಳು ಮತ್ತು ಭಾವಗಳು ಹೊರಪಡುವವು. ವಚನಕಾರನು ತನ್ನ ಪ್ರಾರ್ಥನೆಯಲ್ಲಿ ಲಿಂಗದ ನಿಜಸ್ವರೂಪು ಎಂಥದಿರುವದೆಂಬದನ್ನು ಮನಸ್ಸಿನಲ್ಲಿ ತಂದುಕೊಂಡು ಅನ್ನುವದೇನಂದರೆ, ಹ್ಯಾಗೆ ಒಂದು ಆಲದ ಬೀಜದಲ್ಲಿ ವಿಶಾಲವಾದ ವಟವೃಕ್ಷವು ಅಡಗಿರುವದೋ ಹಾಗೆಯೇ ಈ ಲಿಂಗದಲ್ಲಿ ಬ್ರಹ್ಮಾಂಡ ಕೋಟಿಗಳು ಅಡಗಿರುತ್ತವೆಂದು ವಚನಕಾರನು ಇಲ್ಲಿ ಅನ್ನುತ್ತಾನೆ. ಇದು ಆಶ್ಚರ್ಯವಲ್ಲವೇ ಎಂದು ವಚನಕಾರನು ಅಂದುಕೊಂಡು ನುಡಿಯುವದೇನಂದರೆ, ಇಂಥ ಮಹತ್ತರಲಿಂಗವು ಹಸ್ತದಲ್ಲಿ ಇಷ್ಟಲಿಂಗವಾಗಿದೆ. ಮತ್ತು ಈ ಇಷ್ಟಲಿಂಗವೇ ಚಕ್ಷುವಿನ ದ್ವಾರಾ ಮನಸ್ಸಿನಲ್ಲಿ ಪ್ರಾಣಲಿಂಗವಾಗಿದೆ. ಹೀಗೆ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿದ ವಸ್ತುವು ನನ್ನಲ್ಲಿಯೇ ಪ್ರಕಟವಾದೆಯಲ್ಲಾ ಎಂದು ಮನಸ್ಸಿನಲ್ಲಿ ಭಾವಿಸಿಕೊಂಡು ಮಝು ಭಾಪು ಮಝು ಭಾಪು ಎಂದೆನ್ನುತ್ತಾನೆ. ಹೀಗೆ ಮಹತ್ತರವಾದ ಲಿಂಗವನ್ನು ಪಡೆದು ಆದರ ಮೂಲಕ ನನ್ನ ಉತ್ಪತ್ತಿ ಸ್ಥಿತಿಲಯಗಳೆಲ್ಲವನ್ನು ದೂರಮಾಡುವೆನೆಂದು ವಚನಕಾರನು ಅನ್ನುತ್ತಾನೆ.

ಈ ಪ್ರಾರ್ಥನೆಯಲ್ಲಿ ಪರಮಾತ್ಮನ ಮಹತ್ತರ ಸ್ವರೂಪು ಮತ್ತು ಆತನ ಅತ್ಯದ್ಭುತ ಶಕ್ತಿ ಇವುಗಳನ್ನು ಧ್ಯಾನದಲ್ಲಿ ತಂದುಕೊಂಡು ಅವುಗಳನ್ನು ಲಿಂಗದ ದ್ವಾರಾ ಬಾಹ್ಯೇಂದ್ರಿಯ ಆಂತರಿಂದ್ರಿಯಗಳಲ್ಲಿ ತುಂಬಿಕೊಂಡು ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಿಂದ ಹ್ಯಾಗೆ ತಾನು ಪಾರಾಗುವೆನೆಂಬ ಅರಿವುಳ್ಳವನಾದರೆ ಪರಮಾತ್ಮನಲ್ಲಿ ನಿಜವಾದ ಭಕ್ತಿಯು ನೆಲೆಗೊಳ್ಳುವದು. ಇಂಥ ಸ್ಥಿತಿಯು ಬಂದೊದಗಿದರೆ ನಿಜವಾದ ಭಕ್ತಿಯ ಉದ್ಗಾರಗಳು ಹೊರಪಡುವವು.

**ವಚನ:**— ೨೨. ಯತೋವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ।'' ಎಂದೆನಿಸುವ ಲಿಂಗವು; "ಅತ್ಯತಿಷ್ಠದ್ದಶಾಂಗುಲಂ" ಎಂದೆನಿಸುವ ಲಿಂಗವು" ಶೃತಿಚಕಿತಮಭಿಧತ್ತೆ" ಎಂದೆನಿಸುವ ಲಿಂಗವು; "ಅಣೋರಣೀಯಾನ್ಮಹತೋ ಮಹಿಯಾನ್" ಎಂದೆನಿಸುವ ಲಿಂಗವು; "ಆಯಂ ಮೇಹಸ್ತಂ ಭಗವಾನ್। ಆಯಂ ಮೇಭಗವತ್ತರಂ" ಎಂದೆನಿಸುವ ಲಿಂಗವು; "ಏಕ ಮೂರ್ತಿ ತ್ರಿಧಾಭೇದಂ" ಎಂದೆನಿಸುವ ಲಿಂಗವು; ಶ್ರೀಗುರುಲಿಂಗಜಂಗಮರೂಪಾಗಿ, "ಇಷ್ಟ ಪ್ರಾಣಸ್ತಥಾಭಾವಂ ತ್ರಿಧಾ

ನೇಕಂ ವರಾನನೇ" ಎಂದುದಾಗಿ, ತ್ರಿವಿಧವು ಏಕೀಭವಿಸಿ, ಲಿಂಗರೂಪಾಗಿ ಎನ್ನ ಕರಸ್ಥಲಕ್ಕೆ ಬಂದು, ಕರತಳಾಮಳಕವಾಗಿ ತೋರುತ್ತೈದಾನೆ. ಆಹಾ ಎನ್ನ ಪುಣ್ಯವೆ! ಆಹಾ ಎನ್ನ ಭಾಗ್ಯವೆ! ಆಹಾ ಎನ್ನ ಸತ್ಯವೆ! ಆಹಾ ಎನ್ನ ನಿತ್ಯವೆ! ಶಿವಶಿವಾ ಮಹಾದೇವ, ಮಹದೇವ, ನೀನೇ ಬಲ್ಲೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇಲ್ಲಿ ವಚನಕಾರನು ಪರಮಾತ್ಮನ ಉದಾತ್ತ ಸ್ವರೂಪವನ್ನು ತನ್ನ ಮನಸ್ಸಿನಲ್ಲಿ ತಂದುಕೊಂಡು ತಾನು ಎಂಥ ಭಾಗ್ಯವಂತನು ಎಂಥ ಪುಣ್ಯವಂತನು ಎಂದು ಅಂದುಕೊಂಡು ಪ್ರೇಮೋದ್ಗಾರಗಳನ್ನು ತೆಗೆದಿರುತ್ತಾನೆ. ಅವನು ಪರಮಾತ್ಮನ ಬಗ್ಗೆ ಇರುವ ಪುರಾತನ ಉಕ್ತಿಗಳನ್ನು ಧ್ಯಾನದಲ್ಲಿ ತಂದುಕೊಂಡು ಅನ್ನುವದೇನಂದರೆ ಎಲೋ ಪರಮಾತ್ಮನೇ ನೀನು ನುಡಿಗೆ ದೂರಾಗಿರುವೆ, ಮನಸ್ಸಿಗೂ ಸಹ ನಿಲುಕದವನಾಗಿರುವೆ, ನಿನ್ನ ವಿಸ್ತಾರವು ಎಷ್ಟಿರುವದೆಂದರೆ ಈ ಬ್ರಹ್ಮಾಂಡವನ್ನು ಸಹ ದಾಟಿ ಹತ್ತಂಗುಲ ಪ್ರಮಾಣ ಹೆಚ್ಚಾಗಿರುವೆ, ಶೃತಿಗಳಿಗೂ ಕೂಡ ನಿಲುಕದವನಾಗಿರುವೆ, ಸಣ್ಣದರಲ್ಲಿ ಸಣ್ಣವನೂ ದೊಡ್ಡದರಲ್ಲಿ ದೊಡ್ಡವನೂ ಆಗಿರುವೆ, ಇಂಥವನಾಗಿದ್ದರೂ ಕೂಡ ನೀನು ನನ್ನ ಹಸ್ತದಲ್ಲಿ ತಲೆದೋರಿರುವೆ, ನೀನೊಬ್ಬನೇಯಾಗಿದ್ದರೂ ಮೂರು ವಿಧವಾಗಿರುವೆ, ಅವು ಗುರು ಲಿಂಗ ಜಂಗಮುಗಳಿದ್ದು ಇವೇ ಇಷ್ಟ, ಪ್ರಾಣ ಭಾವಗಳಾಗಿವೆ. ಈ ತ್ರಿವಿಧವು ಪುನಃ ಏಕೀಭವಿಸಿ ಏಕಲಿಂಗವಾಗಿರುವೆ. ಇಂಥಾತನಾದ ನೀನು ನನ್ನ ಕರಸ್ಥಲಕ್ಕೆ ಬಂದು ಕರತಳಮಳಕನಾದೆ, ನನ್ನ ಕೇವಲ ಅಧೀನವಾದೆ ಎಂದು ಪರಮಾತ್ಮನ ಸ್ವರೂಪವನ್ನು ಮನಸ್ಸಿನಲ್ಲಿ ತಂದುಕೊಂಡು ಅನ್ನುವದೇನೆಂದರೆ, ಏನು ನನ್ನ ಪುಣ್ಯವು! ಏನು ನನ್ನ ಭಾಗ್ಯವು! ಎಂದು ವಚನಕಾರನು ನುಡಿದು ಅತ್ಯಂತ ಭಕ್ತಿಪೂರಿತನಾಗಿ ಎಲೋ ನನ್ನ ಸತ್ಯವೇ, ನಿತ್ಯವೇ ಶಿವ ಶಿವ ಮಹಾದೇವ ಎಂದು ಉಚ್ಚರಿಸಿ ಈ ನಿನ್ನ ವಿಧವನ್ನು ನೀನೇ ಬಲ್ಲೆ ಹೆರವರು ಅರಿಯರು ಎಂದು ಆಶ್ಚರ್ಯಚಕಿತನಾಗಿ ಪರಮಾತ್ಮನನ್ನು ಕುರಿತು ವಚನಕಾರನು ಪ್ರಾರ್ಥಿಸಿರುತ್ತಾನೆ.

**ವಚನಃ**— ೨೩. ನಿತ್ಯನಿರಂಜನ ಜ್ಯೋತಿರ್ಲಿಂಗವು ಪ್ರತ್ಯಕ್ಷವಾಗಿ ಕರಸ್ಥಲಕ್ಕೆ ಬರಲು ಮತ್ತೆ ನೆನೆನೆನೆದು ಬದುಕಿಹೆನೆಂಬುದು ಅಜ್ಞಾನ ಕಾಣಿರೇ. ಅದು ಏನು ಕಾರಣವೆಂದೊಡೆ ಸತ್ಯವು ಸರ್ವಾಂಗಲಿಂಗವೆಂ-



ದರಿಯದೆ ಮತ್ತೆ ಕಾಯವೆರಸಿ ಕೈಲಾಸಕ್ಕೆ ಹೋಗಬೇಕೆಂಬರು. ಕ್ರಮವಲ್ಲ. ಪಂಚಾಮೃತವು ಮುಂದೆ ಬಂದಿರಲು ಹಸಿದೆನೆಂದು ಲೋಗರಮನೆಯಲ್ಲಿ ಅನ್ನ ಬೇಡುವರೇ? ಕಣ್ಣ ಮುಂದೆ ನಿಧಾನವಿರುತ್ತಿರಲು ಬಳಸಲರಿಯದೆ ಬಡತನದೊಳಗಿಹರೇ? ಲಿಂಗವಿಲ್ಲದವರು ಮೊದಲೇ ಲಿಂಗವ ನೆನೆದು ಬದುಕಿಹೆವೆಂಬರು. ಇದ ಕಂಡು ನಂಬದಿಹುದುಚಿತವೇ? ಆಹಾ ಇದು ಗುಣವಲ್ಲ. ಮುಂಗಯ್ಯ ಕಂಕಣಕ್ಕೆ ಕನ್ನಡಿಬೇಡ. ಅಂಗದ ಮೇಲೆ ಲಿಂಗವಿದ್ದುದಕ್ಕೆ ಲಿಂಗದ ಪರಿ ಎಂತೆಂದು ಅನ್ಯರ ಬೆಸಗೊಳಲಿಲ್ಲ. ಬೇರೆ ಮತ್ತೆ ಅರಸಲಿಲ್ಲ. ಕಾಣೆನೆಂದು ಮರುಗಲಿಲ್ಲ. ಮುಂದೆ ಜನ್ಮ ಉಂಟೆಂದು ಮನದಲ್ಲಿ ನೋಯಲಿಲ್ಲ. ಇದು ಕಾರಣ ತನ್ನ ಕರಸ್ಥಲದಲ್ಲಿದ್ದ ವಸ್ತುವ ತಾನರಿದೊಡೆ ತಾನೇ ಶಿವನು. ಇದು ಸತ್ಯ, ಶಿವ ಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ**— ಭಕ್ತಿಯಲ್ಲಿ ದೃಢಭಾವವಿರಬೇಕು. ಅಂದರೆ ತಾನು ಮಾಡುವ ಪ್ರಾರ್ಥನೆಯ ಕಾಲದಲ್ಲಿ ನುಡಿದ ನುಡಿಗಳು ನಿಜವೆಂದು ಅವುಗಳಲ್ಲಿ ಪೂರ್ಣ ವಿಶ್ವಾಸವಿಟ್ಟಿರಬೇಕು. ಅಂದರೆ ಮಾತ್ರ ಅವುಗಳಲ್ಲಿ ಮಹತ್ತರ ಶಕ್ತಿಯುತ್ಪನ್ನವಾಗುವದು. ಆದ್ದರಿಂದ ತನ್ನ ಇಷ್ಟಲಿಂಗವನ್ನು ಕುರಿತು ಭಕ್ತನು ಪ್ರಾರ್ಥಿಸುವಲ್ಲಿ ಆ ಇಷ್ಟಲಿಂಗವು ಪರಮಾತ್ಮನ ಸ್ವರೂಪವೇ ಎಂದು ದೃಢವಿಶ್ವಾಸವಿಡಬೇಕು. ಅಂದರೆ ಮಾತ್ರ ಆ ಇಷ್ಟಲಿಂಗವನ್ನು ಕುರಿತು ಮಾಡಿದ ಕ್ರಿಯೆಗಳ ಮೂಲಕ ಅವನು ಉಚ್ಚಸ್ಥಿತಿಗೆ ಬರುವನು.

ಅಂದರೆ ಭಕ್ತನು ಈ ಇಷ್ಟಲಿಂಗವು ನಿತ್ಯನಿರಂಜನ ಜ್ಯೋತಿರ್ಲಿಂಗವೆಂತಲೇ ಭಾವಿಸಬೇಕು. ಈ ಜ್ಯೋತಿರ್ಲಿಂಗವು ತನ್ನ ಶರೀರವನ್ನೆಲ್ಲ ಆವರಿಸಿದೆಂದು ತಿಳಿಯಬೇಕು. ಹೀಗೆ ತಿಳುವಳಿಕೆ ಇದ್ದಲ್ಲಿ ಆ ಲಿಂಗಕ್ಕೂ ತನಗೂ ಭೇದಭಾವವು ಉಳಿಯಲಾರದು. ಈ ಸ್ಥಿತಿಯುಂಟಾದಲ್ಲಿ ಅದನ್ನು ನೆನೆಯಲಿಕ್ಕೆ ಬರಲಾರದೆಂದು ವಚನಕಾರನ ಅಭಿಪ್ರಾಯವಿದೆ. ಯಾಕಂದರೆ ನೆನವಿನಲ್ಲಿ ನೆನೆಯುವವನು ಮತ್ತು ನೆನೆಯತಕ್ಕ ಪದಾರ್ಥ ಎಂದು ವಿವಿಧತೆಯು ಇರುತ್ತದೆ. ಈ ವಿವಿಧತೆಯು ಲಿಂಗಿಯಾದವನಲ್ಲಿ ಇರಕೂಡದು. ಅವನು ದೇಹವೇ ಜ್ಯೋತಿರ್ಲಿಂಗವೆಂದು ಭಾವಿಸುವನಾದ್ದರಿಂದ ಅದನ್ನು ನೆನೆಯಲಿಕ್ಕೆ ಅವನಿಗೆ ಬರಲಾರದು.

ಹಾಗೆಯೇ ಅನೇಕರು ಕಾಯ ಸಹಿತ ಕೈಲಾಸಕ್ಕೆ ಹೋಗಬೇಕೆಂದು ಅನ್ನುವರು. ಇದೂ ತರವಲ್ಲ. ಯಾಕಂದರೆ ದೇಹದಲ್ಲಿಯೇ ಪರಮಾತ್ಮ

ನಿದ್ದ ಬಳಿಕ ಕೈಲಾಸದಲ್ಲಿ ಬೇರೊಬ್ಬ ಪರಮಾತ್ಮನಿರುವನೆಂದು ಅಲ್ಲಿಗೆ ಹೋಗಬೇಕೆಂಬ ಅಪೇಕ್ಷಿಸುವದು ತರವಲ್ಲವೆಂದು ವಚನಕಾರನ ಭಾವವು.

ಅವನು ಅನ್ನುವದೇನೆಂನರೆ ಲಿಂಗವೆಂಬುದೊಂದು ಪಂಚಾಮೃತ ದಂತಿದೆ. ಇಂಥ ಪಂಚಾಮೃತವು ತನ್ನೆದುರಿಗೆ ಇರಲು ಅದನ್ನು ಉಣ್ಣು ವದನ್ನು ಬಿಟ್ಟುಕೊಟ್ಟು ಹಸಿದೆನೆಂದು ಭವಸಂಬಂಧಿಗಳಾದವರ ಮನೆಗೆ ಹೋಗಿ ಅವರ ಅನ್ನವನ್ನು ಅಪೇಕ್ಷಿಸುವದು ಎಂದಿಗಾದರೂ ಉಂಟೇ? ಅದೇ ಪ್ರಕಾರ ಲಿಂಗವಂತನಾದವನು ಪರಮಾತ್ಮನು ಬೇರೆ ಕಡೆಗೆ ಇರುವನೆಂದು ಭಾವಿಸಿ ಅತ್ತಿತ್ತ ಹರಿದಾಡುವುದು ಹುಚ್ಚುತನವೆಂದು ವಚನಕಾರನು ಅನ್ನುತ್ತಾನೆ.

ಅವನು ಪುನಃ ಅನ್ನುವದೇನೆಂದರೆ ಲಿಂಗವು ಕಣ್ಣು ಮುಂದಿದ್ದ ದ್ರವ್ಯದ ರಾಶಿಯಂತಿದೆ. ಇಂಥ ರಾಶಿಯು ತನ್ನ ಎದುರಿಗೆ ಬಿದ್ದಿರಲು ಅದನ್ನು ಭೋಗಿಸಲರಿಯದೆ ಬಡತನದಲ್ಲಿ ಕೊರಗುವದು ಅತ್ಯಂತ ಮೂರ್ಖತನವು.

ಆದರೆ ಲಿಂಗವಿಲ್ಲದವರು ತಾವು ಲಿಂಗವನ್ನು ಧ್ಯಾನಿಸಿ ಧ್ಯಾನಿಸಿ ಬದುಕಿದೆವೆನ್ನುತ್ತಾರೆ. ಆವರು ಹೀಗೆ ಧ್ಯಾನಿಸುವರೆಂದು ಅವರ ಆಚರ ಣೆಗಳನ್ನೇ ನಂಬಿ ಭಕ್ತನು ಆಚರಿಸುವದೆಂದರೆ ಅವನು ಲಿಂಗವನ್ನು ನಂಬಿದಂತಲ್ಲ. ಇದು ಸರಿಯಾದ ಮಾರ್ಗವಲ್ಲೆಂದು ವಚನಕಾರನ ಆಭಿ ಪ್ರಾಯವಿದೆ. ಇದು ಮುಂಗಯ್ಯಲ್ಲಿ ಕಂಕಣವಿರುತ್ತಿರಲು ಅದನ್ನು ಪ್ರತ್ಯಕ್ಷ ನೋಡುವದನ್ನು ಬಿಟ್ಟುಕೊಟ್ಟು ಆದನ್ನು ನೋಡಲು ಕನ್ನಡಿಯನ್ನು ಬಯಸಿ ದಂತೆಯೇ ಸರಿ ಎಂದು ಅನ್ನುತ್ತಾನೆ.

ಆದ್ದರಿಂದ ಅಂಗದ ಮೇಲೆ ಲಿಂಗವಿರಲು, ಪರಮಾತ್ಮನ ರೀತಿ ಹೇಗೆಂದು ಹೆರವರನ್ನು ಕೇಳುವ ಕಾರಣವಿಲ್ಲ. ಅವನನ್ನು ಹೀಗೆ ಹುಡು ಕಾಡಲೂ ಬೇರೆ ಕಡೆಗೆ ಹೋಗಬಾರದು. ಅಥವಾ ಪರಮಾತ್ಮನು ಕಾಣ ಲಿಲ್ಲೆಂದು ಮರುಗುವದೂ ಕಾರಣವಿಲ್ಲ. ಅಥವಾ ತಾನು ಮುಂದೆ ಪುನಃ ಹುಟ್ಟುವೆನೆಂದು ನೋಯುವದೂ ಅವಶ್ಯವಿಲ್ಲ.

ಈ ರೀತಿ ಲಿಂಗದಲ್ಲಿ ಸಂಪೂರ್ಣ ವಿಶ್ವಾಸಭಾವವಿರಬೇಕು. ಅಂದರೆ ಅದರ ನಿಜಸ್ಥಿತಿಯನ್ನು ಅರಿಯುವನು. ಹೀಗೆ ಅರಿತದ್ದಾದರೆ ಅವನು ತಾನೇ ಶಿವನಾಗುವನು. ಇದು ಸತ್ಯವೆಂದು ವಚನಕಾರನು ದೃಢವಾಗಿ



ಹೇಳುತ್ತಾನೆ. ಈ ಮಾತನ್ನು ಶಿವನು ಬಲ್ಲ, ಅವನು ಒಪ್ಪುವನು, ಶಿವನಾಣೆ ಎಂದು ವಚನಕಾರನು ವಿಶ್ವಾಸಪೂರ್ವಕವಾಗಿ ಹೇಳುತ್ತಾನೆ.

ಅಂದರೆ ಲಿಂಗವನ್ನು ಕುರಿತು ಮಾಡುವ ಕ್ರಿಯೆಗಳಲ್ಲಿ ಅತ್ಯಂತ ದೃಢವಿಶ್ವಾಸವಿರಬೇಕೆಂದು ವಚನಕಾರನ ಮುಖ್ಯ ಭಾವವಿದೆ. ಈ ಭಾವ ವನ್ನು ಇಟ್ಟುಕೊಂಡು ಮಾಡಿದ ಪ್ರಾರ್ಥನೆಗಳು ಸಫಲವಾಗುವವು.

**ವಚನಃ**— ೨೪. ನಾನು ಕಾಮಿಸುತ್ತಿರ್ಪ ಸಾಲೋಕ್ಯವಿದೆ; ಸಾ ಮಿಪ್ಯವಿದೆ; ಸಾರೂಪ್ಯವಿದೆ; ಸಾಯುಜ್ಯವಿದೆ; ಧರ್ಮವಿದೆ; ಅರ್ಥವಿದೆ; ಕಾಮವಿದೆ; ಮೋಕ್ಷವಿದೆ ನಾನೇನರಸುವ ಬಯಕೆ ಎಲ್ಲವೂ ಇದೆ ನೋಡಾ. ನಾನೇನನರಸುವೆ ಅರಿಕೆ ಎಲ್ಲವೂ ಇದೆ ನೋಡಾ. ಶ್ರೀಗುರು ಕಾರುಣ್ಯ ದಿಂದ ಮಹಾ ವಸ್ತು ಕರಸ್ಥಲಕ್ಕೆ ಬಂದ ಬಳಿಕ ಸರ್ವ ಸುಖಂಗಳೆಲ್ಲವೂ ಇದೆ ನೋಡಾ. ಇನ್ನೆನ್ನ ಬಯಲ ಭ್ರಮೆಯೊಳಗೆ ಹೊಗಿಸದಿರಯ್ಯಾ ನಿಮ್ಮ ಬೇಡಿಕೊಂಬೆನು, ನಿಮಗೆ ಎನ್ನಾಣೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

**ಭಾವಃ**— ವಚನಕಾರನು ಹಿಂದಿನ ವಚನಗಳ ಅಭಿಪ್ರಾಯಗಳನ್ನೇ ಪುನಃ ಈ ವಚನದಲ್ಲಿ ಬೇರೆ ರೀತಿಯಿಂದ ಹೇಳಿದ್ದಾನೆ. ಅವನು ಅನ್ನು ವದೇನಂದರೆ, ನಾನು ಇಚ್ಛಿಸುವಂಥ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಪದಗಳು ಈ ಇಷ್ಟಲಿಂಗದಲ್ಲಿಯೇ ಇವೆ. ಅರ್ಥ, ಕಾಮ, ಮೋಕ್ಷಗಳೂ ಕೂಡ ಇಲ್ಲಿಯೇ ಇವೆ. ನಾನು ಶೋಧಿಸುತ್ತಲಿರುವ ಜ್ಞಾನವೂ ಕೂಡ ಇಲ್ಲಿಯೇ ಇದೆ. ಯಾಕಂದರೆ ಶ್ರೀಗುರು ಕಾರುಣ್ಯ ದಿಂದ ಮಹತ್ತಾದ ಪರಮಾತ್ಮವಸ್ತುವು ಕರಸ್ಥಲಕ್ಕೆ ಬಂದಿದೆ. ಆದ್ದರಿಂದ ಜಗತ್ತಿನಲ್ಲಿಯ ಎಲ್ಲ ಸುಖಗಳೂ ಇದೇ ಇದೇ ಎಂದು ವಚನಕಾರನು ಒತ್ತಿ ಒತ್ತಿ ಹೇಳುತ್ತಾನೆ. ಆದ್ದರಿಂದ ಇಂಥ ಶ್ರೇಷ್ಠ ವಸ್ತುವನ್ನು ಅವಿ ಶ್ವಾಸಿಸಿ ಬಯಲಭ್ರಮೆಯೊಳಗೆ ಹೊಗಿಸಬೇಡೆಂದು ವಚನಕಾರನು ಪ್ರಾರ್ಥಿಸುತ್ತಾನೆ. ಮತ್ತು ಇದಕ್ಕೋಸ್ಕರ ಪ್ರತಿಜ್ಞೆ ಮಾಡುವೆನೆಂತಲೂ ಪರಮಾತ್ಮನನ್ನು ಕುರಿತು ಹೇಳಿಕೊಳ್ಳುತ್ತಾನೆ.

**ವಚನ:**— ೨೫ ಕಾಮಿಸುವ ವಸ್ತುವು ಕರಸ್ಥಲಕ್ಕೆ ಬಂದ ಬಳಿಕ ಕಾಮಿಸಲೇನುಂಟು ಹೇಳಾ! ಇನ್ನು ನಾನೇನಕಾಮಿಸುವೆನಯ್ಯಾ! ಅದೆಂತೆಂದಡೆ ॥ಶ್ರುತಿ॥ ಓಂ ನಮೋ ಹಿರಣ್ಯ ಬಾಹವೆ। ಹಿರಣ್ಯವರ್ಣಾಯ, ಹಿರಣ್ಯ ರೂಪಾಯ, ಹಿರಣ್ಯಪತಯೆ ಎಂಬ ವಸ್ತು ಓಂ ಯೋ ವೈ

ರುದ್ರಪ್ರಷ್ಟ ಭವವಾನೆ ಪಂಚಾಮೃತಂ ಎಂಬ ವಸ್ತು ಸುಖಸ್ವರೂಪನು, ಶಾಂತನು, ಕರುಣಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ಲಿಂಗವೇ, ನೀವೆನ್ನ ಕರಸ್ಥಲಕ್ಕೆ ಬಂದ ಬಳಿಕ ನಾನಿನ್ನೇನ ಕಾಮಿಸುವೆನಯ್ಯಾ?

**ಭಾವಃ**— ವಚನಕಾರನು ಅನ್ನುವದೇನಂದರೆ, ನಾನು ಇಚ್ಛಿಸುವ ವಸ್ತುವು ಕರಸ್ಥಲಕ್ಕೆ ಬಂದ ಬಳಿಕ ಇಚ್ಛಿಸತಕ್ಕ ಬೇರೊಂದು ವಸ್ತುವು ಏನಿರುವದು? ನಾನು ಏನು ಇಚ್ಛಿಸಲಿ? ಎಂದು ಅಂದು ಅದಕ್ಕೋಸ್ಕರ ಒಂದು ಶೃತಿಯನ್ನು ಉದಹರಿಸಿರುವನು. ಈ ಶೃತಿಯಲ್ಲಿ ಪರಮಾತ್ಮನ ಸ್ವರೂಪು ವರ್ಣಿಸಲ್ಪಟ್ಟಿದೆ. ಇಂಥ ಪರಮಾತ್ಮನು ಸುಖಸ್ವರೂಪನು, ವರದ ಹಸ್ತನು, ಶಾಂತನು, ಕರುಣಿಯು ಆಗಿದ್ದು ಅವನು ಕರಸ್ಥಲಕ್ಕೆ ಬಂದ ಬಳಿಕ, ನಾನು ಏನು ಕಾಮಿಸಲಿ ಎಂದು ಹೇಳಿಕೊಳ್ಳುತ್ತಾನೆ.

**ವಚನ:**— ೨೬. ಜಾತಿವೇದಿಯಲ್ಲಿ ಶೋಧಿಸಿ, ಪುಟವಿಟ್ಟ ಬೂದಿಯಂತಾದೆನಯ್ಯಾ ನಿಮ್ಮನಾರಾಧಿಸಿ! ಅದೆಂತೆಂದೊಡೆ ॥ ಶ್ಲೋ॥ ಜ್ಞಾನಾಗ್ನಿಸ್ಸರ್ವ ಕರ್ಮಾಣಿ ಭಸ್ಮಸಾತ್ಕುರುತೆ ಯಥಾ ಎಂದುದಾಗಿ, ಕಾದ ಲೋಹದ ಮೇಲೆ ಉದಕವನೆರೆದಂತಾದೆನಯ್ಯಾ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

**ಭಾವಃ**— ಒಂದು ಧಾತವನ್ನು ಅಗ್ನಿಯಲ್ಲಿ ಶೋಧಿಸಿ ಪುಟವಿಡಲು ಹೇಗೆ ಅದರ ಕಶ್ಮಲವು ಹೊರಟು ಹೋಗಿ ಅದರ ಸಾರವು ಮಾತ್ರ ಉಳಿದು ಭಸ್ಮವಾಗುವದೋ ಹಾಗೆಯೇ ಮನುಷ್ಯನು ಭಕ್ತಿಭಾವದಿಂದ ಪರಮಾತ್ಮನನ್ನು ಆರಾಧಿಸಿದಲ್ಲಿ ಅವನಲ್ಲಿಯ ಮಾಲಿನ್ಯತೆಯು ಹೊರಟು ಹೋಗಿ ಶುದ್ಧವಾಗುವನೆಂದು ವಚನಕಾರನು ಇಲ್ಲಿ ಹೇಳುತ್ತಾನೆ. ಇದಕ್ಕೋಸ್ಕರ ಅವನು ಒಂದು ಶ್ಲೋಕದ ಆಧಾರವನ್ನು ಕೊಟ್ಟಿದ್ದು ಅದರಲ್ಲಿ ಜ್ಞಾನಾಗ್ನಿಯು ಕರ್ಮಗಳನ್ನು ಸುಟ್ಟು ಭಸ್ಮಮಾಡುತ್ತಿದೆ ಎಂದು ಹೇಳಿದೆ. ಹ್ಯಾಗೆ ಕಾದ ಕಬ್ಬಿಣದ ಮೇಲೆ ನೀರನ್ನು ಎರಚಿದರೆ ಆ ನೀರು ಕಬ್ಬಿಣವನ್ನು ಏನೂ ತೊಡೆಯದೆ ಅದೇ ಸುಟ್ಟುಹೋಗಿ ಕಬ್ಬಿಣದ ಸ್ವರೂಪವು ಚಕಿಚಕಿತವಾಗಿ ಹೊಳೆಯುತ್ತದೆಯೋ ಅದರಂತೆಯೇ ಭಕ್ತಿಭಾವವುಳ್ಳ ಮನುಷ್ಯನನ್ನು ಯಾವ ತರದ ಕರ್ಮಗಳು ತಾಕಲಾರವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.



**ವಚನಃ**— ೨೭. ಜನಿತವಿಲ್ಲದೆ ಜನಿಸಿ ಸ್ವಯವಾದ ಹರನೇ ನೀನು ನಿರೂಪನೇ? ಜನಿಸಿ ಜನಿತವ ಬಗೆಯರಾಗಿ ಎಮ್ಮ ಪುರಾತನರೇ ನಿರೂಪರು. ಕುಲದಲ್ಲಿ ಹುಟ್ಟಿ ಕುಲವ ಬೆರಸರಾಗಿ ಆದಿ ಲಿಂಗ ಅನಾದಿ ಶರಣ. ಹೆಸರಿಲ್ಲದ ದೆಸೆಗೇಡಿ ಲಿಂಗವ ವಶಕ್ಕೆ ತಂದು ಹೆಸರಿಟ್ಟು ಕರೆದಡೆ ನೀನು ಸುಲಭನೆ? ಅಲ್ಲ. ನೀನು ಕುಲಗೇಡಿ, ನಿನ್ನನಾರುಬಲ್ಲರು? ನೀನಗೋಚರ. ಹರನೇ ಬೇಡಿದತ್ತ ಕೊಟ್ಟು ನೀ ಬಂದರೆ ನಿನ್ನನಾಗು ಮಾಡಿದರಲ್ಲದೆ ಎಮ್ಮ ಪುರಾತನರು ನಿಮ್ಮಲ್ಲಿಗೆ ಬಂದು ದೈನ್ಯಬಟ್ಟು ಬೇಡಿದರಿಲ್ಲೈ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ**— ವಚನಕಾರನು ಇದರಲ್ಲಿ ಒಂದು ಬಗೆಯ ವ್ಯಂಗ್ಯ ರೀತಿಯಿಂದ ಭಕ್ತನೇ ಪರಮಾತ್ಮನಿಗಿಂತಲೂ ಶ್ರೇಷ್ಠನು ಎಂದು ಹೇಳಿ ಭಕ್ತನ ಮಹತ್ವವನ್ನು ವರ್ಣಿಸಿರುವನು. ಪರಮಾತ್ಮನಿಗೆ ಹುಟ್ಟು ಇಲ್ಲದ್ದರಿಂದ ಅವನು ಸ್ವಯಂಭೂ ಎಂದು ಜನರು ಹೇಳುವದುಂಟು. ಆದರೆ ಇದರಲ್ಲಿ ಆವ ಮಹತ್ವವಿಲ್ಲೆಂದು ವಚನಕಾರನ ಭಾವವು. ಯಾಕಂದರೆ ನಮ್ಮ ಪುರಾತನರು ಹುಟ್ಟಿಯೂ ಕೂಡ ಹುಟ್ಟದವರಂತೆ ವ್ಯವಹರಿಸುತ್ತಾರೆ. ಅವರ ವರ್ತನೆಯು ಹೀಗೆ ಉಚ್ಚತರದ್ದಿರುತ್ತದೆ. ಆದ್ದರಿಂದ ಇವರೇ ರೂಪರಹಿತರು, ಸ್ವಯಂಭೂಗಳೆಂದು ವಚನಕಾರನು ಇಲ್ಲಿ ಹೇಳುತ್ತಾನೆ. ಆದಿ ಲಿಂಗ ಅನಾದಿ ಶರಣ ಎಂದು ಜನರು ನುಡಿಯುತ್ತಾರೆ. ಇದಾದರೂ ನಿಜವು. ಯಾಕಂದರೆ ಶರಣರು ಕುಲದಲ್ಲಿ ಹುಟ್ಟಿಯೂ ಕೂಡ ಕುಲವನ್ನು ಬೆರಿಸುವದಿಲ್ಲ. ಆದ್ದರಿಂದ ಅವರು ಅನಾದಿಗಳು. ಇವರ ಮಹತ್ವವು ಹೆಚ್ಚು. ಲಿಂಗವು ಹುಟ್ಟಿಲ್ಲದ್ದು. ಆದ್ದರಿಂದ ಅದು ದೆಸಿಗೇಡಿಯು. ಇಂಥ ಲಿಂಗವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದಕ್ಕೆ ಒಂದು ಹೆಸರಿಟ್ಟು ಕರೆದರೆ ಏನೂ ಪ್ರಯೋಜನವಿಲ್ಲ. ಯಾಕಂದರೆ ಕುಲವಿಲ್ಲದಂಥಾದ್ದನ್ನು ಅದು ಎಲ್ಲಿಯದು, ಯಾರದು ಎಂಬುದನ್ನು ತಿಳಿಯಲಿಕ್ಕೆ ಶಕ್ಯವಿಲ್ಲ. ಶರಣರ ಮಹತ್ವವು ಎಷ್ಟೆಂದರೆ ಅವರು ಕರೆದ ಕೂಡಲೆ ಪರಮಾತ್ಮನು ಅವರಿಗೆ ಕಾಣಿಸಿಕೊಳ್ಳುವನು. ಮತ್ತು ಬೇಡಿದ್ದನ್ನು ಕೊಡುವನು. ಹೀಗೆ ಅವನು ಶರಣರಿಗೆ ಕೊಟ್ಟರೆ ಮಾತ್ರ ಶರಣರು ಅವನನ್ನು ಪ್ರೀತಿಸುವರು. ಪುರಾತನರು ಬೇಡಿದ ಕೂಡಲೆ ಪರಮಾತ್ಮನು ಅವರಿದ್ದಲ್ಲಿಗೆ ಹೋಗಿ ದೈನ್ಯದಿಂದ ಅವರಿಗೆ ಕೊಟ್ಟು ಬರು

ಕ್ರಮಾಂಕ
ಶಿವಬಸವ ನಗರ
ಬೆಳಗಾವಿ.೧೦

ವನು. ಭಕ್ತರ ಮಹತ್ವವು ಇಷ್ಟು ಹೆಚ್ಚಿದೆ. ಭಕ್ತಿಯ ಮಹತ್ವವನ್ನು ವಚನಕಾರನು ಇಲ್ಲಿ ಒಂದು ರೀತಿಯಿಂದ ವರ್ಣಿಸಿರುವನು.

**ವಚನಃ**— ೨೮. ನಾನಾ ಪ್ರಯತ್ನದಿಂದ ಹೊನ್ನನಾರ್ಜಿಸುವಂತೆ, ನಾನಾ ಪ್ರಯತ್ನದಿಂದ ಹೊನ್ನ ಸುರಕ್ಷಿತವ ಮಾಡುವಂತೆ, ನಾನಾ ಪ್ರಯತ್ನದಿಂದ ಬೇಡಿದವರಿಗೆ ಕೊಡದೆ ಲೋಭವ ಮಾಡಿ ಸ್ನೇಹಿಸುವಂತೆ, ನಾನಾ ವಿಧದಿಂದ ವಿಚಾರಿಸಿ ವಿಚಾರಿಸಲು ಪ್ರಾಣವೇ ಹೊನ್ನೆಂಬಂತೆ, ನಾನಾ ಪರಿಯಲು ಮನ ಬುದ್ಧಿ ಚಿತ್ತಹಂಕಾರಂಗಳು ಪಂಚೇಂದ್ರಿಯಂಗಳು ಪ್ರಾಣವನು ಅವಗ್ರಹಿಸಿಕೊಂಡಿಪ್ಪಂತೆ, ಶಿವಲಿಂಗವನು ಅವಗ್ರಹಿಸಿಕೊಂಡಿರಬೇಕು. ಯಾಕೆ? ಆ ಹೊನ್ನೇ ಶಿವನಾದ ಕಾರಣ. ಓಂ ನಮೋ ಹಿರಣ್ಯ ಬಾಹವೆ, ಹಿರಣ್ಯವರ್ಣಾಯ, ಹಿರಣ್ಯರೂಪಾಯ, ಹಿರಣ್ಯಪರಾಯನಮಃ ಎಂದುದಾಗಿ ಶಿವನೇ ಹೊನ್ನು ಕಾಣಿರೋ. ಶಿವಶಿವಾ ನಾನಾ ಪ್ರಯತ್ನದಿಂದ ಕುಲವುಳ್ಳವರು ಅತ್ಯಂತ ಯವ್ವನೆಯುಪ್ಪ ಹೆಣ್ಣಿಂಗೆ ಪ್ರಾಣಕ್ಕೆ ಪ್ರಾಣವಪ್ಪಂತೆ ಆ ಹೆಣ್ಣಿಂಗೆ ಅಂತಃಕರಣ ಚತುಷ್ಟಯಂಗಳ ಸ್ನೇಹಿಸುವಂತೆ ಆ ಹೆಣ್ಣು ಪ್ರಾಣವಾಗಿಪ್ಪಂತೆ, ಆ ಲಿಂಗವೇ ಪ್ರಾಣವಾಗಿರಬೇಕು. ಅದಕ್ಕೆ ಹೆಣ್ಣೇ ಶಿವನಾದ ಕಾರಣ ಶಕ್ತ್ಯಾಧಾರ ಮಹಾದೇವೋಶಕ್ತಿನಾತ್ಮೇನ ವೈ ನಮಃ। ಶಕ್ತಿಕರ್ಮಸ್ಯ ಕರ್ತಾಚ ಮುಕ್ತಾ ಶಕ್ತಿ ನಮೋ ನಮಃ ಎಂದುದಾಗಿ, ಆ ಹೆಣ್ಣು ತಾನೇ ಶಿವನು ಕಾಣಿರೋ. ನಾನಾ ಪ್ರಯತ್ನದಿಂದ ಮಣ್ಣನಾರ್ಜಿಸುವಂತೆ ಆ ಭೂಮಿಯು ಆಗುಚಾಗಿಗೆ ಅರ್ಥಪ್ರಾಣಾಭಿಮಾನವಸಿಕ್ಕಿ ಆ ಭೂಮಿಯ ರಕ್ಷಿಸಿ ಆ ಭೂಮಿಯನೆ ಸರ್ವಭೋಗೋಪಭೋಗಂಗಳನು ಭೋಗಿಸಿ ಸುಖಿಸುವಂತೆ ಶಿವಲಿಂಗದಿಂದ ಭೋಗಿಸಬೇಕು. ಅದೇಕೆಂದರೆ ಆ ಭೂಮಿಯೇ ಶಿವನಾದ ಕಾರಣ. ಓಂ ಯಜ್ಞ ರುದ್ರಸ್ಯ ಚಿತ್ಪೃಥ್ವಿ ಭೂರ್ಭುವಸ್ವಸಹೆ ನಮೋ ನಮಃ ಶಿವಂ ಜನಯಂತಿ ಶಿವೋ ಶಿವಃ ಎಂದುದಾಗಿ ಭೂಮಿಯೇ ಶಿವನು ಕಾಣಿರೋ. ಸರ್ವಾಧಾರ ಮಹಾದೇವ, ಇದು ಕಾರಣ ಹೊನ್ನು ಹೆಣ್ಣು ಮಣ್ಣು ತ್ರಿವಿಧವು ಶಿವನು ಕಾಣಿರೋ. ಈ ತ್ರಿವಿಧದ ಮರೆಯಲ್ಲಿ ಶಿವನಿಪ್ಪನು ಕಾಣಿರೋ. ಇದು ಕಾರಣ ಶಿವಲಿಂಗಕ್ಕೆ ಈ ತ್ರಿವಿಧಕ್ಕೆ ಮಾಡುವ ಸ್ನೇಹ ಇಂತೀ ತ್ರಿವಿಧದಲ್ಲಿ ಮಾಡುವ ಲೋಭ ಇಂತೀ ತ್ರಿವಿಧಕ್ಕೆ ಮಾಡುವ ತಾತ್ಪರ್ಯವ ಲಿಂಗಕ್ಕೆ ಮಾಡಿಪಡೆ ಶಿವನಲ್ಲಿ ಸಾಯುಜ್ಯನಾಗಿ ಸರ್ವಭೋಗೋಪಭೋಗವ ಭೋಗಿಸಿ ಪರಮ ಪರಿಣಾಮ ಸುಖಸ್ವರೂಪನಾಗಿಪ್ಪನಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.



**ಭಾವಃ**— ಜನರು ಹೊನ್ನು, ಹೆಣ್ಣು, ಮಣ್ಣು ಇವುಗಳ ಮೇಲೆ ಅತ್ಯಂತ ಪ್ರೀತಿಯನ್ನು ಹೊಂದಿ ಅವುಗಳನ್ನು ರಕ್ಷಿಸುತ್ತಾರೆ. ಅವು ತಮ್ಮ ಪ್ರಾಣಪೆಂತಲೇ ಭಾವಿಸುತ್ತಾರೆ. ಹೊನ್ನಿಗೆ ಹಿರಣ್ಯ, ಹೆಣ್ಣಿಗೆ ಶಕ್ತಿ, ಮಣ್ಣು ಭೂಮಿ ಎಂದು ತಿಳಿದು ಈ ವಸ್ತುಗಳು ಪರಮಾತ್ಮ ಸ್ವರೂಪ ಎಂಬ ಭಾವದ ಶಾಸ್ತ್ರಕಾರರ ಅನೇಕ ಉಕ್ತಿಗಳುಂಟು. ಅವುಗಳನ್ನು ವಚನಕಾರನು ಇಲ್ಲಿ ಉದಹರಿಸಿದ್ದಾನೆ. ಯಾವ ವಿಧವಾದ ಸ್ನೇಹವನ್ನು ಈ ವಸ್ತುಗಳಿಗೆ ನೀವು ತೋರಿಸುವಿರೋ ಅದೇ ರೀತಿಯಾಗಿ ಲಿಂಗಕ್ಕೂ ತೋರಿಸಬೇಕೆಂದು ವಚನಕಾರನ ಮುಖ್ಯ ಅಭಿಪ್ರಾಯವಿದೆ.

---

## ಲಿಂಗಪೂಜೆ.

**ವಿವರಣೆಃ**— ಅರ್ಚನೆ ಪೂಜೆಗಳನ್ನು ಸಾಕಾರವಿಡಿದು ಮಾಡಬೇಕು. ಕೇವಲ ನಿರಾಕಾರವನ್ನು ನಂಬಲಾಗದು. ಯಾಕಂದರೆ ನಿರಾಕಾರದಿಂದ ಮನಸ್ಸು ದೃಢಪಡುವದಿಲ್ಲ. ಅದು ಚಂಚಲವೃತ್ತಿಯನ್ನು ಹೊಂದುತ್ತದೆ. ಸಾಕಾರದಿಂದಲೇ ನಿರಾಕಾರವನ್ನು ಹೊಂದಬೇಕೆಂಬ ತತ್ವವಿದೆ.

ಲಿಂಗದಲ್ಲಿ ಸಾಕಾರ ನಿರಾಕಾರಗಳೆರಡೂ ಸಂಬಂಧಪಟ್ಟಿರುವದರಿಂದ ಇದರಲ್ಲಿ ಸಾಕಾರದಿಂದ ನಿರಾಕಾರವನ್ನು ಅರಿಯಬಹುದಾಗಿದೆ. ಆದರೆ ಲಿಂಗವು ಅವೆರಡನ್ನೂ ಮೀರಿರುವದು. ಈ ವಿಷಯಗಳನ್ನು ಭಕ್ತನು ಅರಿತು ಲಿಂಗಪೂಜೆಯನ್ನು ಮಾಡಬೇಕು.

ಅವನು ಒಳಹೊರಗೆಂಬ ಭಾವವನ್ನು ಮರೆತು ಆಚರಿಸಬೇಕು. ಇದರಿಂದ ಅದು ಅವನಿಗೆ ಸಹಜ ಸ್ವಭಾವವಾಗುವದು. ಇಂಥ ಸ್ಥಿತಿಯಲ್ಲಿ ಅವನ ಇಂದ್ರಿಯಗಳೆಲ್ಲವೂ ಲಿಂಗೇಂದ್ರಿಯಗಳಾಗುವವು. ಅವನ ಚಕ್ಷು, ಮನ, ಪ್ರಾಣ ಮುಂತಾದವುಗಳಲ್ಲೆಲ್ಲ ಪರಮಾತ್ಮನ ಕಳೆಯೇ ತುಂಬಿಕೊಳ್ಳುವದು. ನೆನೆಯುವವ ಮತ್ತು ನೆನಹು ಇವೆರಡೂ ಅಳಿದು ಹೋಗುವವು. ಮತ್ತು ಲಿಂಗ ಪರವಶವಾಗಿ ವರ್ತಿಸಹತ್ತುವನು. ಹೀಗೆ ಭಕ್ತನ ಅಂತರಂಗ ಬಹಿರಂಗಗಳಲ್ಲಿ ಲಿಂಗವೇ ತುಂಬಿಕೊಳ್ಳುವದು.

ಇಂಥವನ ಪೂಜಾಕ್ರಿಯೆಗಳಲ್ಲಿ ಆಹ್ವಾನ ವಿಸರ್ಜನೆಗಳಿರಲಾರವು.
ಹೀಗೆ ಲಿಂಗದೊಡನೆ ವ್ಯವಹರಿಸುವವನು ಬಾಹ್ಯ ಕ್ರಿಯೆಗಳನ್ನು ಮಾಡುತ್ತಿದ್ದರೂ ಅವು ಬರೀ ಉಪಚಾರವು. ಶರಣನ ಲಿಂಗಪೂಜಾ ವಿಧಾನವು ಈ ರೀತಿಯದಾಗಿದೆ.

**ವಚನಃ**— ೨೯. ಸಾಕಾರವಿಡಿದರ್ಚನೆ ಪೂಜನೆಯ ಮಾಡುವುದಲ್ಲದೆ, ನಿರಾಕಾರವ ನಂಬಲಾಗದು. ಶ್ರೀ ಗುರುಲಿಂಗವು ಪ್ರಾಣಲಿಂಗವನು ಕರಸ್ಥಲದಲ್ಲಿ ಬಿಜಯಂಗೈಸಿ ಕರುಣಿಸಿದ ಬಳಿಕ, ವಜ್ರದಲ್ಲಿ ಬಯಲನರಸುವರೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ?



**ಭಾವಃ**— ಭಕ್ತಿಯು ದೃಢಪಡಲಿಕ್ಕೆ ಅರ್ಚನೆ ಪೂಜೆಯು ಅವಶ್ಯವಾದುದು. ಅರ್ಚನೆ ಪೂಜೆಯನ್ನು ಸಾಕಾರವಿಲ್ಲದೆ ಮಾಡಲಿಕ್ಕೆ ಬರಲಾರದು ನಿರಾಕಾರ ಪೂಜೆಯನ್ನು ನಂಬಲಾಗದೆಂದು ವಚನಕಾರನ ಅಭಿಪ್ರಾಯವಿದೆ. ಆದರೆ ಕರಸ್ಥಲದಲ್ಲಿಯ ಇಷ್ಟಲಿಂಗವು ಗುರುವು ಕೊಟ್ಟ ಪ್ರಾಣಲಿಂಗವೆಂಬ ಭಾವವಿರುವದರಿಂದ ಈ ಇಷ್ಟಲಿಂಗದಿಂದಲೇ ಪ್ರಾಣಲಿಂಗವನ್ನು ಸಾಧ್ಯಮಾಡಿಕೊಳ್ಳಬೇಕು. ಇಷ್ಟಲಿಂಗದಲ್ಲಿ ಪ್ರಾಣಲಿಂಗವು ಇರಲಾರದೆಂದು ಭಾವಿಸಕೂಡದು. ಹೀಗೆ ಭಾವಿಸುವದೆಂದರೆ ಅತ್ಯಂತ ಗಟ್ಟಿಯಾದ ವಜ್ರದಲ್ಲಿ ಬಯಲನ್ನು ಹುಡುಕುವಂತೆಯೇ ಸರಿ ಎಂದು ವಚನಕಾರನು ಇಲ್ಲಿ ಅನ್ನುತ್ತಾನೆ.

**ವಚನಃ**— **೩೦.** ಸಕಲವ ಪೂಜಿಸಿಹೆನೆಂಬ ಪೂಜಕಂಗೆ ಸಕಲವನು ಲಿಂಗದಲ್ಲಿಯೇ ಪೂಜಿಸುವುದು. ನಿಷ್ಕಲವ ಪೂಜಿಸಿಹೆನೆಂಬ ಪೂಜಕಂಗೆ ನಿಷ್ಕಲವನೂ ಲಿಂಗದಲ್ಲಿಯೇ ಪೂಜಿಸುವುದು. ಅದೆಂತೆಂದೊಡೆ ಸಕಲ ನಿಃಕಲಾತ್ಮಕ ಸಕಲನಿಃಕಲಾತೀತ ಅಂಗಬಾಹ್ಯಾತ್ಪರಂನಾಸ್ತಿ । ಲಿಂಗಪೂಜ್ಯ ಮೇವಚ । ಸರ್ವದಾ ಪೂಜಿಸುವರೆಂಬ ಕಾರಣದಿಂದ ಲಿಂಗಾರ್ಚನೆಯಿಂದ ಪರ ಒಂದೂ ಇಲ್ಲೆಂದುದಾಗಿ ಒಳಹೊರಗೆಂಬ ಭಾವವಳಿದುಳಿದ ಶರಣನ ಅಂತರಂಗ ಬಹಿರಂಗದಲ್ಲಿ ಭರಿತನು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಪರಂಜ್ಯೋತಿರ್ಲಿಂಗ ಶರಣನ ಅಂತರಂಗ ಬಹಿರಂಗ ಸಂಗಿಯಾಗಿ.

**ಭಾವಃ**— ಸಾಕಾರ ಪೂಜೆಯನ್ನು ಬಯಸುವವನು ಅದನ್ನು ಇಷ್ಟಲಿಂಗದಲ್ಲಿಯೇ ಮಾಡಬೇಕು. ನಿಷ್ಕಳವನ್ನು ಎಂದರೆ ನಿರಾಕಾರವನ್ನು ಪೂಜಿಸಬೇಕೆಂಬುವವನು ಕೂಡ ಆ ಇಷ್ಟಲಿಂಗದಲ್ಲಿಯೇ ಅದನ್ನು ಮಾಡಬೇಕು. ಯಾಕಂದರೆ ಸಾಕಾರವಾದ ಇಷ್ಟಲಿಂಗದಿಂದ ನಿರಾಕಾರ ಪ್ರಾಣಲಿಂಗವು ಸಾಧ್ಯವಾಗುವದೆಂನು ಆಗಮವಾಕ್ಯವಿದೆ. ವಚನಕಾರನು ಈ ವಾಕ್ಯವನ್ನು ಇಲ್ಲಿ ಉದಹರಿಸಿದ್ದಾನೆ. ಲಿಂಗವು ಸಕಲವೂ ನಿಃಕಲವೂ ಸಕಲ ನಿಃಕಲಾತೀತವೂ ಇದ್ದು ಅದನ್ನು ಹೊರ್ತು ಪಡಿಸಿ ಯಾವದೂ ಇರಲಾರದು. ಅದು ಪೂಜ್ಯ ವಸ್ತುವು ಎಂದು ಈ ಆಧಾರ ವಾಕ್ಯದಲ್ಲಿ ಹೇಳಲ್ಪಟ್ಟಿದೆ. ಇಂಥ ಲಿಂಗವನ್ನು ಪೂಜಿಸಿದಲ್ಲಿ ಅದು ವ್ಯರ್ಥ ಹೋಗಲಾರದು. ಆದರಲ್ಲಿ ಇದು ಒಳಗು ಇದು ಹೊರಗು ಇದು ಆಕಾರವುಳ್ಳದ್ದು ಇದು ನಿರಾಕಾರವುಳ್ಳದ್ದು ಎಂಬ ಭೇದಭಾವವಿಲ್ಲ. ಲಿಂಗವು

ಮನುಷ್ಯನ ಅಂತರಂಗದಲ್ಲಿ ಬಹಿರಂಗದಲ್ಲಿ ತುಂಬಿಕೊಂಡಿರುತ್ತದೆ. ಅದು ಯಾವಾಗಲೂ ಅವುಗಳಲ್ಲಿ ಪ್ರಕಾಶಿಸುತ್ತಲಿರುತ್ತದೆ.

**ವಚನ:**— ೩೧. ಅಮೃತಕ್ಕೆ ಹಸಿವುಂಟೆ? ಜಲಕ್ಕೆ ತೃಷೆಯುಂಟೆ? ಘನಪುರುಷಂಗೆ ವಿಷಯವುಂಟೆ? ಸದ್ಗುರು ಕಾರುಣ್ಯವಂ ಪಡೆದು ಲಿಂಗಾರ್ಚನೆಯ ಮಾಡುವ ಮಹಾ ಶರಣಂಗೆ ಮುಕ್ತಿಯ ಬಯಕೆಯುಂಟೆ? ಅವರುಗಳಿಗೆ ಅದು ಸ್ವಯಂಭು ಸಹಜ ಸ್ವಭಾವ. ಇನ್ನು ತೃಪ್ತಿ ಆಪ್ಯಾಯನ ಆರಸಲುಂಟೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾವ:**— ಲಿಂಗಪೂಜೆಯನ್ನು ಯಾವ ವಿಧವಾಗಿ ಮಾಡಬೇಕೆಂಬುದನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಈ ಪೂಜೆಯನ್ನು ಮಾಡುವಲ್ಲಿ ಯಾವ ಬಗೆಯ ಫಲಪದವನ್ನು ಅಪೇಕ್ಷಿಸದೆ ಅವನು ಮಾಡಬೇಕು. ಲಿಂಗಪೂಜಕನು ಮೋಕ್ಷಾಪೇಕ್ಷೆಯನ್ನು ಸಹ ಹೊಂದಕೂಡದು. ಲಿಂಗದಲ್ಲಿದ್ದುಕೊಂಡು ಅದರಲ್ಲಿಯೇ ಜೀವಿಸುವವನಿಗೆ ಅದನ್ನು ಹೊಂದಬೇಕೆಂಬ ಇಚ್ಛೆಯು ಹ್ಯಾಗೆ ಉತ್ಪನ್ನವಾಗುವದು? ಉತ್ಪನ್ನವಾಗಲಾರದೆಂದು ವಚನಕಾರನ ಭಾವವು. ಹ್ಯಾಗೆ ಅಮೃತಕ್ಕೆ ಹಸಿವು ಜಲಕ್ಕೆ ತೃಷೆಯು ಮಹಿಮಾಪುರುಷನಿಗೆ ಸುಖೋಪಭೋಗದ ಲಾಲಸೆಯು ಅಶಕ್ಯವೋ ಹಾಗೆ ಲಿಂಗವಂತನು ಲಿಂಗದಲ್ಲಿದ್ದುಕೊಂಡು ಲಿಂಗಪೂಜೆಯನ್ನು ಮಾಡುವವನಾದ್ದರಿಂದ ಲಿಂಗದಲ್ಲಿ ತಾನು ಬಯಲಾಗುವೆನೆಂಬ ಇಚ್ಛೆಯೂ ಸಹ ಉಳಿಯಲಾರದು. ಆ ಇಚ್ಛೆಯು ಅವನಲ್ಲಿ ಸ್ವಯಂಭೂ ಸಹಜ ಸ್ವಭಾವವಾಗಿರುತ್ತದೆ.

**ವಚನ:**— ೩೨. ಅಂಗಯ್ಯ ಲಿಂಗವ ಕಂಗಳಿಂ ನೋಡಿ ಮನ ಹಾರೈಸಿದಲ್ಲಿ ಅಂಗೇಂದ್ರಿಯಂಗಳೆಲ್ಲವು ಲಿಂಗೇಂದ್ರಿಯಂಗಳಾದವು. ಇನ್ನು ನೀನಂಜದಿರು ಮನವೇ ಲಿಂಗವು ನಿನಗೆ ದೂರವೆಂದು. ಮನೋಮಧ್ಯದೊಳಿಪ್ಪನು. ಅಂಗದ ಕಂಗಳಲ್ಲಿಪ್ಪನು. ಪ್ರಾಣದ ಭಾವದಲ್ಲಿಪ್ಪನು. ಅಂಗಪ್ರಾಣಭಾವ ಸರ್ವಾಂಗಲಿಂಗವಾದ ಬಳಿಕ, ಲಿಂಗಮಧ್ಯೇ ಪ್ರಾಣವಾಯಿತ್ತು, ಪ್ರಾಣಮಧ್ಯೇ ಲಿಂಗವಾಯಿತ್ತು, ಎಲೆ ಮನವೇ. ಇನ್ನು ಉತ್ಪತ್ತಿಸ್ಥಿತಿಲಯವಿಲ್ಲಾಗಿ, ಲಿಂಗದಿಂ ಜನಿಸಿ ಲಿಂಗೇಂದ್ರಿಯ ಲಿಂಗ ಜ್ಞಾನದಲ್ಲಿ ವರ್ತಿಸಿ, ದ್ವೈತಾದ್ವೈತವಿಲ್ಲಾಗಿ ಬಂದುದೇ ಲಿಂಗದ ಲೀಲೆ, ಇದ್ದುದೇ ಲಿಂಗದಾನಂದ, ಮನೋಲಯವೇ ಲಿಂಗದ ನಿರವಯವು. ಇದು ಸತ್ಯ ಶಿವ ಬಲ್ಲ ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.



**ಭಾವ:**— ಲಿಂಗಪೂಜೆಯನ್ನು ಯಾವ ಭಾವದಿಂದ ಮಾಡಬೇಕೆಂಬುದನ್ನು ವಚನಕಾರನು ಹಿಂದಿನ ವಚನದಲ್ಲಿ ಹೇಳಿ ಈ ವಚನದಲ್ಲಿ ಆ ಬಗೆಯ ಭಾವವುಳ್ಳವನು ಯಾವ ರೀತಿಯಾಗಿ ಜಗತ್ತಿನಲ್ಲಿ ವ್ಯವಹರಿಸಬೇಕು ಎಂಬದನ್ನು ಹೇಳಿರುವನು. ಇಷ್ಟಲಿಂಗವನ್ನು ಏಕಾಗ್ರ ಮನಸ್ಸಿನಿಂದ ಭಾವಪೂರಿತನಾಗಿ ದೃಷ್ಟಿ ಇಟ್ಟು ನೋಡಿದ ಕೂಡಲೇ ಆ ಲಿಂಗವು ಅವನ ಮನಸ್ಸನ್ನು ಆವರಿಸುವದು. ಆವರಿಸಿದ ಆ ಮನದ ಮುಖಾಂತರವಾಗಿ ಅದು ಅವನ ಹೃದಯದಲ್ಲಿ ಮೂಡುವದು. ಆಗ ಅವನ ಇಂದ್ರಿಯಗಳೆಲ್ಲವು ಲಿಂಗೇಂದ್ರಿಯಗಳಾಗುವವು. ಅಂದರೆ ಅವನ ಇಂದ್ರಿಯಗಳೆಲ್ಲೆಲ್ಲ ಪರಮಾತ್ಮ ಕಳೆಯು ಚಲಿಸಹತ್ತುವದು. ಆಗ ಮನುಷ್ಯನು ಹೊರಗಿನ ಎಡರುಗಳಿಗೆ ಅಂಜುವದಿಲ್ಲ. ಈ ಸ್ಥಿತಿಯಲ್ಲಿ ಲಿಂಗವು ಅವನ ಮನಸ್ಸಿನಲ್ಲಿ ಕಣ್ಣಿನಲ್ಲಿ ಪ್ರಾಣದಲ್ಲಿ ಹುದುಗಿರುವದು. ಹೀಗೆ ಅಂಗ ಪ್ರಾಣ ಭಾವಗಳೆಲ್ಲ ಲಿಂಗಮಯವಾಗಲು ಲಿಂಗದಲ್ಲಿ ಅವನ ಪ್ರಾಣವು ಅವನ ಪ್ರಾಣದಲ್ಲಿ ಲಿಂಗವು ಇರುವ ಸ್ಥಿತಿಯು ಒದಗುವದು. ಎಂದರೆ ಅವನಲ್ಲಿ ಲಿಂಗಾಂಗ ಸಾಮರಸ್ಯ ಭಾವವು ತಲೆದೋರುವದು. ಲಿಂಗಪೂಜೆಯ ಉದ್ದೇಶವು ಇದೇ ಇರುತ್ತದೆ. ಈ ಸ್ಥಿತಿಯಲ್ಲಿ ಲಿಂಗವಂತನಿಗೆ ಹುಟ್ಟು, ಇರುವಿಕೆ, ಹಾಗು ಸಾವು ಇರಲಾರವು. ಅವನ ಪೂರ್ವಾಶ್ರಯವು ಅಳಿದು ಹೋಗಿ ಲಿಂಗದ ಜನ್ಮವು ಉಂಟಾಗುವದು. ಅವನ ಇಂದ್ರಿಯಗಳೆಲ್ಲವೂ ಲಿಂಗೇಂದ್ರಿಯಗಳಾಗುವವು. ಅವನ ಜ್ಞಾನವು ಲಿಂಗಜ್ಞಾನವಾಗುವದು. ದ್ವೈತಾದ್ವೈತಭಾವವು ಅಳಿದುಹೋಗುವದು. ತನಗೆ ದೊರೆತದ್ದೇ ಲಿಂಗದ ಇಚ್ಛೆಯು. ತಾನು ಇದ್ದ ಸ್ಥಿತಿಯೇ ಲಿಂಗದ ಆನಂದವು, ಲಿಂಗದಲ್ಲಿ ಮನಸ್ಸನ್ನಿಡುವದೇ ನಿರವಯ ಸ್ಥಿತಿಯು ಹೀಗಾಗುವದು. ಇದೇ ಲಿಂಗವಂತನ ಇರವು ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನ:**— ೩೩. ಕರಸ್ಥಲದಲ್ಲಿ ಶಿವಲಿಂಗವ ಬಿಜಯಂಗೆಯಿಸಿಕೊಂಡು ಕಣ್ಣು ಮುಚ್ಚಿ ಬಾಯನ್ನು ತೆರೆದು, ಅನ್ಯವ ನೆನೆವನ್ನಬರ ಇನ್ನು ಲಿಂಗದ ಮರ್ಮವನರಿಯದಿಲ್ಲ. ಉಂಟಾದುದ ಹುಸಿಮಾಡಿ ಇಲ್ಲದುದ ನೆನೆದರೆ ಅದು ಸಹಜವಾಗಬಲ್ಲುದೆ? ದೇವದೇಹಿಕಭಕ್ತ, ಭಕ್ತದೇಹಿಕ ದೇವನೆಂದುದಾಗಿ, ತನ್ನೊಳಗೆ ಲಿಂಗ, ಲಿಂಗದೊಳಗೆ ತಾನು. ನೆನೆಯಲಿಲ್ಲ ನೆನಹಿಸಿಕೊಳ್ಳಲಿಲ್ಲವಯ್ಯಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಲಿಂಗಧಾರಕನಾದವನು ಲಿಂಗವೇ ತಾನಾಗಿ ವರ್ತಿಸುತ್ತಾನೆ. ಆದ್ದರಿಂದ ಅವನು ಆ ಲಿಂಗವನ್ನು ಬಿಟ್ಟು ಇತರ ದೇವತೆಗಳನ್ನು ಭಜಿಸ

ಕೂಡದು, ಅಥವಾ ಧ್ಯಾನಿಸಕೂಡದು. ಹಾಗೆ ಆಚರಿಸುವವನಿಗೆ ಲಿಂಗದ ಮರ್ಮವೇ ತಿಳಿದಿಲ್ಲವೆನ್ನಬೇಕು. ತನ್ನ ಹತ್ತಿರ ಇದ್ದ ವಸ್ತುವನ್ನು ಇಲ್ಲವೆಂದು ಭಾವಿಸಿ ಇಲ್ಲದ ವಸ್ತುವನ್ನು ಬರೇ ನೆನೆದರೆ ಅದು ತನ್ನಲ್ಲಿ ಹ್ಯಾಗೆ ದೊರೆಕೊಳ್ಳಬೇಕು? ಪರಮಾತ್ಮನ ದೇಹವೇ ಭಕ್ತನ ದೇಹವಾಗಿರುತ್ತದೆ, ಮತ್ತು ಪರಮಾತ್ಮನಿಗೆ ಭಕ್ತನ ದೇಹವೇ ಅವನ ದೇಹವಾಗಿರುತ್ತದೆ, ಹೀಗೆ ಭಕ್ತ ಮತ್ತು ಪರಮಾತ್ಮ ಇವರಲ್ಲಿ ಪರಸ್ಪರ ಸಂಬಂಧವಿದೆ. ಲಿಂಗಧಾರಕನಾದ ಭಕ್ತನಿಗೆ ಲಿಂಗವು ಅವನಲ್ಲಿರುತ್ತದೆ, ಮತ್ತು ಲಿಂಗದಲ್ಲಿಯೇ ಅವನು ಇರುತ್ತಾನೆ, ಈ ಸಹಜ ಸ್ಥಿತಿಯು ಇರುವದರಿಂದ, ಲಿಂಗಿಯಾದವನು ಲಿಂಗವನ್ನು ನೆನೆಯಲಾರನು ಮತ್ತು ಲಿಂಗವೂ ನೆನೆಹಿಸಿಕೊಳ್ಳಲಾರದು. ಉಭಯು ವಸ್ತುಗಳಲ್ಲಿ ಹೀಗೆ ಏಕಾಕಾರವಿರುತ್ತದೆ. ಹೀಗೆ ಏಕಾಕಾರವಿದ್ದಲ್ಲಿ ನೆನೆಯುವದೂ ನೆನೆಹಿಸಿಕೊಳ್ಳುವದೂ ಇರಲಾರವು.

**ವಚನಃ**— ೩೪. ಜ್ಞಾನವೇ ಪ್ರಸಾದಕಾಯ, ಜ್ಞೇಯವೇ ಚಿನ್ಮಯ ಲಿಂಗ, ಜ್ಞಾನಜ್ಞೇಯ ಸಂಪುಟದಿಂದ ಶರಣನೆನಿಸಿಕೊಂಡ ಜಂಗಮದ ಅಂತರಂಗ ಬಹಿರಂಗದಲ್ಲಿ ನೀನೇ. ಎಂತು ನೋಡಿದರೆ ಶರಣನ ಕಣ್ಣ ಮೊದಲಲ್ಲಿ ನೀನೇ. ಶಿವಜ್ಞಾನ ಸಂಪನ್ನನಾದ ಶರಣಂಗ ಆಹ್ವಾನ ವಿಸರ್ಜನೆ ಎಲ್ಲಿಯದು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾವಃ**— ಲಿಂಗ ಮತ್ತು ತಾನು ಈ ಪ್ರಕಾರ ಏಕಾಕಾರವಾಗಲು, ಲಿಂಗದ ಪ್ರಸಾದವು ಅಥವಾ ಅನುಭವವು ಅಥವಾ ಜ್ಞಾನವು ತನ್ನಲ್ಲಿ ಹರಿಗೊಳ್ಳುವದು. ಈ ಸ್ಥಿತಿಯಲ್ಲಿ ಅವನು ಪ್ರಸಾದ ಕಾಯನೆಂದು ಎನಿಸಿಕೊಳ್ಳುವನು. ಇಂಥ ಪ್ರಸಾದ ಕಾಯದಿಂದಲೇ ಭಕ್ತನು ಆಚರಿಸುವನು. ಆಗ ಇವನಿಗೆ ನೆನೆಯುತಕ್ಕ ವಸ್ತುವು ಚಿತ್ ಸ್ವರೂಪವಾದ ಲಿಂಗವೇ ಇರುತ್ತದೆ. ಅವನು ನೆನೆದ ಕೂಡಲೆ ಆ ಲಿಂಗದ ಶಕ್ತಿಯು ಅವನಲ್ಲಿ ಪ್ರವಹಿಸತೊಡಗುವದು. ಹೀಗೆ ನೆನೆಯುತಕ್ಕ ವಸ್ತುವು ಮತ್ತು ಅದರ ಅನುಭವವು ಏಕಾಕಾರವಾದಂಥವನೇ ಶರಣನೆನಿಸುವನು. ಇವನೇ ಜಂಗಮನು. ಇವನ ಅಂತರಂಗ ಬಹಿರಂಗವೆಲ್ಲ ಪರಮಾತ್ಮಸ್ವರೂಪವೇ ಆಗಿರುತ್ತದೆ. ಈ ಶರಣನು ಯಾವದನ್ನು ನೋಡಿದರೂ ಅವನು ಅದೆಲ್ಲ ಪರಮಾತ್ಮಸ್ವರೂಪವೆಂತಲೇ ಕಾಣುತ್ತಾನೆ. ಪ್ರಸಾದ ಕಾಯನಾದ ಶರಣನ ಸ್ಥಿತಿಯು ಹೀಗಾಗುತ್ತದೆ. ಇಂಥವನು ಪರಮಾತ್ಮನು ತನ್ನಲ್ಲಿ ಬರಲೆಂತಲೂ ಇಚ್ಛಿಸುವದಿಲ್ಲ. ಅದು ಹೋಗಬೇಕಂತಲೂ ಹೇಳುವದಿಲ್ಲ.



ಭಿನ್ನ ಕ್ರಿಯೆಗಳಿಂದ ಪರಮಾತ್ಮನನ್ನು ಪೂಜಿಸುವವರು ಈ ಬಗೆಯ ಆಹ್ವಾನ ವಿಸರ್ಜನೆಗಳಿಂದ ಪೂಜಿಸುತ್ತಾರೆ. ಆದರೆ ಸಮರಸಭಾವವುಳ್ಳ ಲಿಂಗವಂತರಿಗೆ ಹೀಗೆ ಆಹ್ವಾನ ವಿಸರ್ಜನೆಗಳಿಲ್ಲ.

**ವಚನಃ**— ೩೫. ಸದ್ಯೋಜಾತಮುಖವೇ ಪೃಥ್ವಿ ಎಂದರಿದಲ್ಲಿ ಸ್ಥಾವರಂಗಳಲ್ಲಿ ಪತ್ರೆಪುಷ್ಪದ ಹಂಗೇಕೆ? ವಾಮದೇವ ಮುಖವೇ ಅಪ್ಪುವೆಂದರಿದಲ್ಲಿ ಅಗ್ಗವಣಿಯಲ್ಲಿ ಮಜ್ಜನಕ್ಕೆರೆವ ಹಂಗೇಕೆ? ಅಘೋರ ಮುಖವೇ ಅಗ್ನಿ ಎಂದರಿದಲ್ಲಿ ಧೂಪದೀಪಾರತಿಗಳ ಹಂಗೇಕೇ? ತತ್ಪುರುಷ ಮುಖವೇ ವಾಯುವೆಂದರಿದಲ್ಲಿ ಮಂತ್ರ ತಂತ್ರದ ಹಂಗೇಕೆ? ಈಶಾನ್ಯ ಮುಖವೇ ಆಕಾಶವೆಂದರಿದಲ್ಲಿ ಧ್ಯಾನ ಮೌನದ ಹಂಗೇಕೆ? ಇಂತೀ ಪಂಚಬ್ರಹ್ಮವೇ ಪರಬ್ರಹ್ಮವೆಂದರಿದ ಶರಣಂಗೆ ಸರ್ವ ಉಪಚಾರ ಸಂಕಲ್ಪವೇಕೆ ಹೇಳಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾವಃ**— ಲಿಂಗಭಾವದಿಂದ ಲಿಂಗವನ್ನು ಪೂಜಿಸುವವರಲ್ಲಿ ಲಿಂಗವು ಸಹಜವಾಗಿ ವಾಸಿಸುತ್ತಿರುವದರಿಂದ ಅವರು ಪತ್ರೆ, ಪುಷ್ಪ, ಧೂಪ ಧೂಪಾರತಿ, ಮಂತ್ರ ತಂತ್ರ ಮೊದಲಾದ ಯಾವ ಬಾಹ್ಯ ಉಪಚಾರಗಳನ್ನು ಅವಲಂಬಿಸುವದಿಲ್ಲ. ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಲಿಂಗವು ಪಂಚಸಾದಾಖ್ಯಗಳಿಂದೊಡಗೂಡಿ ವಿಶ್ವದಲ್ಲೆಲ್ಲ ಪಸರಿಸಿರುತ್ತದೆ. ಅದು ತನ್ನ ದೇಹದಲ್ಲಿಯೂ ಪಂಚಸಾದಾಖ್ಯ ಸ್ವರೂಪವಾಗಿ ವಾಸಿಸುವದರಿಂದ ಕೇವಲ ಬಾಹ್ಯಉಪಚಾರಗಳು ಭಕ್ತನಲ್ಲಿರಲಾರವು. ಪರಮಾತ್ಮನಿಗೆ ಸದ್ಯೋಜಾತಮುಖ, ವಾಮದೇವ ಮುಖ, ಅಘೋರ ಮುಖ, ತತ್ಪುರುಷಮುಖ ಈಶಾನಮುಖ, ಎಂಬ ಐದು ಮುಖಗಳಿವೆ. ಈ ಮುಖಗಳ ಮೂಲಕವಾಗಿಯೇ ಸಾದಾಖ್ಯಗಳು ವಿಶ್ವದಲ್ಲಿ ಉದ್ಭವವಾಗುತ್ತವೆ. ಈ ಸಾದಾಖ್ಯಗಳಲ್ಲಿರುವ ಶಕ್ತಿಗಳ ಮೂಲಕ ಆಯಾ ಪಂಚಭೂತಗಳು ಜಗತ್ತಿನಲ್ಲಿ ಉತ್ಪನ್ನವಾಗುತ್ತವೆ. ಈ ಪಂಚಭೂತಗಳೇ ಬಾಹ್ಯ ಸೃಷ್ಟಿಗೆ ಕಾರಣವಾಗಿರುತ್ತವೆ. ಮನುಷ್ಯನ ದೇಹದಲ್ಲಿಯೂ ಕೂಡ ಹೀಗೆಯೇ ಇರುತ್ತದೆ. ಅವನಲ್ಲಿಯೂ ಸಾದಾಖ್ಯಗಳುಂಟು, ಪಂಚಭೂತಗಳುಂಟು ಅವುಗಳ ಮೂಲಕವಾಗಿಯೇ ಅವನ ದೇಹವು ಉತ್ಪನ್ನವಾಗಿ ಅವನು ಕಾರ್ಯಮಾಡುತ್ತಾನೆ. ಆದರೆ ಈ ಕಾರ್ಯಗಳನ್ನು ಪರಮಾತ್ಮನ ಶಕ್ತಿಗಳ ಮೂಲಕವಾಗಿಯೇ ಎಂದು ಅರಿತು ಅವನಿಗೆ ಸಂಬಂಧಿಸಿಕೊಂಡು ಯಾವನು ವರ್ತಿಸುತ್ತಾನೋ ಅವನಲ್ಲಿ ಬರೇ ಬಾಹ್ಯ ಉಪಚಾರಗಳು

ಉಳಿಯಲಾರವು. ಅಂದರೆ ಅವನು ಪತ್ರೆ, ಪುಷ್ಪ, ಅಗ್ಗವಣಿ, ಧೂಪ ದೀಪಾರತಿ ಮಂತ್ರ ತಂತ್ರ ಧ್ಯಾನ ಮೌನ ಇವುಗಳು ಅವನಿಗೆ ಅನಾವಶ್ಯಕವಾಗುವವು. ಈ ಉಪಚಾರಗಳ ಉದ್ದೇಶವು ಪರಮಾತ್ಮನನ್ನು ತನ್ನಲ್ಲಿ ಸಂಬಂಧಿಸಿಕೊಳ್ಳುವದೇ ಇರುತ್ತದೆ. ಉದಾ:— ಪತ್ರೆ ಪುಷ್ಪದ ಮೂಲಕ ಪೃಥ್ವೀ ತತ್ವವುಳ್ಳ ಸದ್ಯೋಜಾತ ಮುಖವನ್ನು ತನ್ನ ಆಧಾರ ಚಕ್ರದಲ್ಲಿ, ಅಗ್ಗಣಿಯ ಮೂಲಕ ಅಪ್ಪು ತತ್ವವುಳ್ಳ ವಾಮದೇವ ಮುಖವನ್ನು ತನ್ನ ಸ್ವಾಧಿಷ್ಠಾನ ಚಕ್ರದಲ್ಲಿ, ಧೂಪ ದೀಪಾರತಿಯ ಮೂಲಕ ಅಗ್ನಿ ತತ್ವವುಳ್ಳ ಅಘೋರ ಮುಖವನ್ನು ತನ್ನ ಮಣಿಪೂರಕ ಚಕ್ರದಲ್ಲಿ, ಮಂತ್ರ ತಂತ್ರಗಳ ಮೂಲಕ ವಾಯುತತ್ವವುಳ್ಳ ತತ್ಪುರುಷ ಮುಖವನ್ನು ತನ್ನ ವಿಶುದ್ಧಿ ಚಕ್ರದಲ್ಲಿ, ಧ್ಯಾನ ಮೌನದ ಮೂಲಕ ಆಕಾಶ ತತ್ವವುಳ್ಳ ಈಶಾನ ಮುಖವನ್ನು ತನ್ನ ಆಜ್ಞಾ ಚಕ್ರದಲ್ಲಿ ಹೀಗೆ ಸಂಬಂಧ ಪಡಿಸತಕ್ಕದ್ದು. ಆದರೆ ಇವು ಭಿನ್ನ ಕ್ರಿಯಾಮಾರ್ಗಗಳ ಪ್ರಯತ್ನವು. ಪಂಚ ಬ್ರಹ್ಮಗಳು ಪರಬ್ರಹ್ಮವೆಂದು ಅರಿತು ಆಚರಿಸುವ ಲಿಂಗಿಗೆ ಇವೆಲ್ಲವು ಕೇವಲ ಉಪಚಾರಗಳಾಗಿ ಪರಿಣಮಿಸುವವು.

**ವಚನ:**—೩೩. ಸಟೆಯ ದಿಟವ ಮಾಡಿ, ಸ್ವಭಾವ ಸದ್ಭಾವದಿಂ ಲಿಂಗವಾಗಿ, ಲಿಂಗವ ಸದ್ಭಕ್ತಿಯಿಂದ ಪೂಜಿಸಿ ಲಿಂಗದಲ್ಲಿ ವರವ ಪಡೆದರು, ಶಿವಪಥವ ಪಡೆದರು ಪುರಾತನರು. ಅದೆಂತೆನಲು ಕೇಳಿರೇ. ಬಳ್ಳವು ಲಿಂಗವೇ? ಅಲ್ಲ. ಅದು ಸಟೆ. ಸದ್ಭಾವದಿಂ ಭಾವಿಸಿ ಲಿಂಗವಾಯಿತ್ತು ಬಳ್ಳೇಶ್ವರ ಮಲ್ಲಯ್ಯಗಳಿಂದ. ಆಡಿನ ಹಿಕ್ಕೆ ಲಿಂಗವೇ? ಅಲ್ಲ. ಅದು ಸಟೆ. ಸದ್ಭಾವದಿಂದ ಲಿಂಗವಾಯಿತ್ತು ಗೊಲ್ಲಾಳಂಗೆ. ನರಮಾಂಸ ಭಕ್ಷಿಸುವೆನೆಂಬುದು ಜಂಗಮಸ್ಥಲವೇ? ಅಲ್ಲ. ಅದು ಸಟೆ. ಸದ್ಭಾವದಿಂದ ಪ್ರಸನ್ನನಾದ ಶಿವನು ಸಿರಿಯಾಳಂಗೆ. ಸತ್ತ ಕರುವ ಹೊತ್ತು ಮಾದರನಾಗಿ ಬಹುದು ಜಂಗಮಸ್ಥಲವೇ? ಅಲ್ಲ. ಅದು ಸಟೆ. ಸದ್ಭಾವದಿಂ ಭಾವಿಸಿ ಜಂಗಮ ಲಿಂಗವಾಯಿತ್ತು ಕೆಂಭಾವಿ ಭೋಗಣ್ಣಂಗೆ. ಮಿಣಿಕಂಕರಿಗೋಲಹಿಡಿದು ಬಪ್ಪುದು ಜಂಗಮ ಸ್ಥಲವೇ? ಅಲ್ಲ. ಅದು ಸಟೆ. ಸದ್ಭಾವದಿಂದ ಪ್ರಸನ್ನನಾದ ಶಿವನು ಸಾಮವೇದಿಗಳಿಗೆ. ಡೊಂಬಿತಿ ಗುರುವೆ? ಅಲ್ಲ. ಅದು ಸಟೆ. ಸದ್ಭಾವದಿಂ ಭಾವಿಸಿ ಗುರುವಾಯಿತ್ತು ಗುರುಭಕ್ತಯ್ಯಗಳಿಂದ. ಇಂತು ಸದ್ಭಾವದಿಂ ಸಟೆಯ ದಿಟವ ಮಾಡಿ ನಿಜಪದವನೈದಿದರು. ಅವರಂತಿರಲಿ. ದಿಟವ ಸಟೆಯ ಮಾಡಿ ಆರಾರು ಕೆಟ್ಟರೆಂಬುದ ಕೇಳಿರಣ್ಣಾ! ದೇವಜಾತಿಗಳೆ

ಉರಿಲಿಂಗಪೆದ್ದಿಗಳ ವಚನಗಳು.



ಲ್ಲರೂ ದೇವಶಿಖಾಮಣಿಯ ಹತ್ತಿರೆಯಲ್ಲಿದ್ದು ಬ್ರಹ್ಮ ನಿರಾಕಾರವೆಂದು ಪರಬ್ರಹ್ಮನಂ ಪುಸಿಯ ಮಾಡಿ ಸನತ್ಕುಮಾರನು ಒಂಟೆ ಯಾಗನೆ? ಅನಂತ ಬ್ರಹ್ಮಾದಿಗಳ ಹೆತ್ತ ತಂದೆಯ ಪುಸಿಯ ಮಾಡಿ, ತಾನೇ ಕರ್ತನೆಂದು ಶಿರಸ್ಸ ಹೋಗಾಡನೇ ಬ್ರಹ್ಮನು? ಸರ್ವಲೋಕಂಗಳಿಗೆ ಸುಖವ ಮಾಡುವ ಶಂಕರನ ಪುಸಿಯ ಮಾಡಿ, ದಕ್ಷ ತಲೆಯ ನೀಗಿ ಕುರಿದಲೆಯ ಮಾಡಿಕೊಳ್ಳನೆ? "ಪ್ರಭುಃಪ್ರೇರಕ ವಿಶ್ವಭುಕ್" ಎಂದು ಶೃತಿ ಹೊಗಳುವ ಮಹಾ ಕಾರಣಿಕನಂ ಪುಸಿಮಾಡಿ, ತಾನೇ ಜಗತ್ಸಂಹಾರಕಾರಕನೆಂದು ನರಸಿಂಹನು ತೊಗಲ ಸುಲಿಸಿಕೊಳ್ಳನೆ? ಇಂತಿವರು ಮೊದಲಾದ ಮದಾಂಧರನಂತರುಂಟು. ದಿಟವ ಸಟೆಯ ಮಾಡಿ ಶಿಕ್ಷೆಗೊಳಗಾದರು ಕೇಳಿರೇ. ಅಯ್ಯಗಳಿರಾ ಅವರಂತಿರಲಿ. ಆ ಪುರಾತನರಂತೆ ಸಟೆಯ ದಿಟವ ಮಾಡುವುದು ಅಘಟಿತ ಘಟಿತತ್ವವು. ಅದು ಬೇಡ. ಆ ಮದಾಂಧರುಗಳಂತೆ ದಿಟವ ಸಟೆಯ ಮಾಡುವ ಸಾಮರ್ಥ್ಯ ಪುರುಷರುಗಳಲ್ಲ. ಅದು ಸಲ್ಲದು. ಮತ್ತೆಂತೆನಲು ಕೇಳಿರೇ. ಸಟೆ ದಿಟಂಗಳ ಸಂಶಯವ ಬಿಡಿಸಿ ಸಹಜವ ನೆಲೆಗೊಳಿಸುವ ಶ್ರೀಗುರು ಲಿಂಗಜಂಗಮವ ನಂಬಿ, ಸದ್ಭಾವ ಶುದ್ಧಿಯಿಂದ ಭಜಿಸಿ ಮುಕ್ತರಾಗಿರೇ. ಸಟೆ ಎಂದು ನರಕಕ್ಕಿಳಿಯದೆ, ದಿಟವೆಂದು ರುದ್ರರೂಪನರಸದೆ, ಸಹಜವೆಂದು ತ್ರಿವಿಧ ಲಿಂಗವ ನಂಬಿದಿರಾಯಿತ್ತಾದಡೆ ಕೇವಲ ಮುಕ್ತಿಯನೀವ ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಲಿಂಗಾಂಗಿಗಳ ಲಿಂಗಪೂಜಾ ರೀತಿಯು ತೀರ ಹೊಸ ಬಗೆಯದಿರುತ್ತದೆಂದು ವಚನಕಾರನು ಅನ್ನುತ್ತಾನೆ. ಇವರ ರೀತಿಯೇ ಬೇರೆ. ಇವರಿಗೆ ಇತರ ಪೂಜಕರಂತೆ ಬಹು ಕಷ್ಟಪಡುವ ಕಾರಣವಿಲ್ಲ. ಇವರ ಪೂಜೆ ಎಂದರೆ ಗುರುಲಿಂಗಜಂಗಮ ಮಾರ್ಗದಿಂದ ಆಚರಿಸುವದೇ ಇರುತ್ತದೆ. ಇದು ಬಹು ಸುಲಭವಾದದ್ದು. ಗುರಲಿಂಗಜಂಗಮದ ಮೂಲಕ ಲಿಂಗದ ಕಳೆಯು ತನ್ನ ಎಲ್ಲ ಶರೀರಗಳನ್ನು ಆವರಿಸಿಬಿಡುತ್ತದೆ. ಇದರಿಂದಲೇ ಮುಕ್ತಿಯು. ಇದು ಬಹು ಹಗುರಾದ ಮಾರ್ಗವೆಂದು ವಚನಕಾರನು ಇಲ್ಲಿ ಹೇಳಿರುವನು.

ಕೆಲವರು ಸಟೆಯಾಗಿರುವ ವಸ್ತುಗಳನ್ನು ದಿಟವೆಂದು ನಂಬಿ ಸದ್ಭಾವದಿಂದ ಅವುಗಳನ್ನು ಪೂಜಿಸಿ ದಿಟಮಾಡಿ ತೋರಿಸಿರುವರು. ಇದು ಶಕ್ಯವು. ಹೀಗೆ ಮಾಡಿದವರುಂಟು. ಆದರೆ ಇವರು ಬರೀ ರುದ್ರಲೋಕ ಅಥವಾ ಕೈಲಾಸ ಅಥವಾ ಗಣಪದವಿಯನ್ನು ಹೊಂದಿರುತ್ತಾರೆ. ಆದರೆ

ಇದು ಬಹು ಕಷ್ಟಕರ ಮಾರ್ಗವು. ಇವರ ಉದಾಹರಣೆಗಳನ್ನು ವಚನಕಾರನು ಇಲ್ಲಿ ಹೇಳಿರುವನು. ಬಳ್ಳವು ಲಿಂಗನೆಂದು ಪೂಜಿಸಿದ ಬಳ್ಳೇಶನು, ಆಡಿನ ಹಿಕ್ಕಿ ಲಿಂಗವೆಂದು ಭಾವಿಸಿ ಪೂಜಿಸಿ ತನ್ನ ತಂದೆಯನ್ನೇ ಕೊಂದ ಗೊಲ್ಲಾಳನು, ತನ್ನ ಮಗನನ್ನು ಕೊಂದು ಬಾಣಸಮಾಡಿದ ಸಿರಿಯಾಳನು, ಸತ್ತ ಕರುವನ್ನು ಹೊತ್ತ ಕೆಂಭಾವಿ ಭೋಗಣ್ಣನು, ಶ್ವಪಚನನ್ನು ಭಜಿಸಿದ ಸಾಮವೇದಿಯು, ಡೊಂಬಿತಿಯನ್ನು ಗುರುವೆಂದು ಪೂಜಿಸಿದ ಗುರುಭಕ್ತಯ್ಯನು ಹಾಗೆಯೇ ಅನೇಕ ಬಗೆಯಾಗಿ ಶಿವಪಥದಿಂದ ನಡೆದ ಪುರಾತನರು ಈ ವರ್ಗದಲ್ಲಿ ಬೀಳುತ್ತಾರೆ. ಇವರು ಬಹು ಕಷ್ಟಪಟ್ಟು ಲಿಂಗದಲ್ಲಿ ವರಗಳನ್ನು ಪಡೆದು ಉಚ್ಚ ಸ್ಥಾನವನ್ನು ಹೊಂದಿದರು.

ಅದೇ ಪ್ರಕಾರ ಲಿಂಗಭಕ್ತಿಯಲ್ಲಿ ವಿಶ್ವಾಸವಿಡದೆ ಬರೀ ಸುಳ್ಳನ್ನು ನಂಬಿ ಕೆಟ್ಟುಹೋದ ಜನರೂ ಅನಂತರುಂಟು. ಅವರ ಉದಾಹರಣೆಗಳನ್ನೂ ಕೂಡ ವಚನಕಾರನು ಇಲ್ಲಿ ಕೊಟ್ಟಿರುವನು. ಅವರು ಸನತ್ಕುಮಾರ, ಬ್ರಹ್ಮ, ದಕ್ಷ, ನರಸಿಂಹ ಇವರೇ ಮೊದಲಾದವರು ಇರುವರು.

ಆದರೆ ಪುರಾತನರಂತೆ ಸಟೆಯನ್ನು ದಿಟಮಾಡಿ ಅಘಟಿತ ಕಾರ್ಯ ಮಾಡುವದೂ ನನಗೆ ಬೇಡ. ಅಥವಾ ದಿಟವನ್ನು ಸಟೆ ಮಾಡಲು ಯತ್ನಿಸಿದ ಆ ಮಹಾ ಸಾಮರ್ಥ್ಯಪುರುಷರ ಉದಾಹರಣೆಯೂ ನನಗೆ ಬೇಡ. ಈ ಉಭಯ ಮಾರ್ಗಗಳಾವೂ ನನಗೆ ಬೇಡ ಎಂದು ವಚನಕಾರನು ಇಲ್ಲಿ ಹೇಳುತ್ತಾನೆ.

ಆದರೆ ಸಟೆ ದಿಟ ಎಂಬ ಸಂಶಯುವನ್ನು ಬಿಡಿಸಿ ಸಹಜತ್ವವನ್ನು ನೆಲೆಗೊಳಿಸುವ ಶ್ರೀ ಗುರುಲಿಂಗಜಂಗಮ ಮಾರ್ಗದಿಂದ ನಡೆಯುವದೇ ಹಿತಕರವು. ಈ ಮಾರ್ಗವನ್ನು ಹಿಡಿದು ಸದ್ಭಾವದಿಂದಲೂ ಶುದ್ಧ ಮನಸ್ಸಿನಿಂದಲೂ ಭಜಿಸಿ ಮುಕ್ತರಾಗಬೇಕೆಂದು ವಚನಕಾರನು ಇಲ್ಲಿ ಬೋಧಿಸಿದ್ದಾನೆ. ಈ ಮಾರ್ಗದಿಂದ ತ್ರಿವಿಧ ಲಿಂಗಗಳು ತನ್ನ ತ್ರಿವಿಧ ಶರೀರದಲ್ಲಿ ಸಹಜವಾಗಿ ನೆಲೆಗೊಳ್ಳುವವು. ಮತ್ತು ಕಡೆಗೆ ಭಕ್ತನು ಸಾಮರಸ್ಯ ಸ್ವರೂಪನ್ನು ಹೊಂದುವನು ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

---

## ಪ್ರಾಣಲಿಂಗ ಪೂಜೆ.

**ವಿವರಣೆ:—** ಕೇವಲ ಬಾಹ್ಯ ಪೂಜೆಯಿಂದೇನೂ ಫಲವಿಲ್ಲ. ಪೂಜೆಯ ಉದ್ದೇಶವು ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದುವದೇ ಇರುತ್ತದೆ. ಈ ರೀತಿಯನ್ನು ವಚನಕಾರರು ತಮ್ಮ ವಚನಗಳಲ್ಲಿ ಆಗಿಂದಾಗ್ಗೆ ವಿವರಿಸುವದುಂಟು. ಬಾಹ್ಯ ಪೂಜಾಕ್ರಮಗಳನ್ನು ಅವರು ಹೇಳುತ್ತಿದ್ದರೂ, ಅವುಗಳಲ್ಲಿ ಅವರು ಲಿಂಗ ಸಾಕ್ಷಾತ್ಕಾರವನ್ನು ಕುರಿತು ಇರುವ ತಮ್ಮ ಉದ್ದೇಶಗಳನ್ನು ಬಿಟ್ಟಿರುವದಿಲ್ಲ. ಈ ಸಾಕ್ಷಾತ್ಕಾರಕ್ಕೆ ಪ್ರಾಣಲಿಂಗ ಪೂಜೆ ಎಂತಲೂ ಹೆಸರುಂಟು. ಈ ಪೂಜೆಯನ್ನು ಅವರು ಹೇಳುವಲ್ಲಿ ಇಷ್ಟಲಿಂಗ ಪ್ರಾಣಲಿಂಗಗಳನ್ನು ಪರಸ್ಪರವಾಗಿ ಹ್ಯಾಗೆ ಸಂಬಂಧಿಸಬೇಕೆಂಬುದನ್ನು ಹೇಳುವದುಂಟು. ನಿಜವಾಗಿ ಪ್ರಾಣಲಿಂಗ ಪೂಜೆಯನ್ನು ಬಿಟ್ಟು ಇಷ್ಟಲಿಂಗ ಪೂಜೆ ಇಲ್ಲ, ಇಷ್ಟಲಿಂಗ ಪೂಜೆಯನ್ನು ಬಿಟ್ಟು ಪ್ರಾಣಲಿಂಗ ಪೂಜೆ ಇಲ್ಲ. ಇದು ವಚನಕಾರರ ತತ್ವವಿದೆ. ಈ ಕ್ರಮವನ್ನು ಉರಿಲಿಂಗಪೆದ್ದಿಯು ಕೆಳಗೆ ಕಾಣಿಸಿದ ವಚನಗಳಲ್ಲಿ ಹೇಳಿರುವನು.

**ವಚನಃ—** ೩೭. ದೇಹವೆಂಬ ಮನೆಯಲ್ಲಿ ಮಹಾಲಿಂಗವೆಂಬರಸು. ಮನವೆಂಬ ಪೀಠದ ಮೇಲೆ ಮೂರ್ತಿಗೊಂಡು ಅಂತಃಕರಣಂಗಳೆಂಬ ಪರಿಚಾರಕರುಗಳ ಕೈಯಿಂದ ಪಂಚೇಂದ್ರಿಯಂಗಳೆಂಬ ಪರಿವಾಣದಲ್ಲಿ ಶಬ್ದ ಸ್ಪರ್ಶ ರೂಪು ರಸ ಗಂಧಂಗಳೆಂಬ ಪದಾರ್ಥಂಗಳನು ಎಡೆಮಾಡಿಸಿಕೊಂಡು ಸವಿವುತ್ತಿರಲು ಆನಂದವೇ ಮಹಾ ಪ್ರಸಾದವಾಗಿ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರನು ಸದಾ ಸನ್ನಿಹಿತ ಕಾಣಿರೇ.

**ಭಾವಃ—** ಈ ವಚನದಲ್ಲಿ ಪರಮಾತ್ಮನು ತನ್ನಲ್ಲಿ ಹ್ಯಾಗೆ ವಾಸಮಾಡುತ್ತಾನೆ ಮತ್ತು ಹ್ಯಾಗೆ ವ್ಯವಹರಿಸುತ್ತಾನೆ ಎಂಬನ್ನು ಹೇಳಿರುವನು. ಇದನ್ನು ತಿಳಿದಾಗಲೇ ಅಂತರಂಗ ಪೂಜೆಯ ಕ್ರಮವು ಗೊತ್ತಾಗುವದು. ದೇಹದ ಮೇಲೆ ಮಹಾಲಿಂಗವೆಂಬರಸನ ಆಳಿಕೆಯುಂಟು ಎಂದು ಹೇಳುತ್ತಾನೆ. ಹ್ಯಾಗೆ ಜಗತ್ತಿನ ವ್ಯವಹಾರಗಳು ಪರಮಾತ್ಮನ ಅಧೀನದಲ್ಲಿ ನಡೆಯುತ್ತವೆಯೋ, ಹಾಗೆ ದೇಹದ ವ್ಯಾಪಾರಗಳು ಈ ಮಹಾಲಿಂಗದ ಅಧೀನದಲ್ಲಿ ನಡೆದಿವೆ ಎಂದು ಅಂದಿದ್ದಾನೆ. ಈ ಮಹಾ

ಲಿಂಗಕ್ಕೆ ಮನವೇ ಪೀಠವು. ಅಂದರೆ ಅದನ್ನು ಕಾಣಬೇಕಾದರೆ, ಮನಸಿದ್ದಲ್ಲಿಯೇ ಅದನ್ನು ಹುಡುಕಬೇಕು. ಈ ಮಹಾಲಿಂಗಕ್ಕೆ ಪರಿಚಾರಕರೂ ಉಂಟು. ಬುದ್ಧಿ ಮನ ಚಿತ್ತ ಅಹಂಕಾರವೆಂಬ ಅಂತಃಕರಣ ಚತುಷ್ಟಯಗಳೇ ಇವು ಇವೆ. ಪರಮಾತ್ಮನ ಆಜ್ಞೆಯನ್ನು ಇವು ಚನ್ನಾಗಿ ಪಾಲಿಸುತ್ತಿದ್ದರೆ, ಅವುಗಳಿಂದ ಸರಿಯಾದ ಕಾರ್ಯಗಳಾಗುತ್ತವೆ. ಆದರೆ ಅವು ಅಡ್ಡ ಮಾರ್ಗವನ್ನು ಹಿಡಿದು ದುರ್ವ್ಯಾಪಾರಗಳಲ್ಲಿ ತೊಡಗಿದ್ದರೆ, ಅವು ಪರಮಾತ್ಮನ ಅನುಜ್ಞೆಯನ್ನು ಪಾಲಿಸುವದಿಲ್ಲೆಂದು ತಿಳಿಯಬೇಕು. ಈ ಮಹಾಲಿಂಗಕ್ಕೆ ಸ್ಥೂಲ ಆಕಾರವಿಲ್ಲ. ಅದು ಆನಂದ ಸ್ವರೂಪುಳ್ಳದಾಗಿದೆ. ಮಹಾಲಿಂಗವು ಪ್ರಕಟವಾಗಿದ್ದರೆ ಈ ಆನಂದವು ಮನುಷ್ಯನ ಶರೀರದಲ್ಲೆಲ್ಲ ಆವರಿಸಿರುತ್ತದೆ. ಈ ಆನಂದವೇ ದೇಹದಲ್ಲಿ ಮಹಾಲಿಂಗವಿದ್ದದ್ದರ ಕುರುಹು. ಈ ಆನಂದವು ಶಾಶ್ವತವಾದದ್ದು. ಇದಕ್ಕೆ ಪ್ರಸಾದವೆಂತಲೂ ಹೆಸರು. ಈ ಪ್ರಸಾದವು ಮನುಷ್ಯನಿಗೆ ಶಬ್ದ, ಸ್ಪರ್ಶ, ರೂಪು, ರಸ, ಗಂಧ ಇವುಗಳ ಮುಖಾಂತರವಾಗಿಯೇ ಸಲ್ಲುವದು. ಮತ್ತು ಇವಾದರೂ ಪಂಚೇಂದ್ರಿಯಗಳ ವ್ಯಾಪಾರಗಳೇ ಇರುತ್ತವೆ. ದೇಹದಲ್ಲಿಯ ಮಹಾಲಿಂಗಕ್ಕೆ ಈ ಇಂದ್ರಿಯಗಳೇ ಪರಿಮಾಣವು. ಮತ್ತು ಆ ಪರಿಮಾಣದಲ್ಲಿ ಶಬ್ದ ಸ್ಪರ್ಶಾದಿ ವಿಷಯಗಳೇ ಉಣ್ಣುವ ಪದಾರ್ಥಗಳು. ಮಹಾಲಿಂಗವು ಇವುಗಳನ್ನು ಉಪಭೋಗಿಸುವಲ್ಲಿಯೇ ಪ್ರಕಟವಾಗುತ್ತದೆ. ಪಂಚೇಂದ್ರಿಯಗಳು ಪಂಚ ವಿಷಯಗಳು ಮತ್ತು ಅಂತಃಕರಣ ಚತುಷ್ಟಯಗಳು ಸರಿಯಾಗಿ ಸದಾಚಾರದಿಂದ ಉತ್ತಮ ವರ್ತನೆಯಿಂದ ಪರಸ್ಪರ ಹೊಂದಿಕೊಂಡು ಕಾರ್ಯ ನಡಿಸಿದರೆ ಮಹಾಲಿಂಗವೆಂಬರಸನ ಸಾನ್ನಿಧ್ಯವು ದೊರಕುತ್ತದೆ. ಮತ್ತು ಮಹದಾನಂದವು ಲಭಿಸುತ್ತದೆ. ಇಲ್ಲದಿದ್ದರೆ ಮನುಷ್ಯನು ದುಃಖಕ್ಕೆ ಈಡಾಗುತ್ತಾನೆ. ಹೀಗೆ ಯಾವನು ಸುಖದಲ್ಲಿ ಇರುತ್ತಾನೋ ಅವನಲ್ಲಿ ಪರಮಾತ್ಮನು ಶಾಶ್ವತವಾಗಿ ವಾಸಿಸುತ್ತಾನೆ. ಹೀಗೆ ಪರಮಾತ್ಮನು ತನ್ನಲ್ಲಿ ಯಾವಾಗಲೂ ವಾಸಿಸುವಂತೆ ಯಾವನು ಮಾಡುತ್ತಾನೋ ಅವನೇ ಪ್ರಾಣಲಿಂಗ ಪೂಜಕನು, ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡವನು ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನಃ—** ೩೮. ಪಂಚಭೂತವಂಗವಾಗಿಪ್ಪಾತ್ಮಂಗೆ ಪಂಚೇಂದ್ರಿಯಂಗಳೇ ಮುಖಗಳು. ಕರಣಂಗಳೇ ಕೈಗಳು. ಪಂಚವಿಷಯವು



ಪೂಜೆ, ಪಂಚ ಪದಾರ್ಥವೇ ಭೋಗ, ಇವನೆಲ್ಲವ ತನ್ನ ನಿಜಮೂರ್ತಿಯಪ್ಪ ಘನಕ್ಕೆಯ್ದಿಸಬಲ್ಲಡೆ ಆತ ಸರ್ವ ನಿರ್ವಾಣಿ, ಸಕಲ ನಿಃಕಲಾತ್ಮಕನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ—** ೩೭ನೇ ವಚನದಲ್ಲಿಯ ಭಾವವನ್ನೇ ಈ ವಚನದಲ್ಲಿಯೂ ವಚನಕಾರನು ಹೇಳಿರುವನು. ಮನುಷ್ಯನ ಶರೀರವು ಪೃಥ್ವಿ, ಅಪ್, ತೇಜ, ವಾಯು, ಆಕಾಶವೆಂಬ ಪಂಚಭೂತಗಳಿಂದ ಆಗಿರುತ್ತದೆ. ಇಂಥ ಶರೀರದಲ್ಲಿ ಆತ್ಮನಿದ್ದು ಅವನಿಗೆ ಪಂಚಇಂದ್ರಿಯಗಳೇ ಮುಖಂಗಳಾಗಿವೆ. ಮನುಷ್ಯನ ಪ್ರಗತಿಯು ಮತ್ತು ಶ್ರೇಷ್ಠತೆಯು ಈ ಇಂದ್ರಿಯಗಳ ವ್ಯಾಪಾರಗಳ ಮೇಲೆಯೇ ಅವಲಂಬಿಸಿರುತ್ತವೆ. ಆದ್ದರಿಂದ ಇಂದ್ರಿಯಗಳೇ ಆತ್ಮನಿಗೆ ಮುಖಂಗಳೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಮನುಷ್ಯನು ಅಂತಃಕರಣ ಚತುಷ್ಟಯಗಳ ಮುಖಾಂತರ ವ್ಯವಹರಿಸುವವನಾದ್ದರಿಂದ ಅವುಗಳೇ ಅವನಿಗೆ ಕೈಗಳಾಗಿವೆ. ಪಂಚವಿಷಯಗಳ ಸೇವನೆಯೇ ಅವನಿಗೆ ಪೂಜೆಯಾಗಿರುತ್ತದೆ. ಪಂಚಪದಾರ್ಥಗಳ ಭೋಗವೇ ಅವನಿಗೆ ಭೋಗವಾಗಿರುತ್ತದೆ. ಹೀಗೆ ಇವು ಆತ್ಮನಿಗೆ ಸಂಬಂಧಪಟ್ಟಿರುತ್ತವೆ. ಈ ಸಂಬಂಧವನ್ನು ತಿಳಿದು ಆತ್ಮನಿಗೆ ಅವುಗಳನ್ನು ನಿವೇದಿಸತಕ್ಕದ್ದು. ಈ ನಿವೇದನೆಯು ಉಂಟಾಗಬೇಕಾದರೆ ಮನುಷ್ಯನು ಅತ್ಯಂತ ಶ್ರೇಷ್ಠತೆಯನ್ನು ಹೊಂದಬೇಕಾಗುತ್ತದೆ. ಈ ಬಗೆಯ ಶ್ರೇಷ್ಠತೆಯನ್ನು ಹೊಂದುವದೇ ನಿರ್ವಾಣಪದವೆನಿಸುವದು. ಇವನು ಸಕಲವನ್ನೂ ನಿಃಕಲವನ್ನೂ ತನ್ನಲ್ಲಿ ಎಯ್ದಿಸಿಕೊಳ್ಳಲು ಶಕ್ತನಾಗುತ್ತಾನೆಂದು ಇಲ್ಲಿ ವಚನಕಾರನು ಹೇಳಿದ್ದಾನೆ.

**ವಚನಃ—** ೩೯. ಪ್ರಾಣ ಲಿಂಗ, ಲಿಂಗ ಪ್ರಾಣವೆಂಬ ಧ್ಯಾನಾಮೃತದಿಂ ಪಂಚಾಕ್ಷರಿ ಎಂಬ ಪಂಚಾಮೃತದಿಂ ಲಿಂಗಮಜ್ಜನವೆರೆದು, ಮನವೇ ಪುಷ್ಪ ಬುದ್ಧಿಯೇ ಗಂಧ ಚಿತ್ತವೇ ನೈವೇದ್ಯ ಅಹಂಕಾರದಿಂದ ಆರೋಗಣೆಯ ಮಾಡಿಸಿ ಪರಿಣಾಮದ ವೀಳೆಯವನಿತ್ತು, ಸ್ನೇಹದಿಂದ ವಂದನೆಯ ಮಾಡಿ ಪ್ರಾಣಲಿಂಗಕ್ಕೆ ಅಂತರಂಗದ ಪೂಜೆಯ ಪರಿಯಲಿ ಬಹಿರಂಗದ ಪೂಜೆಯ ಮಾಡುವದು. ಅಂತರಂಗದ ವಸ್ತುಗಳೆಲ್ಲವನು ಬಹಿರಂಗದ ವಸ್ತುವಿನಲ್ಲಿ ಕೂಡಿ ಲಿಂಗಾರ್ಚನೆಯ ಮಾಡಲು ಅಂತರಂಗ ಬಹಿರಂಗದಲ್ಲಿ ಭರಿತನಾಗಿಹನು ಶಿವನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ—** ಅಂತರಂಗ ಪೂಜೆಯನ್ನು ಹ್ಯಾಗೆ ಮಾಡಬೇಕೆಂಬುದನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಅವನು ಪ್ರಾಣವೇ ಲಿಂಗ, ಲಿಂಗವೇ ಪ್ರಾಣ ಎಂಬ ಭಾವನೆಯಿಂದ ಧ್ಯಾನಿಸಬೇಕು. ಹೀಗೆ ಮಾಡಿದ ಧ್ಯಾನವೇ ಅಮೃತವೆನಿಸುತ್ತದೆ. ಈ ಧ್ಯಾನವು ಪಂಚಾಕ್ಷರೀ ಮಂತ್ರಜಪದಿಂದ ಶಕ್ಯವಿದೆ. ಇದೇ ಲಿಂಗಮಜ್ಜನವು. ಈ ಲಿಂಗಕ್ಕೆ ಏರಿಸತಕ್ಕ ಪುಷ್ಪವು ಯಾವದೆಂದರೆ ಮನಸ್ಸು. ಹಚ್ಚತಕ್ಕ ಗಂಧವು ಬುದ್ಧಿಯು. ಕೊಡತಕ್ಕ ನೈವೇದ್ಯವು ಚಿತ್ತವು. ಊಟಮಾಡಿಸುವ ಸಾಧನವು ಅಹಂಕಾರವು. ತಿನ್ನುವ ವೀಳೆಯವು ಮನಸ್ಸಿನಲ್ಲಿ ಉತ್ಪನ್ನವಾಗುವ ಪರಿಣಾಮ ಸುಖವು. ವಂದನೆಯು ಮನಸ್ಸಿನಲ್ಲಿಯ ಪ್ರೀತಿಯು. ಹೀಗೆ ಪ್ರಾಣಲಿಂಗಕ್ಕೆ ಪೂಜೆಯನ್ನು ಮಾಡಬೇಕೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಇದು ಒಂದು ರೀತಿಯ ಅಂತರಂಗ ಪೂಜೆಯು. ಈ ಪೂಜೆಯಿಂದಲೇ ಬಹಿರಂಗದ ಪೂಜೆಯನ್ನಾದರೂ ಮಾಡಬೇಕು. ಈ ಬಗೆಯ ವರ್ತನೆಯಿಂದ ಅಂತರಂಗ ಬಹಿರಂಗ ಇವೆರಡೂ ಪರಸ್ಪರ ಕೂಡುವವು. ಈ ಬಗೆಯ ಲಿಂಗಾರ್ಚನೆಯಿಂದ ಪರಮಾತ್ಮನು ಒಳಗೂ ಹೊರಗೂ ಭರಿತನಾಗುವನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನಃ—** ೪೦. ಬೆಡಗಿನಲ್ಲಿ ಅಗ್ನಿ ಮೈದೋರದಿದ್ದಲ್ಲಿ, ಆಕಾರ ನಾಸ್ತಿಯಾಗದು. ಇಷ್ಟಲಿಂಗಕ್ಕೆ ಕಾಯದ ಕೈಮುಟ್ಟಿ ಮಾಡುವ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಬೆಡಗಿನಲ್ಲಿಪ್ಪ ಜ್ಞಾನಾಗ್ನಿ ಮೈದೋರಿದಡೆ ಆಕಾರ ನಾಸ್ತಿಯಾಯಿತ್ತು. ಅಂಗದ ಮೇಲಣ ಲಿಂಗದ ಜವನಿಕೆ ಬಗೆದಗೆದಡೆ ಕಾಯದ ಪರಿ ನಷ್ಟವಾಗಿ ಜ್ಞಾನಾಗ್ನಿಯಿಂದ ಪ್ರಾಣನ ಭೋಗ ನಷ್ಟ. ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ನಿಮ್ಮ ಪೂಜಿಸುವ ಶರಣನ ಮರ್ತ್ಯನೆಂದಡೆ ನಾಯಕನರಕ ತಪ್ಪದು.

**ಭಾವಃ—** ಅಂಗ ಲಿಂಗ ಸಂಬಂಧದಲ್ಲಿ ಒಂದು ಬಗೆಯ ಘರ್ಷಣವಿದೆ. ಈ ಘರ್ಷಣದಿಂದ ಒಂದು ಶಕ್ತಿಯು ಉತ್ಪನ್ನವಾಗುವದು. ಎರಡು ಕಾಷ್ಠಗಳು ಪರಸ್ಪರ ಘರ್ಷಣಹೊಂದಿದರೆ ಅಗ್ನಿಯು ಹುಟ್ಟಿ ಅದು ಆ ಕಾಷ್ಠಗಳನ್ನು ಸುಟ್ಟುಬಿಡುವದು. ಆದರಂತೆಯೇ ಭಕ್ತನ ಪೂಜಾವಿಧಾನವಾದರೂ ಇರುತ್ತದೆ. ಅವನಾದರೂ ಅಷ್ಟವಿಧಾರ್ಚನೆ ಷೋಡಶೋಪಚಾರಗಳನ್ನು ಮಾಡುವನು. ಆವರೆ ಇವುಗಳ ಮೂಲಕ ಅವನಲ್ಲಿ ಜ್ಞಾನಾಗ್ನಿಯು ಹುಟ್ಟಿ ಅವನ ಅಂಗಭಾವವನ್ನು ನಷ್ಟಗೊಳಿಸಿ



ಅವನ ಆಕಾರವನ್ನು ದಹಿಸಿ ಬಿಡುತ್ತದೆ. ಅಂಗದ ಮೇಲಿನ ಲಿಂಗದ ಸ್ವರೂಪವು ಹೀಗೆ ಪ್ರಕಟವಾಗಲು ಅವನ ಅಂಗದ ಸ್ಥಿತಿಯು ನಷ್ಟವಾಗಿ ಅಂಗದ ಮೂಲಕ ಪ್ರಾಣಕ್ಕೆ ಒದಗುವ ಭೋಗವಾದರೂ ನಷ್ಟವಾಗುವದು. ಹೀಗೆ ಇವೆರಡೂ ನಷ್ಟವಾಗಲು ಜ್ಞಾನವೆಂಬ ಪ್ರಕಾಶವು ಅವನಲ್ಲಿ ಕಂಗೊಳಿಸ ಹತ್ತುವದು. ಹೀಗೆ ಪೂಜಿಸುವಂಥ ಶರಣನು ಮರ್ತ್ಯನೆಂದರೆ ನಾಯಕ ನರಕವೆಂದು ವಚನಕಾರನು ಹೇಳಿದ್ದಾನೆ.

**ವಚನ:—** ೪೧ ದೇವಾ ಮಂಗಳ ಮಜ್ಜನಮಂ ಮಾಡಲು ಶಿವಗಂಧೋದಕದಿಂದ ಪಾದಾರ್ಚನೆಯುಂ ಮಾಡಿ ಹೊಂಗಳಸದೊಳಗರ್ಘ್ಯಂಗಳಂ ತುಂಬಿ ಮಧುಪರ್ಕಮಂ ಮಾಡಿ ದೇವಾಂಗ ವಸ್ತ್ರಂಗಳನುಡಿಸಿ ಷೋಡಶಾಭರಣಂಗಳಂ ತೊಡಿಸಿ, ದೇವಗಂಗೆ ಗಂಧಾಕ್ಷತೆ ಪುಷ್ಪಂಗಳಿಂ ಪೂಜೆಯ ಮಾಡಿ ಅಗರು ಧೂಪಂಗಳಿಂ ಧೂಪಿಸಿ ಮಂಗಳಾಚರಣೆಯಾರೋಗಣೆವೀಳೆಯವನಳವಡಿಸಿ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಂಗೆ ಗೀತ ವಾದ್ಯ ನೃತ್ಯವನಾಡಿ ಮೆಚ್ಚಿಸುವ ಗಣಂಗಳಿಗೆ ನಮೋ ನಮೋ ಎಂಬೆನು.

**ಭಾವಃ—** ಈ ವಚನದಲ್ಲಿ ವಚನಕಾರನು ಅಷ್ಟವಿಧಾರ್ಚನೆ ಶೋಡಶೋಪಚಾರಗಳನ್ನು ಯಾವ ಬಗೆಯಾಗಿ ಮಾಡಬೇಕೆಂಬುದನ್ನು ಹೇಳಿರುವನು. ಇವನಿಗೆ ಮಂಗಳವೇ ಮಜ್ಜನವಾಗಿದೆ. ಶಿವಗಂಧೋದಕದಿಂದಲೇ ಪಾದಾರ್ಚನೆಯನ್ನು ಮಾಡಬೇಕು ಇದೇ ಬಗೆಯಾಗಿಯೇ ಅರ್ಘ್ಯ ಮಧುಪರ್ಕಾದಿಗಳನ್ನು ಅರ್ಪಿಸಬೇಕು. ದೇವಾಂಗ ಎಂದರೆ ವಸ್ತ್ರಗಳನ್ನು ಉಡಿಸಬೇಕು. ಷೋಡಶಾಭರಣಗಳನ್ನು ತೊಡಿಸಬೇಕು. ದೇವಗಂಗೆ ಗಂಧಾಕ್ಷತೆ ಪುಷ್ಪಗಳಿಂದ ಪೂಜೆಯ ಮಾಡಬೇಕು ಅಗರು ಧೂಪಗಳನ್ನು ಧೂಪಿಸಬೇಕು. ಹಾಗೂ ಮಂಗಳಾಚಾರವೆಂಬ ಆರೋಗಣೆ ವೀಳೆಯಗಳನ್ನು ಅಳವಡಿಸಬೇಕು, ಗೀತ ವಾದ್ಯ ನೃತ್ಯಗಳನ್ನು ಆಡಿಸಬೇಕು. ಹೀಗೆ ಮೆಚ್ಚಿಸುವವರೇ ನಿಜವಾದ ಗಣಗಳು. ಇವರಿಗೆ ನಾನು ನಮೋ ನಮೋ ಎಂದು ನಮಿಸುವೆನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನ:—** ೪೨ ದೇವದಾನವಮಾನವಋಷಿಜನಂಗಳೆಲ್ಲರು ಮಹಾಲಿಂಗವ ಕಂಡಿಹೆವೇ ಎಂದು ಅನೇಕ ಕಾಲಂಗಳಲ್ಲಿ ಜಪತಪ ಧ್ಯಾನವ ಮಾಡಿ ಸಮಾಧಿಯಲ್ಲಿದ್ದು ಕಾಣಲರಿಯದೆ ಬಳಲುತ್ತೈದಾರೆ. ಅವರಲ್ಲಿ ಸಾಮರ್ಥ್ಯ ಪುರುಷರಾಗಿ ಕಂಡಡೆಯೂ, ಕಂಡೇನು ಫಲ? ಘನಲಿಂಗಕ್ಕೆ

ಒಲಿಯರು. ಲಿಂಗವನೊಲಿಸಿಕೊಳಲರಿಯರು ಕೂಡಲರಿಯರು. ಅಲ್ಪಭೋಗಂಗಳ ನಿಕ್ಷೇಪಿಸಿ ಭೋಗಪದವ ಪಡೆದು ಪುಣ್ಯ ಪಾಪಂಗಳ ಬಲೆಯಲ್ಲಿ ಬೀಳುತ್ತಿರಲು ಅವರುಗಳ ಪರಿಯಂತಲ್ಲ. ಶಿವಶಿವ ಮಹಾದೇವ ಮಹಾಲಿಂಗದ ಕರುಣವನೇನೆಂದುಪಮಿಸಬಹುದು? ಶ್ರೀಗುರುವಾಗಿ ಕರುಣಿಸಿ ತಮ್ಮ ಪ್ರಸನ್ನ ಹಸ್ತದಿಂದೆನಗೆ ಜನನ ಮಾಡಿದ ಮಾತಾಪಿತನು ತಾನೆಯಾದನು. ಮಹಾದೀಕ್ಷೆಯಂ ಮಾಡಿ ಶ್ರೀಗುರುವಾದನು. ಮಂತ್ರೋಪದೇಶವ ಮಾಡಿ ಮಂತ್ರ ರೂಪಾಗಿ ಕರ್ಣದಲ್ಲಿ ಭರಿತವಾದನು. ಪ್ರಸಾದರೂಪಾಗಿ ಜಿಹ್ವೆಯಲ್ಲಿ ಭರಿತನಾದನು. ಮಹಾ ವಿಭೂತಿಯಾಗಿ ಭಾಳದಲ್ಲಿ ಭರಿತನಾದನು. ಇಂತು ಸರ್ವಾಂಗದಲ್ಲಿ ಭರಿತವಾದನು. ಮತ್ತೆ ಮತ್ತೆ ಮಹಾ ಚೋದ್ಯ. ಶ್ರೀ ಗುರುಲಿಂಗಮೂರ್ತಿಯನು ಪ್ರಾಣವನು ಏಕೀಭವಿಸಿ ಪ್ರಾಣಲಿಂಗವಾದಾತನಾಗಿ ಅಂಗದ ಮೇಲೆ ಬಿಜಯಂಗೈದು ಅಂಗಲಿಂಗವಾದನು. ಮಹಾಲಿಂಗವಾಗಿ ಕರಸ್ಥಲದಲ್ಲಿ ನಿರಂತರ ಪೂಜೆಗೊಳುತಿದ್ದನು. ಇಂತಹ ವಿದಿತವಹ ಸುಜ್ಞಾನವ ಕುರುಣಿಸಲೆಂದು ಶರಣ ಭರಿತನಾಗಿ ಬಂದು ಕರುಣಿಸಿದನು. ಇಂತೀ ಶ್ರೀ ಗುರುಲಿಂಗಜಂಗಮರೂಪಾಗಿ ಕರುಣಿಸಿ, ಪ್ರಸನ್ನವಾಗಿ ಪ್ರಸಾದವ ಕರುಣಿಸಿ, ಪ್ರಸಾದರೂಪಾಗಿ ಸಲಹಿದನು. ಸಾಲೋಕ್ಯ, ಸಾಮೀಪ್ಯ, ಸಾಯುಜ್ಯವೆನಿಪ ಚತುರ್ವಿಧ ಪದಕ್ಕೆ ಘನತರ ಪದ ದಾಸೋಹಪದದಲ್ಲಿ ನಿಲಿಸಿದನು. ಶಿವಶಿವಾ ಮಹಾಪದವನೇನೆಂದುಪಮಿಸಲರಿಯೆ. ಸದ್ಗುರುವಿನ ಕೃಪೆ. ವಾಙ್ಮನಾತೀತ ಮಹಾ ಘನ ಪರಿಣಾಮ ಸುಖವು. ಇಂತೀ ಸುಖವನು ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರ ತಾನೇ ಬಲ್ಲ.

ಭಾವಃ—ಬಹುಜನರು ಪರಮಾತ್ಮನನ್ನು ಕಾಣಬೇಕೆಂದು ಜಪತಪಧ್ಯಾನ ಮಾಡುವರು ಮತ್ತು ಯೋಗಾಭ್ಯಾಸವನ್ನು ಮಾಡುವರು. ಆದರೆ ಅವರಿಗೆ ಲಿಂಗವು ಸಾಧಿಸದು. ಅವರು ಕೇವಲ ಸಿದ್ಧಿಗಳನ್ನು ಒಂದುವೇಳೆ ಸಂಪಾದಿಸಬಹುದು. ಆದರೆ ಅದರಿಂದ ಫಲವಿಲ್ಲ. ಅವರು ಶ್ರೇಷ್ಠವಾದ ಲಿಂಗಕ್ಕೆ ಒಲಿಯಬೇಕು. ಆದರೆ ಹಾಗೆ ಒಲಿಯಲಾರರು. ಇವರು ಕರ್ಮದ ಜಾಲದಲ್ಲಿ ಸಿಕ್ಕು ಬಳಲುತ್ತಾರೆ.

ಆದರೆ ಲಿಂಗವನ್ನು ಸಾಧಿಸಬೇಕಾದರೆ ಗುರುವಿನ ಹಸ್ತದಿಂದ ದೀಕ್ಷೆಯನ್ನು ಹೊಂದಬೇಕು. ಮಂತ್ರೋಪದೇಶವನ್ನು ಹೊಂದಿ ಮಂತ್ರರೂಪನಾಗಬೇಕು. ಪ್ರಸಾದವನ್ನು ಸ್ವೀಕರಿಸಿ ಜಿಹ್ವೆಯಲ್ಲಿ, ವಿಭೂತಿಯನ್ನು



ಧಾರಣಮಾಡಿ ಭಾಳದಲ್ಲಿ, ಲಿಂಗಭರಿತನಾಗಬೇಕು. ಮಹಾ ಲಿಂಗಮೂರ್ತಿಯನ್ನೂ ಪ್ರಾಣವನ್ನೂ ಏಕೀಭವಿಸಬೇಕು. ಮಹಾಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಳ್ಳಬೇಕು. ಹೀಗೆ ಗುರುಲಿಂಗಜಂಗಮರೂಪಾಗಿ ಲಿಂಗವು ಭಕ್ತನ ಕರ ಮನ ಭಾವಗಳಲ್ಲಿ ತುಂಬಿಕೊಂಡು ಪ್ರಸಾದರೂಪಾಗಿ ಭಕ್ತನು ವ್ಯವಹರಿಸಿದರೆ ಅವನು ದಾಸೋಹ ಪದವನ್ನು ಹೊಂದುವನು. ಇದು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಪದಕ್ಕಿಂತಲೂ ಘನತರವಾದದ್ದು. ಇದು ವಾಙ್ಮನಾತೀತವಾದ ಮಹಾಘನ ಪರಿಣಾಮಸುಖವಿರುತ್ತದೆ.

ವಚನಃ— ೪೩. ವೇದವಾಕ್ಯ ವಿಚಾರಕ್ಕೆಬೀಜ, ಶಾಸ್ತ್ರವಾಕ್ಯ ಸಂದೇಹಕ್ಕೆ ಬೀಜ, ಪುರಾಣವಾಕ್ಯ ಪುಣ್ಯಕ್ಕೆ ಬೀಜ, ಭಕ್ತಿಯ ಫಲ ಭವಕ್ಕೆ ಬೀಜ. ಏಕೋಭಾವದ ನಿಷ್ಠೆ ಸಮ್ಯಜ್ಞಾನಕ್ಕೆ ಬೀಜ, ಸಮ್ಯಜ್ಞಾನ ಅದ್ವೈತಕ್ಕೆ ಬೀಜ, ಅದ್ವೈತ ಅರಿವಿಂಗೆ ಬೀಜ, ಅರಿವನಾರಡಿಗೊಂಡು ಕುರುಹಿಲ್ಲದ ಲಿಂಗದಲ್ಲಿ ತೆರಹಿಲ್ಲದಿಪ್ಪುದನರಿಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ?

ಭಾವ:— ಇದರಲ್ಲಿ ಭಕ್ತನು ಲಿಂಗದಲ್ಲಿ ಸಮರಸಭಾವವುಳ್ಳವನಾಗಿ ವರ್ತಿಸಬೇಕೆಂದು ಹೇಳಿದ್ದಾನೆ. ಇದೇ ಮೋಕ್ಷಕ್ಕೆ ಸಾಧನವು. ಬರೇ ವೇದ, ಶಾಸ್ತ್ರ, ಪುರಾಣ ಇವುಗಳನ್ನು ಓದುವದರಿಂದ ಪ್ರಯೋಜನವಿಲ್ಲ. ಕೇವಲ ಭಕ್ತಿಮಾರ್ಗದಿಂದಲೂ ಪ್ರಯೋಜನವಿಲ್ಲ. ಏಕೋಭಾವನಿಷ್ಠೆ ಅಥವಾ ಸಮ್ಯಜ್ಞಾನ ಅಥವಾ ಅದ್ವೈತಾಚರಣೆ ಇವಾವೂ ಉಪಯೋಗವಾದವುಗಳಲ್ಲ. ಆದರೆ ಲಿಂಗದಲ್ಲಿ ಭಿನ್ನಭಾವವಿಲ್ಲದೆ ಇರಬೇಕೆಂದು ವಚನಕಾರರು ಹೇಳಿದ್ದಾನೆ.

## ಇಷ್ಟಲಿಂಗ ಹೋದರೆ ಆತ್ಮಘಾತ ಮಾಡಕೂಡದು.

**ವಿವರಣೆ:**— ಅನೇಕರು ಲಿಂಗದ ವಿಷಯವಾಗಿ ವಿಪರೀತ ಕಲ್ಪನೆಗಳನ್ನು ಮಾಡಿಕೊಂಡು ಅದು ಕಳೆದರೆ ಅಥವಾ ಭಗ್ನವಾದರೆ ಆತ್ಮಘಾತ ಮಾಡಿಕೊಳ್ಳುವದುಂಟು. ಇದು ಪಾಪಿಷ್ಠರ ವರ್ತನೆ ಎಂದು ವಚನಕಾರರ ಮತವಿದೆ. ಇವರಿಗೆ ಇಷ್ಟಲಿಂಗದ ಮರ್ಮವೇ ತಿಳಿಯುವದಿಲ್ಲೆಂದು ಅವರು ಅನೇಕ ವಚನಗಳಲ್ಲಿ ಹೇಳಿರುವರು. ಇದನ್ನೇ ಉರಿಲಿಂಗ ಪೆದ್ದಿಯು ಸಮರ್ಥಿಸಿ ಕೆಲವು ಉಕ್ತಿಗಳನ್ನು ನುಡಿದಿರುವನು.

**ವಚನ:**— ೪೪. ಅರುಹೆಂಬ ಗುರುವಿನ ಕೈಯಲ್ಲಿ, ವಿರಕ್ತಿ ಎಂಬ ಶಿವಧಾರವಂ ಕೊಟ್ಟು, ಸುಮತಿ ಎಂಬ ಸಜ್ಜೆಯಂ ಪವಣಿಸಿ, ಸಮತೆ ಎಂಬ ಲಿಂಗಸಾಹಿತ್ಯವ ಬಿಜಯಂಗೈಸಿಕೊಂಡು, ಸರ್ವಜೀವದಯಾಪರನೆಂದು, ಲಿಂಗಾರ್ಚನೆಯಂ ಮಾಡುವ ಭಕ್ತನ ಕರಾಧಾರದ ಲಿಂಗವು ತಪ್ಪಿ ಆಧಾರ ಸ್ಥಾಪ್ಯವಾದರೇನು? ಶಂಕೆಗೊಳಲಿಲ್ಲ. ತೆಗೆದುಕೊಂಡು ಮಜ್ಜನಕ್ಕೆರೆವುದೇ ಸದಾಚಾರ. ಶ್ರೀ ಗುರು ಷಟ್‌ಸ್ಥಲವನು ಅಂತರಂಗದಲ್ಲಿ ನಿಕ್ಷೇಪಿಸಿದನಾಗಿ, ದೃಶ್ಯಕ್ಕೆ ತ್ಯಾಗವಲ್ಲದೆ ಅದೃಶ್ಯಕ್ಕೆ ತ್ಯಾಗ ಉಂಟೇ? ಇಲ್ಲ. ಉಂಟೆಂದನಾದಡೆ ಗುರುದ್ರೋಹ. ಆ ಭಕ್ತನಿಂತವನಂತವನೆಂದು ದೂಷಿಸಿ ನುಡಿದವರಿಗೆ ಅಘೋರ ನರಕ ತಪ್ಪದಯ್ಯಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ವಚನಕಾರನು ಈ ವಚನದಲ್ಲಿ ಲಿಂಗವು ಕೈತಪ್ಪಿ ಕೆಳಗೆ ಬಿದ್ದರೆ ಏನೂ ಶಂಕೆ ಪಡಬಾರದು. ಅದನ್ನು ಎತ್ತಿ ತೆಗೆದುಕೊಂಡು ಪೂಜಾದಿ ಕಾರ್ಯಗಳನ್ನು ಮಾಡಬೇಕೆಂದು ಹೇಳಿರುವನು. ಯಾಕಂದರೆ ಇದು ಕೇವಲ ಬಾಹ್ಯಲಿಂಗವಿದ್ದು, ನಿಜವಾದ ಲಿಂಗವು ಅವನ ಪ್ರಾಣದಲ್ಲಿ ನೆಲೆಗೊಂಡಿರುತ್ತದೆ. ಈ ಲಿಂಗವು ಹೋಗಲಾರದು. ದೃಶ್ಯ ಪದಾರ್ಥಕ್ಕೆ ತ್ಯಾಗವಲ್ಲದೆ ಅದೃಶ್ಯಕ್ಕೆ ತ್ಯಾಗವಿರುವದಿಲ್ಲ. ಈ ಅದೃಶ್ಯ ಲಿಂಗವು ಭಕ್ತನ ಅರುಹು, ಸುಮತಿ, ಸಮತೆ, ನಡೆನುಡಿಗಳಲ್ಲಿ ಕೂಡಿಕೊಂಡು ಏಕಾಕಾರವಾಗಿರುತ್ತದೆ. ಇದನ್ನು ಭಕ್ತನು ಬಿಟ್ಟಿರಲಾರನು. ಆದ್ದರಿಂದ ಬಾಹ್ಯಲಿಂಗವು ತಪ್ಪಿ ಬಿದ್ದರೆ ಅದನ್ನು ಎತ್ತಿ ತೆಗೆದುಕೊಂಡು ಪೂಜಿಸಬೇಕೆಂದು ವಚನಕಾರನು ಇಲ್ಲಿ ಹೇಳಿರುವನು.



**ವಚನ:**— ೪೫. ಶ್ರೀಗುರು ಶಿಷ್ಯಂಗೆ ಮಂತ್ರವ ಮೂರ್ತಿಗೊಳಿಸಬೇಕಾಗಿ ಪೃಥ್ವಿಯ ಮೇಲಣ ಕಣಿಯ ತಂದು ಇಷ್ಟಲಿಂಗವಂ ಮಾಡಿ ಶಿಷ್ಯನ ತನುವಿನ ಮೇಲೆ ಅವಧರಿಸಿದ ಲಿಂಗವು ಅವದಳವಾಗಿ ಭೂಮಿಯಲ್ಲಿ ಸಿಂಹಾಸನಂಗೊಂಡಿತ್ತೆಂದು ಸಮಾಧಿಯ ಹೊಗುವರಯ್ಯ. ಲಿಂಗಕ್ಕೆ ಅವದಳವಾದರೆ ಭೂಮಿ ತಾಳಬಲ್ಲುದೆ ಅಯ್ಯ? ಮಾರಾಂತನ ಗೆಲಿವೆನೆಂದು ಗರುಡಿಯ ಹೊಕ್ಕು ಕಠಾರಿಯ ಕೋಲ ಕಳೆದುಕೊಂಡು ಸಾಧನೆಯ ಮಾಡುವಲ್ಲಿ ಕೈ ತಪ್ಪಿ ಕೋಲು ನೆಲಕ್ಕೆ ಬಿದ್ದರೆ, ಆ ಕೋಲ ಬಿಟ್ಟು, ಸಾಧನೆಯ ಬಿಟ್ಟು ಕಳೆವರೆ ಅಯ್ಯ? ತಟ್ಟು ಮುಟ್ಟಿ ಹಳಚುವಲ್ಲಿ ಅಲಗು ಬಿದ್ದರೆ ಭಂಗವಲ್ಲದೆ ಕೋಲು ಬಿದ್ದರೆ ಭಂಗವೇ ಅಯ್ಯ? ಆ ಕೋಲ ಕಳೆದುಕೊಂಡು ಸಾಧನೆಯಂ ಮಾಡುವದೇ ಕರ್ತವ್ಯ. ಆ ಲಿಂಗವು ಎಂದಡೇನಯ್ಯ? ಶ್ರೀವಿಭೂತಿ ವೀಳೆಯಕ್ಕೆ ಸಾಕ್ಷಿಯಾಗಿ ಬಂದ ಶಿವಗಣಂಗಳು ಹುಸಿಯೇ? ಆ ಗಣಂಗಳು ಹುಸಿಯಾದಡೆ ಕರ್ಣ ಮಂತ್ರ ಹುಸಿಯೇ? ಆ ಕರ್ಣ ಮಂತ್ರ ಹುಸಿಯಾದಡೆ, ಶ್ರೀಗುರುಲಿಂಗವು ಹುಸಿಯೇ? ಶ್ರೀಗುರುಲಿಂಗವು ಹುಸಿಯಾದಡೆ ಜಂಗಮಲಿಂಗ ಹುಸಿಯೇ? ಆ ಜಂಗಮಲಿಂಗ ಹುಸಿಯಾದಡೆ ಪಾದತೀರ್ಥ ಪ್ರಸಾದ ಹುಸಿಯೇ? ಇಂತೀ ಷಟ್‌ಸ್ಥಲವ ತುಚ್ಛವ ಮಾಡಿ ಗುರೂಪದೇಶವ ಹೀನ ಮಾಡಿ ಸಮಾಧಿಯ ಹೊಗುವ ಪಂಚಮಹಾಪಾತಕರ ಮುಖವ ನೋಡಲಾಗದು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಲಿಂಗವು ಭಿನ್ನವಾದರೆ ಆತ್ಮಹತ್ಯ ಮಾಡಬಾರದೆಂದು ವಚನಕಾರನು ಹೇಳಿರುವನು. ಇಷ್ಟಲಿಂಗವು ಸಾಧಕನ ಕಯ್ಯ ಕೋಲಿನಂತೆ ಇದೆ. ಆ ಕೋಲು ಕೈ ತಪ್ಪಿ ಕೆಳಗೆ ಬಿದ್ದರೆ, ಸಾಧಕನು ಅದನ್ನು ಪುನಃ ಎತ್ತಿ ತನ್ನ ಸಾಧನೆಯನ್ನು ನಡಿಸುವನು. ಹಾಗೆಯೇ ಲಿಂಗವು ತಪ್ಪಿಹೋದರೆ, ಇನ್ನೊಂದನ್ನು ಧಾರಣಮಾಡಿ ತನ್ನ ಲಿಂಗಸಾಧನೆಯನ್ನು ಜರಗಿಸಬೇಕೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಲಿಂಗವು ಕಳೆದಾಕ್ಷಣವೇ ಅದನ್ನು ದಯಪಾಲಿಸಿದ ಶಿವಗಣಂಗಳೂ ಉಪದೇಶಿಸಿದ ಮಂತ್ರವೂ ಹುಸಿಯಾಗಲಾರವು. ಜಂಗಮಲಿಂಗ ಪಾದತೀರ್ಥ ಪ್ರಸಾದ ಇವುಗಳ ಮೇಲೆಯೂ ಲಿಂಗವು ಅವಲಂಬಿಸಿದ್ದು ಇವೂ ಹುಸಿಯಾಗಲಾರವು. ಆದ್ದರಿಂದ ಆತ್ಮಘಾತಮಾಡಿಕೊಂಡು ಸಮಾಧಿಯನ್ನು ಹೊಗಬಾರದೆಂದು ವಚನಕಾರನ ಅಭಿಪ್ರಾಯವು.

## ಲಿಂಗವೊಂದನ್ನೇ ನಂಬು.

**ವಿವರಣೆಃ—** ಲಿಂಗಧಾರಣೆಯಾದ ಬಳಿಕ ಲಿಂಗ ಒಂದನ್ನೇ ನಂಬಬೇಕೆಂದು ವೀರಶೈವ ಧರ್ಮದ ಮುಖ್ಯ ತತ್ವವದೆ. ಅದನ್ನೇ ವಚನಕಾರರು ಯಾವಾಗಲೂ ಸಮರ್ಥಿಸಿ ನುಡಿಯುತ್ತಾರೆ. ಉರಿಲಿಂಗಪೆದ್ದಿಯು ಈ ತತ್ವವನ್ನು ಕೆಳಗಿನ ವಚನಗಳಲ್ಲಿ ಹೇಳಿರುವನು.

**ವಚನಃ—** ೪೬. ಪರುಷದ ಗೃಹದೊಳಗಿರ್ದು ತಿರಿವನೇ ಮನೆಮನೆಯ? ತೊರೆಯೊಳಗಿದ್ದವನು ತೃಷೆಯಾಗಲು ಅರಸುವನೇ ಕೆರೆಯುದಕವ? ಮಂಗಳ ಲಿಂಗವಂಗದ ಮೇಲೆ ಇದ್ದು ಅನ್ಯಲಿಂಗಂಗಳ ನೆನೆವನೇ ನಿಮ್ಮ ಭಕ್ತನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾವಃ --** ಪರಮಾತ್ಮನ ಕಳೆಯು ತನ್ನಲ್ಲಿ ಒಡಮೂಡಿದ ಬಳಿಕ ಅದರ ಪ್ರಾಬಲ್ಯವನ್ನು ತನ್ನಲ್ಲಿ ಹೆಚ್ಚಿಸಬೇಕೇ ಹೊರ್ತು ಅದನ್ನು ಬಿಟ್ಟು ಮತ್ತೊಂದರ ಕಡೆಗೆ ಭಕ್ತನಾದವನು ತನ್ನ ಲಕ್ಷವನ್ನು ಹತ್ತಿಸಕೂಡದು. ಅವನು ಇತರ ದೇವತೆಗಳನ್ನು ಪೂಜಿಸಬಾರದು. ಒಂದು ವೇಳೆ ಪೂಜಿಸಿದರೆ ಪರುಷದ ಕಣಿಯು ತನ್ನಲ್ಲಿ ಇದ್ದ ಬಳಿಕ ಅದರ ಉಪಯೋಗವನ್ನು ಮಾಡಿಕೊಳ್ಳುವದನ್ನು ಬಿಟ್ಟುಕೊಟ್ಟು ಮನೆಮನೆ ಭಿಕ್ಷೆ ಬೇಡಿದಂತೆಯೇ ಸರಿ. ಅಥವಾ ಹರಿಯುವ ನದಿಯಲ್ಲಿರಲು ಅದನ್ನು ಬಿಟ್ಟುಕೊಟ್ಟು ಕೆರೆಯುದಕವನ್ನು ಬಯಸಿದಂತೆ. ಈ ಉದಾಹರಣೆಗಳ ಮೇಲಿಂದ ಲಿಂಗ ಮತ್ತು ಇತರ ಸ್ಥಾವರಲಿಂಗ ಇವುಗಳಲ್ಲಿರುವ ಭೇದವನ್ನು ಅರಿಯಬಹುದು. ಇಷ್ಟಲಿಂಗದ ಪರಿಣಾಮಗಳು ಬಹು ವ್ಯಾಪಕವಾಗಿವೆ. ಆದರೆ ಸ್ಥಾವರಲಿಂಗದ ಪರಿಣಾಮಗಳು ಆಕುಂಚಿತವಾಗಿರುತ್ತವೆಂದು ವಚನಕಾರನ ಭಾವವು.

**ವಚನಃ—** ೪೭. ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ ಮರಳಿ ಅನ್ಯದೈವಂಗಳನಾರಾಧಿಸುವ ಕುನ್ನಿಗಳು ನೀವು ಕೇಳಿರೋ. ವಿಷ್ಣುವೇ ದೈವವೆಂದು ಆರಾಧಿಸಿದ ಬಲಿಗೆ ಬಂಧನವಾಯಿತ್ತು. ವಿಷ್ಣುವೇ ದೈವವೆಂದು ಆರಾಧಿಸಿದ ಕರ್ಣನ ಕವಚ ಹೋಯಿತ್ತು; ವಿಷ್ಣುವೇ ದೈವವೆಂದು ಆರಾಧಿಸಿದ ನಾಗಾರ್ಜುನನ ಶಿರ ಹೋಯಿತ್ತು. ಅದಂತಿರಲಿ.



ಬ್ರಾಹ್ಮಣನೇ ದೈವವೆಂದು ಆರಾಧಿಸಿದ ದಕ್ಷಂಗೆ ಕುರಿದಲೆಯಾಯಿತ್ತು. ಮೈಲಾರನೇ ದೇವರೆಂದಾರಾಧಿಸಿದಾತನು ಕೊರಳಿನಲ್ಲಿ ಕವಡೆಯ ಕಟ್ಟಿ ನಾಯಾಗಿ ಬೊಗುಳುತ್ತಿರ್ಪ. ಭೈರವನೇ ದೇವರೆಂದಾರಾಧಿಸಿದವನು ಕೊರಳಿನಲ್ಲಿ ಕವಡೆಯ ಕಟ್ಟಿ ಕುರುಳ ಬೆರಳ ಕಡಿದಿಕ್ಕಿ ಬಾಹಿರರಾದರು. ಮಾಯಿರಾಣಿಯೇ ದೈವವೆಂದಾರಾಧಿಸಿದಾತನು ಕೊರಳಿಗೆ ಕವಡೆಯ ಕಟ್ಟಿ ತಲೆಯಲ್ಲಿ ಕೆರಹ ಹೊತ್ತು ಬೇವಿನ ಸೊಪ್ಪನುಟ್ಟು, ಲಜ್ಜೆಯ ನೀಗಿದ. ಇನ್ನು ಬಿನುಗು ದೈವಂಗಳ ಭಕ್ತಿ ಬಣಗುನಾಯಿ ಒಣಗಿದೆಲುವ ಕಚ್ಚಿಕೊಂಡು ಕಂಡಕಂಡೆಡೆಗೆ ಹರಿದಂತಾಯಿತ್ತು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ—** ಬಲಿಚಕ್ರವರ್ತಿ, ಕರ್ಣ, ನಾಗಾರ್ಜುನ, ದಕ್ಷ ಮೊದಲಾದವರು ಒಬ್ಬನೇ ದೇವರೆಂದು ಭಾವಿಸದೆ ಬೇರೆ ದೈವಗಳನ್ನು ಭಜಿಸಿದ್ದರಿಂದ ಯಾವ ದುಃಸ್ಥಿತಿಯು ಅವರಿಗೆ ಪ್ರಾಪ್ತವಾಯಿತೆಂಬದನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಹಾಗೆಯೇ ಮೈಲಾರ, ಭೈರವ, ಮಾಯಿರಾಣಿ ಮೊದಲಾದ ಕಿರುಕುಳ ದೈವಗಳನ್ನು ಭಜಿಸಿದಲ್ಲಿ ಎಂಥ ಅವಹೇಲನವು ಪ್ರಾಪ್ತವಾಗುತ್ತದೆಂಬದನ್ನು ಇಲ್ಲಿ ವಿವರಿಸಿರುವನು.

# ಗುರುಲಿಂಗಜಂಗಮ.

**ವಿವರಣೆ:—** ಮುಂದಿನ ವಚನಗಳಲ್ಲಿ ವಚನಕಾರನು ಗುರುಲಿಂಗಜಂಗಮದ ಸ್ವರೂಪ, ಅವುಗಳ ಕಾರ್ಯಗಳು, ಅವುಗಳ ಪರಸ್ಪರ ಸಂಬಂಧ, ಶಿವಯೋಗ ಇವುಗಳ ಮರ್ಮವನ್ನು ವಿಶದಪಡಿಸಿರುವನು. ಗುರುಲಿಂಗಜಂಗಮವನ್ನು ತನ್ನಲ್ಲಿ ಬರಮಾಡಿಕೊಳ್ಳುವದೇ ಶಿವಯೋಗವೆನಿಸುವದು. ಈ ಶಿವಯೋಗಸಾಧನೆಯಲ್ಲಿ ಗುರುವಿನಲ್ಲಿ ಪೂರ್ಣ ಸಾಮ್ಯಭಾವವನ್ನು ಹೊಂದಿ ಅವನ ಗುಣಗಳನ್ನು ತನ್ನಲ್ಲಿ ಬರಮಾಡಿಕೊಂಡು ಆಚರಿಸಬೇಕು. ಇದರಿಂದ ಲಿಂಗಜಂಗಮಗಳು ತನ್ನಲ್ಲಿ ಒಡಮೂಡುವವು. ಮತ್ತು ಕಡೆಗೆ ಶಿವಯೋಗವನ್ನು ಹೊಂದಿ ಮೋಕ್ಷವನ್ನೈದುವನು.

**ವಚನ:—**೪೮. ಅನಂತ ಜನ್ಮಂಗಳ ಪಾಪಂಗಳು ಸವೆದು ಹೋಗಿ ಶ್ರೀ ಗುರುವಿನ ಕರುಣಾಕಟಾಕ್ಷದಿಂದ ಪ್ರಾಣಲಿಂಗೋಪದೇಶವ ಪಡೆದು, ಸದ್ಭಕ್ತರಾಗಿ ಶಿವಲಿಂಗ ದರ್ಶನ ಸ್ಪರ್ಶನವ ಮಾಡಿ, ಆ ಲಿಂಗವನಂಗದಲ್ಲಿ ಧರಿಸಿಕೊಂಡು, ಅಂಗವೇ ಲಿಂಗ, ಲಿಂಗವೇ ಅಂಗ, ಪ್ರಾಣವೇ ಲಿಂಗ, ಲಿಂಗವೇ ಪ್ರಾಣವಾಗಿ, ಅಂತರಂಗ ಬಹಿರಂಗ ಸರ್ವಾಂಗವೆಲ್ಲವೂ ಲಿಂಗವಾದ ಬಳಿಕ, ಇಂತೀ ಶ್ರೀಗುರು ಕೊಟ್ಟ ಲಿಂಗವ ಬಿಟ್ಟು ಬೇರೆ ಮತ್ತೆ ಆತ್ಮತತ್ವವ ವಿಚಾರಿಸಿ ನೋಡಬೇಕೆಂದು, ಪರಮಾತ್ಮನಲ್ಲಿ ಯೋಗವ ಮಾಡಿ ಯೋಗಿಗಳಾಗಿ ಮುಕ್ತರಾದೆವೆಂಬಿರಿ! ಶಿವಶಿವಾ! ಆತ್ಮನನು ಪರಮಾತ್ಮನನು ಶ್ರೀ ಗುರುಸ್ವಾಮಿ ಒಂದು ಮಾಡಿ, ಇದೇ ನಿನ್ನ ನಿಜತ್ವವೆಂದು ಅರುಹ ಹೇಳಿ ತೋರಿಕೊಟ್ಟ ಬಳಿಕ, ಇಂತಹ ಗುರುವಾಜ್ಞೆಯ ಮೀರಿ ಲಿಂಗವನರಿಯದೆ, ಲಿಂಗಬಾಹಿರರಾದ ದ್ವಿಜನನು, ಯೋಗಿಯನು, ಸನ್ಯಾಸಿಯನು ಗುರುವೆಂದು ಭಾವಿಸಬಹುದೆ? ಶಿವಶಿವಾ! ಅದು ಗುರುದ್ರೋಹ ಪರಶಿವಮೂರ್ತಿಯಾದ ಗುರುಸ್ವಾಮಿಯು ಷಡ್ದರ್ಶನಗಳಿಗೂ ಸಮಸ್ತ ಮತಂಗಳಿಗೂ ಸಕಲಾಗಮಂಗಳಿಗೂ ಶಿವನೊಬ್ಬನೇ ಕರ್ತನೆಂದು, ಶಿವದರ್ಶನವೇ ವಿಶೇಷವೆಂದು ಅಧಿಕನೆಂದು ಹೇಳಿ ತೋರಿಕೊಟ್ಟ ಬಳಿಕ, ಶೈವವೆಂದು, ಶಾಕ್ತೇಯವೆಂದು, ವೈಷ್ಣವವೆಂದು, ಗಾಣಾಪತ್ಯವೆಂದು, ಸೌರವೆಂದು, ಕಾಪಾಲಿಕವೆಂದು, ಇಂತೀ ಷಡ್ದರ್ಶನಂಗಳಿಗೂ ಶಿವನೊಬ್ಬನೇ ಕರ್ತ, ಇಂತೀ ಷಡ್ದರ್ಶನಕ್ಕೆ ಶಿವದರ್ಶನವೇ ಅಧಿ



ಕವೆಂದು ಇಂತೀ ಶಿವದರ್ಶನ ಮಾರ್ಗವಲ್ಲದೆ ಮುಕ್ತಿ ಇಲ್ಲವೆಂದು, ಆ ಪರಶಿವನೆಂಬ ಗುರುಮೂರ್ತಿ ಅರುಹಿ ಕಾಣಿಸಿ ಹೇಳಿ ತೋರಿಕೊಟ್ಟ ಬಳಿಕ. ಅದೆಂತೆಂದಡೆ, ಶಿವಧರ್ಮೆ ॥ ಶ್ಲೋ ॥ ದರ್ಶನಂ ಷಡ್ವಿಧಂ ಪ್ರೋಕ್ತಂ ಶೈವ ಶಾಕ್ತೇಯ ವೈಷ್ಣವಂ । ಗಾಣಾಪತ್ಯಂಚ ಸೌರಂಚ ಕಾಪಾಲಿಕ ಇತಿ ಸ್ಮೃತಃ ॥ ಮತ್ತಂ ॥ ಷಡ್ದರ್ಶನಾದಿ ದೇವೋ ಹಿ ಮಹಾದೇವೋ ನ ಸಂಶಯಃ । ಮಂತ್ರಪೂಜಾದಿ ಭಿನ್ನಾನಾಂ ಮೂಲಂ ಪರಶಿವಸ್ತಥಾ ॥ ಎಂದುದಾಗಿ ಇನ್ನು ವೈಷ್ಣವವೆಂದು, ಆತ್ಮಯೋಗವೆಂದು, ಶಾಕ್ತಿಕವೆಂದು, ವೈದಿಕವೆಂದು, ಇಂತೀ ಭ್ರಾಂತಿನ ದರ್ಶನ ಮತಂಗಳನು ಕೇಳಿ, ಅಲ್ಲಿಯ ಧರ್ಮಾಧರ್ಮವನು ಕೇಳಿ, ಅಲ್ಲಿ ಉಪದೇಶವ ಮಾಡಿಸಿಕೊಳಬಹುದೆ? ಶಿವಶಿವಾ! ಅದು ಗುರುದ್ರೋಹ. ಆ ಶ್ರೀಗುರುವಿನಾಜ್ಞೆಯ ಮೀರದಿರಿ. ಆ ಪರಶಿವ ಮೂರ್ತಿ ತಪ್ಪನೇ ಗುರುಸ್ವಾಮಿಯಾಗಿ ಚನ್ನಾಗಿ ಅರಿಯಿಸಿ ತೋರಿ ಹೇಳಿ ಕೊಟ್ಟನಲ್ಲದೆ ಆ ಶ್ರೀಗುರುಸ್ವಾಮಿ ಏನು ತಪ್ಪಿ ಹೇಳಿದುದಿಲ್ಲ. "ಏಕೋ ದೇವೋ ನ ದ್ವಿತೀಯಾಯ ತಸ್ಥೆ" ಎಂದುದಾಗಿ, ಶಿವನೊಬ್ಬನೇ ದೈವವೆಂದು ತೋರಿಕೊಟ್ಟ ಶ್ರೀ ಗುರು. ॥ ಶೃತಿ ॥ "ಏಕೋಧ್ಯೇಯಃ" ಎಂದು ಶಿವನೊಬ್ಬನನ್ನೇ ಧ್ಯಾನಿಸಿ ಪೂಜಿಸಿ ಎಂದು ಹೇಳಿ ತೋರಿಕೊಟ್ಟನು ಶ್ರೀ ಗುರು. ॥ ಶೃತಿ ॥ "ನಿರ್ಮಾಲ್ಯಮೇವ ಸಹ ಭಕ್ಷಯಂತಿ" ಎಂದುದಾಗಿ, ಶಿವಪ್ರಸಾದವನೆ ಗ್ರಹಿಸಿ ಎಂದು ಪ್ರಸಾದವ ಕರುಣಿಸಿದ ಶ್ರೀ ಗುರುವು. ಇಂತಹ ಶ್ರೀಗುರು ಮರುಳನು, ನೀ ಬುದ್ಧಿವಂತನೇ? ಕೇಳಾ! ನಿಮ್ಮ ಗುರುವ ಮರುಳನ ಮಾಡಿದಿರಿ. ಅದೆಂತೆಂದೊಡೆ ನಿಮ್ಮಿಚ್ಛೆಯಲ್ಲಿಯೇ ಬಂದನಾಗಿ. ಅದಲ್ಲದೆ ಮತ್ತೆ ಕೇಳು. ಪೂರ್ವದ ಪುರುಷರು ಮರುಳರು, ನೀ ಒಬ್ಬನೇ ಬುದ್ಧಿವಂತನೇ? ಕೇಳೊ. ದೂರ್ವಾಸ, ಉಪಮನ್ಯು, ದಧೀಚಿ, ಜಮದಗ್ನಿ, ಮಾರ್ಕಂಡೇಯ, ಪಾರಾಶರ ಮೊದಲಾದ ಋಷಿಜನಂಗಳೆಲ್ಲ ಶಿವಾರ್ಚನೆಯ ಮಾಡಿದರು. ಬ್ರಹ್ಮ ವಿಷ್ಣು ಮೊದಲಾದವರೆಲ್ಲರೂ ಶಿವಲಿಂಗಾರ್ಚನೆಯ ಮಾಡಿದರು. ಕೇಳಿರೇ, ನೋಡಿರೇ ದೃಷ್ಟವನು. ಮತ್ಸ್ಯಕೇಶ್ವರ, ಕೂರ್ಮೇಶ್ವರ, ವರಾಹೇಶ್ವರ, ನಾರಸಿಂಹೇಶ್ವರ, ರಾಮೇಶ್ವರ ಎಂದು ದಶಾವತಾರಂಗಳಲ್ಲಿ ಶಿವಲಿಂಗ ಪ್ರತಿಷ್ಠೆಯಂ ಮಾಡಿ, ಶಿವಲಿಂಗಾರ್ಚನೆಯಂ ಮಾಡಿದರು. ಅನೇಕ ವೇದಶಾಸ್ತ್ರಾಗಮ ಪುರಾಣಂಗಳ ಕೇಳಿರೇ, ನೋಡಿರೇ. ಅದೆಂತೆಂದೊಡೆ ॥ ಯಂ ಯಂ ಕಾಮಯತೆ ಕಾಮಂ ತಂ ತಂ ಲಿಂಗಾರ್ಚನಾಲ್ಲಭೇತ್ । ನ ಲಿಂಗೇನ ವಿನಾ ಸಿದ್ಧಿರ್ದುರ್ಲಭಂ ಪರಮಂ ಪದಂ ॥ ಮತ್ತಂ ॥

ಅಸುರೈರ್ದಾನವೈಶ್ಚೈವ ಪಿಶಾಚೋರಗ ರಾಕ್ಷಸೈಃ । ಆರಾಧ್ಯ ತತ್ಪರಂ ಲಿಂಗಂ ಪ್ರಾಪುಸ್ತೇ ಸಿದ್ಧಿಮುತ್ತಮಾಂ ॥ ಮತ್ತಂ ॥ ಅಗ್ನಿಹೋತ್ರಶ್ಚ ವೇದಶ್ಚ ಯಜ್ಞಾಶ್ಚ ಬಹು ದಕ್ಷಿಣಾಂ । ಶಿವಲಿಂಗಾರ್ಚನಸ್ಯ ಕೋಟ್ಯಂಶೇನಾಪಿ ನೋ ಸಮಃ ॥ ಎಂದುದಾಗಿ. ಇಂತು ಇಂದ್ರ ಮೊದಲಾದ ದೇವಜಾತಿಗಳೆಲ್ಲಾ ಶಿವಲಿಂಗಾರ್ಚನೆಯ ಮಾಡಿದುದಕ್ಕೆ ದೃಷ್ಟ ನೋಡಿರೇ. ಕಾಶೀ ಕ್ಷೇತ್ರದಲ್ಲಿ ಬ್ರಹ್ಮೇಶ್ವರ, ಇಂದ್ರೇಶ್ವರ, ಯಕ್ಷಸಿದ್ಧೇಶ್ವರ ಎಂಬ ಲಿಂಗಂಗಳಂ ಪ್ರತಿಷ್ಠಿಸಿ ಶಿವಲಿಂಗಾರ್ಚನೆಯ ಮಾಡಿದರು. ತಾರಕ ರಾವಣಾದಿಗಳೆಲ್ಲ ಶಿವಲಿಂಗಾರ್ಚನೆಯ ಮಾಡಿದರು ಇಂತಿವರೆಲ್ಲರೂ ಮರುಳರು. ನೀನೊಬ್ಬನೇ ಬುದ್ಧಿವಂತನೇ? ಅದು ಕಾರಣ ಆ ಶ್ರೀ ಗುರುವಿನಾಜ್ಞೆಯ ಮೀರಿ ಕೆಡದಿರಿ ಕೆಡದಿರಿ. ಆ ಮಹಾ ಶ್ರೀ ಗುರುವಿನ ವಾಕ್ಯವನೆ ನಂಬಿ ಗುರುಲಿಂಗಜಂಗಮವನೊಂದೇ ಎಂದು ನಿಶ್ಚೈಸಿ, ಇದೇ ಅಧಿಕ, ಇದರಿಂದ ಬಿಟ್ಟು ಮತ್ತಿನ್ನಾವುದು ಅಧಿಕವಿಲ್ಲ. ಅಂತು ಗುರುಲಿಂಗಜಂಗಮದಲ್ಲಿಯ ಭಕ್ತಿಯೇ ಭಕ್ತಿ, ಅರ್ಚನೆಯೇ ಅರ್ಚನೆ, ಆ ಸಂಗವೇ ಶಿವಯೋಗ. ಇದು ಸತ್ಯ ಶಿವನಾಣೆ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಭಾವಃ— ಲಿಂಗಸಂಯುತನಾದ ಬಳಿಕ ಶಿವಯೋಗವನೊಂದನ್ನೇ ಮಾಡಬೇಕು. ಇತರ ಯೋಗಗಳನ್ನು ಮಾಡಕೂಡದೆಂದು ವಚನಕಾರನ ಅಭಿಪ್ರಾಯವಿದೆ. ಯೋಗಗಳ ಉದ್ದೇಶವು ಆತ್ಮತತ್ವವನ್ನು ಕಾಣುವದು ಇದೆ. ಲಿಂಗಾಂಗಿಯಾದ ಬಳಿಕ ಷಟ್‌ಸ್ಥಲ ಅಷ್ಟಾವರಣಗಳ ತತ್ವಗಳನ್ನು ತಿಳಿದುಕೊಂಡು ಅವುಗಳಂತೆ ಆಚರಿಸಿ ಶಿವಯೋಗವನ್ನು ಸಾಧಿಸಬೇಕು. ಶೈವ, ಶಾಕ್ತ, ವೈಷ್ಣವ, ಗಾಣಾಪತ್ಯ, ಸೌರ, ಕಾಪಾಲಿಕ ಮೊದಲಾದ ಯಾವ ಮತಗಳನ್ನೂ ವಿಶ್ವಾಸಿಸಬಾರದು. ಇದಕ್ಕೆ ಶಿವಧರ್ಮಪುರಾಣದಲ್ಲಿಯ ಆಧಾರಗಳನ್ನು ಹೇಳಿರುವನು. ಶಿವಯೋಗಕ್ಕೆ ಅಂಗವೇ ಲಿಂಗವು, ಲಿಂಗವೇ ಅಂಗವು, ಪ್ರಾಣವೇ ಲಿಂಗ, ಲಿಂಗವೇ ಪ್ರಾಣ ಎಂಬ ತಿಳುವಳಿಕೆಯು ನೆಲೆಯಾಗಿ ನಿಲ್ಲಬೇಕು. ಆದರೆ ಅನೇಕ ದೈವಗಳಲ್ಲಿ ವಿಶ್ವಾಸವನ್ನಿಟ್ಟು ಹರಿದಾಡಿದರೆ ಈ ತಿಳುವಳಿಕೆಯು ಉತ್ಪನ್ನವಾಗದು. ಶಿವನೊಬ್ಬನನ್ನೇ ನಂಬಿ, ಧ್ಯಾನಿಸಿ ಪೂಜಿಸಬೇಕು. ಶಿವಪ್ರಸಾದವೊಂದನ್ನೇ ಗ್ರಹಿಸಬೇಕು. ಹೀಗೆ ಹಿಂದೆ ಆಚರಿಸಿದವರ ಹೆಸರುಗಳನ್ನು ಹೇಳಿರುವನು. ಅವರು ದೂರ್ವಾಸ, ಉಪಮನ್ಯು, ದಧೀಚಿ, ಜಮದಗ್ನಿ, ಮಾರ್ಕಂಡೇಯ ಪಾರಾಶರ ಇವರೇ ಇದ್ದಾರೆ. ವಿಷ್ಣುವು



ಸಹ ದಶಾವತಾರಗಳಲ್ಲಿ ಹೀಗೆಯೇ ಆಚರಿಸಿರುವನು. ಇದಕ್ಕೆ ಕೆಲವು ವೇದಾಗಮಗಳ ಆಧಾರಗಳನ್ನು ಕೊಟ್ಟಿರುವನು. ಹೀಗೆ ಶಿವಯೋಗಾಚರಣೆಯನ್ನು ಕೈಕೊಂಡು ಗುರುಲಿಂಗಜಂಗಮವನ್ನು ಸಾಧಿಸಿ, ಅವುಗಳನ್ನು ತನ್ನಲ್ಲಿ ಏಕೀಭವಿಸಬೇಕು. ಹೀಗೆ ಏಕೀಭವಿಸುವದೇ ಶಿವಯೋಗವೆನಿಸುವದು.

**ವಚನಃ**— ೪೯. ಸತ್ತುರೂಪು ಲಿಂಗ, ಚಿತ್ತುರೂಪು ಜಂಗಮ, ಆನಂದರೂಪು ಪ್ರಸಾದ, ಇಂತೀ ತ್ರಿವಿಧದರಿವನು ಶ್ರೀಗುರು ಇಷ್ಟಲಿಂಗದಲ್ಲಿ ತೋರಿ ಬಿಜಯಂಗೈಸಿ ಕೊಟ್ಟ ಬಳಿಕ ಸತ್ತು ಚಿತ್ತು ಆನಂದವೆಂಬ ಬಟ್ಟಬಯಲ ಮಾತೇಕಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ?

ಭಾವಃ— ಶಿವಯೋಗಕ್ಕೂ ಇತರ ಯೋಗಗಳಿಗೂ ಇರುವ ಭೇದವನ್ನು ವಚನಕಾರನು ಇಲ್ಲಿ ಹೇಳಿರುವನು. ಇತರ ಯೋಗಗಳು ಬಟ್ಟಬಯಲು. ಅವು ನಿಜಸ್ವರೂಪವನ್ನು ತೋರಿಸಿಕೊಡಲಾರವು. ಅವು ಸತ್ತು ಚಿತ್ತು, ಆನಂದವೆಂಬದರ ತಿಳಿವನ್ನು ಹೇಳಿಕೊಡಲಾರವು. ಆದರೆ ಷಟ್‌ಸ್ಥಲವು ಅವುಗಳನ್ನು ಗುರುಲಿಂಗಜಂಗಮದ ದ್ವಾರಾ ಪ್ರತ್ಯಕ್ಷಮಾಡಿ ನಿದರ್ಶನಕ್ಕೆ ತಂದುಕೊಡುವದು. ಗುರುವಿನ ಮೂಲಕ ಉಂಟಾದ ಲಿಂಗವು ಸತ್ತು ರೂಪು, ಆ ಲಿಂಗವನ್ನು ತನ್ನಲ್ಲಿ ಒಳಗು ಮಾಡಿ ಲಿಂಗಚೈತನ್ಯವೇ ತಾನಾದವನಿಗೆ ಅದು ಜಂಗಮರೂಪಾಗಿರುವದರಿಂದ ಇಂಥ ಆ ಜಂಗಮವೇ ಚಿತ್ತು ರೂಪು, ಲಿಂಗ ಜಂಗಮ ಇವುಗಳನ್ನು ಮೇಲೆ ಹೇಳಿದ ಪ್ರಕಾರ ತನ್ನಲ್ಲಿ ಉಂಟುಮಾಡಿಕೊಂಡು ಅವುಗಳನ್ನು ಏಕೀಭವಿಸಿದ ಬಳಿಕ ಒದಗುವ ಪರಿಣಾಮಸುಖವನ್ನು ಅನುಭವಿಸುವದೇ ಪ್ರಸಾದವಾದ್ದರಿಂದ ಆ ಪ್ರಸಾದವೇ ಆನಂದರೂಪು. ಹೀಗೆ ಗುರುಲಿಂಗಜಂಗಮದಿಂದ ಶಿವಯೋಗವನ್ನು ಒದಗಿಸಿಕೊಳ್ಳಬೇಕೆಂಬುದನ್ನು ಇಲ್ಲಿ ಹೇಳಿರುವನು.

**ವಚನಃ**— ೫೦. ಸದ್ಗುರುವೇ ಪ್ರಸಾದ ಲಿಂಗವು, ಸದ್ಗುರುವೇ ಸದ್ಭಕ್ತನು ಎಂದೆಂಬ ಮಹಾಜ್ಞಾನ ಜ್ಯೋತಿ ಪ್ರಕಾಶನಾದ ಜ್ಯೋತಿರ್ಮಯ ಲಿಂಗವೇ ಗುರುವಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಭಾವಃ— ಹಿಂದಿನ ವಚನಗಳಲ್ಲಿ ಗುರುವಿನಿಂದ ಹ್ಯಾಗೆ ಗುರುಲಿಂಗಜಂಗಮಗಳು ತನ್ನಲ್ಲಿ ಉದ್ಭವಿಸುತ್ತವೆ, ಆವವುಗಳ ವ್ಯಾಪಾರಗಳು ತನ್ನಲ್ಲಿ ಆವವು ಎಂಬದನ್ನು ಹೇಳಿ, ವಚನಕಾರನು ಇಲ್ಲಿ ಹೇಳುವದೇ

ನಂದರೆ, ಗುರುವನ್ನು ಒಳಕೊಂಡವನಿಗೆ ಗುರುವೇ ಪ್ರಸಾದ ಸ್ವರೂಪನಾಗುವನು. ಅವನು ಹೀಗೆ ಪ್ರಸಾದಸ್ವರೂಪನಾದ ಬಳಿಕ ಭಕ್ತ ಮತ್ತು ಗುರು ಇವರಲ್ಲಿ ಭಿನ್ನಭಾವವಿರಲಾರದು. ಅಂದರೆ ಭಕ್ತನು ಸಹ ಗುರುವಾಗುವನು. ಭಕ್ತನ ಲಿಂಗಾಚಾರದ ಮೂಲಕವಾಗಿಯೇ ಭಕ್ತನು ಹೀಗೆ ಗುರುಸ್ವರೂಪನಾಗುವನು. ಅಂದರೆ ಗುರುವಿನ ಕಾರ್ಯವು ಲಿಂಗಧಾರಣವಾದ ಬಳಿಕ ಬೇರೆ ವಿಧವಾಗಿರುವದು. ಭಕ್ತನು ಪ್ರತಿ ಹೆಜ್ಜೆಗೆ ಗುರುವನ್ನವಲಂಬಿಸಕೂಡದು. ಗುರುವು ದಯಪಾಲಿಸಿದ ಉಪದೇಶದಂತೆ ಅವನು ನಡೆದು ಸ್ವಾವಲಂಬಿಯಾಗಿರತಕ್ಕದ್ದು. ಇಂಥ ಭಕ್ತನಲ್ಲಿ ಆ ಲಿಂಗವು ಜ್ಞಾನಜ್ಯೋತಿಯಾಗಿ ಪರಿಣಮಿಸುವದು. ಇಲ್ಲದಿದ್ದರೆ ಅದು ಕೇವಲ ಚೈತನ್ಯರಹಿತವಾದ ಜಡ ವಸ್ತುವಾಗುವದು.

**ವಚನ:** — ೫೧. ಜ್ಯೋತಿಯ ಸಂಗದಿಂದ ಕರ್ಪುರವು ಜ್ಯೋತಿಯಪ್ಪಂತೆ, ಅಪ್ಪುವಿನ ಸಂಗದಿಂದ ಲವಣವು ಅಪ್ಪುವಪ್ಪಂತೆ, ಶ್ರೀಗುರುವಿನ ಸಂಗದಿಂದ ಶಿಷ್ಯನು ಶ್ರೀಗುರುವಪ್ಪುದು ತಪ್ಪದು. "ಯಥಾ ಬೀಜಂ ತಥಾಂಕುರಂ" ಎಂಬುದು ತಪ್ಪದು ದಿಟದಿಟ ನೋಡಾ. ಕಲ್ಪವೃಕ್ಷದ ಬೀಜದಿಂದಾದ ಸಸಿಯು! ಕಲ್ಪವೃಕ್ಷವಪ್ಪುದು ತಪ್ಪದು ನೋಡಾ. ಕಾಮಧೇನುವಿನ ಶಿಸು ಕಾಮಧೇನುವಪ್ಪುದು ತಪ್ಪದು ದಿಟದಿಟ ನೋಡಾ. ಸದ್ಗುರುವಿನಿಂದಾದ ಶಿಷ್ಯನು ಸದ್ಗುರುವಪ್ಪುದು ದಿಟದಿಟ ನೋಡಾ. "ಯಥಾ ಬೀಜಂ ತಥಾಂಕುರಂ" ಎಂಬ ವಾಕ್ಯ ತಪ್ಪದು, ಶಿವಬಲ್ಲನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಗುರು ಮತ್ತು ಭಕ್ತ ಇವರಲ್ಲಿ ಅಭೇದವಿದೆಂಬದನ್ನು ವಚನಕಾರನು ಈ ಉಕ್ತಿಯಲ್ಲಿ ಮತ್ತಿಷ್ಟು ಬಲಪಡಿಸಿರುವನು. ಸದ್ಗುರೂಪದೇಶಹೊಂದಿದ ಶಿಷ್ಯನು ಗುರುವಾಗುವದು ತಪ್ಪದು. ಇದು ದಿಟವೆಂದು ಹೇಳಿ ಕೆಲವು ಉದಾಹರಣೆಗಳನ್ನು ಕೊಟ್ಟಿರುವನು. ಜ್ಯೋತಿಯ ಸಂಗದಿಂದ ಕರ್ಪುರವು ಜ್ಯೋತಿಯೇ ಆಗುವದು. ನೀರಿನ ಸಂಗದಿಂದ ಉಪ್ಪು ನೀರಾಗುವದು. ಕಲ್ಪವೃಕ್ಷದಿಂದಾದ ಸಸಿಯು ಕಲ್ಪವೃಕ್ಷವೇ ಆಗುವದು. ಕಾಮಧೇನುವಿನ ಶಿಸು ಕಾಮಧೇನುವೇ ಆಗುವದು. ಅದೇ ಪ್ರಕಾರ ಗುರುವಿನಿಂದಾದ ಶಿಷ್ಯನು ಗುರುವೇ ಆಗುವನೆಂದು ವಚನಕಾರನು ಹೇಳಿರುವನು.

**ವಚನಃ** — ೫೨. ಶಿಷ್ಯನ ಗುರುತ್ವವನು, ಗುರುವಿನ ಮಹತ್ವವನು ಆರಯ್ಯ ಬಲ್ಲವರು ಗುರುಶಿಷ್ಯನಾದ ಪರಿಯನು? ಶ್ರೀಪಂಚಾಕ್ಷರಿಯ



ಉಚ್ಚಾರಣೆಯ ವಿಶ್ವಾಸದ ಸಾಧನದಿಂದ ವಶಿಷ್ಠ ವಾಮದೇವ ಮೊದಲಾದ ಸಮಸ್ತ ಋಷಿಗಳಿಗೆ ಹಿರಿದಪ್ಪ ಶಿಷ್ಯ ಗುರುವಾದ ಪರಿಯನು ಆರಯ್ಯ ಬಲ್ಲವರು? ವಾಙ್ಮನಾತೀತ ಉಪಮಿಸಬಾರದ ಘನವು. ಭಕ್ತಿಯಿಂದ ಗುರುಭಕ್ತವತ್ಸಲನಾಗಿ ಶಿಷ್ಯನಾದ ಪರಿಯು ಆ ಬೀಜ ವೃಕ್ಷನ್ಯಾಯದಂತೆ ಅವಿನಾಭಾವವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ — ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಗುರು ಮತ್ತು ಭಕ್ತ ಇವರಲ್ಲಿ ಅವಿನಾಭಾವವಿದೆ. ಒಬ್ಬರನ್ನೊಬ್ಬರು ಬಿಟ್ಟು ಇರಲಾಗದು. ಗುರುವನ್ನು ಬಿಟ್ಟು ಶಿಷ್ಯನಿರಲಾರನು. ಶಿಷ್ಯನನ್ನು ಬಿಟ್ಟು ಗುರುವು ಇರಲಾರನು. ಉಭಯತರ ಹೆಚ್ಚುವಿಕೆಯು ಪರಸ್ಪರಾವಲಂಬಿಯಾಗಿರುತ್ತದೆ. ಈ ರೀತಿಯನ್ನು ತಿಳಿದವರು ಬಹು ಕೊಂಚ ಜನರು. ಇದು ಹೇಳಲಿಕ್ಕೂ ನೆನೆಯಲಿಕ್ಕೂ ಬಾರದು. ಗುರುವು ಭಕ್ತನಲ್ಲಿ ಪ್ರೇಮವನ್ನು ವಹಿಸಿ ಅವನಿಗೆ ಶಿಷ್ಯನಾದಲ್ಲಿ ಉಭಯತರ ಗುಣಗಳು ಉನ್ನತವಾಗುತ್ತ ಹೋಗುವವು. ಅವರಲ್ಲಿ ಈ ರೀತಿಯಾಗಿ ಅವಿನಾಭಾವವಿದೆ.

**ವಚನ:** — ೫೩. ಶ್ರೀಗುರು ಮಾಡಿದ ಗುರುತ್ವವು ಉಪಮಾತೀತವಯ್ಯಾ. ನೇತ್ರದಲ್ಲಿ ತನ್ನ ರೂಪ ತುಂಬಿ ನೇತ್ರವನು ಗುರುವ ಮಾಡಿದ. ಶ್ರೋತ್ರದಲ್ಲಿ ಮಹಾಮಂತ್ರವ ತುಂಬಿ ಶ್ರೋತ್ರವ ಗುರುವ ಮಾಡಿದ. ಘ್ರಾಣದಲ್ಲಿ ಗುರುಪಾದ ಪದ್ಮದಲ್ಲಿಯ ಮಹಾಗಂಧವನು ತುಂಬಿ ಘ್ರಾಣವನು ಗುರುವ ಮಾಡಿದ. ಜಿಹ್ವೆಯಲ್ಲಿ ತನ್ನ ಕರುಣ ಪ್ರಸಾದವ ತುಂಬಿ ಜಿಹ್ವೆಯನ್ನು ಗುರುವ ಮಾಡಿದ. ಕಾಯವನು ಭಕ್ತಕಾಯ ಮಮಕಾಯವೆಂದು ಪ್ರಸಾದಕಾಯವೆಂದೆನಿಸಿ ಕಾಯವನು ಗುರುವ ಮಾಡಿದ. ಅಂತು ಅಂತರಂಗ ಬಹಿರಂಗವನು ಗುರುವ ಮಾಡಿ ಸರ್ವಾಂಗವನು ಪ್ರಾಣವನ್ನು ಲಿಂಗಪ್ರಾಣ ಸಂಬಂಧವ ಮಾಡಿ ಪ್ರಾಣವನು ಗುರುವ ಮಾಡಿದ. ಗುಪ್ತವ ಮಾಡಿದ ಮಹಾ ಗುರುವಿಂಗೆ ನಾನಿನ್ನೇನ ಮಾಡುವೆನಯ್ಯಾ? ಗುರುಪೂಜೆಯಂ ಮಾಡಲು ಆವಾವ ದ್ರವ್ಯಂಗಳನು, ಆವಾವ ಪದಾರ್ಥಂಗಳನು, ಆವಾವ ಪುಷ್ಪಫಲಾದಿಗಳನು, ವಿಚಾರಿಸಿ ನೋಡಿದಡೆ ಅವಾವೂ ಗುರುತ್ವವಿಲ್ಲ. ಸರ್ವ ದ್ರವ್ಯ ಮೂಲವು, ಸರ್ವ ಪದಾರ್ಥ ಮೂಲವು, ಸರ್ವ ರಸ ಪುಷ್ಪ ಫಲಾದಿಗಳನು ವಿಚಾರಿಸಿ ನೋಡಿದಡೆ ಅವಾವೂ ಗುರುತ್ವವಿಲ್ಲ. ಸರ್ವ ದ್ರವ್ಯ ಮೂಲವು ಸರ್ವ ಪದಾರ್ಥ ಮೂಲವು, ಸರ್ವ ರಸ ಪುಷ್ಪ ಫಲಾದಿಗಳೆಲ್ಲಕ್ಕೆಯು ಮೂಲಿಗ ಮನವು

ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦

ಗುರುತ್ವವುಳ್ಳದ್ದು. ನನ್ನ ಮನೋವಾಕ್ಕಾಯ ಸಹಿತ ಕಾಯವನು ಗುರುವಿಂಗಿತ್ತು ಎನ್ನ ಶಿರವನು ಶ್ರೀಗುರುವಿನ ದರ್ಶನ ಸ್ಪರ್ಶನವ ಮಾಡಿ ಸುಖಿಯಪ್ಪೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇದರಲ್ಲಿ ಗುರುವು ತನ್ನ ಶಿಷ್ಯನನ್ನು ಗುರುವಾಗಿ ಹ್ಯಾಗೆ ಮಾಡುವನೆಂಬದನ್ನು ವಿವರಿಸಿ ಹೇಳಿರುವನು. ಗುರುವು ತನ್ನ ವಿಶಿಷ್ಟ ಗುಣಗಳನ್ನು ಶಿಷ್ಯನಲ್ಲಿ ತುಂಬುವದರಿಂದ ಈ ಸ್ಥಿತಿಯು ಪ್ರಾಪ್ತನಾಗುತ್ತದೆ. ಗುರುಪೂಜೆ ಎಂದರೆ ಬರೇ ಪುಷ್ಪಫಲಾದಿಗಳನ್ನು ಗುರುವಿಗೆ ಅರ್ಪಿಸುವದಷ್ಟೇ ಅಲ್ಲ, ಗುರುವಿನ ಗುಣಗಳನ್ನು ತನ್ನಲ್ಲಿ ಬರಮಾಡಿಕೊಳ್ಳುವದೇ ಇರುತ್ತದೆ. ಹೀಗೆ ಬರಮಾಡಿಕೊಳ್ಳುವದು ಶಿಷ್ಯನ ಮನಸ್ಸಿನ ಮೇಲೆ ಅವಲಂಬಿಸಿರುತ್ತದೆ. ಗುರುತ್ವವನ್ನು ಆಕರ್ಷಣಮಾಡುವ ಶಕ್ತಿ ಭಕ್ತನಲ್ಲಿ ಇದೆ. ಹೀಗೆ ಯಾವ ಶಿಷ್ಯನು ತನ್ನಲ್ಲಿ ಗುರುವನ್ನು ಬರಮಾಡಿಕೊಳ್ಳುವನೋ ಅವನೇ ಸುಖಿಯು.

**ವಚನಃ**— ೫೪. ಯೋಗಾಭ್ಯಾಸ ಯೋಗಾಭ್ಯಾಸವೆಂದೆಂಬಿರಿ. ಯೋಗವು ಅಭ್ಯಾಸವೇ? ಅಭ್ಯಾಸವು ಯೋಗವೇ? ಯೋಗಾಭ್ಯಾಸವೆಂಬನ್ನಕ್ಕರ ಆನು ಯೋಗಿಯೇ? ಶ್ರೀಗುರುಕಾರುಣ್ಯದಿಂದೆ ಸರ್ವವು ಪರಬ್ರಹ್ಮವೆಂದರಿವುದು. ಶ್ರೀ ಗುರುವಿನ ಶ್ರೀಪಾದಧ್ಯಾನವೇ ಯೋಗಾಭ್ಯಾಸವಯ್ಯಾ ಉರಿಲಿಂಗಪೆದ್ದಿ ಪ್ರೀಯ ವಿಶ್ವೇಶ್ವರಾ.

ಭಾವಃ— ಜನರು ಯೋಗಾಭ್ಯಾಸ, ಯೋಗಾಭ್ಯಾಸವೆಂದು ಮನದಲ್ಲಿ ವಿಶೇಷವಾಗಿ ಆಶಿಬಡುವರು. ಆದರೆ ಅವರಿಗೆ ನಿಜವಾದ ಯೋಗಾಭ್ಯಾಸದ ಸ್ವರೂಪು ತಿಳಿಯದು. ಯೋಗವು ಬರೇ ಅಭ್ಯಾಸವಲ್ಲ. ಅಂದರೆ ಬರೇ ಕಷ್ಟಪಟ್ಟು ಆಯಾಸ ಮಾಡಿಕೊಳ್ಳುವಂಥಾದ್ದಲ್ಲ. ಹೀಗೆ ಕಷ್ಟ ಪಡುವವನು ಯೋಗಿಯಲ್ಲ. ಆದರೆ ಶ್ರೀ ಗುರು ಕಾರುಣ್ಯದಿಂದ ಜಗತ್ತೆಲ್ಲ ಪರಬ್ರಹ್ಮವೆಂದರಿಯಬೇಕು. ಮತ್ತು ಗುರುವನ್ನು ತನ್ನಲ್ಲಿ ಒಳಕೊಳ್ಳಬೇಕು. ಇದೇ ನಿಜವಾದ ಯೋಗಾಭ್ಯಾಸವಿರುತ್ತದೆ.

**ವಚನಃ**— ೫೫. ಶಿವನು ನರಕಾಯವ ತೊಟ್ಟು ಗುರುರೂಪಾಗಿ ಮರ್ತ್ಯಕ್ಕೆ ಬಂದು ಅಷ್ಟಾದಶ ಜಾತಿಯೊಳಗಿದ್ದಡೇನು? ಮರ್ತ್ಯನೇ? ಅಲ್ಲ. ಅದೆಂತೆಂದಡೆ? ಶಿವ ರಹಸ್ಯೆ ॥ಶ್ಲೋ॥ ಗುರುರ್ದೇವೋ ಮಹಾದೇವೋ ಗುರುರ್ದೇವಸ್ಸದಾಶಿವಃ । ಗುರುರ್ದೈವಾತ್ಪರಂನಾಸ್ತಿ । ತಸ್ಮೈ ಶ್ರೀಗುರವೇ ನಮಃ ॥ ಎಂದುದಾಗಿ ಮಹಾದೇವನು ತಾನೇ ಲಲಾಟ



ಲೋಚನಂ ಚಾಂದ್ರೀಕಲಾಮಪಿಚದೋರ್ಧ್ವಯಂ । ಅಂತರ್ನಿಧಾಯ ವರ್ತೇಹಂ ಗುರುರೂಪೋಮಹೇಶ್ವರಿ ॥ ಎಂದುದಾಗಿ ಶಿವನು ಗುರುರೂಪಾಗಿ ವರ್ತಿಸುತ್ತಿದ್ದನು. "ಪರಶಿವ ಗುರೋರ್ಮೂರ್ತಿಶ್ಶಿಷ್ಯದೀಕ್ಷಾದಿಕಾರಣಾತ್ ॥ ಶಿಷ್ಯಾತೀತಂ ಮಹಜ್ಜ್ಯೋತಿಃ ಜೋದ್ಯರೂಪಾಯ ಸ್ವೈನಮಃ" ಎಂದುದಾಗಿ ಶಿಷ್ಯಂಗೆ ದೀಕ್ಷೆಯಂ ಕರುಣಿಸಿ ಮಾಡಬೇಕೆಂದು ಬಂದನಯ್ಯಾ ಮಹಾಕಾರುಣ್ಯಮೂರ್ತಿ ಪರಶಿವನು ತಾನೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಭಾವಃ— ಇಲ್ಲಿ ವಚನಕಾರನು ಗುರುವಿನ ಮಹತ್ವವನ್ನು ವರ್ಣಿಸಿರುವನು. ಮತ್ತು ಇದಕ್ಕೆ ಆಧಾರ ಗ್ರಂಥಗಳನ್ನೂ ಹೇಳಿರುವನು. ಷಟ್‌ಸ್ಥಲದಲ್ಲಿ ಗುರುವಿನ ಕಾರ್ಯಗಳ ವಿಷಯದಲ್ಲಿ ವಿಶೇಷಾಭಿಪ್ರಾಯಗಳಿರುವದರಿಂದ ವಚನಕಾರನು ಆ ದೃಷ್ಟಿಯಿಂದ ಗುರುವು ಶಿವಸ್ವರೂಪನೆಂದು ಇಲ್ಲಿ ಹೇಳಿರುವನು.

**ವಚನಃ**— ೫೬. ಪುತ್ರ ಮಿತ್ರ ಕಳತ್ರಕ್ಕೆ ಮೋಹಿಸುವಂತೆ ಗುರುಲಿಂಗಜಂಗಮಕ್ಕೆ ಮೋಹಿಸಬೇಕು ಕಾಣಿರೋ. ಕನ್ನಪ್ಪ, ಚನ್ನಯ್ಯ, ಚೋಳಿಯಕ್ಕನ ಮೋಹವ ನೋಡಿರೇ. ಮೋಹವೇ ಭಕ್ತಿ, ಭಕ್ತಿಯೇ ಮುಕ್ತಿ, ಮುಕ್ತಿಯೇ ಸುಖ, ಸುಖವೇ ನಮ್ಮ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಯ್ಯ ತಾನೇ ಕಾಣಿರೋ.

ಭಾವಃ— ಶಿವಯೋಗವಾವುದು, ಗುರು ಶಿಷ್ಯ ಸಂಬಂಧವೇನು ಎಂಬುದನ್ನು ವಚನಕಾರನು ಹಿಂದೆ ಹೇಳಿ ಭಕ್ತಿಯ ಪರಿಣಾಮಗಳನ್ನು ಇಲ್ಲಿ ವಿವರಿಸಿರುವನು. ಅವುಗಳ ಬಗ್ಗೆ ಮೊದಲು ಮೋಹವನ್ನು ತಾಳಬೇಕು. ಮೋಹ ತಾಳಿದ್ದಾದರೆ ಭಕ್ತಿಯುತ್ಪನ್ನವಾಗುವದು. ಈ ಭಕ್ತಿಯೇ ಮುಕ್ತಿ, ಈ ಮುಕ್ತಿಯೇ ಸುಖ, ಈ ಸುಖವೇ ಪರಮಾತ್ಮಸ್ವರೂಪು ಎಂದು ಇಲ್ಲಿ ಹೇಳಿರುವನು.

**ವಚನಃ**— ೫೭. ಒಳ್ಳ ಜೇವಿನ ಕೊರಡು ಆಡಿನ ಹಿಕ್ಕೆ ಲಿಂಗವೇ? ಅಲ್ಲ. ಅದು ಸಟೆ. ಸದ್ಭಾವದಿಂದ ಭಾವಿಸಿ ಲಿಂಗವ ಮಾಡಿ ಸದ್ಭಕ್ತರಾದರು ಪುರಾತನರು. ಕೇವಲ ಪರಶಿವಮೂರ್ತಿ ತಾನೇ ಶ್ರೀಗುರುಲಿಂಗ ಜಂಗಮವಾದ. ಆ ಶ್ರೀಗುರುಲಿಂಗ ಜಂಗಮವನು ವಿಶ್ವಾಸಿಸಿ ಮುಕ್ತರಾಗಲರಿಯದೆ ಅವಿಶ್ವಾಸದಿಂದ ಸಟೆಯ ಮಾಡಿ ನರಕಕ್ಕಿಳಿವವರ ನೋಡಾ!

ಆಕಟಕಟಾ, ಅವರು ತಮ್ಮ ಆದಂತಾಗಲಿ. ಮನವೇ ನಾ ನಿನ್ನ ಬೇಡಿಕೊಂಬೆನು. ನಂಬು ಕಂಡೆಯಾ ಸಹಜವೆಂದು. ಶ್ರೀಗುರು ಲಿಂಗಜಂಗಮವ ನಂಬಿದೆಯಾದಡೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ಕೂಡಿಕೊಂಬನು.

ಭಾವಃ— ವಚನಕಾರನು ಮಹತ್ತರ ವಸ್ತುವಾದ ಗುರುಲಿಂಗ ಜಂಗಮುವನ್ನು ವಿಶ್ವಾಸದಿಂದ ನಂಬಿ ಸರಿಯಾಗಿ ನಡೆಯಬೇಕೆಂದು ತನ್ನ ಮನಸ್ಸಿಗೆ ತಾನೇ ಇಲ್ಲಿ ಹೇಳಿಕೊಳ್ಳುತ್ತಲಿರುವನು.

---



## ಗುರುವಿನ ಮಹತ್ವ.

**ವಿವರಣೆ:**— ಗುರುವಿನಿಂದಲೇ ಮನುಷ್ಯನ ಪ್ರವೃತ್ತಿಯು ಇರುವದರಿಂದ ವಚನಕಾರರು ಗುರುವಿಗೆ ಬಹು ಮಹತ್ವ ಕೊಟ್ಟಿರುತ್ತಾರೆ. ಆದ್ದರಿಂದ ಅವರು ಅವನನ್ನು ವಿಶೇಷವಾಗಿ ಪ್ರಶಂಸಿಸುವದುಂಟು. ಮುಂದಿನ ವಚನಗಳಲ್ಲಿ ಈ ಬಗೆಯ ಪ್ರಶಂಸೆಗಳು ಬಂದಿರುತ್ತವೆ.

**ವಚನಃ**— ೫೮. ಸದ್ಗುರುವಿನಿಂದ ಮಹತ್ತಪ್ಪ ಲಿಂಗೋತ್ಪತ್ತಿ. ಲಿಂಗದಿಂದ ಜಂಗಮೋತ್ಪತ್ತಿ. ಜಂಗಮದಿಂದ ಪ್ರಸಾದೋತ್ಪತ್ತಿ. ಪ್ರಸಾದದಿಂದ ಭಕ್ತ್ಯುತ್ಪತ್ತಿ. ಭಕ್ತಿಯಿಂದ ಸಕಲೋತ್ಪತ್ತಿ. ॥ಸಾಕ್ಷಿ॥ ಯತೋವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ। ನಾದಬಿಂದು ಕಲಾತೀತಂ ಗುರುಣಾ ಲಿಂಗಮುದ್ಭವಂ ॥ ಎಂದುದಾಗಿ ಇದು ಕಾರಣ ಪ್ರಸಾದವುಳ್ಳವಂಗೆ ಭಕ್ತಿಯುಂಟು. ಭಕ್ತಿಯುಳ್ಳವಂಗೆ ಲಿಂಗವುಂಟು. ಲಿಂಗವುಳ್ಳವಂಗೆ ಜಂಗಮವುಂಟು. ಜಂಗಮವುಳ್ಳವಂಗೆ ಗುರುವುಂಟು. ಇದು ಕಾರಣ ಸದ್ಗುರುವೇ ಕಾರಣ. ಅದೆಂತೆಂದಡೆ, "ಗುರುಣಾ ದೀಯತೆ ಲಿಂಗಂ ಗುರುಣಾ ದೀಯತೆ ಕ್ರಿಯಾ ಗುರುಣಾ ದೀಯತೆ ಮಂತ್ರಂ ಸದ್ಗುರುಸ್ಸರ್ವ ಕಾರಣಂ" ಎಂದುದಾಗಿ ಸದ್ಗುರುವೇ ಸರ್ವ ಶ್ರೇಷ್ಠನು, ಸದ್ಗುರುವೇ ಸರ್ವ ಪೂಜ್ಯನು, ಸದ್ಗುರುವೇ ಸರ್ವ ಕಾರಣನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇದರಲ್ಲಿ ವಚನಕಾರನು ಗುರುವಿನಿಂದ ಲಿಂಗ, ಲಿಂಗದಿಂದ ಚೈತನ್ಯಸ್ವರೂಪವಾದ ಜಂಗಮ, ಈ ಚೈತನ್ಯದಿಂದ ಪ್ರಸಾದ, ಇಂಥ ಪ್ರಸಾದದಿಂದ ದುರ್ವ್ಯಾಪಾರಗಳ ಕಡೆಗೆ ಹರಿಯುವ ಮನಸ್ಸನ್ನು ತಡೆಯುವಂಥ ಭಕ್ತಿ, ಇಂಥ ಭಕ್ತಿಯಿಂದ ಸಕಲ ವಿಷಯಗಳನ್ನು ಸಾಧಿಸುವ ಶಕ್ತಿ ಇವೆಲ್ಲವೂ ಉಂಟಾಗುತ್ತವೆಂದು ಹೇಳಿರುವನು. ಇವೆಲ್ಲಕ್ಕೂ ಗುರುವೇ ಕಾರಣನಾದ್ದರಿಂದ ಅವನೇ ಶ್ರೇಷ್ಠನೆಂದು ವಚನಕಾರನು ಇಲ್ಲಿ ಹೊಗಳಿರುವನು.

**ವಚನಃ**— ೫೯. ಶಿವಶಿವ ಮಹಾದೇವ ಮಹಾದೇವ! ಮಹೇಶ್ವರರ ಮಹಾತ್ಮೆಯನು ಏನೆಂದುಪಮಿಸಬಹುದಯ್ಯಾ? ವಾಙ್ಮನಾತೀತರು. ಅದೆಂತೆಂದಡೆ ॥ ಶ್ಲೋ ॥ ಕೋಟಿ ಕೋಟ್ಯಾಯುಷಾ ಕೋಟಿ ಕೋಟಿ

ಜಿಹ್ವೇನ ಸರ್ವದಾ। ಕೇನಾಪಿ ಶಕ್ಯತೆ ವಕ್ತುಂ ಶಂಭೋರ್ಮಹಾತ್ಮ್ಯಮಪ್ಯಣು ॥ ಎಂದುದಾಗಿ ಲಿಂಗದ ಮಹಾತ್ಮೆಯಣುಮಾತ್ರವರಿಯಬಾರದೆಂಬಲ್ಲಿ ಸದ್ಭಕ್ತರ ಮಹಾತ್ಮೆಯನೆಂತರಿಯಬಹುದಯ್ಯಾ! ಅದೆಂತೆಂದರೆ ॥ ಶ್ಲೋ ॥ "ಲಿಂಗಾಲಿಂಗೀ ಮಮೋಜ್ಜೀವೀ ಲಿಂಗಾಲಿಂಗೀ ಚ ರಕ್ಷಕಃ। ಲಿಂಗಾಲಿಂಗೀ ಮಮ ಸ್ವಾಮೀ ಲಿಂಗಾಲಿಂಗೀ ಮಮೋದ್ಧರಃ" ಎಂದುದಾಗಿ ಈ ಪರಿಯಲ್ಲಿ ಲಿಂಗಕ್ಕೆ ದೇಹ, ಲಿಂಗಕ್ಕೆ ಪ್ರಾಣ, ಲಿಂಗಕ್ಕೆ ರಕ್ಷಕ ಲಿಂಗಕ್ಕೆ ಒಡೆಯರಾಗಿರ್ಪ ಆ ಸದ್ಭಕ್ತರ ಮಹಾತ್ಮೆಯನು ಶಿವನೇ ಬಲ್ಲ. ಅದೆಂತೆಂದಡೆ ॥ ಶ್ಲೋ ॥ ಮದ್ಭಕ್ತಜನ ಮಹಾತ್ಮ್ಯಂ ಕೋಪಿ ಜಾನಾತಿ ತತ್ವತಃ। ಜಾನೇಹಂ ತ್ವಂ ತು ಜಾನಾಸಿ ನಂದೀ ಜಾನಾತಿ ವಾ ಗುಹಃ॥ ಹೀಗೆಂದುದಾಗಿ ಶಿವನು ನಂದೀಶ್ವರನು ಗುಹನು ಇವರು ಬಲ್ಲರು. ಸಜ್ಜನಶುದ್ಧ ಶಿವಾಚಾರಸಂಪನ್ನರಪ್ಪ ಸದ್ಭಕ್ತರೇ ಬಲ್ಲರು. ಸಾಮಾನ್ಯತರವಪ್ಪ ದೇವದಾನವ ಮಾನವರಿಗೆ ಅರಿಯಬಾರದು, ಋಷಿಜನಂಗಳಿಗೆಯೂ ಅರಿಯಬಾರದು, ಲೋಕಲೌಕಿಕರಿಗೆಯೂ ಅರಿಯಬಾರದು. ಅದೆಂತೆಂದಡೆ ಕೇಳಿರೇ! ಬ್ರಹ್ಮ, ವಿಷ್ಣು, ಇಂದ್ರ, ಚಂದ್ರ, ರವಿ, ಕಾಲ, ಕಾಮ, ದಕ್ಷ ಇಂತಿವರು ಮೊದಲಾದ ದೇವ ಜಾತಿಗಳು, ತಾರಕ, ರಾವಣಾದಿ ದಾನವರು, ವ್ಯಾಸಾದಿ ಋಷಿಗಳು, ದಕ್ಷಾಧ್ವರಕ್ಕೆ ಬಂದವರನೇಕರು, ವೇದ ಶಾಸ್ತ್ರ ಪುರಾಣಾಗವಮಾದಿ ಅಷ್ಟಾದಶ ವಿದ್ಯಂಗಳನೋದಿ, ಕೇಳಿದವರಿಗೆ ಹೇಳಿ, ಸರ್ವಜ್ಞರೆನಿಸಿಕೊಂಡು, ಮಹದೈಶ್ವರ್ಯಸಂಪನ್ನರಾಗಿ, ಮದಂಗಳು ಹೆಚ್ಚಿ, ಶಿವನ ಮರೆದರು. ಅಹಂಬ್ರಹ್ಮವೆಂದರು. ಪರಧನ ಪರಸ್ತ್ರೀಯರುಗಳಿಗೆ ಅಳುಪಿದರು. ಶಿವಮಾಹೇಶ್ವರರ ನಿಂದೆಯ ಮಾಡಿದರು. ಈ ಪರಿಯಲ್ಲಿ ತಪ್ಪಿ ನಡೆದು, ಹಸ್ತಚ್ಛೇದನ ಶಿರಚ್ಛೇದನಂಗಳ ಮಾಡಿಸಿಕೊಂಡು ಹೋದರು. ಕೋಪಾಗ್ನಿಯಿಂದುರಿದು ಹೋದರು. ಅನೇಕ ಪರಿಯಲ್ಲಿ ಭಂಗಿತರಾದರು. ಕಷ್ಟಜನ್ಮಂಗಳಲಿ ಜನಿಸಿದರು. ಮರಳಿ ಮತ್ತೆಯರಿದು ಶಿವಾರಾಧನೆಯಂ ಮಾಡಿ, ಶಿವಸ್ತೋತ್ರಮಂ ಮಾಡಿ, ಮಾಹೇಶ್ವರರ ಪೂಜಿಸಿ, ಮರಳಿ ನಿಜಪದಂಗಳಂ ಪಡೆದರು. ಈ ಪರಿಯ ಅರಿವು ಮರವೆಯುಳ್ಳ ದ್ವಂದ್ವ ಗ್ರಸ್ತರು ಬಲ್ಲರೇ ಎಮ್ಮ ಮಾಹೇಶ್ವರರ ಮಹಿಮೆಯ? ನಮ್ಮ ಸದ್ಭಕ್ತರೇ ಬಲ್ಲರು. ಅದೆಂತೆನಲು ಕೇಳಿರೇ. ವೇದಾದಿ ಅಷ್ಟಾದಶ ವಿದ್ಯಾಪರಿಚಿತರು, ತಾತ್ಪರ್ಯ ಕಳಾಗ್ರಹಿಗಳು, ವಿಶ್ವಾಧಿಕರು ಅಂತಾಗಿ ಎಮ್ಮ ಮಾಹೇಶ್ವರರೇ ಬಲ್ಲರು ಉಳಿದಾದ ದೇವದಾನವ ಮಾನವ ಋಷಿಗಳಿಗೆಯೂ ಅರಿಯಬಾರದು ಅಂತವರಿಗಾ ವಿಧಿ. ಇನ್ನು



ಮನುಷ್ಯರು ಅಲ್ಪಾಯುಷ್ಯರು. ವೇದಶಾಸ್ತ್ರಪುರಾಣಾಗಮಂಗಳು ಅಲ್ಪಾಯುಷ್ಯರಿಗೆ ಓದಲಿಕ್ಕೆ ತೆರಹಿಲ್ಲ. ಕಿಂಚಿತ್ ಓದಿದಡೆಯೂ ಕೇಳುವರೆ ವೇಳೆ ಇಲ್ಲ. ಇಂತಹ ಅಜ್ಞಾನಿಗಳಿಗೆ ಮಹಾಜ್ಞಾನಿಗಳ ಸಂಗವಿಲ್ಲ. ಜ್ಞಾನ ಮುನ್ನವೇ ಇಲ್ಲ. ಅಹಂಕಾರಿಗಳು, ಮದಾಂಧರು, ಶಾಪಹತರು, ಜಡದೇಹಿಗಳು ಅವರಿಗೆಂತರಿಯಬಹುದಯ್ಯಾ. ಶಿವಮಾಹೇಶ್ವರರ ಮಹಿಮೆಯನರಿಯದ ದ್ರೋಹಿಗಳ ಕೂಡೆ ಸಂವಾದಿಸಲುಂಟೆ? ಅವರುಗಳ ಮನವನರಿದು ಅರಿವಿನ ಹವಣಿಕೆ ಇದೆಂದರಿದು ಅವಾಚಕನಾಗಿಪ್ಪುದಲ್ಲದೆ ಆ ಪಾಪಿಗಳ ನೋಡಲಾಗದು, ನುಡಿಸಲಾಗದು, ಸಮಾನರಲ್ಲಿ ಕುಳ್ಳಿರ್ದು ತರ್ಕಿಸಲಾಗದು. ಶಿವಜ್ಞಾನಿಗಳಲ್ಲದವರ ಕೂಡೆ ನುಡಿಯ ತೆರಹುಂಟೆ? ಶಿವಮಾಹೇಶ್ವರನು ಲಿಂಗಾರ್ಚನೆಯಂ ಮಾಡಿ ಮಹಾನುಭಾವರ ಸಂಗ ಸುಖದಲ್ಲಿಪ್ಪನಲ್ಲದೆ? ಕೇಳಿರಣ್ಣಾ. ಆ ದೇವದಾನವ ಮಾನವರ ಪರಿಯಂತಲ್ಲ. ಎಮ್ಮ ಮಾಹೇಶ್ವರರು ಶಿವಾಚಾರಸಂಪನ್ನರು ಸರ್ವವಿದ್ಯಾಪರಿಚಿತರು ಪರಧರ್ಮ ಪರಸ್ತ್ರೀಯರನೊಲ್ಲರು. ಸತ್ಯನಿತ್ಯರು ನಿರುಪಾಧಿಕರು ನಿರಾಶಾಸಂಪನ್ನರು ಪರಮ ಪರಿಣಾಮಿಗಳು ಎಮ್ಮ ಮಾಹೇಶ್ವರರು. ಅವರ ಸಂಗದಿಂದ ಗುರುಸಿದ್ಧಿ, ಲಿಂಗಸಿದ್ಧಿ, ಜಂಗಮಸಿದ್ಧಿ, ಪ್ರಸಾದಸಿದ್ಧಿ, ಇಹಸಿದ್ಧಿ, ಪರಸಿದ್ಧಿ, ಸರ್ವಸಿದ್ಧಿ. ಇಂತಹ ಸದ್ಭಕ್ತರ ಮಹಿಮೆಗೆ ನಾನು ನಮೋ ನಮೋ ಎಂದು ಬದುಕಿದೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇದರಲ್ಲಿ ವಚನಕಾರನು ಗುರು, ಲಿಂಗ, ಭಕ್ತಿ ಮೊದಲಾದವುಗಳ ಮಹಾತ್ಮ್ಯವನ್ನು ಹೊಗಳಿ, ಅದಕ್ಕೆ ಅನೇಕ ಪ್ರಮಾಣ ಗ್ರಂಥಗಳನ್ನು ಕೊಟ್ಟಿರುವನು. ಮಾಹೇಶ್ವರರ ಮಹತ್ವವನ್ನು ಭಕ್ತರೇ ಬಲ್ಲರು. ದೇವತೆಗಳು ಸಹ ಅರಿಯರು ಎಂದು ಹೇಳಿರುವನು. ಮನುಷ್ಯರು ಅಹಂಕಾರಿಗಳು, ಮದಾಂಧರು, ಜಡದೇಹಿಗಳು ಇವರಂತೂ ಈ ವಿಷಯವನ್ನು ಏನೂ ಅರಿಯರು. ಇಂಥವರೊಡನೆ ಈ ವಿಷಯಗಳನ್ನು ಸಹ ಆಲೋಚಿಸಕೂಡದೆಂದು ವಚನಕಾರನ ಅಭಿಪ್ರಾಯವದೆ.

**ವಚನಃ**— ೬೦. ಶಿವನೇ ನಿಮ್ಮ ನಾ ಬಲ್ಲೆನು. ಗುರುದೇವೋ ಮಹಾದೇವೋ ಎಂದುದಾಗಿ, ಶ್ರೀಗುರುರೂಪಾಗಿ ಬಂದು ದೀಕ್ಷೆಯ ಮಾಡಿ ಶಿವಲಿಂಗವ ಬಿಜಯಂಗೆಯಿಸಿ ಕೊಟ್ಟಿರಿ, ಜಂಗಮವ ತೋರಿದಿರಿ. ಇದು ಕಾರಣ ನಿಮ್ಮ ನಾ ಬಲ್ಲೆನು. ಎನ್ನ ನೀವೆ ಬಲ್ಲಿರಿ. ನಿಮ್ಮ

ಶಿಸುವೆಂದು ಪ್ರಸಾದವನಿಕ್ಕಿ ರಕ್ಷಿಸಿದಿರಿ. ಇದು ಕಾರಣದಿಂದಲಿ ನಿಮ್ಮ ನಾ ಬಲ್ಲೆನು. ಎನ್ನನು ನೀವೆ ಬಲ್ಲಿರಿ. ಮತ್ತೆ ಮರೆಯ ಮಾಡಿ ಜ್ಞಾನವನು ಅಜ್ಞಾನವನು ಭಕ್ತಿಯನು ಅಭಕ್ತಿಯನು ಸುಖವನು ದುಃಖವನು ಒಡ್ಡಿ ಕಾಡದಿರಯ್ಯ. ಇವೆಲ್ಲವಕ್ಕೆಯು ನೀವೇ ಕಾರಣ. ಇದು ಕಾರಣ ನಿಮ್ಮ ಬೇರ ಬಲ್ಲವರಿಗೆ ಎಲೆಯ ತೋರಿ ಅಳಿಮಾಡಿ ಕಾಡುವಿರಿ. ಕಾಡದಿರಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಇಲ್ಲಿ ವಚನಕಾರನು ಗುರುವಿನನ್ನು ಕುರಿತು ಒಂದು ಬಗೆಯಾಗಿ ಸ್ತುತಿಸಿರುವನು. ಗುರು ಮತ್ತು ಭಕ್ತ ಇವರಲ್ಲಿ ಸಮರಸ ಭಾವವಿರುತ್ತದೆ. ಆದ್ದರಿಂದ ಗುರುವಿನನ್ನು ಭಕ್ತನು ಬಲ್ಲನು, ಭಕ್ತನನ್ನು ಗುರುವು ಬಲ್ಲನು. ಹೀಗೆ ಭಕ್ತನು ಗುರುವಿನ ಮೂಲವನ್ನು ಕಂಡ ಬಳಿಕ ಗುರುವು ಆ ಮೂಲದ ರೀತಿಯನ್ನು ತಿಳಿಸಬೇಕೇ ಹೊರ್ತು ಕೇವಲ ಬಾಹ್ಯ ಸೌಂದರ್ಯವುಳ್ಳ ಎಲೆಗಳನ್ನು ತೋರಿ ಭಕ್ತನನ್ನು ರಂಜಿಸಬಾರದು. ಆದ್ದರಿಂದ ಜ್ಞಾನ, ಅಜ್ಞಾನ, ಭಕ್ತಿ, ಅಭಕ್ತಿ, ಸುಖ, ದುಃಖ ಹೀಗೆ ನಾನಾವಿಧ ತೊಂದರೆಗಳಿಗೆ ತನ್ನನ್ನು ಒಳಗು ಮಾಡಿ ಕಾಡಬೇಡವೆಂದು ಗುರುವನ್ನು ವಚನಕಾರನು ಬೇಡಿಕೊಳ್ಳುತ್ತಲಿರುವನು.

**ವಚನ:**— ೬೧. "ನ ಗುರೋರಧಿಕಂ ನ ಗುರೋರಧಿಕಂ ನ ಗುರೋರಧಿಕಂ। ವಿದಿತಂ ವಿದಿತಂ ವಿದಿತಂ। ಶಿವಶಾಸನತಃ ಶಿವಶಾಸನತಃ॥" ಶ್ರೀಗುರು ಮರ್ತ್ಯಕ್ಕೆ ಬಂದು ಅಷ್ಟಾದಶ ಜಾತಿಗಳೊಳಗಿದ್ದರೇನು? ಮನುಷ್ಯನೇ? ಅಲ್ಲ. ಸಾಕ್ಷಿ॥ ಗುರುದೇವೋ ಮಹಾದೇವೋ ಗುರುದೇವೋ ಸದಾಶಿವಃ। ಗುರುದೇವೋ ಪರಂ ನಾಸ್ತಿ ತಸ್ಮೈ ಶ್ರೀಗುರವೆ ನಮಃ॥ ಎಂದುದಾಗಿ, ಲಲಾಟಲೋಚನಂ ಚಾಂದ್ರಿಕಲಾಮಪಿಚತೂರ್ಧ್ವಯಂ। ಅಂತರ್ನಿಧಾಯ ವರ್ತತೆ ಗುರುರೂಪಾಯ ಮಹೇಶ್ವರೀ ಗುರು ರೂಪಾಗಿ ವರ್ತಿಸುತ್ತಿರ್ದನು ಪರಶಿವಗುರುಮೂರ್ತಿ. ಪರಶಿವಃ ಗುರುಮೂರ್ತಿಃ ಶಿಷ್ಯದೀಕ್ಷಾದಿಕಾರಣಾತ್। ಶಿಷ್ಯಾತೀತ ಮಹಾಜ್ಯೋದ್ಯಂ ಜ್ಯೋದ್ಯರೂಪಾಯ ವೈ ನಮಃ॥ ಎಂದುದಾಗಿ ಶಿಷ್ಯಂಗೆ ದೀಕ್ಷೆಯ ಮಾಡಿ ಕರುಣಿಸಬಂದ ಮಹಾಕರುಣ ಮೂರ್ತಿ ಪರಶಿವ ತಾನೇ ಗುರು. ರತ್ನಂಗಳೊಳಗೆ ಚಿಂತಾಮಣಿ ಮಹಾರತ್ನವೆಂತು ಪೂಜ್ಯವಾಗಿಪ್ಪುದೋ, ಧೇನುಗಳೊಳಗೆ ಕಾಮಧೇನುವೆಂತು ಪೂಜ್ಯವಾಗಿಪ್ಪುದೋ, ವೃಕ್ಷಂಗಳೊಳಗೆ ಕಲ್ಪವೃಕ್ಷವೆಂತು ಪೂಜ್ಯವಾಗಿಪ್ಪುದೊ, ಅಂತೆಯೇ ಕಾಣಿರೋ.



ತತ್ವಂಗಳೊಳಗೆ ಶ್ರೀಗುರು ತತ್ವವೇ ಪೂಜ್ಯವು. ಶ್ರೀಗುರು ತತ್ವವೇ ಒಪ್ಪುವದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಗುರುವು ಪರಶಿವಮೂರ್ತಿ ಎಂದು ಭಾವಿಸಿ ಭಕ್ತಿಯುಳ್ಳವನಾಗಿರಬೇಕೆಂದು ವಚನಕಾರನು ಇದರಲ್ಲಿ ಹೇಳುತ್ತಿರುವನು. ಈ ಬಗ್ಗೆ ಆಧಾರ ಶ್ಲೋಕಗಳನ್ನೂ ಕೊಟ್ಟಿರುವನು.

**ವಚನ:**— ೬೨. ಇನ್ನು ಮುಕ್ತನೆಂಬನ್ನಬರ ಮುನ್ನಲೇನು ಬದ್ಧನೆ? ಮುನ್ನ ಮುನ್ನವೇ ಮುಕ್ತನು. ಒಂದು ಕಾರಣದಿಂದ ಬದ್ಧನಾದರೆ ಗುರು ಕರುಣದಿಂದ ಗುರುವಾದ ಬಳಿಕ, ಬದ್ಧಮುಕ್ತನೆಂಬ ದಂದುಗದ ನುಡಿ ಹೊದ್ದಲುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾವ:**— ಇದರಲ್ಲಿಯೂ ವಚನಕಾರನು ಬೇರೊಂದು ಬಗೆಯಿಂದ ಗುರುವಿನ ಸ್ತೋತ್ರವನ್ನು ಮಾಡಿರುವನು. ಗುರುಕರುಣದಿಂದ ಭಕ್ತನು ಗುರುವಾದ ಬಳಿಕ ಭಕ್ತನಿಗೆ ದಂದುಗಗಳು ಇಲ್ಲೆಂದು ಹೇಳುತ್ತಾನೆ.

---

## ಶರಣರ ಸ್ವರೂಪವು.

**ವಿವರಣೆ:**— ಮುಂದಿನ ವಚನಗಳಲ್ಲಿ ವಚನಕಾರನು ಶರಣನ ವರ್ತನೆ, ಅವನ ಸ್ವರೂಪ, ಅವನ ರೀತಿ ನಡತೆಗಳನ್ನು ಹೇಳಿರುವನು. ಶರಣನು ಸ್ವತಂತ್ರನು, ಪರಾವಲಂಬಿಯಲ್ಲ ಅವನು ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಂಡಿರುವದರಿಂದ ಅವನು ಹೀಗೆ ಸ್ವತಂತ್ರನಾಗಿ ವ್ಯವಹರಿಸಲು ಸಮರ್ಥನು. ಲಿಂಗದ ಶಕ್ತಿಯು ಅವನಲ್ಲಿ ದೃಢವಾಗಿ ವಾಸಿಸಿರುತ್ತದೆ. ಇದಕ್ಕೆ ಅವನ ಅರಿವೇ ಮುಖ್ಯ ಕಾರಣವು. ಈ ಅರಿವು ಬರೇ ಅವನ ಮಾತಿನಲ್ಲಿರದೆ ನಡೆಯಲ್ಲಿ ತೋರುವದರಿಂದ ಆ ಅರಿವನ್ನು ಅವನು ಎಂದಿಗೂ ಮರೆಯನು. ಶರಣನು ಜಗತ್ತಿನೊಳಗಿದ್ದರೂ ಅದರ ವ್ಯಾಪಾರಗಳಲ್ಲಿ ಸಿಲುಕಿಕೊಂಡಿರುವದಿಲ್ಲ. ಆದರಿಂದ ಜಗತ್ತಿನಲ್ಲಿ ಅವನು ಇದ್ದರೂ ಇರದಂತೆ ಇರುತ್ತಾನೆ. ಅವನು ಭಿಕ್ಷುಕನಲ್ಲ. ತಿರಿದುಂಡು ಹೊಟ್ಟೆ ಹೊರೆಯುವವನಲ್ಲ ಇವೇ ಶರಣರ ಲಕ್ಷಣಗಳು. ಈ ಪ್ರಕಾರ ವಚನಕಾರರ ಅಭಿಪ್ರಾಯಗಳಿದ್ದು ಉರಿಲಿಂಗಪೆದ್ದಿಯು ಇವುಗಳನ್ನೇ ಮುಂದಿನ ವಚನಗಳಲ್ಲಿ ಸಮರ್ಥಿಸಿ ನುಡಿದಿರುತ್ತಾನೆ.

**ವಚನ:**— ೬೩. ಅಮೃತದೊಳಗೆ ಜನಿಸಿ, ಅಮೃತದೊಳಗೆ ವರ್ತಿಸುವ, ಅಮೃತದೇಹಿಗೆ ಹಸಿವು ತೃಷೆಯೇ? ಆ ಅಮೃತವೇ ಆಧಾರ, ಆ ಅಮೃತವೇ ಸೇವನೆ. ಬೇರೊಂದು ವಸ್ತು ಉಂಟೆ? ಇಲ್ಲ. ಆ ಅಮೃತವೆ ಸರ್ವಪ್ರಯೋಗಕ್ಕೆ. ಇದಕ್ಕೆ ಕಟ್ಟಳೆಯುಂಟೇ? ಕಾಲವುಂಟೇ? ಆಜ್ಞೆಯುಂಟೇ? ಬೇರೆ ಕರ್ಮ ಉಂಟೇ? ಇಲ್ಲ. ಮನವೇ ಮೇರೆ ಪರಿಣಾಮವೇ ಅವಧಿ ನೋಡಾ. ಶ್ರೀಗುರುಲಿಂಗದಲ್ಲಿ ಜನಿಸಿ ಶಿವಲಿಂಗದಲ್ಲಿ ಬೆಳೆದು ಜಂಗಮಲಿಂಗದಲ್ಲಿ ವರ್ತಿಸಿ, ಪ್ರಸಾದಲಿಂಗದಲ್ಲಿ ಪರಿಣಾಮಿಸಿ, ಆ ಚತುರ್ವಿಧವೇಕವಾಗಿ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ, ಆ ಲಿಂಗವೇ ಅಂಗ, ಅಂಗವೇ ಲಿಂಗವಾಗಿ ಲಿಂಗಸ್ವಾಯತವಾದ ಲಿಂಗೈಕ್ಯಂಗೆ ಜಪ, ತಪ, ಅರ್ಚನೆ, ಪೂಜೆಗೆ ಆಗಮ ಉಂಟೆ? ಕಾಲ ಉಂಟೆ? ಕರ್ಮ ಉಂಟೆ? ಕಲ್ಪಿತ ಉಂಟೆ? ಇಲ್ಲ. ಸರ್ವವು ಲಿಂಗಮಯವಾದ ಆ ಲಿಂಗವಂತಂಗೆ ನಡೆವುದೆ ಆಗಮ, ಪೂಜಿಸುವುದೆ ಕಾಲ, ಮಾಡಿದ್ದೆ ಕ್ರಿಯೆ, ನುಡಿದುದೆ ಜಪ, ನೆನೆದುದೆ ಧ್ಯಾನ, ವರ್ತಿಸಿದುದೆ ತಪಸ್ಸು, ಇದಕ್ಕೆ ಅವಧಿಯುಂಟೆ?



ಮೇರೆಯುಂಟೆ? ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ರವಿ, ಶಶಿ, ಆತ್ಮ, ಮನೋವಾಕ್ಕಾಯ, ಹೊನ್ನು, ಹೆಣ್ಣು, ಮಣ್ಣು, ಸರ್ವಪದಾರ್ಥವನರ್ಪಿಸಿ ಗುರುಲಿಂಗಜಂಗಮದ ಪ್ರಸನ್ನತೆಯ ಪಡೆದ ಮಹಾಪ್ರಸಾದಿಗೆ ಸರ್ವವು ಪ್ರಸಾದವಲ್ಲದೆ ಮತ್ತೊಂದಿಲ್ಲ. ಆ ಪ್ರಸಾದಿಗೆ ಪದಾರ್ಥ ಪ್ರಸಾದವೆಂದು ಬೇರುಂಟೆ? ಅರ್ಪಿತ ಅನರ್ಪಿತವೆಂಬ ಸಂದೇಹ ಉಂಟೆ? ಕೊಂಬಲ್ಲಿ ಕೊಡುವಲ್ಲಿ ಸೀಮೆಯುಂಟೆ? ನಿಸ್ಸೀಮ ಪ್ರಸಾದಿಗೆ ಸರ್ವವೂ ಪ್ರಸಾದ. ಆ ಭೋಗಕ್ಕೆ ಅವಧಿಯುಂಟೆ? ಮೇರೆಯುಂಟೆ? ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ವೇದ ಶಾಸ್ತ್ರ ಪುರಾಣಾಗಮಂಗಳು ಸರ್ವವಿದ್ಯಂಗಳ ತಾತ್ಪರ್ಯ ಮರ್ಮ ಕಳೆಗಳನರಿದ ಮಹಾ ಜ್ಞಾತೃವಿಂಗೆ ಆ ಮಹಾಜ್ಞಾನವೇ ದೇಹ, ಆ ಜ್ಞಾನವೇ ಪ್ರಾಣ. ಈ ಮಹತ್ತಪ್ಪ ಜ್ಞಾತೃ ಜ್ಞಾನ ಜ್ಞೇಯ ಒಂದಾದ ಮಹಾ ಬೆಳಗಿನ ಸುಖಸ್ವರೂಪಂಗೆ ಮರ್ತ್ಯ, ಸ್ವರ್ಗ, ದೇವಲೋಕವೆಂಬ ಫಲಪದದಾಸೆಯುಂಟೆ? ಇಲ್ಲ. ನಿರಂತರ ತೇಜೋಮಯ ಸುಖಸ್ವರೂಪನು ನಿತ್ಯಾನಂದಮಯನು. ಆ ಮಹಾಮಹಿಮನ ಸುಖಕ್ಕೆ ಅವಧಿಯುಂಟೆ? ಮೇರೆಯುಂಟೆ? ಇಲ್ಲ. ಮನವೇ ಮೇರೆ ಪರಿಣಾಮವೇ ಅವಧಿ ನೋಡಾ! ಆ ಮಹಾಮಹಿಮನು ಅನುಭಾವಿ ತಾನೇ ನಿರುಪಮ ಜ್ಯೋತಿರ್ಲಿಂಗವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವ:— ಯಾವನು ಸ್ವಯಂ ಸ್ಫೂರ್ತಿಯುಳ್ಳವನಾಗಿ ಲಿಂಗಾಣತಿಯಿಂದ ನಡೆಯುತ್ತಾನೋ ಅವನಿಗೆ ಮೇರೆ ಇಲ್ಲ, ಕಟ್ಟಳೆ ಇಲ್ಲ, ಕರ್ಮವಿಲ್ಲ. ಅವನ ಮನಸ್ಸೇ ಅವನಿಗೆ ಮೇರೆ. ಅವನಿಗೆ ಜಪತಪಾದಿಗಳಿಲ್ಲ. ಅವನು ಗುರುವಿನಲ್ಲಿ ಪುನರ್ಜಾತನಾಗಿ, ಶಿವಲಿಂಗವನ್ನೇ ತನ್ನ ಆಧಾರವಾಗಿಟ್ಟುಕೊಂಡು ಬೆಳೆದು, ಜಂಗಮಲಿಂಗವೇ ತನ್ನ ಚೈತನ್ಯವಾಗಿ ವರ್ತಿಸಿ, ಅದರ ಪರಿಣಾಮಸುಖವನ್ನುಂಡು ಸುಖಿಸುವನಾದ್ದರಿಂದ ಅವನಿಗೆ ಲಿಂಗವೇ ಪ್ರಾಣ, ಪ್ರಾಣವೇ ಲಿಂಗವಾಗಿರುವದು. ಇವನಿಗೆ ಅರ್ಚನೆ, ಪೂಜೆ, ಆಗಮ, ಶಾಸ್ತ್ರ ಮೊದಲಾದವುಗಳು ಯಾವವೂ ಇಲ್ಲ. ಅವನಿಗೆ ಅವಧಿ ಇಲ್ಲ. ಮೇರೆ ಇಲ್ಲ. ಅವನು ಕಾಣುವ, ಸುಖಿಸುವ, ಅನುಭವಿಸುವ ಎಲ್ಲ ಪದಾರ್ಥಗಳನ್ನು ಲಿಂಗಾರ್ಪಿತ ಮಾಡಿ ಉಪಭೋಗಿಸುವದರಿಂದ ಎಲ್ಲವೂ ಅವನಿಗೆ ಪ್ರಸಾದಮಯವಾಗಿದೆ. ಅವನಲ್ಲಿ ಇದು

ಪದಾರ್ಥ ಇದು ಪ್ರಸಾದ ಎಂಬ ಭೇದಭಾವವಿಲ್ಲ. ಅವನು ಮಹಾಜ್ಞಾನವನ್ನು ತನ್ನಲ್ಲಿ ಒಳಪಡಿಸಿಕೊಂಡು ವರ್ತಿಸುವವನಾಗಿರುವನು. ಆದ್ದರಿಂದ ತಿಳಿಯುವವನೂ, ತಿಳಿಯತಕ್ಕಂಥ ವಸ್ತುವೂ, ಜ್ಞಾನವೂ ಇವೆಲ್ಲವೂ ತನ್ನಲ್ಲಿ ಸಮರಸವಾಗಿರುತ್ತವೆ. ಈ ಬಗೆಯ ಸಮರಸದಿಂದ ಉಂಟಾದ ಸುಖವನ್ನು ಆಸ್ವಾದಿಸುವವನಾದ್ದರಿಂದ ಅವನಲ್ಲಿ ಇಹಲೋಕ, ಪರಲೋಕ ಸುಖದ ಆಸೆಯು ಇರಲಾರದು. ಅವನು ಸುಖಸ್ವರೂಪನಾಗಿರುವನು, ನಿತ್ಯಾನಂದಮಯನಾಗಿರುವನು ಅವನು ಜ್ಯೋತಿರ್ಲಿಂಗವು ಎಂದು ವಚನಕಾರನು ಇಲ್ಲಿ ನುಡಿದಿದ್ದಾನೆ.

**ವಚನ:**— ೬೬. ಲಿಂಗಭರಿತಶರಣ, ಶರಣಭರಿತಲಿಂಗವು. ಅದೆಂತೆಂದರೆ ಶರಣಮಧ್ಯೇ ಲಿಂಗಸ್ಯ। ಲಿಂಗಮಧ್ಯೇ ಶರಣ್ಯತಾಂ। ಎಂದುದಾಗಿ, ಶರಣ ಬೇರೆ, ಲಿಂಗ ಬೇರೆಯೇ? ಶಿವಶಿವಾ ಒಂದೇ ಕಾಣಿರಣ್ಣಾ. ಅಂತು ಶರಣಕ್ರಿ ಎಲ್ಲವು ಲಿಂಗಕ್ರಿ, ಲಿಂಗಕ್ರಿ ಎಲ್ಲವು ಶರಣಕ್ರಿ. ಅದು ಕಾರಣ ಶರಣ ಪ್ರಸಾದವು ಲಿಂಗಕ್ಕೆ ನೈವೇದ್ಯ ಕಾಣಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಇಲ್ಲಿ ವಚನಕಾರನು ಲಿಂಗ ಮತ್ತು ಶರಣ ಇವರು ಬೇರೆ ಬೇರೆ ಎಂದು ಭಾವಿಸಕೂಡದೆಂದು ಹೇಳಿದ್ದಾನೆ. ಶರಣನ ಕ್ರಿಯೆಗಳೇ ಲಿಂಗದ ಕ್ರಿಯೆಗಳಾಗಿರುವವು. ಮತ್ತು, ಲಿಂಗದ ಕ್ರಿಯೆಗಳೇ ಶರಣನ ಕ್ರಿಯೆಗಳು. ಆದ್ದರಿಂದ ಶರಣನು ಅರ್ಪಿಸಿದ್ದು ಲಿಂಗಕ್ಕೂ ಸಲ್ಲುವದು.

**ವಚನ:**— ೬೭. ಪ್ರಾಣಲಿಂಗ ಸ್ವಾಯತವಾದ ಸದ್ಭಕ್ತಂಗೆ ಸದ್ಭಕ್ತಿ ಮಾರ್ಗವೇ ಕ್ರಿಯೆ: ನೋಡಾ! ಲೋಕಾಚಾರ ಮಾಡಲಾಗದು. ಲೋಕದ ಬಳಕೆಯ ಬಳಸಲಾಗದು. ಲೋಕ ಲೌಕಿಕರಲ್ಲಿ ವರ್ತಿಸಲಾಗದು. ಲೋಕಾಚಾರ ಮಾರ್ಗವನೆಲ್ಲವನು ಬಿಡಬೇಕು. ಲೋಕಾಚಾರವನು ಬಿಟ್ಟು ಶಿವಾಚಾರ ಸನ್ಮಾರ್ಗದಲ್ಲಿ ಪಂಚಾಚಾರ ನಿಯತಾತ್ಮನಾದ ಸದ್ಭಕ್ತನೇ ಪ್ರಾಣಲಿಂಗಿ, ಆತನೇ ಕಾಯಲಿಂಗಿ ಆ ಸದಾಚಾರಿಯೇ ಸರ್ವಾಂಗಲಿಂಗಿಯಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಪ್ರಾಣಲಿಂಗಸ್ವಾಯತವಾದವನು ಶಿವಾಚಾರ ಸನ್ಮಾರ್ಗದಲ್ಲಿ ನಡೆಯಬೇಕು. ಪಂಚಾಚಾರಕ್ಕನುಸರಿಸಿ ವರ್ತಿಸಬೇಕು. ಲೌಕಿಕದಲ್ಲಿ ವರ್ತಿಸಲಾಗದು ಆತನು ಕಾಯಲಿಂಗಿಯಾಗುವನು. ಅವನೇ ನಿಜವಾದ ಸರ್ವಾಂಗಲಿಂಗಿಯು.



# ಗುರುವಿನ ಮಹತ್ವ.

**ವಿವರಣೆ:**— ಗುರುವಿನಿಂದಲೇ ಮನುಷ್ಯನ ಪ್ರವೃತ್ತಿಯು ಇರುವದರಿಂದ ವಚನಕಾರರು ಗುರುವಿಗೆ ಬಹು ಮಹತ್ವ ಕೊಟ್ಟಿರುತ್ತಾರೆ. ಆದ್ದರಿಂದ ಅವರು ಅವನನ್ನು ವಿಶೇಷವಾಗಿ ಪ್ರಶಂಸಿಸುವದುಂಟು. ಮುಂದಿನ ವಚನಗಳಲ್ಲಿ ಈ ಬಗೆಯ ಪ್ರಶಂಸೆಗಳು ಬಂದಿರುತ್ತವೆ.

**ವಚನ:**— ೬೮. ಸದ್ಗುರುವಿನಿಂದ ಮಹತ್ತಪ್ಪ ಲಿಂಗೋತ್ಪತ್ತಿ. ಲಿಂಗದಿಂದ ಜಂಗಮೋತ್ಪತ್ತಿ. ಜಂಗಮದಿಂದ ಪ್ರಸಾದೋತ್ಪತ್ತಿ. ಪ್ರಸಾದದಿಂದ ಭಕ್ತ್ಯುತ್ಪತ್ತಿ. ಭಕ್ತಿಯಿಂದ ಸಕಲೋತ್ಪತ್ತಿ. ॥ಸಾಕ್ಷಿ॥ ಯತೋವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ। ನಾದಬಿಂದು ಕಲಾತೀತಂ ಗುರುಣಾ ಲಿಂಗಮುದ್ಭವಂ ॥ ಎಂದುದಾಗಿ ಇದು ಕಾರಣ ಪ್ರಸಾದವುಳ್ಳವಂಗೆ ಭಕ್ತಿಯುಂಟು. ಭಕ್ತಿಯುಳ್ಳವಂಗೆ ಲಿಂಗವುಂಟು. ಲಿಂಗವುಳ್ಳವಂಗೆ ಜಂಗಮವುಂಟು. ಜಂಗಮವುಳ್ಳವಂಗೆ ಗುರುವುಂಟು. ಇದು ಕಾರಣ ಸದ್ಗುರುವೇ ಕಾರಣ. ಅದೆಂತೆಂದಡೆ, "ಗುರುಣಾ ದೀಯತೆ ಲಿಂಗಂ ಗುರುಣಾ ದೀಯತೆ ಕ್ರಿಯಾ ಗುರುಣಾ ದೀಯತೆ ಮಂತ್ರಂ ಸದ್ಗುರುಸ್ಸರ್ವ ಕಾರಣಂ" ಎಂದುದಾಗಿ ಸದ್ಗುರುವೇ ಸರ್ವ ಶ್ರೇಷ್ಠನು, ಸದ್ಗುರುವೇ ಸರ್ವ ಪೂಜ್ಯನು, ಸದ್ಗುರುವೇ ಸರ್ವ ಕಾರಣನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಇದರಲ್ಲಿ ವಚನಕಾರನು ಗುರುವಿನಿಂದ ಲಿಂಗ, ಲಿಂಗದಿಂದ ಚೈತನ್ಯಸ್ವರೂಪವಾದ ಜಂಗಮ, ಈ ಚೈತನ್ಯದಿಂದ ಪ್ರಸಾದ, ಇಂಥ ಪ್ರಸಾದದಿಂದ ದುರ್ವ್ಯಾಪಾರಗಳ ಕಡೆಗೆ ಹರಿಯುವ ಮನಸ್ಸನ್ನು ತಡೆಯುವಂಥ ಭಕ್ತಿ, ಇಂಥ ಭಕ್ತಿಯಿಂದ ಸಕಲ ವಿಷಯಗಳನ್ನು ಸಾಧಿಸುವ ಶಕ್ತಿ ಇವೆಲ್ಲವೂ ಉಂಟಾಗುತ್ತವೆಂದು ಹೇಳಿರುವನು. ಇವೆಲ್ಲಕ್ಕೂ ಗುರುವೇ ಕಾರಣನಾದ್ದರಿಂದ ಅವನೇ ಶ್ರೇಷ್ಠನೆಂದು ವಚನಕಾರನು ಇಲ್ಲಿ ಹೊಗಳಿರುವನು.

**ವಚನ:**— ೬೯. ಶಿವಶಿವ ಮಹಾದೇವ ಮಹಾದೇವ! ಮಹೇಶ್ವರರ ಮಹಾತ್ಮೆಯನು ಏನೆಂದುಪಮಿಸಬಹುದಯ್ಯಾ? ವಾಙ್ಮನಾತೀತರು. ಅದೆಂತೆಂದಡೆ ॥ ಶ್ಲೋ ॥ ಕೋಟಿ ಕೋಟ್ಯಾಯುಷಾ ಕೋಟಿ ಕೋಟಿ

ಜಿಹ್ವೇನ ಸರ್ವದಾ। ಕೇನಾಪಿ ಶಕ್ಯತೆ ವಕ್ತುಂ ಶಂಭೋರ್ಮಹಾತ್ಮ್ಯಮ ಪ್ಯಣು॥ ಎಂದುದಾಗಿ ಲಿಂಗದ ಮಹಾತ್ಮೆಯಣುಮಾತ್ರವರಿಯಬಾರದೆಂ ಬಲ್ಲಿ ಸದ್ಭಕ್ತರ ಮಹಾತ್ಮೆಯನೆಂತರಿಯಬಹುದಯ್ಯಾ! ಅದೆಂತೆಂದರೆ ॥ ಶ್ಲೋ ॥ "ಲಿಂಗಾಲಿಂಗೀ ಮಮೋಜ್ಜೀವೀ ಲಿಂಗಾಲಿಂಗೀ ಚ ರಕ್ಷಕಃ। ಲಿಂಗಾಲಿಂಗೀ ಮಮ ಸ್ವಾಮೀ ಲಿಂಗಾಲಿಂಗೀ ಮಮೋದ್ಧರಃ" ಎಂದು ದಾಗಿ ಈ ಪರಿಯಲ್ಲಿ ಲಿಂಗಕ್ಕೆ ದೇಹ, ಲಿಂಗಕ್ಕೆ ಪ್ರಾಣ, ಲಿಂಗಕ್ಕೆ ರಕ್ಷಕ ಲಿಂಗಕ್ಕೆ ಒಡೆಯರಾಗಿರ್ಪ ಆ ಸದ್ಭಕ್ತರ ಮಹಾತ್ಮೆಯನು ಶಿವನೇ ಬಲ್ಲ. ಅದೆಂತೆಂದಡೆ ॥ ಶ್ಲೋ ॥ ಮದ್ಭಕ್ತಜನ ಮಹಾತ್ಮ್ಯಂ ಕೋಪಿ ಜಾನಾತಿ ತತ್ವತಃ। ಜಾನೇಹಂ ತ್ವಂ ತು ಜಾನಾಸಿ ನಂದೀ ಜಾನಾತಿ ವಾ ಗುಹಃ॥ ಹೀಗೆಂದುದಾಗಿ ಶಿವನು ನಂದೀಶ್ವರನು ಗುಹನು ಇವರು ಬಲ್ಲರು. ಸಜ್ಜನಶುದ್ಧ ಶಿವಾಚಾರಸಂಪನ್ನರಪ್ಪ ಸದ್ಭಕ್ತರೇ ಬಲ್ಲರು. ಸಾಮಾನ್ಯತರವಪ್ಪ ದೇವದಾನವ ಮಾನವರಿಗೆ ಅರಿಯಬಾರದು, ಋಷಿಜನಂಗಳಿಗೆಯೂ ಅರಿಯಬಾರದು, ಲೋಕಲೌಕಿಕರಿಗೆಯೂ ಅರಿಯಬಾರದು. ಅದೆಂತೆಂದಡೆ ಕೇಳಿರೇ! ಬ್ರಹ್ಮ, ವಿಷ್ಣು, ಇಂದ್ರ, ಚಂದ್ರ, ರವಿ, ಕಾಲ, ಕಾಮ, ದಕ್ಷ ಇಂತಿವರು ಮೊದಲಾದ ದೇವ ಜಾತಿಗಳು, ತಾರಕ, ರಾವಣಾದಿ ದಾನವರು, ವ್ಯಾಸಾದಿ ಋಷಿಗಳು, ದಕ್ಷಾಧ್ವರಕ್ಕೆ ಬಂದವರನೇಕರು, ವೇದ ಶಾಸ್ತ್ರ ಪುರಾಣಾಗಮಾದಿ ಅಷ್ಟಾದಶ ವಿದ್ಯಂಗಳನೋದಿ, ಕೇಳಿದವರಿಗೆ ಹೇಳಿ, ಸರ್ವಜ್ಞರೆನಿಸಿಕೊಂಡು, ಮಹದೈಶ್ವರ್ಯಸಂಪನ್ನರಾಗಿ, ಮದಂಗಳು ಹೆಚ್ಚಿ, ಶಿವನ ಮರೆದರು. ಅಹಂಬ್ರಹ್ಮನೆಂದರು. ಪರಧನ ಪರಸ್ತ್ರೀಯರುಗಳಿಗೆ ಅಳುಪಿದರು. ಶಿವಮಾಹೇಶ್ವರರ ನಿಂದೆಯ ಮಾಡಿದರು. ಈ ಪರಿಯಲ್ಲಿ ತಪ್ಪಿ ನಡೆದು, ಹಸ್ತಚ್ಛೇದನ ಶಿರಚ್ಛೇದನಂಗಳ ಮಾಡಿಸಿಕೊಂಡು ಹೋದರು. ಕೋಪಾಗ್ನಿಯಿಂದುರಿದು ಹೋದರು. ಅನೇಕ ಪರಿಯಲ್ಲಿ ಭಂಗಿತರಾದರು. ಕಷ್ಟಜನ್ಮಂಗಳಲಿ ಜನಿಸಿದರು. ಮರಳಿ ಮತ್ತೆಯರಿದು ಶಿವಾರಾಧನೆಯಂ ಮಾಡಿ, ಶಿವಸ್ತೋತ್ರಮಂ ಮಾಡಿ, ಮಾಹೇಶ್ವರರ ಪೂಜಿಸಿ, ಮರಳಿ ನಿಜಪದಂಗಳಂ ಪಡೆದರು. ಈ ಪರಿಯ ಅರಿವು ಮರವೆಯುಳ್ಳ ದ್ವಂದ್ವ ಗ್ರಸ್ತರು ಬಲ್ಲರೇ ಎಮ್ಮ ಮಾಹೇಶ್ವರರ ಮಹಿಮೆಯ? ನಮ್ಮ ಸದ್ಭಕ್ತರೇ ಬಲ್ಲರು. ಅದೆಂತೆನಲು ಕೇಳಿರೇ. ವೇದಾದಿ ಅಷ್ಟಾದಶ ವಿದ್ಯಾಪರಿಚಿತರು, ತಾತ್ಪರ್ಯ ಕಳಾಗ್ರಹಿಗಳು, ವಿಶ್ವಾಧಿಕರು ಅಂತಾಗಿ ಎಮ್ಮ ಮಾಹೇಶ್ವರರೇ ಬಲ್ಲರು ಉಳಿದಾದ ದೇವದಾನವ ಮಾನವ ಋಷಿಗಳಿಗೆಯೂ ಅರಿಯಬಾರದು ಅಂತವರಿಗಾ ವಿಧಿ. ಇನ್ನು



ಮನುಷ್ಯರು ಅಲ್ಪಾಯುಷ್ಯರು. ವೇದಶಾಸ್ತ್ರಪುರಾಣಾಗಮಂಗಳು ಅಲ್ಪಾಯುಷ್ಯರಿಗೆ ಓದಲಿಕ್ಕೆ ತೆರಹಿಲ್ಲ. ಕಿಂಚಿತ್ ಓದಿದಡೆಯೂ ಕೇಳುವರೆ ವೇಳೆ ಇಲ್ಲ. ಇಂತಹ ಅಜ್ಞಾನಿಗಳಿಗೆ ಮಹಾಜ್ಞಾನಿಗಳ ಸಂಗವಿಲ್ಲ. ಜ್ಞಾನ ಮುನ್ನವೇ ಇಲ್ಲ. ಅಹಂಕಾರಿಗಳು, ಮದಾಂಧರು, ಶಾಪಹತರು, ಜಡದೇಹಿಗಳು ಅವರಿಗೆಂತರಿಯಬಹುದಯ್ಯಾ. ಶಿವಮಾಹೇಶ್ವರರ ಮಹಿಮೆಯನರಿಯದ ದ್ರೋಹಿಗಳ ಕೂಡೆ ಸಂವಾದಿಸಲುಂಟೆ? ಅವರುಗಳ ಮನವನರಿದು ಅರಿವಿನ ಹವಣಿಕೆ ಇದೆಂದರಿದು ಅವಾಚಕನಾಗಿಪ್ಪುದಲ್ಲದೆ ಆ ಪಾಪಿಗಳ ನೋಡಲಾಗದು, ನುಡಿಸಲಾಗದು, ಸಮಾನರಲ್ಲಿ ಕುಳ್ಳಿರ್ದು ತರ್ಕಿಸಲಾಗದು. ಶಿವಜ್ಞಾನಿಗಳಲ್ಲದವರ ಕೂಡೆ ನುಡಿಯ ತೆರಹುಂಟೆ? ಶಿವಮಾಹೇಶ್ವರನು ಲಿಂಗಾರ್ಚನೆಯಂ ಮಾಡಿ ಮಹಾನುಭಾವರ ಸಂಗ ಸುಖದಲ್ಲಿಪ್ಪನಲ್ಲದೆ? ಕೇಳಿರಣ್ಣಾ. ಆ ದೇವದಾನವ ಮಾನವರ ಪರಿಯಂತಲ್ಲ. ಎಮ್ಮ ಮಾಹೇಶ್ವರರು ಶಿವಾಚಾರಸಂಪನ್ನರು ಸರ್ವವಿದ್ಯಾಪರಿಚಿತರು ಪರಧರ್ಮ ಪರಸ್ತ್ರೀಯರನೊಲ್ಲರು. ಸತ್ಯನಿತ್ಯರು ನಿರುಪಾಧಿಕರು ನಿರಾಶಾಸಂಪನ್ನರು ಪರಮ ಪರಿಣಾಮಿಗಳು ಎಮ್ಮ ಮಾಹೇಶ್ವರರು. ಅವರ ಸಂಗದಿಂದ ಗುರುಸಿದ್ಧಿ, ಲಿಂಗಸಿದ್ಧಿ, ಜಂಗಮಸಿದ್ಧಿ, ಪ್ರಸಾದಸಿದ್ಧಿ, ಇಹಸಿದ್ಧಿ, ಪರಸಿದ್ಧಿ, ಸರ್ವಸಿದ್ಧಿ. ಇಂತಹ ಸದ್ಭಕ್ತರ ಮಹಿಮೆಗೆ ನಾನು ನಮೋ ನಮೋ ಎಂದು ಬದುಕಿದೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ-- ಇದರಲ್ಲಿ ವಚನಕಾರನು ಗುರು, ಲಿಂಗ, ಭಕ್ತಿ ಮೊದಲಾದವುಗಳ ಮಹಾತ್ಮ್ಯವನ್ನು ಹೊಗಳಿ, ಅದಕ್ಕೆ ಅನೇಕ ಪ್ರಮಾಣ ಗ್ರಂಥಗಳನ್ನು ಕೊಟ್ಟಿರುವನು. ಮಾಹೇಶ್ವರರ ಮಹತ್ವವನ್ನು ಭಕ್ತರೇ ಬಲ್ಲರು. ದೇವತೆಗಳು ಸಹ ಅರಿಯರು ಎಂದು ಹೇಳಿರುವನು. ಮನುಷ್ಯರು ಅಹಂಕಾರಿಗಳು, ಮದಾಂಧರು, ಜಡದೇಹಿಗಳು ಇವರಂತೂ ಈ ವಿಷಯವನ್ನು ಏನೂ ಅರಿಯರು. ಇಂಥವರೊಡನೆ ಈ ವಿಷಯಗಳನ್ನು ಸಹ ಆಲೋಚಿಸಕೂಡದೆಂದು ವಚನಕಾರನ ಅಭಿಪ್ರಾಯವದೆ.

**ವಚನಃ**-- ೬೦. ಶಿವನೇ ನಿಮ್ಮ ನಾ ಬಲ್ಲೆನು. ಗುರುದೇವೋ ಮಹಾದೇವೋ ಎಂದುದಾಗಿ, ಶ್ರೀಗುರುರೂಪಾಗಿ ಬಂದು ದೀಕ್ಷೆಯ ಮಾಡಿ ಶಿವಲಿಂಗವ ಬಿಜಯಂಗೆಯಿಸಿ ಕೊಟ್ಟಿರಿ, ಜಂಗಮವ ತೋರಿದಿರಿ. ಇದು ಕಾರಣ ನಿಮ್ಮ ನಾ ಬಲ್ಲೆನು. ಎನ್ನ ನೀವೆ ಬಲ್ಲಿರಿ. ನಿಮ್ಮ

ಶಿಸುವೆಂದು ಪ್ರಸಾದವನಿಕ್ಕಿ ರಕ್ಷಿಸಿದಿರಿ. ಇದು ಕಾರಣದಿಂದಲಿ ನಿಮ್ಮ ನಾ ಬಲ್ಲೆನು. ಎನ್ನನು ನೀವೆ ಬಲ್ಲಿರಿ. ಮತ್ತೆ ಮರೆಯ ಮಾಡಿ ಜ್ಞಾನ ವನು ಅಜ್ಞಾನವನು ಭಕ್ತಿಯನು ಅಭಕ್ತಿಯನು ಸುಖವನು ದುಃಖವನು ಒಡ್ಡಿ ಕಾಡದಿರಯ್ಯ. ಇವೆಲ್ಲವಕ್ಕೆಯು ನೀವೇ ಕಾರಣ. ಇದು ಕಾರಣ ನಿಮ್ಮ ಬೇರ ಬಲ್ಲವರಿಗೆ ಎಲೆಯ ತೋರಿ ಆಳಿವಾಡಿ ಕಾಡುವಿರಿ. ಕಾಡ ದಿರಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ—** ಇಲ್ಲಿ ವಚನಕಾರನು ಗುರುವಿನನ್ನು ಕುರಿತು ಒಂದು ಬಗೆಯಾಗಿ ಸ್ತುತಿಸಿರುವನು. ಗುರು ಮತ್ತು ಭಕ್ತ ಇವರಲ್ಲಿ ಸಮರಸ ಭಾವವಿರುತ್ತದೆ. ಆದ್ದರಿಂದ ಗುರುವಿನನ್ನು ಭಕ್ತನು ಬಲ್ಲನು, ಭಕ್ತನನ್ನು ಗುರುವು ಬಲ್ಲನು. ಹೀಗೆ ಭಕ್ತನು ಗುರುವಿನ ಮೂಲವನ್ನು ಕಂಡ ಬಳಿಕ ಗುರುವು ಆ ಮೂಲದ ರೀತಿಯನ್ನು ತಿಳಿಸಬೇಕೇ ಹೊರ್ತು ಕೇವಲ ಬಾಹ್ಯ ಸೌಂದರ್ಯವುಳ್ಳ ಎಲೆಗಳನ್ನು ತೋರಿ ಭಕ್ತನನ್ನು ರಂಜಿಸಬಾರದು. ಆದ್ದರಿಂದ ಜ್ಞಾನ, ಅಜ್ಞಾನ, ಭಕ್ತಿ, ಅಭಕ್ತಿ, ಸುಖ, ದುಃಖ ಹೀಗೆ ನಾನಾವಿಧ ತೊಂದರೆಗಳಿಗೆ ತನ್ನನ್ನು ಒಳಗು ಮಾಡಿ ಕಾಡಬೇಡವೆಂದು ಗುರುವನ್ನು ವಚನಕಾರನು ಬೇಡಿಕೊಳ್ಳುತ್ತಲಿರುವನು.

**ವಚನಃ—** ೬೧. "ನ ಗುರೋರಧಿಕಂ ನ ಗುರೋರಧಿಕಂ ನ ಗುರೋರಧಿಕಂ। ವಿದಿತಂ ವಿದಿತಂ ವಿದಿತಂ। ಶಿವಶಾಸನತಃ ಶಿವಶಾಸನತಃ॥" ಶ್ರೀಗುರು ಮರ್ತ್ಯಕ್ಕೆ ಬಂದು ಅಷ್ಟಾದಶ ಜಾತಿಗಳೊಳಗಿದ್ದರೇನು? ಮನುಷ್ಯನೇ? ಅಲ್ಲ. ಸಾಕ್ಷಿ॥ ಗುರುದೇವೋ ಮಹಾದೇವೋ ಗುರುದೇವೋ ಸದಾಶಿವಃ। ಗುರುದೇವೋ ಪರಂ ನಾಸ್ತಿ ತಸ್ಮೈ ಶ್ರೀಗುರವೆ ನಮಃ॥ ಎಂದುದಾಗಿ, ಲಲಾಟಲೋಚನಂ ಚಾಂದ್ರಿಕಲಾಮಪಿಚತುರ್ಭುಜಂ। ಅಂತರ್ನಿಧಾಯ ವರ್ತತೆ ಗುರುರೂಪಾಯ ಮಹೇಶ್ವರೀ ಗುರು ರೂಪಾಗಿ ವರ್ತಿಸುತ್ತಿರ್ದನು ಪರಶಿವಗುರುಮೂರ್ತಿ. ಪರಶಿವಃ ಗುರುಮೂರ್ತಿಃ ಶಿಷ್ಯದೀಕ್ಷಾದಿಕಾರಣಾತ್। ಶಿಷ್ಯಾತೀತ ಮಹಾಚೋದ್ಯಂ ಚೋದ್ಯರೂಪಾಯ ವೈ ನಮಃ॥ ಎಂದುದಾಗಿ ಶಿಷ್ಯಂಗೆ ದೀಕ್ಷೆಯ ಮಾಡಿ ಕರುಣಿಸಬಂದ ಮಹಾಕರುಣ ಮೂರ್ತಿ ಪರಶಿವ ತಾನೇ ಗುರು. ರತ್ನಂಗಳೊಳಗೆ ಚಿಂತಾಮಣಿ ಮಹಾರತ್ನವೆಂತು ಪೂಜ್ಯವಾಗಿಪ್ಪುದೋ, ಧೇನುಗಳೊಳಗೆ ಕಾಮಧೇನುವೆಂತು ಪೂಜ್ಯವಾಗಿಪ್ಪುದೋ, ವೃಕ್ಷಂಗಳೊಳಗೆ ಕಲ್ಪವೃಕ್ಷವೆಂತು ಪೂಜ್ಯವಾಗಿಪ್ಪುದೊ, ಅಂತೆಯೇ ಕಾಣಿರೋ.



ತತ್ವಂಗಳೊಳಗೆ ಶ್ರೀಗುರು ತತ್ವವೇ ಪೂಜ್ಯವು. ಶ್ರೀಗುರು ತತ್ವವೇ ಒಪ್ಪುವದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ—** ಗುರುವು ಪರಶಿವಮೂರ್ತಿ ಎಂದು ಭಾವಿಸಿ ಭಕ್ತಿಯುಳ್ಳವನಾಗಿರಬೇಕೆಂದು ವಚನಕಾರನು ಇದರಲ್ಲಿ ಹೇಳುತ್ತಿರುವನು. ಈ ಬಗ್ಗೆ ಆಧಾರ ಶ್ಲೋಕಗಳನ್ನೂ ಕೊಟ್ಟಿರುವನು.

**ವಚನಃ—** ೬೨. ಇನ್ನು ಮುಕ್ತನೆಂಬನ್ನಬರ ಮುನ್ನಲೇನು ಬದ್ಧನೆ? ಮುನ್ನ ಮುನ್ನವೇ ಮುಕ್ತನು. ಒಂದು ಕಾರಣದಿಂದ ಬದ್ಧನಾದರೆ ಗುರು ಕರುಣದಿಂದ ಗುರುವಾದ ಬಳಿಕ, ಬದ್ಧಮುಕ್ತನೆಂಬ ದಂದುಗದ ನುಡಿ ಹೊದ್ದಲುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾವಃ—** ಇದರಲ್ಲಿಯೂ ವಚನಕಾರನು ಬೇರೊಂದು ಬಗೆಯಿಂದ ಗುರುವಿನ ಸ್ತೋತ್ರವನ್ನು ಮಾಡಿರುವನು. ಗುರುಕರುಣದಿಂದ ಭಕ್ತನು ಗುರುವಾದ ಬಳಿಕ ಭಕ್ತನಿಗೆ ದಂದುಗಗಳು ಇಲ್ಲೆಂದು ಹೇಳುತ್ತಾನೆ.

---

## ಶರಣರ ಸ್ವರೂಪಂ.

**ವಿವರಣೆಃ**— ಮುಂದಿನ ವಚನಗಳಲ್ಲಿ ವಚನಕಾರನು ಶರಣನ ವರ್ತನೆ, ಅವನ ಸ್ವರೂಪ, ಅವನ ರೀತಿ ನಡತೆಗಳನ್ನು ಹೇಳಿರುವನು. ಶರಣನು ಸ್ವತಂತ್ರನು, ಪರಾವಲಂಬಿಯಲ್ಲ ಅವನು ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಂಡಿರುವದರಿಂದ ಅವನು ಹೀಗೆ ಸ್ವತಂತ್ರನಾಗಿ ವ್ಯವಹರಿಸಲು ಸಮರ್ಥನು. ಲಿಂಗದ ಶಕ್ತಿಯು ಅವನಲ್ಲಿ ದೃಢವಾಗಿ ವಾಸಿಸಿರುತ್ತದೆ. ಇದಕ್ಕೆ ಅವನ ಅರಿವೇ ಮುಖ್ಯ ಕಾರಣವು. ಈ ಅರಿವು ಬರೇ ಅವನ ಮಾತಿನಲ್ಲಿರದೆ ನಡೆಯಲ್ಲಿ ತೋರುವದರಿಂದ ಆ ಅರಿವನ್ನು ಅವನು ಎಂದಿಗೂ ಮರೆಯನು. ಶರಣನು ಜಗತ್ತಿನೊಳಗಿದ್ದರೂ ಅದರ ವ್ಯಾಪಾರಗಳಲ್ಲಿ ಸಿಲುಕಿಕೊಂಡಿರುವದಿಲ್ಲ. ಆದರಿಂದ ಜಗತ್ತಿನಲ್ಲಿ ಅವನು ಇದ್ದರೂ ಇರದಂತೆ ಇರುತ್ತಾನೆ. ಅವನು ಭಿಕ್ಷುಕನಲ್ಲ. ತಿರಿದುಂಡು ಹೊಟ್ಟೆ ಹೊರೆಯುವವನಲ್ಲ ಇವೇ ಶರಣರ ಲಕ್ಷಣಗಳು. ಈ ಪ್ರಕಾರ ವಚನಕಾರರ ಅಭಿಪ್ರಾಯಗಳಿದ್ದು ಉರಿಲಿಂಗಪೆದ್ದಿಯು ಇವುಗಳನ್ನೇ ಮುಂದಿನ ವಚನಗಳಲ್ಲಿ ಸಮರ್ಥಿಸಿ ನುಡಿದಿರುತ್ತಾನೆ.

**ವಚನಃ**— ೬೩. ಅಮೃತದೊಳಗೆ ಜನಿಸಿ, ಅಮೃತದೊಳಗೆ ವರ್ತಿಸುವ, ಅಮೃತದೇಹಿಗೆ ಹಸಿವು ತೃಷೆಯೇ? ಆ ಅಮೃತವೇ ಆಧಾರ, ಆ ಅಮೃತವೇ ಸೇವನೆ. ಬೇರೊಂದು ವಸ್ತು ಉಂಟೆ? ಇಲ್ಲ. ಆ ಅಮೃತವೆ ಸರ್ವಪ್ರಯೋಗಕ್ಕೆ. ಇದಕ್ಕೆ ಕಟ್ಟಳೆಯುಂಟೇ? ಕಾಲವುಂಟೇ? ಆಜ್ಞೆಯುಂಟೇ? ಬೇರೆ ಕರ್ಮ ಉಂಟೇ? ಇಲ್ಲ. ಮನವೇ ಮೇರೆ ಪರಿಣಾಮವೇ ಅವಧಿ ನೋಡಾ. ಶ್ರೀಗುರುಲಿಂಗದಲ್ಲಿ ಜನಿಸಿ ಶಿವಲಿಂಗದಲ್ಲಿ ಬೆಳೆದು ಜಂಗಮಲಿಂಗದಲ್ಲಿ ವರ್ತಿಸಿ, ಪ್ರಸಾದಲಿಂಗದಲ್ಲಿ ಪರಿಣಾಮಿಸಿ, ಆ ಚತುರ್ವಿಧವೇಕವಾಗಿ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ, ಆ ಲಿಂಗವೇ ಅಂಗ, ಅಂಗವೇ ಲಿಂಗವಾಗಿ ಲಿಂಗಸ್ವಾಯತವಾದ ಲಿಂಗೈಕ್ಯಂಗೆ ಜಪ, ತಪ, ಅರ್ಚನೆ, ಪೂಜೆಗೆ ಆಗಮ ಉಂಟೆ? ಕಾಲ ಉಂಟೆ? ಕರ್ಮ ಉಂಟೆ? ಕಲ್ಪಿತ ಉಂಟೆ? ಇಲ್ಲ. ಸರ್ವವು ಲಿಂಗಮಯವಾದ ಆ ಲಿಂಗವಂತಂಗೆ ನಡೆವುದೆ ಆಗಮ, ಪೂಜಿಸುವುದೆ ಕಾಲ, ಮಾಡಿದ್ದೆ ಕ್ರಿಯೆ, ನುಡಿದುದೆ ಜಪ, ನೆನೆದುದೆ ಧ್ಯಾನ, ವರ್ತಿಸಿದುದೆ ತಪಸ್ಸು, ಇದಕ್ಕೆ ಅವಧಿಯುಂಟೆ?



ಮೇರೆಯುಂಟೆ? ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ರವಿ, ಶಶಿ, ಆತ್ಮ, ಮನೋವಾಕ್ಕಾಯ, ಹೊನ್ನು, ಹೆಣ್ಣು, ಮಣ್ಣು, ಸರ್ವಪದಾರ್ಥವನರ್ಪಿಸಿ ಗುರುಲಿಂಗಜಂಗಮದ ಪ್ರಸನ್ನತೆಯ ಪಡೆದ ಮಹಾಪ್ರಸಾದಿಗೆ ಸರ್ವವು ಪ್ರಸಾದವಲ್ಲದೆ ಮತ್ತೊಂದಿಲ್ಲ. ಆ ಪ್ರಸಾದಿಗೆ ಪದಾರ್ಥ ಪ್ರಸಾದವೆಂದು ಬೇರುಂಟೆ? ಅರ್ಪಿತ ಅನರ್ಪಿತವೆಂಬ ಸಂದೇಹ ಉಂಟೆ? ಕೊಂಬಲ್ಲಿ ಕೊಡುವಲ್ಲಿ ಸೀಮೆಯುಂಟೆ? ನಿಸ್ಸೀಮ ಪ್ರಸಾದಿಗೆ ಸರ್ವವೂ ಪ್ರಸಾದ. ಆ ಭೋಗಕ್ಕೆ ಅವಧಿಯುಂಟೆ? ಮೇರೆಯುಂಟೆ? ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ವೇದ ಶಾಸ್ತ್ರ ಪುರಾಣಾಗಮಂಗಳು ಸರ್ವವಿದ್ಯಂಗಳ ತಾತ್ಪರ್ಯ ಮರ್ಮ ಕಳೆಗಳನರಿದ ಮಹಾ ಜ್ಞಾತೃವಿಂಗೆ ಆ ಮಹಾಜ್ಞಾನವೇ ದೇಹ, ಆ ಜ್ಞಾನವೇ ಪ್ರಾಣ. ಈ ಮಹತ್ತಪ್ಪ ಜ್ಞಾತೃ ಜ್ಞಾನ ಜ್ಞೇಯ ಒಂದಾದ ಮಹಾ ಬೆಳಗಿನ ಸುಖಸ್ವರೂಪಂಗೆ ಮರ್ತ್ಯ, ಸ್ವರ್ಗ, ದೇವಲೋಕವೆಂಬ ಫಲಪದದಾಸೆಯುಂಟೆ? ಇಲ್ಲ. ನಿರಂತರ ತೇಜೋಮಯ ಸುಖಸ್ವರೂಪನು ನಿತ್ಯಾನಂದಮಯನು. ಆ ಮಹಾಮಹಿಮನ ಸುಖಕ್ಕೆ ಅವಧಿಯುಂಟೆ? ಮೇರೆಯುಂಟೆ? ಇಲ್ಲ. ಮನವೇ ಮೇರೆ ಪರಿಣಾಮವೇ ಅವಧಿ ನೋಡಾ! ಆ ಮಹಾಮಹಿಮನು ಅನುಭಾವಿ ತಾನೇ ನಿರುಪಮ ಜ್ಯೋತಿರ್ಲಿಂಗವಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

**ಭಾವಃ**— ಯಾವನು ಸ್ವಯಂ ಸ್ಫೂರ್ತಿಯುಳ್ಳವನಾಗಿ ಲಿಂಗಾಣತಿಯಿಂದ ನಡೆಯುತ್ತಾನೋ ಅವನಿಗೆ ಮೇರೆ ಇಲ್ಲ, ಕಟ್ಟಳೆ ಇಲ್ಲ, ಕರ್ಮವಿಲ್ಲ. ಅವನ ಮನಸ್ಸೇ ಅವನಿಗೆ ಮೇರೆ. ಅವನಿಗೆ ಜಪತಪಾದಿಗಳಿಲ್ಲ. ಅವನು ಗುರುವಿನಲ್ಲಿ ಪುನರ್ಜಾತನಾಗಿ, ಶಿವಲಿಂಗವನ್ನೇ ತನ್ನ ಆಧಾರವಾಗಿಟ್ಟುಕೊಂಡು ಬೆಳೆದು, ಜಂಗಮಲಿಂಗವೇ ತನ್ನ ಚೈತನ್ಯವಾಗಿ ವರ್ತಿಸಿ, ಆದರ ಪರಿಣಾಮಸುಖವನ್ನುಂಡು ಸುಖಿಸುವನಾದ್ದರಿಂದ ಅವನಿಗೆ ಲಿಂಗವೇ ಪ್ರಾಣ, ಪ್ರಾಣವೇ ಲಿಂಗವಾಗಿರುವದು. ಇವನಿಗೆ ಅರ್ಚನೆ, ಪೂಜೆ, ಆಗಮ, ಶಾಸ್ತ್ರ ಮೊದಲಾದವುಗಳು ಯಾವವೂ ಇಲ್ಲ. ಅವನಿಗೆ ಅವಧಿ ಇಲ್ಲ. ಮೇರೆ ಇಲ್ಲ. ಅವನು ಕಾಣುವ, ಸುಖಿಸುವ, ಅನುಭವಿಸುವ ಎಲ್ಲ ಪದಾರ್ಥಗಳನ್ನು ಲಿಂಗಾರ್ಪಿತ ಮಾಡಿ ಉಪಭೋಗಿಸುವದರಿಂದ ಎಲ್ಲವೂ ಅವನಿಗೆ ಪ್ರಸಾದಮಯವಾಗಿದೆ. ಅವನಲ್ಲಿ ಇದು

ಪದಾರ್ಥ ಇದು ಪ್ರಸಾದ ಎಂಬ ಭೇದಭಾವವಿಲ್ಲ. ಅವನು ಮಹಾ ಜ್ಞಾನವನ್ನು ತನ್ನಲ್ಲಿ ಒಳಪಡಿಸಿಕೊಂಡು ವರ್ತಿಸುವವನಾಗಿರುವನು. ಆದ್ದರಿಂದ ತಿಳಿಯುವವನೂ, ತಿಳಿಯತಕ್ಕಂಥ ವಸ್ತುವೂ, ಜ್ಞಾನವೂ ಇವೆಲ್ಲವೂ ತನ್ನಲ್ಲಿ ಸಮರಸವಾಗಿರುತ್ತವೆ. ಈ ಬಗೆಯ ಸಮರಸದಿಂದ ಉಂಟಾದ ಸುಖವನ್ನು ಆಸ್ವಾದಿಸುವವನಾದ್ದರಿಂದ ಅವನಲ್ಲಿ ಇಹಲೋಕ, ಪರಲೋಕ ಸುಖದ ಆಸೆಯು ಇರಲಾರದು. ಅವನು ಸುಖಸ್ವರೂಪನಾಗಿರುವನು, ನಿತ್ಯಾನಂದಮಯನಾಗಿರುವನು ಅವನು ಜ್ಯೋತಿರ್ಲಿಂಗವು ಎಂದು ವಚನಕಾರನು ಇಲ್ಲಿ ನುಡಿದಿದ್ದಾನೆ.

**ವಚನ:**— ೬೪. ಲಿಂಗಭರಿತಶರಣ, ಶರಣಭರಿತಲಿಂಗವು. ಅದೆಂತೆಂದರೆ ಶರಣಮಧ್ಯೇ ಲಿಂಗಸ್ಯ। ಲಿಂಗಮಧ್ಯೇ ಶರಣ್ಯತಾಂ। ಎಂದುದಾಗಿ, ಶರಣ ಬೇರೆ, ಲಿಂಗ ಬೇರೆಯೇ? ಶಿವಶಿವಾ ಒಂದೇ ಕಾಣಿರಣ್ಣಾ. ಅಂತು ಶರಣಕ್ರಿ ಎಲ್ಲವು ಲಿಂಗಕ್ರಿ, ಲಿಂಗಕ್ರಿ ಎಲ್ಲವು ಶರಣಕ್ರಿ. ಅದು ಕಾರಣ ಶರಣ ಪ್ರಸಾದವು ಲಿಂಗಕ್ಕೆ ನೈವೇದ್ಯ ಕಾಣಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಇಲ್ಲಿ ವಚನಕಾರನು ಲಿಂಗ ಮತ್ತು ಶರಣ ಇವರು ಬೇರೆ ಬೇರೆ ಎಂದು ಭಾವಿಸಕೂಡದೆಂದು ಹೇಳಿದ್ದಾನೆ. ಶರಣನ ಕ್ರಿಯೆಗಳೇ ಲಿಂಗದ ಕ್ರಿಯೆಗಳಾಗಿರುವವು. ಮತ್ತು ಲಿಂಗದ ಕ್ರಿಯೆಗಳೇ ಶರಣನ ಕ್ರಿಯೆಗಳು. ಆದ್ದರಿಂದ ಶರಣನು ಅರ್ಪಿಸಿದ್ದು ಲಿಂಗಕ್ಕೂ ಸಲ್ಲುವದು.

**ವಚನ:**— ೬೫. ಪ್ರಾಣಲಿಂಗ ಸ್ವಾಯತವಾದ ಸದ್ಭಕ್ತಂಗೆ ಸದ್ಭಕ್ತಿಮಾರ್ಗವೇ ಕ್ರಿಯೆ: ನೋಡಾ! ಲೋಕಾಚಾರ ಮಾಡಲಾಗದು. ಲೋಕದ ಬಳಕೆಯ ಬಳಸಲಾಗದು. ಲೋಕ ಲೌಕಿಕರಲ್ಲಿ ವರ್ತಿಸಲಾಗದು. ಲೋಕಾಚಾರ ಮಾರ್ಗವನೆಲ್ಲವನು ಬಿಡಬೇಕು. ಲೋಕಾಚಾರವನು ಬಿಟ್ಟು ಶಿವಾಚಾರ ಸನ್ಮಾರ್ಗದಲ್ಲಿ ಪಂಚಾಚಾರ ನಿಯತಾತ್ಮನಾದ ಸದ್ಭಕ್ತನೇ ಪ್ರಾಣಲಿಂಗಿ, ಆತನೇ ಕಾಯಲಿಂಗಿ ಆ ಸದಾಚಾರಿಯೇ ಸರ್ವಾಂಗಲಿಂಗಿಯಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಪ್ರಾಣಲಿಂಗಸ್ವಾಯತವಾದವನು ಶಿವಾಚಾರ ಸನ್ಮಾರ್ಗದಲ್ಲಿ ನಡೆಯಬೇಕು. ಪಂಚಾಚಾರಕ್ಕನುಸರಿಸಿ ವರ್ತಿಸಬೇಕು. ಲೌಕಿಕದಲ್ಲಿ ವರ್ತಿಸಲಾಗದು ಆತನು ಕಾಯಲಿಂಗಿಯಾಗುವನು. ಅವನೇ ನಿಜವಾದ ಸರ್ವಾಂಗಲಿಂಗಿಯು.



ಯನೆಂಬುದ ಪುರಾತನರ ಚಾರಿತ್ರ್ಯದಿಂದರಿದು ಅಸತ್ಯವನೆ ಮಾಡುತ್ತಿರ್ಪುದು. ಎಲೆ ವಾಙ್ಮನ ಪ್ರಾಣಾಧಿನಾಥ ಇವೆಲ್ಲವ ಕಳೆದು ನಿಮ್ಮ ಶರಣರಲ್ಲಿ ಸತ್ಯಸಂಭಾಷಣೆಯ ಕರುಣಿಸಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಇನಿಮಾತು = ಸವಿಮಾತು

**ವಚನ:**— ೭೬. ಆದಿಮಧ್ಯಾವಸಾನದಲ್ಲಿ ಎನ್ನನಾಸೆಯೇ ಅವಗ್ರಹಿಸುತ್ತಿದೆ. ಶಿವಶಿವಾ ಆಸೆಯಿಂದವೆ ಗಾಸಿಯಾಗುತ್ತಿದೇನೆ. ಶಿವಶಿವಾ ಈ ಆಸೆಯ ಕೆಡಿಸಿ ನಿಮ್ಮ ಶ್ರೀಪಾದದಾಸೆಯೇ ನಿವಾಸವಾಗಿರಿಸಯ್ಯಾ ಎನ್ನನುರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಅವಗ್ರಹಿಸು = ಹಿಡಿ.

**ವಚನ:**— ೭೭. ಶಿವಾಚಾರ ಶಿವಕಾರ್ಯಕ್ಕೆ ವಕ್ರವಾದವರ ಗುರುಲಿಂಗಜಂಗಮವ ನಿಂದಿಸಿ ನುಡಿದವರ ಬಾಯ ಸೀಳಿ ನಾಲಿಗೆಯ ಕಿತ್ತು ಕೊಲುವೆನು. ಅದೆಂತೆಂದೊಡೆ ॥ಶ್ಲೋ॥ ಯೋವಾಪ್ಯುತ್ಪಾಟಯೇಜ್ಜಿಹ್ವಾಂ ಶಿವನಿಂದಾ ರತಸ್ಯ ತು। ತ್ರಿಸಪ್ತ ಕುಲಮುದ್ಧರೇತ್ ಶಿವಲೋಕೆ ಮಹೀಯತೆ॥ ಎಂದುದಾಗಿ ಮತ್ತಂ ಶಿವಭಕ್ತನಿಂದೆಯನು ಎನ್ನ ಕಿವಿಯಲ್ಲಿ ಕೇಳಿ ಆ ನಿಂದಕರ ಕೊಲ್ಲುವೆನು. ಅಲ್ಲದಿರ್ದಡೆ ತಾನು ಸಾವೆನು. ಅದೆಂತೆಂದಡೆ ॥ಶ್ಲೋ॥ ಶ್ರುತ್ವಾ ನಿಂದಾಂ ಶಿವಸ್ಯಾಥ ತತ್‌ಕ್ಷಣಾದ್ವರ್ಷಂ ಸಂತ್ಯಜೇತ್। ತಸ್ಯ ದೇಹಂ ನಿಹಂತಾತದ್ರುದ್ರಲೋಕಂ ಸ ಗಚ್ಛತಿ ಎಂದುದಾಗಿ ಇದನರಿತು ಶಿವನಿಂದಕರ ಸಂಹರಿಸಿದಲ್ಲದೆ ಎನಗೆ ಸಂತೋಷವಿಲ್ಲವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ವಚನ:**— ೭೮. ಶರಣರ ಸಂಗ ಸಾಲೋಕ್ಯಪದವಯ್ಯ; ಗಣಂಗಳ ಮುಖಾವಲೋಕನ ಪ್ರಿಯ ಸಂಭಾಷಣೆ ಸಾಮೀಪ್ಯಪದವಯ್ಯ; ಶ್ರೀವಿಭೂತಿ ರುದ್ರಾಕ್ಷಿ ಪ್ರಮಥರ ಶ್ರೀಮೂರ್ತಿಯ ಕಂಡು ಮನದೆಲ್ಲಿ ಧರಿಸಿರ್ದಡೆ ಸಾರೂಪ್ಯಪದವಯ್ಯ; ಪುರಾತನರ ಶ್ರೀಪಾದಂಗಳಲ್ಲಿ ಎನ್ನ ಶಿರಸ್ಪರ್ಶನದಿಂದ ಸಾಷ್ಟಾಂಗವೆರಗಲು ಸಾಯುಜ್ಯಪದವಯ್ಯ; ಇಂತೀ ಸಾಲೋಕ್ಯ ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ಚತುರ್ವಿಧ ಪದವೆನಗಾಯಿತ್ತಯ್ಯ ನಿಮ್ಮ ಗಣಂಗಳ ಕರುಣದಿಂದ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ವಚನಃ**— ೭೯. ಆಶೆಯುಳ್ಳನ್ನಕ ಒಬ್ಬರನಾಶ್ರಯಿಸುವದು. ಆಶ್ರಯದಾಸೆ ಕಷ್ಟ ಕಾಣಿರಯ್ಯ. ಆಶೆಯೇ ದಾಸತ್ವ. ನಿರಾಸೆಯೆ ಈಶತ್ವ ದಾಸತ್ವದ ಈಶತ್ವದ ಅನುವ ವಿಚಾರಿಸಿ ನಿರಾಸೆಯಾಗಿಪ್ಪದೆ ಈಶ ಪದವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ವಚನಃ**— ೮೦. ಭಕ್ತನು ರುದ್ರಗಣಂಗಳ ಮತಕ್ಕೆ ಬಂದರೆ ಭೃತ್ಯನಾಗಿರಬೇಕು. ಕರ್ತನಾಗಿ ಕಾಲ ತೊಳೆಯಿಸಿಕೊಂಡರೆ ಹಿಂದೆ ಮಾಡಿದ ಭಕ್ತಿ ಹಾನಿಯಪ್ಪುದು. ಲಕ್ಷ ಗಾವುದ ಹೋಗಿಯಾದರೂ ಭಕ್ತನು ಗಣಂಗಳ ಕಾಂಬುದು ಸದಾಚಾರ. ಅಲ್ಲೇ ಕೂಡಿ ದಾಸೋಹವ ಮಾಡಿ ಗುರುಲಿಂಗಜಂಗಮಕ್ಕೆ ಅರ್ಥ ಪ್ರಾಣಾಭಿಮಾನವ ಕೊಟ್ಟ ಅಹಂಕಾರ ವಳಿದಿಹ ಪುರಾತನರು ಮೆಟ್ಟುವ ಪಾವರಕ್ಷೆಗಳ ನನ್ನ ಮಸ್ತಕದ ಮೇಲಿರಿಸಿಕೊಂಡು ನಾನು ಕೃತಾರ್ಥನಾದೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ವಚನಃ**— ೮೧. ಅಯ್ಯಾ ನಿಮ್ಮ ಶರಣರ ಚರಣದ ಭಕ್ತಿಯೇ ಎನಗೆ ಸಾಲೋಕ್ಯಪದವಯ್ಯ. ನಿಮ್ಮ ಶರಣರ ಅರ್ಚನೆ ಪೂಜೆಯೆ ಎನಗೆ ಸಾಮೀಪ್ಯಪದವಯ್ಯ. ಅಯ್ಯಾ ನಿಮ್ಮ ಗಣಂಗಳ ಧ್ಯಾನವೇ ಎನಗೆ ಸಾರೂಪ್ಯಪದವಯ್ಯ. ಅಯ್ಯಾ ನಿಮ್ಮ ಪುರಾತನರ ಜ್ಞಾನಾನುಭಾವ ಸಮರಸಾನಂದವೇ ಎನಗೆ ಸಾಯುಜ್ಯಪದವಯ್ಯ. ಇಂತೀ ಚತುರ್ವಿಧ ಪದಂಗಳಲ್ಲದೆ ಅನ್ಯವ ನಾನರಿಯೆನಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ವಚನಃ**— ೮೨. ಹಿಂದಾದ ದುಃಖವನು ಮುಂದಾದ ಸುಖವನು ಮರೆದೆಯಲ್ಲಾ. ನೀ ಮರೆದ ಕಾರಣ ಬಂಧನ ಪ್ರಾಪ್ತಿಯಾಯಿತ್ತಲ್ಲಾ. ಹೇಮ ಭೂಮಿ ಕಾಮಿನಿಯರೆಂಬ ಸಂಕೊಲೆಯಲ್ಲಿ ಬಂಧಿಸಿದರಲ್ಲಾ. ಅರಿಷಡ್ವರ್ಗವೆಂಬ ದಂಡದಲ್ಲಿ ದಂಡಿಸಿದರಲ್ಲಾ. ಇನ್ನು ಮರೆಯದಿರು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯನ.

**ವಚನ:**— ೮೩. ಬ್ರಹ್ಮ ವಿಷ್ಣು ಮೊದಲಾದ ದೇವ ದಾನವ ಮಾನವರೆಲ್ಲರ ಆಶೆಯೇ ಘಾಸಿಮಾಡಿ ಕಾಡಿತ್ತು. ಮಹತ್ವ ತಪ ವ್ರತ ನಿಯಮವುಳ್ಳ ಗುರುತ್ವವುಳ್ಳವರುಗಳ ತಪ ವ್ರತ ನಿಯಮ ಮಹತ್ವ ಗುರುತ್ವಂಗಳ ಕೆಡಿಸಿ ಲಘು ಮಾಡಿ ನಗೆಗೆಡೆಮಾಡಿತ್ತು. ಇಂತಪ್ಪ ಸಾಮರ್ಥ್ಯ ಪುರುಷರ ಘಾಸಿಮಾಡಿ ಸೋಲಿಸಿ ತಾ ಗೆಲುವ ಸಾಮರ್ಥ್ಯವುಳ್ಳ ಆಶೆ ಇದೇನೋ ಎಂದು ವಿಚಾರಿಸಲು ಈಯಾಶೆ ಶಿವಸಂಬಂಧಿಯಾದ ಇಚ್ಛಾ



ಶಕ್ತಿ ಶಿವನೊಪ್ಪದವರನ್ನು ಶಿವನಾಜ್ಞೆಯಿಂದ ಈಯಾಶೆ ಎಂಬ ವಿಧಿ ಕಾಡಿ ತಿಂಬುದು. ಈಯಾಶೆ ಎಂಬ ವಿಧಿ ಶಿವನೊಲಿದವರನು ಹೊದ್ದಲಮ್ಮದಾಗಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ ಶರಣರು ನಿರಾಶಾಸಂಪನ್ನರು.

ಹೊದ್ದಲಮ್ಮದಾಗಿ = ಸಂಬಂಧಿಸಿಕೊಳ್ಳಲು ಅಸಮರ್ಥನಾಗಿರುವದರಿಂದ.

**ವಚನಃ**— ೮೪. ಸಕಲ ಜನಂಗಳು ಹೇಸಿದ ಉದಾನವನು ಶ್ವಾನ ಭುಂಜಿಸಿ ತನ್ನೊಡಲ ಹೊರೆವುದು. ಆದು ತಾನು ಹೇಸಿದ ಉದಾನವನು ತಾ ಮುಟ್ಟದು ನೋಡಾ. ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ ಮರಳಿ ಭವಿಯ ಬೆರಿಸಿದನಾದಡೆ ಆ ಶ್ವಾನನಿಂದ ಕರಕಷ್ಟ ನೋಡಾ. ನೀನೊಲಿದವರಿಗಲ್ಲದೆ ಎಲ್ಲರಿಗಳವಡುವುದೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

ಅಳವಡು = ವಶವಾಗು.

**ವಚನಃ**— ೮೫. ಹಸಿವು, ತೃಷೆ, ವಿಷಯ, ವ್ಯಸನ, ಕಾಮ, ಕ್ರೋಧ, ಲೋಭ, ಮದ, ಮತ್ಸರವಾದಿಯಾದ ತನುಗುಣಂಗಳು ದೇವದಾನವ ಮಾನವರಂತಾದರೆ ಲಿಂಗವಂತನಾದ ಪರಿ ಎಂತಯ್ಯಾ? ತನುಗುಣಂಗಳು ಭೂತದೇಹಿಯಂತಾದಡೆ ಲಿಂಗದೇಹಿಯಾದ ಪರಿ ಎಂತಯ್ಯ ? ಲಿಂಗಗುಣ ಲಿಂಗಚಿನ್ನ ಇಲ್ಲದಿರ್ದೊಡೆ ಲಿಂಗದೇಹಿಯಾದ ಪರಿ ಎಂತಯ್ಯಾ? ಹಸಿವು ತೃಷೆ ವಿಷಯ ವ್ಯಸನವಡಗಿದಡೆ ಲಿಂಗಚಿನ್ನ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವಾದಿಯಾದ ದೇಹಗುಣಂಗಳಳಿದರೆ ಲಿಂಗಚಿನ್ನ. ಇಂತಲ್ಲದೆ ದೇಹಗುಣಂಗಳು ತನ್ನ ಬಿಡದೆ. ತಾನವ ಕೂಡಿಕೊಂಡು ಬಿಡದಿರ್ದು ತಾ ಲಿಂಗದೇಹಿ ಎಂದಡೆ ಆ ಲಿಂಗನೆಂತು ಒಲಿವುದು? ಸದ್ಭಕ್ತರೆಂತು ಮೆಚ್ಚುವರಯ್ಯ? ಇಂತಹ ಅವಗುಣಂಗಳೆಲ್ಲವೂ ಅಳಿದು ಗುರುಲಿಂಗ ಜಂಗಮದಲ್ಲಿ ತನು ಮನ ಧನವ ಲೀಯವ ಮಾಡಿದರೆ ಆತನೇ ಸರ್ವಾಂಗ ಲಿಂಗಿಯಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಅವಗುಣ = ಕೆಟ್ಟಗುಣ.

**ವಚನಃ**— ೮೬. ಎನ್ನ ಮನಸ್ಸು ಹೊನ್ನು, ಹೆಣ್ಣು, ಮಣ್ಣು, ಧ್ಯಾನಿಸಿ ನಿಮ್ಮ ಮರೆದೆನಯ್ಯ. ನಾ ಮರೆದ ಕಾರಣ ನೀನೆನ್ನ ಮರೆದೆ. ನೀ ಮರೆದ ಕಾರಣ ನಿನ್ನ ಮೋಹ ತಪ್ಪಿ ನಾನು ಕೆಟ್ಟೆನಯ್ಯ. ಹೊನ್ನು ಹೆಣ್ಣು ಮಣ್ಣೆಂಬ ಆಶೆ ಎನ್ನ ಘಾಸಿ ಮಾಡುತ್ತಿವೆಯಯ್ಯ. ಶಿವಧೋ ಶಿವಧೋ ಮಹಾದೇವಾ. ಈ ಹೊನ್ನು ಹೆಣ್ಣು ಮಣ್ಣಿಂಗೆ ಕರ್ತ ನೀನು. ॥ಶೃತಿ॥ ತೇನವಿನಾತೃಣಾಗ್ರಮಪಿ ನ ಚಲತಿ ಎಂಬುದನರಿದು ಮದದಲ್ಲಿ ಇರ್ದು ಕೆಟ್ಟೆ. ಈ ಕೇಡಲ್ಲದೆ ಹಸಿವು ತೃಷೆ ವ್ಯಸನ ವಿಷಯ ಪಂಚೇಂದ್ರಿಯ ಷಡ್ವರ್ಗಂಗಳು ಕಾಡುತ್ತಿವೆ. ಶಿವಧೋ ಮಹಾದೇವಾ, ಈ ಹೊನ್ನು ಹೆಣ್ಣು ಮಣ್ಣಿನಾಶೆಯಿಂದ ಈಯವಸ್ಥೆಗೊಳಗಾದೆನು. ಇನ್ನಿವಕ್ಕಾಸೆ ಮಾಡಿ ನಿಮ್ಮ ಮರೆಯದಂತೆನಗೆ ಕೃಪೆಯ ಮಾಡಯ್ಯ. ನಿಮಗೆ ಎನ್ನಾಣೆ. ಭಕ್ತವತ್ಸಲ ಭಕ್ತದೇಹಿಕ ದೇವ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ವಚನ**— ೮೭. ಲಿಂಗವಂತರು ಕೇವಲ ಲಿಂಗಮೂರ್ತಿಯ ಲಿಂಗಾರ್ಚನೆಯ ಮಾಡಿ, ಲಿಂಗಪ್ರಸಾದವ ಧರಿಸಿ ಸರ್ವವೂ ಲಿಂಗಕ್ರಿಯೆಯಾಗಿರ್ದು ಲಿಂಗವಿಲ್ಲದವರಲ್ಲಿ ತನುವಿನ ಕೊಳುಕೊಡೆ, ಮನದ ಕೊಳುಕೊಡೆ, ಧನದ ಕೊಳುಕೊಡೆಗಳನು ಮಾಡಿದಡೆ ಮಾಡುವನೆಂಬ ಆಶೆಯಿಂದಿದ್ದರೆ ನಾಚದೇ ಶಿವಾಚಾರ, ನಾಚದೇ ಗುರುವು, ನಾಚದೇ ಲಿಂಗವು, ನಾಚದೇ ಜಂಗಮವು, ನಾಚದೇ ಪ್ರಸಾದವು? ಸುಡು ಕಷ್ಟಮನವನು. ಬಿಡು ಬಿಡು ಕೆಟ್ಟ ತನುವನು. ಲಿಂಗವಂತರಲ್ಲಿಯೇ ಸದ್ಭಕ್ತಿಯ ವರ್ತಿಸುವುದು, ತನಗಿಚ್ಛೈಸಿದುದ ಬೇಡುವುದು, ಲಿಂಗವಂತರಿಚ್ಛೈಸಿದುದ ಕೊಡುವುದು. ಇಂತಲ್ಲದೆ ಅನ್ಯವನಾಶ್ರಯಿಸಿದಡೆ ಅನ್ಯಾಯವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಕೊಳುಕೊಡೆ = ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರ.

**ವಚನ**— ೮೮. ದಿಟದಿಟ, ಎನಗಿನ್ನೆಂತಯ್ಯಾ? ಸಾವು ಬಂದಿತ್ತೇ ಸಾವು ಬಂದಿತ್ತೇ? ಸ್ಥಿರಾಯುಗಳೆಂಬ ದೇವಜಾತಿಗಳು ಸತ್ತುದ ಕೇಳುತ್ತಿದ್ದೇನೆ. ಮತ್ತೆ ಎನ್ನ ಅನ್ವಯದವರು ಸತ್ತುದ ಕಾಣುತ್ತಿದ್ದೇನೆ. ಮತ್ತೆಯೂ ನಾಚಿಕೆ ಇಲ್ಲ, ಹೇಸಿಕೆ ಇಲ್ಲ. ಕರ್ಮಿ ನಾನು ಸದ್ಧರ್ಮಿ ನೀನು. ಬೇಗ ಬೇಗ ಭಕ್ತಿಜ್ಞಾನ ವೈರಾಗ್ಯವನಿತ್ತು ರಕ್ಷಿಸಯ್ಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಅನ್ವಯದವರು = ವಂಶದವರು.



**ವಚನ**— ೮೯. ಗೃಹ ಗ್ರಾಮ ನಾಡು ದೇಶಗಳೆಂಬ ಆಳುವಿಚ್ಛೆಗೆ ಭೂಮಿ ಏಕೆ? ಅಲ್ಪ ಭೂಮಿ ಅಲ್ಪಂಗಲ್ಲದೆ, ಪಂಚಾಶತ್ಕೋಟಿ ಭೂಮಿಯನು ಒಳಕೊಂಡುದು ಬ್ರಹ್ಮಾಂಡ. ಅಂತಹ ಬ್ರಹ್ಮಾಂಡವನು ಆಭರಣವ ಮಾಡಿಕೊಂಡಿಪ್ಪ ಆದಿಶೇಷನು. ಅಂತಹ ಆದಿಶೇಷಾಭರಣದಿಂ ಪೂಜೆಗೊಂಡಿಪ್ಪ ಲಿಂಗವೇ ಪ್ರಾಣವಾಗಿ ಭೂಮಿಯಲ್ಲಿ ನಿಂದ ಲಿಂಗೈಕ್ಯಂಗೆ ಭೂಮಿಯಾಕಾಂಕ್ಷೆ ಇನ್ನೆಲ್ಲಿಯದೋ ಅಯ್ಯಾ? ಕ್ಷೋಣಿ ಕೊಟ್ಟ ಕ್ಷಿತಿಪತಿಯಂತರ ಧನವ ಪಡೆವ ತಾಗುನಿರೋಧ ಆಗುವಿಚ್ಛೆಗೆ ಸುಖದುಃಖಂಗಳು ತನುಮನ ಧನ ಕಾಂಕ್ಷೆ ಅಲ್ಪಂಗಲ್ಲದೆ, ಮಹಾ ಲಕ್ಷ್ಮೀದೊಡೆಯನಾಗಿ ಮಹದೈಶ್ವರ್ಯ ಸಂಪನ್ನನಾಗಿ ಹಿರಣ್ಯಪತಿಯೇ ಕಾಯವಾಗಿ ಹಿರಣ್ಯಪತಿಯೇ ಪ್ರಾಣವಾಗಿರ್ದ ಮಹಾಲಿಂಗೈಕ್ಯಂಗೆ ಧನದ ಕಾಂಕ್ಷೆ ಇನ್ನೆಲ್ಲಿಯದಯ್ಯಾ? ಉತ್ತಮ ಮಧ್ಯಮ ಕನಿಷ್ಠ ನಿಕೃಷ್ಟವೆಂಬ ಜಾತಿವಿಕಾರಂಗಳ ಮೀರೆದಪ್ಪಿದ ದಾಸಿ, ವೇಶಿ, ಪರಸ್ತ್ರೀ, ವಿಧವೆ, ಕನ್ನಿಕೆಯರಲ್ಲಿ ಕಂಗೆಟ್ಟು ವರ್ತಿಸುವ ಪಾಪದೃಷ್ಟಿಯ ಕ್ರೂರಾತ್ಮಂಗೆ ಹೆಣ್ಣಿನ ಚಿಂತೆಯಲ್ಲದೆ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಯ ವರ್ತನೆಯ ಮೀರಿದ ಮಹಾಶಕ್ತಿ ತಾನಾಗಿ ಮಹಾಪುರುಷನಲ್ಲಿ ಮಹಾ ಸಂತೋಷವುಳ್ಳ ಮಹಾಶರಣಂಗೆ ಹೆಣ್ಣಿನ ಕಾಂಕ್ಷೆ ಇನ್ನೆಲ್ಲಿಯದಯ್ಯಾ? ವೇದ ಶಾಸ್ತ್ರ ಪುರಾಣಾಗಮಾದಿಯಾದ ಅಷ್ಟಾದಶ ವಿದ್ಯಂಗಳನೋದುವ ಹೇಳುವ ಕೇಳುವ ವಿಚಾರಿಸುವ ವಿದ್ಯೆಯ ಬಯಕೆ ಅಲ್ಪ ಮತಿಯಲ್ಪಂಗಲ್ಲದೆ ವಾಗ್ದೇವತೆಗೆ ಅಧಿದೈವವಪ್ಪ ಮಹಾಘನ ವಿದ್ಯೆಯೇ ದೇಹವಪ್ಪ ವಿದ್ಯಾರೂಪನು ಮಹಾದೇವನೇ ಕಾಯವಾಗಿ, ಆ ಮಹಾದೇವನೇ ಜಿಹ್ವೆಯಾಗಿ, ಆ ಮಹಾ ವಾಗ್ದೇವತೆಯೇ ಮನವಾದ ಮಹಾಘನಲಿಂಗೈಕ್ಯಂಗೆ ಉಳಿದಾದ ವಿದ್ಯೆಯ ಬಯಕೆ ಇನ್ನೆಲ್ಲಿಯದಯ್ಯಾ? ಭಕ್ತಕಾಯ ಶಿವನಾದನಾಗಿ ಶಿವನೇ ಪ್ರಾಣವಾಗಿ ನಿಂದ ಸದ್ಭಕ್ತಂಗೆ ಸಕಲಾಗಮಂಗಳಾವವೂ ಇಲ್ಲ. ಆತ ನಿಶ್ಚಿಂತನು, ಆತ ಪರಿಣಾಮಿ, ಆತ ಸದ್ಭಕ್ತನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ವಚನಃ**— ೯೦. ಲಿಂಗವಂತನು ಲಿಂಗವಂತರಲ್ಲಿಯೇ ಸಂಗವ ಮಾಡುವುದು. ಲಿಂಗಬಾಹ್ಯರ ಸಂಗವ ಮಾಡಲಾಗದು. ಸ್ತ್ರೀಪುತ್ರರು ಮೊದಲಾದವರ ಕೂಡೆ ಲಿಂಗವಿಲ್ಲದವರೊಡನೆ ಸಂಗವ ಮಾಡಲಾಗದು. ಅದೆಂತೆಂದೊಡೆ, ಶಿವಲಿಂಗಾಂಗ ಸಂಪನ್ನೋ ಲಿಂಗಬಾಹ್ಯ ಸತಿ ಸುತಾನ್ ।

ಆಲಿಂಗ ಚುಂಬನಂ ಚ್ಚೈವ ರೌರವಂ ನರಕಂ ವ್ರಜೇತ್ ॥ ಎಂದುದಾಗಿ ಮತ್ತೆಯೂ ಲಿಂಗಾಲಿಂಗೀ ಸಹವಾಸೀ ಲಿಂಗಿನಾಂ ಸಹವರ್ತಿನಾಂ। ಲಿಂಗಿನಾಂ ಸಹಭುಂಜತೆ ಲಿಂಗಯೊಗೋ ನ ಸಂಶಯಃ ॥ ಎಂದುದಾಗಿ ಲಿಂಗವಂತನು ಲಿಂಗವಂತರಲ್ಲಿಯೇ ಸಂಗವ ಮಾಡುವುದು ಶಿವಪಥವಯ್ಯಾ. ಲಿಂಗವಿಲ್ಲದವರ ಕೂಡೆ ಸಂಗವ ಮಾಡುವುದು ಮಹಾ ಪಾತಕವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ವಚನಃ**— ೯೧. ಪುಣ್ಯಾಂಗನೆಯ ಸುತಂಗೆ ಪಿತನುಂಟು, ಪಿತಾಮಹನುಂಟು, ಪ್ರಪಿತಾಮಹನುಂಟು. ಪುಣ್ಯಾಂಗನೆಯ ಸುತಂಗೆ ಪಿತನಿಲ್ಲ, ಮೇಲೆ ಏನೂ ಇಲ್ಲ. ಅವನ ಬದುಕು ನಗೆಗೆಡೆ. ಭಕ್ತ್ಯಾಂಗನೆಯ ಸುತನಹ ಸದ್ಭಕ್ತಂಗೆ ಪಿತನಹ ಗುರುವು ಉಂಟು. ಪಿತಾಮಹನೆಂಬ ಜಂಗಮ ಉಂಟು. ಪ್ರಪಿತಾಮಹ ಲಿಂಗ ಉಂಟು. ಅಭಕ್ತ್ಯಾಂಗನೆಯ ಸುತನಹ ತಾಮಸ ಭಕ್ತಂಗೆ ಪಿತನಹ ಗುರುವಿಲ್ಲ. ಪಿತಾಮಹ ಜಂಗಮವಿಲ್ಲ. ಪ್ರಪಿತಾಮಹನಹ ಮಹಾಲಿಂಗವಿಲ್ಲ. ಅವನ ಸ್ಥಿತಿ ನಗೆಗೆಡೆ. ಇದು ದೃಷ್ಟ ನೋಡಿರೇ. ಇದುಕಾರಣ ಸದ್ಭಕ್ತನಾದವನು ಭಕ್ತಿಹೀನರ ಸಂಗಡ ನಡೆನುಡಿ ಉಳ್ಳಡೆ ನಿಮ್ಮ ಕಾರುಣ್ಯಕ್ಕೆ ದೂರವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

---

# ಬಸವನ ಮಹಿಮೆ.

**ವಿವರಣೆಃ**— ಪ್ರತಿಯೊಬ್ಬ ವಚನಕಾರನು ಬಸವೇಶ್ವರನ ಬಗ್ಗೆ ಬಹು ಆದರವನ್ನು ತಾಳಿ ಅವನನ್ನು ಸ್ತುತಿಸಿದ್ದು ಕಂಡುಬರುತ್ತದೆ. ಅದೇ ಮೇರೆಗೆ ಉರಿಲಿಂಗಪೆದ್ದಿಯಾದರೂ ಅವನನ್ನು ಮುಂದಿನ ವಚನಗಳಲ್ಲಿ ಸ್ತುತಿಸಿದ್ದಾನೆ. ಆದರೆ ಈ ಸ್ತುತಿಗಳಲ್ಲಿ ಕೇವಲ ಅಂಧ ಭಕ್ತಿಯು ತುಂಬಿರದೆ ಅವುಗಳಲ್ಲಿ ಅವನು ತಾತ್ವಿಕ ವಿಚಾರಗಳನ್ನು ತುಂಬಿರುವನು. ಹ್ಯಾಗೆ ಬಸವನು ಷಟ್‌ಸ್ಥಲಾಚರಣೆಯನ್ನೊಳಕೊಂಡು ವರ್ತಿಸಿದನೋ ಹಾಗೆಯೇ ಭಕ್ತರೆಲ್ಲರೂ ವರ್ತಿಸಬೇಕೆಂದು ವಚನಕಾರನು ಬಯಸಿ ಈ ವಚನಗಳನ್ನು ರಚಿಸಿರುವನು.

**ವಚನ**:— ೯೨. ಶ್ರೀಗುರುಲಿಂಗದಲ್ಲಿ ಬಸವಣ್ಣನ ಕಂಡೆನು. ಬಸವಣ್ಣನಲ್ಲಿ ಶ್ರೀಗುರು ಲಿಂಗವ ಕಂಡೆನು. ಶಿವಲಿಂಗದಲ್ಲಿ ಬಸವಣ್ಣನ ಕಂಡೆನು. ಬಸವಣ್ಣನಲ್ಲಿ ಶಿವಲಿಂಗವ ಕಂಡೆನು. ಜಂಗಮಲಿಂಗದಲ್ಲಿ ಬಸವಣ್ಣನ ಕಂಡೆನು. ಬಸವಣ್ಣನಲ್ಲಿ ಜಂಗಮಲಿಂಗವ ಕಂಡೆನು. ಪ್ರಸಾದದಲ್ಲಿ ಬಸವಣ್ಣನ ಕಂಡೆನು. ಬಸವಣ್ಣನಲ್ಲಿ ಪ್ರಸಾದವ ಕಂಡೆನು. ಈ ಚತುರ್ವಿಧದಲ್ಲಿ ಬಸವಣ್ಣನ ಕಂಡೆನು. ಬಸವಣ್ಣನಲ್ಲಿ ಚತುರ್ವಿಧವ ಕಂಡೆನು. ಇಂತಹ ಮಹಾಮಹಿಮರುಂಟೇ? ಶಿವಶಿವಾ ಮಹಾದೇವಾ, ಇಂತಹ ಸದ್ಭಕ್ತರುಂಟೇ? ಇದು ಕಾರಣ ಶ್ರೀಗುರುಲಿಂಗವೂ ಬಸವಣ್ಣನೇ. ಶಿವಲಿಂಗವೂ ಬಸವಣ್ಣನೇ. ಜಂಗಮಲಿಂಗವೂ ಬಸವಣ್ಣನೇ. ಪ್ರಸಾದಲಿಂಗವೂ ಬಸವಣ್ಣನೇ. ಇಷ್ಟಲಿಂಗವೂ ಬಸವಣ್ಣನೇ. ಪ್ರಾಣಲಿಂಗವೂ ಬಸವಣ್ಣನೇ. ಭಾವಲಿಂಗವೂ ಬಸವಣ್ಣನೇ. ಆಚಾರಲಿಂಗವೂ ಬಸವಣ್ಣನೇ. ಮಹಾಲಿಂಗವೂ ಎನಗೆ ಬಸವಣ್ಣನಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ**— ಅಷ್ಟಾವರಣಗಳಲ್ಲಿ ಗುರುಲಿಂಗಜಂಗಮ ಪ್ರಸಾದಗಳು ಒಂದು ವಿಶೇಷ ಸ್ಥಾನವನ್ನು ಹೊಂದಿವೆ. ಗುರುಲಿಂಗಜಂಗಮದ ತತ್ವಗಳನ್ನು ಭಕ್ತನು ತನ್ನಲ್ಲಿ ಒಡಮೂಡಿಸಿಕೊಂಡು ಆಚರಿಸಬೇಕು. ಹೀಗೆ ಆಚರಿಸಿ ಅನುಭವಿಸುವದೇ ಪ್ರಸಾದವಾಗಿರುತ್ತದೆ. ಈ ಚತುರ್ವಿಧವನ್ನು ಒಳಗುಮಾಡಿಕೊಂಡವನೇ ನಿಜವಾದ ಸುಖಾನುಭವವನ್ನು ಹೊಂದುವನು.

ಈ ರೀತಿಯನ್ನು ಬಸವಣ್ಣನು ಚನ್ನಾಗಿ ತಿಳಿದುಕೊಂಡು ಆಚರಿಸುತ್ತಿದ್ದದರಿಂದ ಆತನು ಮಹಾಮಹಿಮನು ಎಂದು ವಚನಕಾರನು ಇಲ್ಲಿ ಅವನನ್ನು ಹೊಗಳುತ್ತಲಿದ್ದಾನೆ. ಬಸವನು ಈ ತರದ ಆಚರಣೆಯಿಂದ ಇಷ್ಟ ಪ್ರಾಣ ಭಾವಲಿಂಗಗಳನ್ನು ಹೊಂದಿಕೊಂಡನು. ಈ ತ್ರಿವಿಧ ಲಿಂಗಗಳಲ್ಲಿ ಅವನು ಬೆರೆದುಕೊಂಡದ್ದರಿಂದ ಅವನು ಮಹಾಲಿಂಗಿಯು ಎಂದೆನಿಸಿಕೊಂಡನೆಂದು ವಚನಕಾರನು ಇಲ್ಲಿ ಹೇಳುತ್ತಾನೆ. ವಚನಕಾರನು ಬಸವನನ್ನು ಹೀಗೆ ಹೊಗಳುವಲ್ಲಿ ಭಕ್ತರೆಲ್ಲರೂ ಈ ವಿಧವಾಗಿ ಆಚರಿಸಬೇಕೆಂದು ಅವನ ಮುಖ್ಯಾಭಿಪ್ರಾಯವಾಗಿದೆ.

**ವಚನಃ**— ೯೩. ಶಿವ ಶಿವಾ, ಬಸವಣ್ಣನೇ ಗುರುತತ್ವವುಳ್ಳ ಮಹಾವಸ್ತುವಾಗಿ, ಶ್ರೀಗುರುಲಿಂಗವೂ ಬಸವಣ್ಣನೇ. ಶಿವಸುಖ ಸಂಪನ್ನನಾಗಿ, ಶಿವಲಿಂಗವೂ ಬಸವಣ್ಣನೇ. ಜಂಗಮಪ್ರಾಣಿಯಾಗಿ, ಜಂಗಮಲಿಂಗವೂ ಬಸವಣ್ಣನೇ. ಪ್ರಸಾದ ಗ್ರಾಹಕನಾಗಿ, ಪ್ರಸಾದಲಿಂಗವೂ ಬಸವಣ್ಣನೇ. ಭಾವಶುದ್ಧವುಳ್ಳ ಮಹಾನುಭಾವಿಯಾಗಿ, ಭಾವಲಿಂಗವೂ ಬಸವಣ್ಣನೇ. ಪಂಚಾಚಾರ ನಿಯತಾತ್ಮನಾಗಿ, ಆಚಾರಲಿಂಗವೂ ಬಸವಣ್ಣನೇ. ಗುರುಲಿಂಗ ಜಂಗಮಕ್ಕೆ ಎನಗೆ ಇಷ್ಟವಾಗಿ, ಇಷ್ಟಲಿಂಗವೂ ಬಸವಣ್ಣನೇ ಇಂತೀ ಚತುರ್ವಿಧ ಪ್ರಾಣವಾಗಿ ಪ್ರಾಣಲಿಂಗವೂ ಬಸವಣ್ಣನೆ. ಮಹಾಮಹಿಮನೂ ಬಸವಣ್ಣನೇ. ಮಹಾವಸ್ತುವ ಗರ್ಭೀಕರಿಸಿಕೊಂಡಿಪ್ಪಾತನು ಬಸವಣ್ಣನೇ. ಮಹಾಸತ್ಯನೂ ಬಸವಣ್ಣನೇ. ಮಹಾನಿತ್ಯನೂ ಬಸವಣ್ಣನೇ. ಮಹಾಶಾಂತನು ಬಸವಣ್ಣನೇ. ಮಹಾಸುಖಿಯೂ ಬಸವಣ್ಣನೇ. ಮಹಾಪರಿಣಾಮಿಯೂ ಬಸವಣ್ಣನೇ. ಮಹಾಲಿಂಗವೂ ಬಸವಣ್ಣನೇ. ಇಂತೀ ನವವಿಧ ಲಿಂಗವು ಬಸವಣ್ಣನೇ. ಇಂತಿವನೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು ಎನಗೆ ಪ್ರಸಾದವನಿಕ್ಕಿ ಸಲಹಿದನಯ್ಯಾ ಬಸವಣ್ಣನು. ಇದು ಕಾರಣ ಅನವರತ ನಾನು ಬಸವಾ ಬಸವಾ ಬಸವಯ್ಯ, ಬಸವ ಗುರುವೇ, ಬಸವಲಿಂಗವೇ, ಬಸವ ತಂದೆಯೇ, ಬಸವ ಪ್ರಭುವೇ ನಮೋ ನಮೋ ಎನುತಿರ್ದೆನಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಬಸವನು ಮಹಾಭಕ್ತನೆಂದು ಹೆಸರುಗೊಂಡಿದ್ದಾನೆ. ಯಾಕಂದರೆ ಅವನು ಗುರು ಲಿಂಗ ಜಂಗಮ ಪ್ರಸಾದ ಇಷ್ಟ ಪ್ರಾಣ, ಭಾವ ಮತ್ತು ನವಲಿಂಗಗಳನ್ನು ತನ್ನಲ್ಲಿ ಒಳಗುಮಾಡಿಕೊಂಡಿದ್ದಾನೆ.



ಗುರುಲಿಂಗಜಂಗಮಗಳು ಅವನಿಗೆ ಇಷ್ಟಲಿಂಗವಾಗಿವೆ. ಈ ತ್ರಿವಿಧಗಳ ಅನುಭವವು ಅವನ ಪ್ರಾಣದಲ್ಲಿ ಹುದುಗಿ ಅವನು ಪ್ರಾಣಲಿಂಗಿಯಾಗಿರುವನು. ಪಂಚಾಚಾರಗಳನ್ನು ಹಿಡಿದು ಆಚರಿಸುವವನಾದ್ದರಿಂದ ಆಚಾರಲಿಂಗವು ಅವನಲ್ಲಿ ನೆಲೆಗೊಂಡಿದೆ. ಇದರಿಂದ ಅವನು ಗುರುಲಿಂಗಜಂಗಮಗಳನ್ನು ತನ್ನಲ್ಲಿ ಒಳಗುಮಾಡಿಕೊಂಡವನಾಗಿದ್ದನು. ಇವುಗಳೊಡನೆ ಪ್ರಸಾದವು ಆವಿರ್ಭವಿಸಲು ಆ ಪ್ರಸಾದವು ಅವನ ಪ್ರಾಣದಲ್ಲಿ ನೆಲೆಗೊಂಡು ಅದರ ಸುಖವನ್ನು ಅವನು ಆಸ್ವಾದಿಸುವವನಾಗಿದ್ದನು. ನವವಿಧಲಿಂಗಗಳನ್ನು ಒಳಕೊಂಡಿದ್ದರಿಂದ ಭಾವಶುದ್ಧನಾದನು. ಮತ್ತು ಮಹಾಲಿಂಗಿ ಎನಿಸಿಕೊಂಡನು. ಈ ಬಗೆಯು ಬಸವಣ್ಣನು ನನ್ನ ಕರಸ್ಥಲಕ್ಕೆ ಬಂದು ಎನಗೆ ಪ್ರಸಾದವನಿಕ್ಕಿ ಸಲಹಿದನೆಂದು ಬಸವಾ ಬಸವಾ ಎಂದು ವಚನಕಾರನು ಅವನನ್ನು ಇಲ್ಲಿ ಹೊಗಳುತ್ತಲಿದ್ದಾನೆ.

---

# ದಾಸೋಹ.

**ವಿವರಣೆ:—** ದಾಸೋಹವೆಂದರೆ ಜನರಲ್ಲಿ ಭಿಕ್ಷೆಯನ್ನು ಬೇಡಿ ತಂದು ಇತರಿಗೆ ಊಟಹಾಕುವದೆಂದು ಈಗಿನ ಕಾಲದಲ್ಲಿ ತಿಳುವಳಿಕೆಯುಂಟು. ಆದರೆ ವಚನಕಾರರಲ್ಲಿ ಈ ಭಾವವಿಲ್ಲ. ಮನುಷ್ಯನು ಜಗತ್ತಿನಲ್ಲಿ ಹ್ಯಾಗೆ ನಡೆಯಬೇಕೆಂಬುದನ್ನು ಅವರು ಈ ಶಬ್ದದ ಮೂಲಕ ತಿಳಿಸುತ್ತಾರೆ. ಪ್ರತಿಯೊಬ್ಬನು ತಾನು ಪರಮಾತ್ಮನ ಸೇವಕನೆಂದು ತಿಳಿದುಕೊಂಡು ವರ್ತಿಸಬೇಕೆಂದು ಅವರ ಮುಖ್ಯ ಅಭಿಪ್ರಾಯವಿದೆ. ಈ ವಿಚಾರವು ದಾಸೋಹದಲ್ಲಿ ಇದೆ. ಮನುಷ್ಯನಿಗೆ ಜಗತ್ತಿನಲ್ಲಿ ತನ್ನ ಸ್ವಂತದ ಸೊತ್ತೆಂಬುದು ಇಲ್ಲ. ಅದೆಲ್ಲವೂ ಪರಮಾತ್ಮನದಾಗಿರುತ್ತದೆ. ಅದ್ದರಿಂದ ಅರ್ಪಣಭಾವ ಯುಕ್ತವಾಗಿ ಅವನು ಆಚರಿಸಬೇಕು. ಅರ್ಪಣದ ರೀತಿಯನ್ನು ಅವರು ಹೇಳುವಲ್ಲಿ ದುಡಿದು ಅರ್ಪಿಸಬೇಕೆಂದು ಅವರು ಬೋಧಿಸುತ್ತಾರೆ. ಈ ದುಡಿಕೆಗೆ ಅವರು ಕಾಯಕವೆನ್ನುವರು. ಇಂಥ ಕಾಯಕದಿಂದ ಮನುಷ್ಯನು ತಾನು ಗಳಿಸಿ ಗುರುಲಿಂಗಜಂಗಮಕ್ಕೆ ಅರ್ಪಿಸಬೇಕು. ಇದೇ ದಾಸೋಹವೆನಿಸುವದು. ಮನುಷ್ಯನು ತಾನು ಗಳಿಸಿದ್ದನ್ನು ತನ್ನ ಇಂದ್ರಿಯ ಸುಖಕ್ಕಾಗಿ ಉಪಯೋಗಿಸತಕ್ಕದ್ದಲ್ಲ. ಅದನ್ನು ಪರಾರ್ಥಕ್ಕಾಗಿ ಉಪಯೋಗಿಸಬೇಕು. ಈ ಬಗೆಯ ವರ್ತನೆಯಿಂದ ಜನ್ಮದ ಸಾರ್ಥಕತೆ ಇದೆ. ಈ ವಿಚಾರಗಳು ದಾಸೋಹದ ಅವರ ನಿರೂಪಣೆಯಲ್ಲಿ ಕಂಡು ಬರುವದುಂಟು.

**ವಚನ:—** ೯೪. ಸದ್ಭಕ್ತನು ಶ್ರೀಗುರುಲಿಂಗಜಂಗಮಕ್ಕೆ ತನು ಮನಧನ ಪ್ರಾಣಾದಿಗಳನರ್ಪಿಸಿ ಸಕಲಸಾಕಾರದ ದ್ರವ್ಯಾದಿಗಳೆಲ್ಲವು ಶಿವನ ಸೊಮ್ಮಾಗಿ ॥ ಅದೆಂತೆಂದಡೆ ॥ ಋಗ್ವೇದದಲ್ಲಿ ॥ಶ್ಲೋ॥ ಶಿವೋದಾತಾ ಶಿವೋ ಭೋಕ್ತಾ ಶಿವಸ್ಸರ್ವಮಿದಂಜಗತ್ । ಶಿವೋ ಯಜತಿ ಸರ್ವಸ್ವಂ ಯಶ್ಶಿವಸ್ಸೋಮೇವಚ । ಎಂದುದಾಗಿ ಇದನರಿದು ದಾತೃ ಭೋಕ್ತೃ ಶಿವನೆಂದು ಅಹಂಮಮತೆಗಳಡಗೆ, ಸ್ವಾನುಭಾವವಳವಟ್ಟು, ಬಾಗಿಲು ಗಾಹಿಯಾಗಿ ದಾಸೋಹವಂ ಮಾಡುವುದು. ಇದು ಉತ್ತಮ ಕ್ರಿಯೆಯು. ಇದು ಲಿಂಗದೊಡನೆ ಹುಟ್ಟಿ ಲಿಂಗದೊಡನೆ ಬೆಳೆದು ಲಿಂಗದೊಡನೆ



ಲೀಯವಹ ಮಹಾಲಿಂಗಾಂಗಿಗಲ್ಲದೆ ಸಾಧ್ಯವಾಗದು. ಇದು ಅಳವಡದಿರ್ದಡೆ ಸದ್ಭಕ್ತನು ಶ್ರೀಗುರುಲಿಂಗಜಂಗಮಕ್ಕೆ ತನು ಮನ ಧನ ಪ್ರಾಣ ಮುಂತಾಗಿ ಹೊನ್ನು ಹೆಣ್ಣು ಮಣ್ಣಿನಲ್ಲಿ ವಂಚನೆ ಇಲ್ಲದೆ ಸದ್ಭಕ್ತಿಯಿಂದ ದಾಸೋಹವ ಮಾಡುವುದು. ಇದು ಮಧ್ಯಮ ಕ್ರಿಯೆಯು. ಇದು ಸಾಮಾನ್ಯರಿಗಳವಡದು. ಇದು ಅಸಾಧ್ಯವು. ಇದು ಅಳವಡದಿರ್ದಡೆ ಸದ್ಭಕ್ತನು ತನ್ನ ತನುಮನ ಪ್ರಾಣಂಗಳಂ ಬಳಲಿಸಿ ತನಗೆ ಪ್ರಿಯವಾದ ಪುತ್ರಮಿತ್ರ ಕಳತ್ರಾದಿಗಳಿಗೆ ಹೇಗೆ ಸಕಲ ದ್ರವ್ಯಂಗಳಂ ಕೊಡುವನೋ ಹಾಗೆಯಾದರೂ ಶ್ರೀಗುರುಲಿಂಗಜಂಗಮಕ್ಕೆ ಸ್ನೇಹದಿಂದ ದಾಸೋಹವಂ ಮಾಡುವುದು. ಇದು ಕನಿಷ್ಠ ಕ್ರಿಯೆಯು. ಇದು ಮಹಾಜ್ಞಾನ ಪುರುಷರಿಗಲ್ಲದೆ ಅಳವಡದು. ಇದು ಅಳವಡದಿರ್ದಡೆ ಶ್ರೀಗುರುಲಿಂಗಜಂಗಮಕ್ಕೆ ಶಕ್ತ್ಯಾನುಸಾರ ಮಾಡುವುದು. ಇದು ನಿಕೃಷ್ಟಕ್ರಿಯೆಯು. ಅದೆಂತೆಂದಡೆ ॥ಶ್ಲೋ॥ ಶ್ರೂಯತಾಂ ಧರ್ಮ ಸರ್ವತ್ರ ಶ್ರುತ್ವಾಚೈವಾವಧಾರ್ಯತಂ। ಆತ್ಮನಃ ಪ್ರತಿಕೂಲಂ ಚ ಪರೀಕ್ಷಾನಂದ ಮಾಚರೇತ್ ॥ ಎಂದುದಾಗಿ ಇದನರಿತು ತನ್ನಂತೆ ಭಾವಿಸಿಯಾದಡೆಯೂ ದಾಸೋಹವ ಮಾಡಿ ಪ್ರಸನ್ನತೆಯ ಪಡೆವುದೇ ಸದ್ಭಕ್ತಂಗೆ ಪಥವು ನೋಡಾ. ಇಂತಪ್ಪ ಉತ್ತಮ ಮಧ್ಯಮ ಕನಿಷ್ಠ ನಿಕೃಷ್ಟವೆಂಬ ಈ ನಾಲ್ಕು ಪರ್ಯಾಯದಲ್ಲಾದಡೆಯೂ ಒಂದು ಪರ್ಯಾಯದಲ್ಲಿ ಭಾವಿಸಿಕೊಂಡು ತನುಮನಧನವನಿತ್ತು ಸ್ನೇಹದಿಂದ ದಾಸೋಹವ ಮಾಡಿ ಪ್ರಸಾದವ ಪಡೆದು ಭೋಗಿಸಿ ಭಕ್ತರಾಗಬೇಕು. ಈ ಪ್ರಕಾರದಿಂದಲ್ಲದೆ ಮುಕ್ತಿ ಇಲ್ಲ. ಈ ಚತುರ್ವಿಧ ಕ್ರಿಯೆಗಳೊಳಗೆ ಆವುದನು ಮಾಡದೆ ದುಷ್ಕ್ರಿಯೆಯಲ್ಲಿ ವರ್ತಿಸುತ್ತ ದುರ್ಭಾವದಿಂದ ಗುರುಲಿಂಗಜಂಗಮವನವಿಶ್ವಾಸವಂ ಮಾಡಿ ದಾಸೋಹವಿಲ್ಲದೆ ತನ್ನೊಡಲನೆ ಹೊರೆದಡೆ ಅವನು ಸದ್ಭಕ್ತರೊಳಗೆ ಸಲ್ಲ. ಅವಂಗೆ ಪ್ರಸಾದವಿಲ್ಲ. ಪ್ರಸಾದವಿಲ್ಲವಾಗಿ ಮುಕ್ತಿ ಇಲ್ಲ. ಅವನು ಉಭಯ ಭ್ರಷ್ಟ. ಇದನರಿತು ತನ್ನಂತೆ ಭಾವಿಸಿ ಶ್ರೀಗುರುಲಿಂಗಜಂಗಮಕ್ಕೆ ವಿಶ್ವಾಸದಿಂ ದಾಸೋಹವ ಮಾಡಲು, ಇಹಸಿದ್ಧಿ ಸರ್ವಸಿದ್ಧಿಯಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:—** ವಚನಕಾರನು ದಾಸೋಹದಲ್ಲಿ ನಾಲ್ಕು ಭಾಗಗಳನ್ನು ಮಾಡಿರುವನು. ಅವು ಉತ್ತಮ, ಮಧ್ಯಮ, ಕನಿಷ್ಠ, ನಿಕೃಷ್ಟ ಎಂದು ಇವೆ. ಭಕ್ತನು ತನ್ನ ಸೊಮ್ಮೆಲ್ಲ ತನ್ನದೆಂದು ಭಾವಿಸದೆ ಶಿವನದೆಂದು

ಭಾವಿಸಿ ಗುರು-ಲಿಂಗ-ಜಂಗಮಕ್ಕೆ ತನ್ನ ತನು-ಮನ-ಧನ-ಪ್ರಾಣಗಳನ್ನು ಅರ್ಪಿಸುವವನೂ ಹೀಗೆ ಅರ್ಪಿಸಿ ಉಣ್ಣುವವನೂ ಈ ಉಭಯತರು ಶಿವನೆಂದು ಭಾವಿಸಿ ಸಮರಸ ಭಾವದಿಂದ ಅನುಭವಿಸಬೇಕು. ಇದು ಉತ್ತಮ ಕ್ರಿಯೆಯು. ಯಾವನಲ್ಲಿ ಲಿಂಗವು ಬೆರೆತು ಹೋಗಿದೆಯೋ ಅವನಿಗೆ ಮಾತ್ರ ಇದು ಸಾಧ್ಯವೆಂದು ಉರಿಲಿಂಗ ಪೆದ್ದಿಯು ಇಲ್ಲಿ ಹೇಳುತ್ತಾನೆ.

ಹೀಗೆ ಪಾತ್ರ ಭೋಕ್ತೃ ಶಿವನೆಂದು ಭಾವಿಸಿ ಕೊಡುವದು ಭಕ್ತನಿಗೆ ಶಕ್ಯವಾಗದಿದ್ದರೆ ಅವನು ವಂಚನೆ ಇಲ್ಲದೆ ಸದ್ಭಕ್ತಿಯಿಂದ ತನ್ನ ತನುಮನಧನಪ್ರಾಣಗಳನ್ನು ಗುರುಲಿಂಗಜಂಗಮಕ್ಕೆ ಅರ್ಪಿಸಬೇಕು. ಇದು ಮಧ್ಯಮ ಕ್ರಿಎಂದೆನಿಸುವದು. ಸಾಮಾನ್ಯರಿಗೆ ಸಿಜವಾದ ಭಕ್ತಿಯು ಇರುವದಿಲ್ಲಾದ್ದರಿಂದ ಇದು ಅವರಿಗೆ ಅಳವಡದು ಎಂದು ವಚನಕಾರನು ಇಲ್ಲಿ ಹೇಳುತ್ತಾನೆ.

ಗುರುಲಿಂಗಜಂಗಮಕ್ಕೆ ಹೀಗೆ ವಂಚನೆ ಇಲ್ಲದೆ ಸದ್ಭಕ್ತಿಯಿಂದ ಅರ್ಪಿಸಲು ಭಕ್ತನಿಗೆ ಆಗದಿದ್ದರೆ, ಅವನು ಹೇಗೆ ತನ್ನ ಹೆಂಡತಿ ಪುತ್ರ ಮಿತ್ರರಿಗೆ ಪ್ರೀತಿಯಿಂದ ತನ್ನ ಸಕಲ ದ್ರವ್ಯಗಳನ್ನು ಕೊಡುತ್ತಾನೋ ಹಾಗೆಯೇ ಪ್ರೀತಿಯಿಂದ ಗುರುಲಿಂಗಜಂಗಮಕ್ಕೆ ಕೊಡಬೇಕು. ಇದು ಕನಿಷ್ಠ ಕ್ರಿಎಂದೆನಿಸುವದು. ಇದಾದರೂ ಕಠಿಣವು. ಇದು ಮಹಾ ಜ್ಞಾನಿಗಳಿಗೆ ಮಾತ್ರ ಅಳವಡುವದು ಎಂದು ಹೇಳುತ್ತಾನೆ.

ಇದೂ ಅಳವಡದಿದ್ದರೆ ಗುರುಲಿಂಗಜಂಗಮಕ್ಕೆ ತನ್ನ ಶಕ್ತ್ಯಾನುಸಾರ ಕೊಡಬೇಕು. ಇದು ನಿಕೃಷ್ಟ ಕ್ರಿಯೆಯು.

ಈ ನಾಲ್ಕು ವಿಧಗಳಲ್ಲಿ ಒಂದು ವಿಧವನ್ನಾದರೂ ಭಕ್ತನು ಕೈಕೊಂಡು ಆಚರಿಸಬೇಕು. ಹೀಗೆ ಆಚರಿಸದ ಹೊರ್ತು ಭಕ್ತನಿಗೆ ಮುಕ್ತಿ ಇಲ್ಲ. ಆದರೆ ಹೀಗೆ ವರ್ತಿಸದೆ ದುಷ್ಟ್ರಿಯೆಯಲ್ಲಿ ಭಕ್ತನು ವರ್ತಿಸುತ್ತ ದಾಸೋಹಕ್ಕೆ ಹೊರ್ತಾಗಿ ಬರೀ ತನ್ನ ಹೊಟ್ಟೆಯನ್ನು ಹೊರೆದುಕೊಂಡಿದ್ದರೆ ಅವನು ಸದ್ಭಕ್ತರೊಳಗೆ ಸಲ್ಲನು. ಅವನಿಗೆ ಪ್ರಸಾದವಿಲ್ಲ, ಮುಕ್ತಿ ಇಲ್ಲ, ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ಈ ಪ್ರಕಾರ ಕೊಡುವದರಲ್ಲಿ ವಚನಕಾರನು ನಾಲ್ಕು ವಿಧಗಳನ್ನು ಮಾಡಿರುವನು. ಶಿವನ ಸೊಮ್ಮೆಂದು ತಿಳಿದುಕೊಡುವದು, ಸದ್ಭಕ್ತಿ



ಯಿಂದ ಕೊಡುವದು, ಸ್ನೇಹದಿಂದ ಕೊಡುವದು, ಶಕ್ತ್ಯಾನುಸಾರ ಕೊಡುವದು ಹೀಗೆ ಇವುಗಳು ಇವೆ. ಇವುಗಳಲ್ಲಿ ಒಂದನ್ನಾದರೂ ಮನುಷ್ಯನು ಅನುಸರಿಸಬೇಕು. ಅವನು ಸ್ವಾರ್ಥವನ್ನು ಸಂಪೂರ್ಣ ಬಿಡಬೇಕು, ಜಗತ್ತಿನ ಹಿತಾರ್ಥವಾಗಿ ಮಾಡಬೇಕು, ಎಂದು ವಚನಕಾರನು ಇಲ್ಲಿ ಹೇಳುತ್ತಾನೆ. ಹೀಗೆ ಮಾಡುವಲ್ಲಿ ಅವನ ಉದ್ದೇಶಗಳು ಮತ್ತು ಮನಸ್ಸು ಹ್ಯಾಗೆ ಇರಬೇಕೆಂಬದನ್ನು ವಚನಕಾರನು ಇಲ್ಲಿ ವಿವೇಚಿಸಿರುವನು.

**ವಚನ:**— ೯೫. ಸಾವುದು ದಿಟದಿಟ ನೋಡಾ. ಅದು ಸಟೆ ಎಂದು ನಿತ್ಯವೆಂದನಿತ್ಯವ ನಂಬಿ, ಹೊನ್ನು ಹೆಣ್ಣು ಮಣ್ಣು ನಿನ್ನವೆಂದು ನಂಬಿರಲು, ಅವು ನಿನ್ನ ವಂಚಿಸಿ ಅನ್ಯರಿಗೆ ಹೋದುದನರಿಯಿರೆ? ಅಯ್ಯೋ, ಅಯ್ಯೋ, ಕೆಡದಿರಿ. ಕೆಡದಿರಿ ಸತ್ಪಾತ್ರಕ್ಕೆ ಸಲಿಸಿ ಬದುಕಿರಯ್ಯಾ. ಗುರುಲಿಂಗಜಂಗಮಕ್ಕೆ ಸದ್ಭಕ್ತಿಯಿಂ ದಾಸೋಹವಂ ಮಾಡಲು ನಿತ್ಯವು. ಇದು ಸಟೆ ಎಂದು ನರಕಕ್ಕಿಳಿದು ಕೆಡದಿರಿ ಕೆಡದಿರಿ. ಇದನರಿದು ಸಟೆಯ ದಿಟ ಮಾಡದಿರಿ. ಗುರುಲಿಂಗಜಂಗಮಕ್ಕೆ ದಾಸೋಹವ ಮಾಡುವುದೇ ದಿಟ. ಇದು ಸತ್ಯ. ಇದು ಸತ್ಯ. ಇದೇ ನಿತ್ಯ, ಇದೇ ಯುಕ್ತಿ, ಇದೇ ಭಕ್ತಿ, ಇದೇ ಶಕ್ತಿ, ಇದೇ ಮುಕ್ತಿ. ಇದು ಸತ್ಯ, ಶಿವಬಲ್ಲ, ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ:**— ಮನುಷ್ಯನು ಕಡೆಗೆ ಸತ್ತುಹೋಗುವುದೇ ದಿಟ. ಇದನ್ನು ಅವನು ಲಕ್ಷಿಸದೆ ಅನಿತ್ಯವಾದ ವಸ್ತುಗಳನ್ನು ನಿತ್ಯವೆಂದು ನಂಬಿ ಅವುಗಳಿಗಾಗಿ ದುಡಿದು ಬಳಲುತ್ತಾನೆ. ಮತ್ತು ಹೊನ್ನು ಹೆಣ್ಣು ಮಣ್ಣು ಇವುಗಳನ್ನು ದೊರಕಿಸಲು ಕಷ್ಟಪಡುತ್ತಾನೆ. ಆದರೆ ಇವು ಅವನವಲ್ಲ. ಅವೆಲ್ಲವೂ ಒಮ್ಮೆ ಹೆರವರ ಪಾಲಾಗುತ್ತವೆ. ಇಂಥವುಗಳಿಗೋಸ್ಕರ ಮನುಷ್ಯನು ಶ್ರಮಪಟ್ಟು ಕಡೆಗೆ ಕೆಟ್ಟುಹೋಗುವನು. ಆದ್ದರಿಂದ ಭಕ್ತನು ಈ ವಸ್ತುಗಳನ್ನು ಸತ್ಪಾತ್ರಕ್ಕೆ ಸಲಿಸಿ ಬದುಕಬೇಕು. ಅವನು ಗುರುಲಿಂಗಜಂಗಮಕ್ಕೆ ದಾಸೋಹವನ್ನು ಮಾಡಬೇಕು. ಹೀಗೆ ಮಾಡಿದ್ದಾದರೆ ಅವನು ನಿತ್ಯನಾಗುವನು. ಇದನ್ನು ತಿಳಿದುಕೊಂಡು ಸಟೆಯಾಗಿರುವ ದ್ರವ್ಯಗಳನ್ನು ದಿಟವೆಂದು ನಂಬಿ ಆಚರಿಸದೆ ಅವುಗಳನ್ನು ಸತ್ಪಾತ್ರಕ್ಕೆ ದಾಸೋಹಭಾವದಿಂದ ಸಲಿಸಿ ಬದುಕಬೇಕು. ಇದೇ ಸತ್ಯವು, ನಿತ್ಯವು,

ಭಕ್ತಿಯು, ಶಕ್ತಿಯು, ಯುಕ್ತಿಯು ಹೀಗೆ ವಚನಕಾರನು ಈ ಆಚರಣೆಯ ವಿಧವನ್ನು ಬಹಳವಾಗಿ ಹೊಗಳಿದ್ದಾನೆ.

ವಚನಃ— ೯೬. ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು ಬಣ್ಣಬಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೇ. ಹೆಣ್ಣ ಬಿಟ್ಟಡೆಯೂ ಹೊನ್ನ ಬಿಡಿರಿ. ಹೊನ್ನ ಬಿಟ್ಟಡೆಯೂ ಮಣ್ಣ ಬಿಡಿರಿ. ಒಂದು ಬಿಟ್ಟಡೆಯೂ ಒಂದ ಬಿಡಿರಿ. ಬ್ರಹ್ಮಚಾರಿಗಳೆಂತಪ್ಪಿರಿ ಹೇಳಿರಣ್ಣಾ? ಹೆಣ್ಣ ಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು ಆವರೆಂತು ಹೇಳಿದರು? ನೀವೆಂತು ಕೇಳಿದಿರಿ? ಹೆಣ್ಣನು ಹೆಣ್ಣೆಂದರಿವಿರಿ. ಹೊನ್ನನು ಹೊನ್ನೆಂದರಿವಿರಿ. ಮಣ್ಣನು ಮಣ್ಣೆಂದರಿವಿರಿ. ಬ್ರಹ್ಮಚಾರಿಗಳೆಂತಪ್ಪಿರಣ್ಣ? ಬಿಟ್ಟಡೆ ಹೆಣ್ಣು ಹೊನ್ನು ಮಣ್ಣು ಈ ಮೂರನೂ ಬಿಟ್ಟು ನಿರಾಭಾರಿ ಜಂಗಮವಾಗಿ ಜ್ಞಾನದಲ್ಲಿ ಸುಳಿಯ ಬಲ್ಲಡೆ ಭವಂ ನಾಸ್ತಿ ತಪ್ಪದು. ಹಿಡಿದಡೆ ಹೆಣ್ಣು ಹೊನ್ನು ಮಣ್ಣು ಈ ಮೂರನು ಹಿಡಿದು ಗುರುಲಿಂಗಜಂಗಮಕ್ಕೆ ಸದ್ಭಕ್ತಿಯಿಂದ ದಾಸೋಹವ ಮಾಡ ಬಲ್ಲಡೆ ಭವಂ ನಾಸ್ತಿ ತಪ್ಪದು. ಅದೆಂತೆಂದಡೆ, ವೀರಾಗಮದಲ್ಲಿ ॥ಶ್ಲೋ॥ ಮಾತರಃ ಪಿತರಶ್ಚೈವ ಸ್ವಪತ್ನೀಬಾಲಕಾಂ ಸ್ತಥಾ। ಹೇಮಭೂಮಿ ವಿನಾಶಶ್ಚ ನ ದುಃಖೀ ಬ್ರಹ್ಮಚಾರಿಣಾಂ ॥ ಎಂದುದಾಗಿ ಇಂತು ಹೆಣ್ಣು ಹೊನ್ನು ಮಣ್ಣು ಈ ಮೂರನು ಹಿಡಿದು, ಗುರುಲಿಂಗಜಂಗಮಕ್ಕೆ ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ. ಅಲ್ಲಿ ಇದ್ದರೆಯೂ ನೀರ ತಾವರೆಯಂತಿಪ್ಪರು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ನಿಮ್ಮ ಶರಣರು.

**ಭಾವಃ**— ಭವವನ್ನು ಹೋಗಲಾಡಿಸಲು ಇಂಥದೇ ಒಂದು ಮಾರ್ಗ ವನ್ನು ಅನುಸರಿಸಬೇಕೆಂದು ವಚನಕಾರರು ಹೇಳುವದಿಲ್ಲ. ಭಕ್ತರಲ್ಲಿ ಸಾಮರ್ಥ್ಯವೂ ಒಲವುಗಳೂ ಒಂದೇ ವಿಧವಾಗಿರುವದಿಲ್ಲ. ಅವು ಭಿನ್ನ ತೆರನಾಗಿರುತ್ತವೆ. ಆದ್ದರಿಂದ ಅವುಗಳಿಗೆ ಅನುಸರಿಸಿ ಭಕ್ತನು ತನ್ನ ಪಾರಮಾರ್ಥಿಕ ಹಾದಿಯನ್ನು ಹಿಡಿಯಬೇಕು. ಷಟ್‌ಸ್ಥಲ ಶಾಸ್ತ್ರವು ಇದ ಕ್ಕನುಸರಿಸಿಯೇ ವ್ಯವಸ್ಥೆಗೊಳಿಸಲ್ಪಟ್ಟಿರುತ್ತದೆ. ಅನೇಕರು ಹೊನ್ನು ಹೆಣ್ಣು ಮಣ್ಣು ಬಿಟ್ಟು ಬ್ರಹ್ಮಚಾರಿಗಳಾಗಿ ಈ ಭವವನ್ನು ದಾಂಟಬೇಕೆಂದು ಅಪೇಕ್ಷಿಸುತ್ತಾರೆ. ಉರಿಲಿಂಗ ಪೆದ್ದಿಯು ಹೀಗೆ ವರ್ತಿಸುವವರು ನಿರಾ ಭಾರಿ ಜಂಗಮರು ಎಂದು ಹೇಳಿ ಇಂಥವರು ಈ ಮೂರನೂ ಬಿಟ್ಟು ಜ್ಞಾನದಲ್ಲಿ ಸುಳಿಯಬೇಕೆಂದು ಹೇಳುತ್ತಾನೆ. ಅವರು ಒಂದನ್ನು ಬಿಟ್ಟು



ಬೇರೆಯವುಗಳನ್ನು ಆಶಿಸಿದರೆ ಅವರು ನಿರಾಭಾರಿ ಜಂಗಮವಲ್ಲ. ಅವರಿಗೆ ಭವ ತಪ್ಪದು. ಬರೇ ಅವಿವಾಹಿತರಾಗಿ ಉಳಿದಿದ್ದರೂ ಅವರು ಹೊನ್ನು ಮಣ್ಣು ಆಶಿಸುತ್ತಿದ್ದರೆ ಹೀಗೆ ಅವಿವಾಹಿತರಾಗಿ ಉಳಿದದ್ದರಲ್ಲಿ ಏನೂ ಪ್ರಯೋಜನವಿಲ್ಲ. ಬಿಟ್ಟರೆ ಹೆಣ್ಣನ್ನೂ ಬಿಡಬೇಕು, ಹೊಲಮನೆಗಳನ್ನೂ ಬಿಡಬೇಕು, ದ್ರವ್ಯವನ್ನೂ ಆಶಿಸಬಾರದು, ಹೀಗಿರುವವರು ನಿಜವಾದ ನಿರಾಭಾರಿ ಜಂಗಮವು. ಇದು ಆರಿಗೆ ಶಕ್ಯವೋ ಅವರು ಹಾಗೆ ಇರ ಬೇಕು. ಇದು ಶಕ್ಯವಿರದಿದ್ದರೆ ಈ ಮೂರನ್ನೂ ಹಿಡಿದು ದಾಸೋ ಹಭಾವದಿಂದ ವರ್ತಿಸಬೇಕು. ಹೀಗೆ ಇರುವವರೂ ಕೂಡ ಭವವನ್ನು ಹೋಗಲಾಡಿಸಿಕೊಳ್ಳುವರು. ಯಾಕಂದರೆ ಹೀಗೆ ದಾಸೋಹ ಮಾಡು ವವರು ಈ ಮೂರರಲ್ಲಿ ಇದ್ದರೂ ಕೂಡ ಹ್ಯಾಗೆ ಕಮಲವು ನೀರಲ್ಲಿ ಇರು ವದೋ ಹಾಗೆ ಇರುತ್ತಾರೆ. ಅಂದರೆ ಅವರು ಪ್ರಪಂಚದಲ್ಲಿದ್ದರೂ ಅವರು ಅದರ ಸುಖದುಃಖಗಳಿಗೆ ಅಂಟಿಕೊಳ್ಳದೆ ಇರುವರು. ಅವರಿಗೆ ಭವವಿಲ್ಲವೆಂದು ಉರಿಲಿಂಗಪೆದ್ದಿಯು ಇಲ್ಲಿ ಹೇಳಿದ್ದಾನೆ.

ವಚನಃ— ೯೭. ವೇದವನೋದಿ ಕೇಳಿ ವೇದದ ಮರ್ಮವನ ರಿದ ಫಲ ದಾಸೋಹವಯ್ಯ. ಶಾಸ್ತ್ರವನೋದಿ ಕೇಳಿ ಶಾಸ್ತ್ರದ ಮರ್ಮ ವನರಿದ ಫಲ ದಾಸೋಹವಯ್ಯ. ಪುರಾಣವನೋದಿ ಕೇಳಿ ಪುರಾಣದ ಮರ್ಮವನರಿದ ಫಲ ದಾಸೋಹವಯ್ಯ. ಆಗಮವನೋದಿ ಕೇಳಿ ಆಗ ಮದ ಮರ್ಮವನರಿದ ಫಲ ದಾಸೋಹವಯ್ಯ. ಪುರಾತನರ ವಚನವ ನೋದಿ ಕೇಳಿ ಪ್ರಸಂಗಾನುಭಾವದಲ್ಲಿದ್ದು ಅರಿದ ಫಲ ದಾಸೋಹವಯ್ಯ. ವೇದಶಾಸ್ತ್ರ ಪುರಾಣಾಗಮಂಗಳ ಪುರಾತನರ ವಚನ ಪ್ರಸಂಗವನರಿದು ದಾಸೋಹವಿಲ್ಲದಿರ್ದಡೆ ಆ ಓದು ಗಿಳಿಯೋದಿನಂತೆ. ಕೇಳುವೆ ಮರುಳನ ಕೇಳುವೆಯಂತೆ. ಅವನೇತಕ್ಕೆ ಬಾತೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇ ಶ್ವರಾ.

ಭಾವಃ— ಜನರು ಬಹಳ ಶ್ರಮಪಟ್ಟು ವೇದ, ಶಾಸ್ತ್ರ ಪುರಾಣ, ಆಗಮ, ಪುರಾತನರ ವಚನ ಇವುಗಳನ್ನೋದುತ್ತಾರೆ. ಅಥವಾ ಕೇಳು ತ್ತಾರೆ. ಆದರೆ ದಾಸೋಹವಿಲ್ಲದಿದ್ದರೆ ಈ ಓದು ಬರೀ ಗಿಳಿಯೋದು ಕೇಳುವೆ ಹುಚ್ಚನ ಕೇಳುವೆ ಎಂದು ವಚನಕಾರನು ಇಲ್ಲಿ ಅವರನ್ನು ಹಾಸ್ಯ ಮಾಡುತ್ತಾನೆ. ಆದರೆ ಓದಿದ್ದನ್ನು ಆಚರಣೆಯಲ್ಲಿ ತಂದಾಗಲೇ ಆ ಓದು ಆ ಕೇಳುವೆ ಪ್ರಯೋಜನಕಾರಿಯಾದವುಗಳು ಆಚರಣೆ

ಯಲ್ಲಿ ತರಬೇಕಾದರೆ ದಾಸೋಹಿಯಾಗುವದು ಅವಶ್ಯವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನಃ**— ೯೮. ವಂಚಿಸುವ ಸತಿಸುತ ಬಂಧುಗಳು ಮೊದಲಾದ ಲೋಕವ ನಂಬಿ, ನಿರ್ವಂಚಕರಪ್ಪ ಗುರು ಲಿಂಗ ಜಂಗಮವ ವಂಚಿಸಿ, ನರಕಕ್ಕಿಳಿವರನೇನೆಂಬೆನೆಯ್ಯ? ಅಕ್ಕಟಕ್ಕಟಾ, ಹೀಗೆಯೇ ಶಿವಾಚಾರ? ಹೀಗೆಯೇ ಸದಾಚಾರ? ಹೀಗೆಯೇ ಭೃತ್ಯಾಚಾರ? ಭಕ್ತಿಯುಕ್ತಿಯನರಿಯದೆ ತನುಮನ ಧನಂಗಳು ಕೆಟ್ಟು ಹೋದಾವೆಂಬ ಯುಕ್ತಿಯನರಿಯದೆ ಮರ್ಮವನರಿದು ವಂಚಿಸುವವರ ವಂಚಿಸಿ ನಿರ್ವಂಚಕರಾಗಿ ಗುರುಲಿಂಗಜಂಗಮಕ್ಕೆ ದಾಸೋಹವ ಮಾಡಲು ತನು ಕೆಡದು ಮನ ಕೆಡದು ಧನ ಕೆಡದು. ಭಕ್ತಿಯುಂಟು ಯುಕ್ತಿಯುಂಟು ಮುಕ್ತಿಯುಂಟು. ಇದು ಸತ್ಯ ಶಿವಬಲ್ಲ ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ**— ಜನರು ತಾವು ಗಳಿಸಿದ್ದನ್ನು ಸತಿ-ಸುತ-ಬಂಧುಗಳಿಗಾಗಬೇಕೆಂದು ಯಾವಾಗಲೂ ಇಚ್ಛಿಸುವರು. ಆದರೆ ಇಂಥವರು ಕಡೆಗೆ ವಂಚನೆ ಹೊಂದಿ ನರಕಕ್ಕಿಳಿದು ಹೋಗುವರು. ಇದು ಶಿವಾಚಾರವಲ್ಲ, ಭೃತ್ಯಾಚಾರವಲ್ಲ. ನಿರ್ವಂಚಕರಾಗಿ ದಾಸೋಹವನ್ನು ಮಾಡಿದ್ದಾದರೆ ತನು, ಮನ, ಧನಗಳು ಕೆಡಲಾರವು. ಇದೇಭಕ್ತಿಯು, ಇದರಿಂದಲೇ ಮುಕ್ತಿಯು. ಇಲ್ಲದಿದ್ದರೆ ತನು, ಮನ, ಧನಗಳೆಲ್ಲವೂ ಕೆಟ್ಟು ಹೋಗುವವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನಃ**— ೯೯. ನಿರುಪಾಧಿಕನಾಗಿ ನಿರ್ವಂಚಕತ್ವದಿಂದ ದಾಸೋಹವ ಮಾಡಿ ಪರಿಣಾಮದಿಂದ ನಿತ್ಯ ದಾಸೋಹವೆನಿಸಿದೊಡೆ ಆ ದಾಸೋಹಿಯೇ ಸದ್ಭಕ್ತನು, ಆತನೇ ಮಾಹೇಶ್ವರನು, ಆತನೇ ಪ್ರಸಾದಿ, ಆತನೇ ಪ್ರಾಣಲಿಂಗಿ, ಆತನೇ ಶರಣ, ಆತನೇ ಐಕ್ಯನು. ಆತನೇ ಇಹಲೋಕ ಪರಲೋಕ ಪೂಜ್ಯನು. ಆತನೇ ಶ್ರೇಷ್ಠ, ಆತನೇ ವಿದ್ವಾಂಸ, ಆತನೇ ಜ್ಞಾನಿ. ಶ್ರೀಗುರುಲಿಂಗಜಂಗಮವು ಒಂದೇ ಎಂದು ಭಾವಿಸದ ನಿರ್ಭಾವಿಯೇ ವಂಚಕನು. ದಾಸೋಹವ ಮಾಡಲರಿಯದವ ಅಹಂಕಾರಿ, ಆಭಾಸನು, ಅಪೂಜ್ಯನು. ಭಕ್ತನಲ್ಲ, ಮಾಹೇಶ್ವರನಲ್ಲ, ಪ್ರಸಾದಿಯಲ್ಲ, ಶರಣನಲ್ಲ, ಐಕ್ಯನಲ್ಲ. ಆತನೇ ಮೂರ್ಖನು, ಆತನೇ ಅಜ್ಞಾನಿ, ಆತನೇತಕ್ಕೆಯೂ ಬಾತೆಯಲ್ಲವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.



**ಭಾವಃ**— ಈ ವಚನದಲ್ಲಿ ವಚನಕಾರನು ದಾಸೋಹದ ಮಹತ್ವವನ್ನು ವಿವರಿಸಿರುವನು. ದಾಸೋಹಿಯೇ ಶ್ರೇಷ್ಠನು, ಆತನೇ ವಿದ್ವಾಂಸನು ಆತನೇ ಜ್ಞಾನಿಯು, ಆತನೇ ಷಟ್‌ಸ್ಥಲ ಜ್ಞಾನಿಯು ಎಂದು ಅವನನ್ನು ಹೊಗಳಿರುವನು. ದಾಸೋಹ ಮಾಡಲರಿಯದವನು ಅಹಂಕಾರಿಯು, ಅಜ್ಞಾನಿಯು. ಅವನು ಯಾವ ಕೆಲಸಕ್ಕೂ ಬಾರದವನು ಎಂದು ವಚನಕಾರನು ಅವನನ್ನು ಹಳಿದಿದ್ದಾನೆ.

---

# ಪ್ರಸಾದ.

ವಿವರಣೆ:— ಮುಂದಿನ ವಚನಗಳಲ್ಲಿ ವಚನಕಾರನು ಪ್ರಸಾದದ ಸ್ವರೂಪವನ್ನು ಹೇಳುತ್ತಿದ್ದಾನೆ. ಪ್ರಸಾದವೆಂದರೆ ಭೋಗ್ಯವಸ್ತುಗಳನ್ನು ಪರಮಾತ್ಮನಿಗೆ ಅರ್ಪಿಸಿ ಅವುಗಳನ್ನು ಸೇವಿಸುವದೇ ಇರುತ್ತದೆ. ಈ ಬಗೆಯಾಗಿ ಆಚರಿಸುವದೇ ವೀರಶೈವನ ಧರ್ಮವಾಗಿದೆ. ಆದರೆ ಅವನ ಅರ್ಪಣದ ರೀತಿಯು ಮಾತ್ರ ವಿಶಿಷ್ಟತರನಾಗಿರುವದು. ಅವನು ಲಿಂಗಧಾರಿಯಾದ್ದರಿಂದ ಅವನು ಮಂತ್ರಮಯನಾಗಿರುತ್ತಾನೆ. ಈ ಮಂತ್ರಶಕ್ತಿಯು ಅವನ ಶರೀರವನ್ನೆಲ್ಲ ಆವರಿಸಿಕೊಂಡಿರುತ್ತದೆ. ಈ ಶಕ್ತಿಯು ಅವನ ಆಯಾ ಚಕ್ರಗಳಿರುವ ಸ್ಥಾನಗಳಲ್ಲಿ ಲಿಂಗರೂಪಾಗಿ ಅವನಲ್ಲಿ ಸ್ಥಾಪ್ಯಗೊಂಡಿರುತ್ತದೆ. ಮನುಷ್ಯನು ತಾನು ಅನುಭವಿಸುವ ವಸ್ತುಗಳನ್ನು ಈ ಲಿಂಗಗಳಿಗೆ ಅರ್ಪಿಸಿ ಭೋಗಿಸಬೇಕು. ಹೀಗೆ ಅರ್ಪಿಸಲ್ಪಟ್ಟದ್ದು ಪವಿತ್ರವಾಗಿರುತ್ತದೆ. ಇಲ್ಲದಿದ್ದರೆ ಅದು ಕಿಲ್ಬಿಷವು. ಷಟ್‌ಸ್ಥಲಜ್ಞಾನಿಯು ಈ ಹದವನ್ನು ಅರಿತು ವರ್ತಿಸಬೇಕು. ಆದರೆ ಇದು ಅವನ ಶಿವಾನುಭವಕ್ಕೆ ಮಾತ್ರ ಗೋಚರಿಸತಕ್ಕ ವಿಷಯವಾಗಿರುತ್ತದೆ.

**ವಚನ:**— ೧೦೦. ಲಿಂಗವಂತಂಗೆ ಲಿಂಗವು ಮಾಡಿದ ಪದವಿಯನು ಲಿಂಗವಂತರೇ ಬಲ್ಲರು. ಕೇವಲ ಸಾಕ್ಷಾತ್ ಪರವಸ್ತುವನು ಕರಸ್ಥಲಕ್ಕೆ ಬಿಜಯಂಗೈಸಿಕೊಟ್ಟನಾಗಿ ಸಾಲೋಕ್ಯಪದ. ಅಂಗದ ಮೇಲೆ ನಿರಂತರ ಪೂಜೆಗೊಳ್ಳುತ್ತಿಹನಾಗಿ ಸಾಮೀಪ್ಯಪದ. ಸದ್ಭಕ್ತಿರೂಪನ ಮಾಡಿದನಾಗಿ ಸಾರೂಪ್ಯಪದ. ಪ್ರಾಣಲಿಂಗವ ಮಾಡಿ ಅವಿನಾಭಾವವ ಮಾಡಿದನಾಗಿ ಸಾಯುಜ್ಯಪದ. ಲಿಂಗಮಧ್ಯೇ ಶರಣ, ಶರಣಮಧ್ಯೇ ಲಿಂಗವೆಂದುದಾಗಿ ಸರ್ವ ಭೋಗಂಗಳು ಸಹವಾಗಿ ಭೋಗಿಸಿ ಪ್ರಸಾದವನಿಕ್ಕಿ ಸಲಹಿದನು. ಸದ್ಯನ್ಮುಕ್ತನಾದೆನು. ಸರ್ವಾಂಗವು ಲಿಂಗ. ಈ ತಾತ್ಪರ್ಯದ ಮರ್ಮವ ಲೋಕದ ಜೀವರೆತ್ತಬಲ್ಲರು? ಬಲ್ಲಡೆ ಲಿಂಗಾನುಭಾವಿಗಳು ಬಲ್ಲರಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವ:**—ವಚನಕಾರನು ಈ ವಚನದಲ್ಲಿ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಪದಗಳು ಲಿಂಗವಂತನಿಗೆ ಹ್ಯಾಗೆ ಲಭಿಸುತ್ತವೆಂಬದನ್ನು ಹೇಳಿರುವನು. ಈ ನಾಲ್ಕೂ ಪದಗಳು ಅವನಲ್ಲಿ ನೆಲೆಗೊಂಡಿರು



ತ್ತವೆ ಇಷ್ಟಲಿಂಗವನ್ನು ಹಸ್ತದಲ್ಲಿ ಧರಿಸಿ ಅಲೋಕಿಸುವವನಾದ್ದರಿಂದ ಸಾಲೋಕ್ಯಪದವು, ಆ ಲಿಂಗವನ್ನು ಅನೇಕ ಸಾಧನೆಗಳಿಂದ ಪೂಜಿಸುವವನಾದ್ದರಿಂದ ಸಾಮೀಪ್ಯಪದವು, ಹೀಗೆ ಪೂಜಿಸುತ್ತ ತನ್ನ ಭಕ್ತಿಯ ಮೂಲಕ ತನ್ನಲ್ಲಿ ಲಿಂಗವನ್ನು ಹಿಡಿದೆಳೆಯುವವನಾದ್ದರಿಂದ ಸಾರೂಪ್ಯಪದವು, ಕಡೆಗೆ ಆ ಲಿಂಗವನ್ನು ತನ್ನಲ್ಲಿ ಒಳಪಡಿಸಿಕೊಂಡು ಅದರಲ್ಲಿ ಬೆರೆಯುವವನಾದ್ದರಿಂದ ಸಾಯುಜ್ಯಪದವು ಹೀಗೆ ಈ ಎಲ್ಲ ಪದಗಳೂ ಅವನಲ್ಲಿ ಪ್ರಾಪ್ತವಾಗುವವು. ಹೀಗೆ ಲಿಂಗದಲ್ಲಿ ಬೆರೆತುಕೊಂಡವನಾದ್ದರಿಂದ ಲಿಂಗದಲ್ಲಿ ಶರಣ, ಶರಣನಲ್ಲಿ ಲಿಂಗ ಎನ್ನುವ ಬಗೆಯು ಪ್ರಾಪ್ತವಾಗುವದು. ಈ ಸ್ಥಿತಿಯಲ್ಲಿ ಶರಣನ ಭೋಗಗಳು ಲಿಂಗಕ್ಕೆ ಸಲ್ಲುವವು. ಮತ್ತು ಲಿಂಗದ ಭೋಗವು ಶರಣನಿಗೆ ಸಲ್ಲುವದು. ಇದೇ ಪ್ರಸಾದವೆನಿಸಿಕೊಳ್ಳುವದು. ಈ ಪ್ರಸಾದದ ಮರ್ಮವನ್ನು ಲೋಕದ ಜಡಜೀವಿಗಳು ತಿಳಿಯಲಾರರು.

**ವಚನ:**— ೧೦೧. ಬ್ರಹ್ಮಸೃಷ್ಟಿ ಪಂಚಭೂತ ಸಮ್ಮಿಶ್ರದಿಂದಾದ ಕಾಯವು ಭೂತಕಾಯವು. ವಾಯು ಪ್ರಾಣಿ, ಉತ್ಪತ್ತಿ ಸ್ಥಿತಿಲಯ ಕಾರಣ ಕಾಯವು. ಈ ಪರಿಯ ಉತ್ಪತ್ತಿಯು ದೇವದಾನವಮಾನವರಿಗೆಯೂ ಒಂದೇ ಪರಿ ಶ್ರೀಗುರುವಿನ ಸೃಷ್ಟಿಯಿಂದಲೂ ಮಹಾ ಪ್ರಸಾದದಿಂದಲೂ ಮಹಾಮಂತ್ರ ಸಮ್ಮಿಶ್ರದಿಂದಾದ ಕಾಯವು ಪ್ರಸಾದ ಕಾಯವು, ಮಹಾಮಂತ್ರಪಿಂಡವು, ಭಕ್ತಿಕಾಯವು. ಲಿಂಗಪ್ರಾಣಿಗೆ ಉತ್ಪತ್ತಿಸ್ಥಿತಿಲಯವಿಲ್ಲ, ಸತ್ಯನು ಸದ್ಯೋನ್ಮುಕ್ತನು. ಈ ಪರಿಯು ಶ್ರೀಗುರುಕಾರುಣ್ಯವ ಪಡೆದ ಮಹಾತ್ಮರಿಗೆ ಒಂದೇ ಪರಿ. ಶ್ರೀಗುರುವಿನ ಕಾರುಣ್ಯದ ಪರಿ, ಶಿವಭಕ್ತನ ಇರವಿನ ಪರಿ. ಇಂತುಟಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ನಿಮ್ಮ ಶರಣರಿಗೆ ಲೋಕದ ಮಾನವರು ಸರಿ ಎಂದರೆ ನಾಯಕ ನರಕ ತಪ್ಪದು.

**ಭಾವ:**— ಈ ವಚನದಲ್ಲಿ ವಚನಕಾರನು ಪಂಚಭೂತದಿಂದಾದ ಕಾಯ ಮತ್ತು ಮಂತ್ರಮಯ ಕಾಯ ಇವುಗಳಲ್ಲಿಯ ಭೇದವನ್ನು ವಿವರಿಸಿ ನುಡಿದಿರುವನು. ಪಂಚಭೂತದಿಂದಾದ ಕಾಯವು ಬ್ರಹ್ಮಸೃಷ್ಟಿ ಎಂದೆನಿಸಿಕೊಳ್ಳುತ್ತದೆ. ಇದು ದೇವದಾನವ ಮಾನವರಲ್ಲಿ ಉಂಟು. ಆದರೆ ಶ್ರೀಗುರುವಿನ ಮಂತ್ರಶಕ್ತಿಯಿಂದಾದ ಕಾಯವು ಪ್ರಸಾದ ಕಾಯವೆನಿಸಿಕೊಳ್ಳುತ್ತದೆ. ಇದು ಮಂತ್ರಪಿಂಡವು. ಭಕ್ತಿಕಾಯವು ಇದಕ್ಕೆ ಉತ್ಪತ್ತಿ, ಸ್ಥಿತಿ, ಲಯಗಳೆಂಬುವು ಇಲ್ಲ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦

**ವಚನಃ**— ೧೦೨. ಆದಿಲಿಂಗ ಅನಾದಿಶರಣನೆಂಬುದು ತನ್ನಿಂದ ತಾನಾಯಿತ್ತು ಕೇಳಿರಣ್ಣಾ. ಆದಿಕಾಯ ಅನಾದಿಪ್ರಾಣ ಈ ಉಭಯದ ಭೇದವ ತಿಳಿದು ವಿಚಾರಿಸಿ ನೋಡಿರಣ್ಣಾ. ಅಂತು ಅನಾದಿಯ ಪ್ರಸಾದ ಆದಿಗೆ ಸಲುವುದು. ಅದೆಂತೆಂದರೆ ಅನಾದಿ ಜಂಗಮುಚ್ಛಿಷ್ಟ । ಆದಿಲಿಂಗಸ್ಥಲಂಭವೇತ್ । ಅನಾದಿಶ್ಚ ವಿರೋಧೇನ । ಉಚ್ಛಿಷ್ಟಂತು ಕಿಲ್ಬಿಷಂ । ಇಂತೆಂದುದಾಗಿ ಪ್ರಾಣಪ್ರಸಾದ ವಿರೋಧವಾಗಿ ಪಿಂಡಪ್ರಸಾದವ ಕೊಂಡರೆ ಕೊಂಡುದು ಕಿಲ್ಬಿಷ ಕೂಡಲಸಂಗಮದೇವಾ.

**ಭಾವಃ**— ಇದರಲ್ಲಿ ವಚನಕಾರನು ಲಿಂಗ ಮತ್ತು ಶರಣ, ಕಾರ್ಯ ಮತ್ತು ಜೀವ ಇವುಗಳಲ್ಲಿಯ ತಾರತಮ್ಯವನ್ನು ಬೇರೊಂದು ರೀತಿಯಿಂದ ಹೇಳಿದ್ದಾನೆ. ಲಿಂಗವೆಂಬುದು ಗುರುವಿನಿಂದಾದದ್ದು. ಆದ್ದರಿಂದ ಅದಕ್ಕೆ ಆದಿ ಇದೆ. ಆದರೆ ಶರಣನು ಲಿಂಗಮಯನಾದ್ದರಿಂದ ಅವನು ಅನಾದಿ ಎಂದೆನಿಸಿಕೊಳ್ಳುತ್ತಾನೆ. ಕಾಯಕ್ಕೆ ಮೂಲವಿರುವ ಕಾರಣ ಅದು ಆದಿಯು. ಆದರೆ ಅವನ ಪ್ರಾಣವು ಎಂದಿನಿಂದಲೂ ಇರುವದರಿಂದ ಅದು ಅನಾದಿಯು. ಕಾರಣ ಆದಿಯು ಇದ್ದದ್ದಕ್ಕೆ ಅನಾದಿಯ ಪ್ರಸಾದವು ಸಲ್ಲುವದು. ಆದರೆ ಆದಿಯ ಪ್ರಸಾದವು ಅನಾದಿಗೆ ಸಲ್ಲದು. ಆದಿಯು ಇದ್ದದ್ದೇ ಪಿಂಡ ಪ್ರಸಾದವು, ಅನಾದಿಯಾಗಿರುವದೇ ಪ್ರಾಣ ಪ್ರಸಾದವು. ಇವುಗಳಲ್ಲಿ ಪ್ರಾಣ ಪ್ರಸಾದವೇ ಶ್ರೇಷ್ಠತರವಾದದ್ದು. ಈ ಪ್ರಸಾದವನ್ನು ಪಡೆದು ಅದರ ಅನುಭವದಲ್ಲಿಯೇ ಶರಣನು ಸುಖಿಯಾಗಿ ಮೋಕ್ಷವನ್ನು ಹೊಂದತಕ್ಕದ್ದು.

**ವಚನಃ**— ೧೦೩ ಎನ್ನ ಕರಸ್ಥಲದ ಲಿಂಗಕ್ಕೆ ಬಂದ ಪದಾರ್ಥಂಗಳನರ್ಪಿಸುವೆನೆ? ಅರ್ಪಿಸಲಮ್ಮೆ. ಅದೇನು ಕಾರಣವೆಂದರೆ, ಎನ್ನ ಕಂಗಳು ಕಂಡವಾಗಿ, ಎನ್ನಶ್ರೋತ್ರಗಳು ಕೇಳಿದವಾಗಿ, ಎನ್ನ ಕೈಗಳು ಮುಟ್ಟಿದವಾಗಿ, ಎನ್ನ ನಾಸಿಕ ವಾಸಿಸಿತ್ತಾಗಿ, ಎನ್ನ ಜಿಹ್ವೆ ರುಚಿಸಿತ್ತಾಗಿ, ಇಂತಪ್ಪ ಎನ್ನ ಅಂಜಿಕೆಯ ನಿಮ್ಮ ಶರಣರು ಬಿಡಿಸಿದರಾಗಿ, ಅದೆಂತೆಂದರೆ, ಎನ್ನ ಶ್ರೋತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ನೇತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ತ್ವಕ್ಕಿನಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ಜಿಹ್ವೆಯಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ನಾಸಿಕದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಅಲ್ಲಲ್ಲಿ ಅರ್ಪಿತಂಗಳಾಗುತ್ತಿರ್ದವಾಗಿ, ಇನ್ನಂಜೆನಂಜೆನುರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.



**ಭಾವಃ**— ಈ ವರೆಗೆ ಹೇಳಿದಂತೆ ಲಿಂಗಕ್ಕೆ ಅರ್ಪಣವಮಾಡುವದು ಅಶಕ್ಯವೆಂದು ಅನೇಕರು ಭಾವಿಸುವದುಂಟು. ಯಾಕಂದರೆ ಭೋಗವಸ್ತುಗಳು ಮನುಷ್ಯನ ಇಂದ್ರಿಯಗಳನ್ನು ಮೊದಲು ಮುಟ್ಟುತ್ತಿರುವದರಿಂದ ಅವುಗಳನ್ನು ಅತ್ಯಂತ ಪವಿತ್ರವಾದ ಪರಮಾತ್ಮನಿಗೆ ಕೊಡುವದು ಹೇಗೆ? ಕೊಟ್ಟಿದ್ದಾದರೆ, ಅಯೋಗ್ಯ ವಸ್ತುವನ್ನು ಕೊಟ್ಟಂತಾಗುವದೆಂದು ಅನ್ನುವದುಂಟು. ಆದರೆ ಮಂತ್ರಮಯನಾದ ಲಿಂಗವಂತನಿಗೆ ಇದು ಅನ್ವಯಿಸುವದಿಲ್ಲ. ಯಾಕಂದರೆ ಅವನ ಇಂದ್ರಿಯಗಳಲ್ಲೆಲ್ಲ ಪರಮಾತ್ಮನ ಕಳೆಯಾದ ಲಿಂಗ ಶಕ್ತಿಯು ವಿಹರಿಸುವದರಿಂದ ಅವನಲ್ಲಿ ಇಂಥ ಅಪವಿತ್ರತೆಯು ಇರಲಾರದೆಂದು ವಚನಕಾರನ ಮತವು.

**ವಚನಃ**— ೧೦೪. ಸತ್ಕ್ರಿಯೆಯಿಂದ ಸಕಲ ಪದಾರ್ಥಂಗಳು ಭಾಜನ ತೀವಿ ತನ್ನ ಲಿಂಗಕ್ಕೆ ಕೊಟ್ಟಲ್ಲದೆ ಕೊಳ್ಳೆನೆಂಬ ಅಚ್ಚಪ್ರಸಾದಿಗಳಿಗೆ ಹುಸಿ ಹೊದ್ದಿತಲ್ಲಾ. ಪೃಥ್ವಿಯಪ್ಪು, ತೇಜ, ವಾಯು, ಆಕಾಶ, ಕತ್ತಲೆ, ಬಿಸಿಲು, ಬೆಳದಿಂಗಳು ಮುಂತಾದ ಪದಾರ್ಥಂಗಳು ತನ್ನಂಗವ ಸೋಂಕಿ ಅಲ್ಲಿ ಅರ್ಪಿತವೆಂದು ಕೊಳ್ಳಬಾರದು. ಅನರ್ಪಿತವೆಂದು ಕಳೆಯಬಾರದು. ಇದು ಕಾರಣವದಂತಿರಲಿ. ಆವ ವೇಳೆಯಲ್ಲಿ ಆವ ಠಾವಿನಲ್ಲಿ ತನಗೆ ಬೇಕಾದ ಪದಾರ್ಥಂಗಳನು ತನ್ನ ಪ್ರಾಣಲಿಂಗ ವಿರಹಿತನಾಗಿ ಉಂಡೊಡೆ ಭವದುಃಖವನುಂಬುದು ತಪ್ಪದಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಅರ್ಪಣದ ರೀತಿಯನ್ನು ವಚನಕಾರನು ಇಲ್ಲಿ ಹೇಳುತ್ತಾನೆ. ಅದರಲ್ಲಿ ಅರ್ಪಿತ ಅನರ್ಪಿತವೆಂಬುವಿಲ್ಲ. ಈ ಬಗೆಯ ರೀತಿಯು ಕೊಳಿದ ಸಂಗಡಲೇ ಅಲ್ಲಿ ಪ್ರಸಾದವು ಒದಗಲಾರದು. ಪ್ರಾಣದಲ್ಲಿ ಲಿಂಗವಿರುವದರಿಂದ ಅವುಗಳ ವ್ಯಾಪಾರಗಳು ಸಮರಸವಾಗಿ ನಡೆಯುವದರಿಂದ ಪ್ರಸಾದವು ಹುಸಿಯಾಗಲಾರದೆಂದು ವಚನಕಾರನ ಮುಖ್ಯ ಅಭಿಪ್ರಾಯವಿದೆ.

**ವಚನಃ**— ೧೦೫. ಧರ್ಮದೊಳಗೆ ಶಿವಧರ್ಮವೇ ಧರ್ಮವೆಂದರಿದೆನಾಗಿ, ಧರ್ಮಸಾಧ್ಯವಾಯಿತ್ತೆನಗೆ. ಗುರುಲಿಂಗಜಂಗಮವ ಪಡೆದೆನಾಗಿ, ಅರ್ಥಸಾಧ್ಯವಾಯಿತ್ತೆನಗೆ. ಶರಣಸತಿ ಲಿಂಗಪತಿ ಎಂದರಿದೆನಾಗಿ, ಕಾಮ ಸಾಧ್ಯವಾಯಿತ್ತೆನಗೆ. ಮಹಾಪ್ರಸಾದವ ಸಿಂಬುಗೊಂಡು ಧರಿಸಿದೆನಾಗಿ, ಮೋಕ್ಷಸಾಧ್ಯವಾಯಿತ್ತೆನಗೆ. ಇಂತೀ ಧರ್ಮಾರ್ಥಕಾಮಮೋಕ್ಷಂಗಳೆಂಬ ಚತುರ್ವಿಧಫಲವೆನಗಾಯಿತ್ತು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**-- ಯಾವನು ಪ್ರಸಾದಗ್ರಾಹಿಯಾಗಿ ವರ್ತಿಸುತ್ತಾನೋ ಅವನು ಧರ್ಮಾರ್ಥ ಕಾಮಮೋಕ್ಷಗಳ ಶ್ರೇಷ್ಠ ಪರಿಣಾಮಗಳ ಅನುಭವವನ್ನು ಪಡೆದು ಸುಖಿಸುತ್ತಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಲಿಂಗಿಯಾದವನು ಶಿವಧರ್ಮವೇ ನಿಜವಾದ ಧರ್ಮವೆಂಬ ವಿಶ್ವಾಸಭಾವವನ್ನು ತಾಳಿರುತ್ತಾನೆ. ಗುರುಲಿಂಗಜಂಗಮವನ್ನು ತನ್ನ ತನು, ಮನ, ಧನಗಳಲ್ಲಿ ಸಮರ್ಪಿಸಿಕೊಂಡು ವ್ಯವಹರಿಸುತ್ತಾನೆ. ಶರಣಸತಿ ಲಿಂಗಪತಿ ಎಂಬ ಭಾವವನ್ನು ಹೊಂದಿರುತ್ತಾನೆ. ಮತ್ತು ಲಿಂಗದೊಳಗೆ ಬೆರೆದು ಲಿಂಗದ ಸುಖದಲ್ಲಿ ಓಲಾಡುತ್ತಾನೆ. ಹೀಗೆ ಈ ನಾಲ್ಕು ಕ್ರಿಯೆಗಳಲ್ಲಿ ದೃಢಭಾವವುಳ್ಳವನಾದ್ದರಿಂದ ಧರ್ಮಾರ್ಥ ಕಾಮಮೋಕ್ಷಗಳೆಂಬ ಚತುರ್ವಿಧ ಫಲಗಳನ್ನು ಪಡೆದು ತನ್ನ ಜೀವಿತದ ಸಾರ್ಥಕತೆಯನ್ನುಂಟುಮಾಡಿಕೊಳ್ಳುತ್ತಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

---

# ಗುರುಲಿಂಗ ಜಂಗಮ.

**ವಿವರಣೆಃ**— ಅರ್ಪಣವನ್ನು ಮಾಡಿ ಪ್ರಸಾದವನ್ನು ಭೋಗಿಸುವದನ್ನು ಗುರುಲಿಂಗ ಜಂಗಮದ ಮುಖಾಂತರವಾಗಿ ಜರಗಿಸಬೇಕೆಂದು ಷಟ್‌ಸ್ಥಲ ಶಾಸ್ತ್ರವು ಹೇಳುತ್ತಿದೆ. ಈ ರೀತಿಯನ್ನು ವಚನಕಾರನು ಮುಂದಿನ ವಚನಗಳಲ್ಲಿ ಹೇಳಿದ್ದಾನೆ. ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳೆಂಬವಿದ್ದು ಅವುಗಳಲ್ಲಿ ಅನುಕ್ರಮವಾಗಿ ಗುರುಲಿಂಗ ಜಂಗಮಗಳು ಸ್ಥಾಪ್ಯವಾಗಿರುತ್ತವೆ. ಇವುಗಳಿಗೆ ಭಕ್ತನು ತನ್ನ ಉಪಭೋಗ್ಯವಸ್ತುಗಳನ್ನು ಅರ್ಪಣಮಾಡತಕ್ಕದ್ದು. ಈ ವಸ್ತುಗಳೆಂದರೆ ತನು, ಮನ, ಧನಗಳೇ ಇವೆ. ಇವಗಳನ್ನು ಭಕ್ತನು ಗುರುಲಿಂಗ ಜಂಗಮಕ್ಕೆ ನಿವೇದಿಸಿ ಪ್ರಸಾದ ರೂಪವಾಗಿ ಅವುಗಳನ್ನು ಗ್ರಹಿಸತಕ್ಕದ್ದು. ಇದರಿಂದ ಮನುಷ್ಯನ ಇಂದ್ರಿಯಗಳೆಲ್ಲ ಶುದ್ಧವಾಗುವವು. ಇದರಿಂದ ಭಕ್ತನ ಪ್ರಗತಿಯು ಉಂಟಾಗುವದೆಂಬ ಭಾವವು ಮುಂದಿನ ವಚನಗಳಲ್ಲಿ ನಿವೇದಿಸಲ್ಪಟ್ಟಿದೆ.

**ವಚನಃ**— ೧೦೬. ಅರ್ಪಿತದನುವನು, ಪ್ರಸಾದದ ಮಹಿಮೆಯನು, ಆರಿಗೆಯೂ ಅರಿಯಬಾರದು ನೋಡಾ. ಬ್ರಹ್ಮ ವಿಷ್ಣು ದೇವಾದಿದೇವತೆಗಳಿಗೆಯೂ ಅರಿಯಬಾರದು ನೋಡಾ. ಋಷಿ ಜನಂಗಳಿಗೆಯೂ ಅರಿಯಬಾರದು, ದೇವದಾನವ ಮಾನವರಿಗೆಯೂ ಅರಿಯಬಾರದು, ಕಿಂಚಿತ್ತರಿದಡೆಯೂ ಅರ್ಪಿಸಬಾರದು. ಕಿಂಚಿತ್ತರ್ಪಿಸಿದಡೆಯೂ ಪ್ರಸಾದವ ಪಡೆಯಬಾರದು. ಕಿಂಚಿತ್ ಪ್ರಸಾದ ಪಡದಡೆಯೂ ಆ ಪ್ರಸಾದವ ಭೋಗಿಸಿ ಮುಕ್ತರಾಗಬಾರದು. ಅದೆಂತೆಂದರೆ ತನುವ ಗುರುವಿಂಗರ್ಪಿಸಿ ಗುರುಪ್ರಸಾದವ ಪಡೆಯಲರಿಯರು ನೋಡಾ. ಮನವ ಲಿಂಗಕ್ಕರ್ಪಿಸಿ ಲಿಂಗಪ್ರಸಾದವ ಪಡೆಯಲರಿಯರು ನೋಡಾ. ಧನವ ಜಂಗಮಕ್ಕರ್ಪಿಸಿ ಜಂಗಮ ಪ್ರಸಾದವ ಪಡೆಯಲರಿಯರು ನೋಡಾ. ತನುಮನಧನವನು ಗುರುಲಿಂಗ ಜಂಗಮಕ್ಕೆ ಕೊಟ್ಟು, ಆ ತ್ರಿವಿಧಲಿಂಗವ ಏಕೀಕರಿಸಿ ಭಾವಸ್ಥಾನದಲ್ಲಿ ಧರಿಸಿ ಪರಿಣಾಮ ಪದಾರ್ಥವ - ನರ್ಪಿಸಿ ಭಾವಲಿಂಗ ಪ್ರಸಾದವ ಪಡೆಯಲರಿಯರು ನೋಡಾ. ಆ ಮಹಾಭಾವಲಿಂಗವಂ ಮನೋಮಧ್ಯದಲ್ಲಿರಿಸಿ ಸಕಲ ನಿಷ್ಕಲ ದ್ರವ್ಯಂಗಳನರ್ಪಿಸಿ ಮನೋಮಯ ಲಿಂಗ ಪ್ರಸಾದವಂ ಪಡೆಯಲರಿಯರು ನೋಡಾ. ಮನೋಮಯ

ಲಿಂಗಮೂರ್ತಿಯು ತಂದು ಶ್ರೋತ್ರದ ಬಾಗಿಲಲ್ಲಿ ಕುಳ್ಳಿರಿಸಿ ಘಂಟಾದಿ ನಾದಂಗಳಂ ಸಮರ್ಪಿಸಿ ಶಬ್ದಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿ ಲಿಂಗಮಂ ತಂದು ತ್ವಕ್ಕಿನ ಬಾಗಿಲಲ್ಲಿ ಕುಳ್ಳಿರಿಸಿ ಕಠಿಣಾದಿ ಸ್ಪರ್ಶನಂಗಳಂ ಸಮರ್ಪಿಸಿ ಸ್ಪರ್ಶನ ಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯ ಮೂರ್ತಿಲಿಂಗಮಂ ತಂದು ನೇತ್ರದ ಬಾಗಿಲಲ್ಲಿ ಕುಳ್ಳಿರಿಸಿ ಶ್ವೇತಾದಿವರ್ಣಂಗಳಂ ಅರ್ಪಿಸಿ ವರ್ಣ ಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿ ಲಿಂಗಮಂ ಜಿಹ್ವೆಯ ಬಾಗಿಲಲ್ಲಿ ಕುಳ್ಳಿರಿಸಿ ಮಧುರಾದಿ ರಸಂ ಗಳನರ್ಪಿಸಿ, ರಸಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯ ಮೂರ್ತಿ ಲಿಂಗಮಂ ಘ್ರಾಣದ ಬಾಗಿಲಲ್ಲಿ ಕುಳ್ಳಿರಿಸಿ ಗಂಧಾದಿ ಪರಿಮಳಂಗಳನರ್ಪಿಸಿ ಗಂಧಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿಲಿಂಗಮಂ ತಂದು ವಾಙ್ಮೂರ್ತಿಯಂ ಮಾಡಿ ಸತ್ಯಸುಭಾಷೆಗಳನರ್ಪಿಸಿ ವಚನ ಪ್ರಸಾದಮಂ ಪಡೆಯಲರಿಯರು ನೋಡಾ. ಇಂತಿಪ್ಪ ಏಕಾದಶಸ್ಥಾನದಲ್ಲಿ ಏಕಾದಶಾರ್ಪಣವಂ ಮಾಡಿ ಪ್ರಸಾದಮಂ ಪಡೆಯಲರಿಯದ ಕಾರಣ ಪ್ರಸಾದ ಭೋಗದಿಂದಪ್ಪ ಕೇವಲ ಮುಕ್ತಿ ಯಾರಿಗೆಯೂ ಸಂಭವಿಸದು. ಇದು ಕಾರಣ ಇಂತಪ್ಪ ಮಹಾ ಪ್ರಸಾದಸ್ಥಳಕುಳವನು ನಿಮ್ಮ ಪ್ರಸಾದಿ ಚನ್ನಬಸವಣ್ಣಂಗೊಬ್ಬಂಗಲ್ಲದೆ ಮತ್ತಾರಿಗೆಯೂ ಅರಿಯಬಾರದಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವ:—** ಮನುಷ್ಯನಿಗೆ ಸ್ಥೂಲ ಸೂಕ್ಷ್ಮ, ಶರೀರಗಳೂ ಪಂಚೇಂದ್ರಿಯಗಳೂ, ತನು, ಮನ, ಧನಗಳೂ ಇದ್ದು ಇವುಗಳನ್ನು ಲಿಂಗಕ್ಕೆ ಅರ್ಪಿಸಿ, ಪರಿಶುದ್ಧನಾಗಿ ವರ್ತಿಸುವ ರೀತಿಯನ್ನು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನ:—** ೧೦೭. ಗುರುಸ್ವರೂಪನಾಗಿ ಮಹಾಸ್ಥಾನದಲ್ಲಿರುತಿರ್ದೆ, ಲಿಂಗಸ್ವರೂಪನಾಗಿ ಭ್ರೂಮಧ್ಯದಲ್ಲಿರುತಿರ್ದೆ, ಜಂಗಮಸ್ವರೂಪನಾಗಿ ಹೃದಯಕಮಲಮಧ್ಯದಲ್ಲಿರುತಿರ್ದೆ, ಈ ಪರಿಯಲ್ಲಿ ಅಂತರಂಗದಲ್ಲಿ ಭರಿತ ನಾಗಿರ್ದೆಯಯ್ಯ! ಬಹಿರಂಗದಲ್ಲಿ ಶ್ರೀಗುರುಲಿಂಗವಾಗಿ ದೀಕ್ಷಿಸಿ ರಕ್ಷಿಸಿದೆ. ಶಿವಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದೆ. ಜಂಗಮಲಿಂಗ ವಾಗಿ ಅವಗುಣಂಗಳೆಲ್ಲವ ಕಳೆದು ಶಿಕ್ಷಿಸಿ ರಕ್ಷಿಸಿದೆ. ಈ ತ್ರಿವಿಧವು ಒಂದೇ ಸ್ವರೂಪವಾಗಿ ಎನ್ನಂತರಂಗ ಬಹಿರಂಗಭರಿತನಾಗಿ ಪ್ರಸಾದವ ಕರುಣಿಸಿ ಮುಕ್ತನ ಮಾಡಿದಿರಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.



**ಭಾವ:—** ಲಿಂಗವು ಗುರುಲಿಂಗ ಜಂಗಮರೂಪಾಗಿ ಮನುಷ್ಯನಲ್ಲಿ ವಾಸಿಸುತ್ತದೆ. ದೀಕ್ಷಾ ಕಾಲದಲ್ಲಿ ಗುರುವು ಹಸ್ತ ಮಸ್ತಕ ಸಂಯೋಗವನ್ನು ಮಾಡಿ ಬ್ರಹ್ಮರಂಧ್ರದಲ್ಲಿ ಮೊದಲು ಅದನ್ನು ಸ್ಥಾಪಿಸುತ್ತಾನೆ. ಮುಂದೆ ಅಂಗರೂಪಾಗಿ ಭ್ರೂಮಧ್ಯದಲ್ಲಿ ವಾಸಿಸುತ್ತಾನೆ. ಅಲ್ಲಿಯ ಲಿಂಗಧ್ಯಾನದ ಮೂಲಕ ಮಹಾಲಿಂಗವು ಚೈತನ್ಯಗೊಳ್ಳುತ್ತದೆ. ಮುಂದೆ ಜಂಗಮ ರೂಪಾಗಿ ಅದು ಹೃದಯ ಸ್ಥಾನದಲ್ಲಿ ವಾಸಿಸುತ್ತದೆ. ಹೀಗೆ ಸ್ಥಾಪ್ಯವಾದ ಕೂಡಲೆ ಲಿಂಗವು ಇಂದ್ರಿಯಂಗಳಲ್ಲೆಲ್ಲ ಚರಿಸಿ ಅಂತರಂಗ ಬಹಿರಂಗ ಭರಿತವಾಗುತ್ತದೆ. ಇದರಿಂದ ಅವಗುಣಂಗಳೆಲ್ಲ ಕೆಟ್ಟು ಹೋಗುವವು. ಮತ್ತು ಭಕ್ತನು ಪ್ರಸಾದ ಶರೀರಿಯಾಗಿ ಮೋಕ್ಷವನ್ನು ಹೊಂದುವನೆಂದು ವಚನಕಾರನು ಇಲ್ಲಿ ಹೇಳುತ್ತಾನೆ.

**ವಚನ:—** ೧೦೮. ಪ್ರಕೃತಿವಿಡಿದಿಹುದು ಪ್ರಾಣ, ಪ್ರಾಣವಿಡಿದಿಹುದುಜ್ಞಾನ, ಜ್ಞಾನವಿಡಿದಿಹುದು ಗುರುಲಿಂಗಜಂಗಮ. ಇಂತೀ ಪ್ರಸಾದ ಸಗುಣವೆಂದು ಹಿಡಿದು, ನಿರ್ಗುಣವೆಂದು ಬಿಡುವ ವ್ರತಗೇಡಿಗಳ ತೋರದಿರು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವ:—** ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಲಿಂಗಿಯಲ್ಲಿ ಸಮರಸಾಚಾರವೇ ವಿಹಿತವಾಗಿರುತ್ತದೆ. ಆವನಲ್ಲಿ ಭಿನ್ನಾಚಾರವಿಲ್ಲ. ಸಗುಣ ನಿರ್ಗುಣವೆಂಬ ಭೇದಭಾವವಿಲ್ಲ. ಒಂದನ್ನು ಹಿಡಿದು ಮತ್ತೊಂದನ್ನು ಬಿಡುವುದೆಂಬುದಿಲ್ಲ. ಅವೆರಡೂ ಒಂದನ್ನೊಂದು ಬಿಟ್ಟು ವ್ಯವಹರಿಸಲಾರವು. ಆದ್ದರಿಂದ ಸಗುಣವನ್ನು ನಿರ್ಗುಣಕ್ಕೆ ಅರ್ಪಿಸಿ ಪ್ರಸಾದವನ್ನು ಪಡೆಯಬೇಕೆಂಬ ಭಾವವು ಇದರಲ್ಲಿ ಗರ್ಭಿತವಾಗಿದೆ.

**ವಚನ:—** ೧೦೯. ಅಗ್ನಿ ಮುಟ್ಟಲು ತೃಣವು ಅಗ್ನಿಯಪ್ಪುದು ತಪ್ಪದಯ್ಯ. ಶ್ರೀಗುಗು ಪ್ರಸಾದವಂಗವ ಸೋಂಕಿದಲ್ಲಿ ಸರ್ವಾಂಗ ಗುರುವಪ್ಪುದು ತಪ್ಪದಯ್ಯಾ. ಲಿಂಗಪ್ರಸಾದ ಮನ ಸೋಂಕಿದಲ್ಲಿ ಮನ ಲಿಂಗವಪ್ಪುದು ತಪ್ಪದಯ್ಯಾ. ಜಂಗಮ ಪ್ರಸಾದ ಅರಿವ ಸೋಂಕಿದಲ್ಲಿ ಅಖಂಡಿತ ಪ್ರಸನ್ನ ಪ್ರಸಾದವಪ್ಪುದು ತಪ್ಪದಯ್ಯಾ. ಶಿವ ಶಿವಾ ಮಹಾಪ್ರಸಾದದ ಮಹಿಮೆಯನೇನೆಂದುಪಮಿಸಬಹುದಯ್ಯಾ? ಪ್ರಸಾದವೇ ಗುರು, ಪ್ರಸಾದವೇ ಲಿಂಗ, ಪ್ರಸಾದವೇ ಜಂಗಮ, ಪ್ರಸಾದವೇ ಪರಾತ್ಪರ, ಪ್ರಸಾದವೇ ಪರಮಾನಂದ, ಪ್ರಸಾದವೇ ಪರಮಾಮೃತ, ಪ್ರಸಾದವೇ ಪರಮಜ್ಞಾನ, ಪ್ರಸಾದವೇ

ಜ್ಞಾನಾತೀತ, ಪ್ರಸಾದವೇ ನಿತ್ಯ ಪರಿಪೂರ್ಣ, ಇಂತಪ್ಪ ಪ್ರಸಾದವ ಕೊಂಡು ನಾನು ಬದುಕಿದೆನಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಪ್ರಸಾದವನ್ನು ಹೊಂದಿದ ಕೂಡಲೆ ತೃಣವು ಅಗ್ನಿಯನ್ನು ಮುಟ್ಟಿದ್ದಾದರೆ ಹ್ಯಾಗೆ ಅದು ತನ್ನ ಮೊದಲಿನ ಗುಣವನ್ನು ಬಿಟ್ಟು ಪ್ರಕಾಶಮಾನವಾಗುತ್ತದೋ ಹಾಗೆ ಮನುಷ್ಯನು ಪ್ರಕಾಶಮಯನಾಗುವನು, ಅಂದರೆ ಭಕ್ತನು ಪ್ರಸಾದದಿಂದ ಗುರುವಾಗುವನು. ಲಿಂಗವಾಗುವನು, ಜಂಗಮವಾಗುವನು. ತನು ಸೋಂಕಿದ ಕೂಡಲೆ ಅವನು ಗುರುವಾಗುವನು. ಮನ ಸೋಂಕಿದ ಕೂಡಲೆ ಅವನು ಲಿಂಗವಾಗುವನು. ಅರಿವು ಸೋಂಕಿದ ಕೂಡಲೆ ಅವನು ಜಂಗಮವಾಗುವನು. ಹೀಗೆ ಪ್ರಸಾದದ ಮಹಿಮೆ ಇದೆ ಎಂದು ವಚನಕಾರನು ಅದನ್ನು ಇಲ್ಲಿ ಬಣ್ಣಿಸಿರುವನು.

**ವಚನಃ**— ೧೧೦. ಲಿಂಗವನರಿತು ಲಿಂಗಾರ್ಚನೆಯ ಮಾಡಿ, ಗುರುಲಿಂಗ ಜಂಗಮಕ್ಕೆ ತನುಮನಧನವ ಸವಿಸಿ ಲಿಂಗವಲ್ಲದನ್ಯವನರಿಯದಿರ್ಪ ಮಹಾ ಮಹಿಮನ ನಿಲವು ಸರ್ವಾಂಗ ಲಿಂಗಮೂರ್ತಿ. ಆತನ ನುಡಿಯೇ ವೇದ, ನಡೆಯೇ ಆಗಮ, ಮಾಡಿತ್ತೇ ಶಾಸ್ತ್ರ, ಹೇಳಿತ್ತೇ ಪುರಾಣ, ಆತನಿದ್ದುದೇ ದೇವಲೋಕ, ಆತನ ದರ್ಶನ ಸ್ಪರ್ಶನದಿಂದ ಪಾಪ ಕ್ಷಯ, ಆತನ ಪಾದತೀರ್ಥ ಪ್ರಸಾದದಿಂದ ದೇವದಾನವ ಮಾನವರೆಲ್ಲರೂ ಜೀವನ್ಮುಕ್ತರು. ಆ ಮಹಾ ಮಹಿಮನ ಶೃತ ದೃಷ್ಟಾನುಮಾನದಿಂದ ವಿಚಾರಿಸಿ ನೋಡಿದರೆ ಬಸವರಾಜದೇವರು ಮೊದಲಾದ ಪುರಾತನರ ಚಾರಿತ್ರವು ಹಿಂಗಲ್ಲದೆ, ಲಿಂಗವನರಿಯದೆ, ಲಿಂಗಾರ್ಚನೆಯ ಮಾಡದೆ, ಗುರುಲಿಂಗ ಜಂಗಮಕ್ಕೆ ತನು, ಮನ, ಧನವ ಸವಿಸದೆ ಇನ್ನು ಆವನಾನೊಬ್ಬನು ವೇದಾದಿ ಅಷ್ಟಾದಶ ಪುರಾಣಂಗಳನೋದಿ ಹೇಳಿ ಕೇಳಿದಡೇನೊ, ಗಿಳಿಯೋದಿದಂತೆ? ಸರ್ವಸಂಗ ಪರಿತ್ಯಾಗವ ಮಾಡಿ ಅರಣ್ಯದಲ್ಲಿ ಚರಿಸಿದಡೇನೋ ವನಚರ ವ್ಯಾಧರುಗಳಂತೆ? ಅಶನವ ಬಿಟ್ಟರೇನೋ ಪರಾಕಿಯಂತೆ? ವಿಷಯವ ಬಿಟ್ಟರೇನೊ ಅಶಕ್ತ ನಪುಂಸಕನಂತೆ? ನಿದ್ರೆಯ ಬಿಟ್ಟರೇನೊ ಜಾರಚೋರರಂತೆ? ಸಾಮರ್ಥ್ಯ ಪುರುಷನೆಂದು ಖೇಚರತ್ವದಲ್ಲಿ ಬಂದರೇನೋ ಪಕ್ಷಿಗಳಂತೆ? ಜಲದಲ್ಲಿ ಚರಿಸಿದಡೇನು ಮತ್ಸ್ಯಾದಿಗಳಂತೆ? ಭೂಪ್ರದಕ್ಷಿಣ ಬಂದಡೇನು ಮೃಗಾದಿಗಳಂತೆ? ದಾನಾದಿಗಳ ಕೊಟ್ಟರೇನು ಕ್ಷತ್ರಿಯರಂತೆ? ಅದೆಂತೆಂದಡೆ, ಶಿವನ ವಾಕ್ಯ "ಪಯೋಹಾರೇತು ಮಾರ್ಜಾಲಃ ನಗ್ನೋಮುಗ್ಧಃ ಪಿಶಾಚವತ್। ನಿತ್ಯ ಸ್ನಾನಶ್ಚಕಾಕಶ್ಚನಾಲ್ಮೀಕಿಸರ್ಪ ಜಾತಯಃ॥ ತೃಣಂಭಕ್ಷ್ಯಂತಿ ಪಶವಃ ವನವಾಸೀ ಮೃಗಸ್ತಥಾ। ಯೆನ ಚೈತಾನಿ ಕಾರ್ಯಾಣಿ ನ ಕರೋತಿಹಿಪಾರ್ವತಿ ಎಂದುದಾಗಿ ಆವ ಸಿದ್ಧಿಗಳಿಂದಲೂ ಫಲ್ಲವಿಲ್ಲ; ಇಂತೀ ಏನನೋದಿ ಏನ ಕೇಳಿ ಏನ ಹೇಳಿಯೂ ಫಲವಿಲ್ಲ. ಇವು ಭಕ್ತಿಯೊಳಗಲ್ಲ. ಮುಕ್ತಿಗೆ ಸಲ್ಲವು. ಇದನರಿದು ಆವನಾನೊಬ್ಬನು ಲಿಂಗವರಿತು ಲಿಂಗಾರ್ಚನೆಯಂ ಮಾಡಿ, ಗುರುಲಿಂಗಜಂಗಮಕ್ಕೆ ತನುಮನಧನವ ಸವಿಸಿದಡೆ ಅದೇ ಚೆಲ್ವ ಭಕ್ತಿ, ಅದೇ ಚೆಲ್ವ ಮುಕ್ತಿ, ಅದೇ ಸರ್ವಸಿದ್ಧಿ, ಅದೇ ಸರ್ವಕಾರಣವಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.



**ಭಾವಃ**— ಪ್ರಸಾದದ ಮಹತ್ವವನ್ನು ವಚನಕಾರನು ಹೇಳಿದ್ದಾನೆ. ಅದರ ಮಹತ್ವವು ಬರೇ ಯೋಗಾಭ್ಯಾಸಕ್ಕಿಂತಲೂ ಬಹಳ ಹೆಚ್ಚಿನದು. ಯೋಗಾಭ್ಯಾಸದಿಂದ ಅನೇಕ ಮಹತ್ವಗಳನ್ನು ಮಾಡಬಹುದು. ಆದರೂ ಇಂಥವನಗಿಂತಲೂ ಪ್ರಸಾದಿಯು ಶ್ರೇಷ್ಠನಾಗಿದ್ದಾನೆ. ಯಾಕಂದರೆ ಇವನು ಮೋಕ್ಷಕ್ಕೆ ಸಲ್ಲುತ್ತಾನೆ.

**ವಚನಃ**— ೧೧೧. ಅಂಗಯ್ಯ ಲಿಂಗಕ್ಕೆ ಹಿಂಗದೆ ಮಜ್ಜನಕ್ಕೆರೆಯಿರೋ. ಅರ್ಪಿತ ಮುಖಂಗಳಲ್ಲಿ ಅರ್ಪಿಸುವಿರಿ. ಅರ್ಪಿತ ಸವಿಯಿತೋ, ಲಿಂಗ ಸವಿಯಿತೋ? ಕರ್ಮಣಾ ಮನಸಾ ವಾ ಗುರೂಣಾಂ ಭಕ್ತವತ್ಸಲ। ಶರೀರಮರ್ಥಪ್ರಾಣಂಚ। ಸದ್ಗುರುಭ್ಯೋ ನಿವೇದಯೇತ್. ತನುವರ್ಪಿತ ಗುರುವಿಗೆ ಮನವರ್ಪಿತ ಲಿಂಗಕ್ಕೆ ಧನವರ್ಪಿತ ಜಂಗಮಕ್ಕೆ ಇಂತೀ ತ್ರಿವಿಧವನರ್ಪಿಸಿದ ಅರ್ಪಣೆಯನು ಮರಳಿ ಆಸೆಗೈದನಾದಡೆ ನರಕದಲ್ಲಿಕುವ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಪ್ರಸಾದವನ್ನು ಅರ್ಪಿಸುವಲ್ಲಿ ಲಿಂಗ ಮತ್ತು ಅರ್ಪಣ ಇವುಗಳಲ್ಲಿ ಸಮರಸಭಾವವಿರುತ್ತದೆ. ಈ ರೀತಿಯಾಗಿ ಗುರುಲಿಂಗ ಜಂಗಮಕ್ಕೆ ತನು ಮನ ಧನಗಳನ್ನು ಅರ್ಪಿಸಬೇಕು. ಅದರೆ ಹೀಗೆ ಅರ್ಪಿಸುವಲ್ಲಿ ತಾನು ರಹಿತನಾಗಿರಬೇಕು.

**ವಚನಃ**— ೧೧೨. ಲಿಂಗಪ್ರಸಾದದಲ್ಲಿ ಸುಯಿಧಾನಿಯಾಗದವರಲ್ಲಿ ಜಂಗಮವೆಂದು ಪ್ರಸಾದವ ಕೊಳ್ಳಲಾಗದು. ಅದೇನು ಕಾರಣವೆಂದರೆ ತಾನುಂಬುವುದು ಎಂಜಲು. ಪರರಿಗಿಕ್ಕುವದು ಪ್ರಸಾದವೇ? ಬಿಡುಬಿಡು, ಸುಡುಸುಡು. ಈ ಕಷ್ಟದ ನುಡಿಯ ಕೇಳಲಾಗದು. ಪರುಷ ನಿರ್ಮಲವಾ

ದಲ್ಲದೆ, ಅದು ಲೋಹದ ದುರ್ಗುಣವ ಕೆಡಿಸಲರಿಯದು. ಜಂಗಮ ನಾಗಿಯಲ್ಲದೆ ತಾ ಭಕ್ತನಾಗಲರಿಯ. ಮಡಿಯರ್ಥ, ವೈಲಿಗೆಯರ್ಥ ವಾದರೆ ಕೆಡಹಿ ನಾಯಕ ನರಕದಲ್ಲಿಕ್ಕದೆ ಬಿಡುವನೆ ನಮ್ಮ ಉರಿಲಿಂಗ ಪೆದ್ದಿಪ್ರಿಯವಿಶ್ವೇಶ್ವರಾ?

ಭಾವಃ— ಪ್ರಸಾದದಲ್ಲಿ ಗುರುಪ್ರಸಾದ, ಲಿಂಗಪ್ರಸಾದ, ಜಂಗಮ ಪ್ರಸಾದವೆಂದು ತ್ರಿವಿಧಗಳುಂಟು. ಜಂಗಮವು ಲಿಂಗಪ್ರಸಾದದಲ್ಲಿ ಪರಿಣಾಮಿಯಾಗಬೇಕು. ಅಂದರೆ ಮಾತ್ರ ಜಂಗಮಪ್ರಸಾದವು ಸಲ್ಲುವದು. ಇಲ್ಲದಿದ್ದರೆ ಅದು ಎಂಜಲು ಮಾತ್ರವೇ ಹೊರ್ತು ಪವಿತ್ರವಾದುದಲ್ಲ. ಹೀಗೆ ಪವಿತ್ರವಾದುದನ್ನು ಭಕ್ತನು ಸೇವಿಸಿದ್ದಾದರೆ ಅವನಲ್ಲಿ ಜಂಗಮವು ನೆಲೆಗೊಂಡು ನಿಜಭಕ್ತನೆನಿಸಿಕೊಳ್ಳುವನು.

**ವಚನಃ**— ೧೧೩. ಲಿಂಗದೊಡನೆ ಸಹಭೋಜನವ ಮಾಡುವ ಸದ್ಭಕ್ತನ ಆಚರಣೆ-ಕ್ರಿಯೆಗಳೆಂತುಟಯ್ಯಾ ಎಂದರೆ ಲಿಂಗಜಂಗಮದ ಕುಂದು ನಿಂದೆಯಂ ಕೇಳಲಾಗದು. ಕೇಳಿದಡೆ ಆ ನಿಂದಕನಂ ಕೊಲುವುದು. ಕೊಲಲಾರದಿರ್ದಡೆ ತನ್ನ ತಾ ಇರಿದುಕೊಂಡು ಸಾವುದು. ಸಾಯಲಾರದಿರ್ದೊಡೆ ಅವನ ಬಯ್ಯುವುದು. ತನ್ನ ಅರ್ಥಪ್ರಾಣಾಭಿಮಾನವು ಶಿವಾರ್ಪಣವಾಯಿತ್ತೆಂದು ಮನದಲ್ಲಿ ಸಂತೋಷವ ತಾಳಿದಡೆ ಪ್ರಸಾದವುಂಟು, ಇಂತಲ್ಲದೆ ಮನದಲ್ಲಿ ನೋವ ತಾಳಿದಡೆ ಆಚಾರಭ್ರಷ್ಟನು. ಎನ್ನ ಮನೆ, ಎನ್ನ ಧನ, ಎನ್ನ ಸತಿಯೆಂಬನ್ನಕ್ಕರ ಅವನು ಭವಿಯ ಸಮಾನ. ಭಕ್ತನಲ್ಲ, ಪ್ರಸಾದಿಯಲ್ಲ, ಶೀಲವಂತನಲ್ಲ. ಅವಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದತೀರ್ಥವಿಲ್ಲ, ಪ್ರಸಾದ ಮುನ್ನವೇ ಇಲ್ಲ. ಅವಗೆ ಕುಂಭೀಪಾತಕ ನಾಯಕ ನರಕ ತಪ್ಪದು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಪ್ರಸಾದವನ್ನು ಅನುಭವಿಸುವಂಥ ಲಿಂಗಾನುಭಾವಿಯು ಗುರುಲಿಂಗಜಂಗಮದ ನಿಂದೆಯನ್ನು ಕೇಳಲಾಗದು. ಅವನು ಧೈರ್ಯಶಾಲಿಯಾಗಿರತಕ್ಕದ್ದು. ಪ್ರಸಾದನಿಂದಕರನ್ನು ಸಂಹರಿಸಲು ಹಿಂಜರಿಯಕೂಡದು. ಹೀಗೆ ಸಂಹರಿಸಲಾರದಿದ್ದಡೆ, ತನ್ನನ್ನೇ ಇರಿದುಕೊಂಡು ಸಾಯುವುದು. ಇಂಥವರಿಗೆ ಪ್ರಸಾದವಿದೆ. ಇಲ್ಲದಿದ್ದರೆ ಅವರು ಆಚಾರಭ್ರಷ್ಟರು ಎಂದು ಹೇಳಿರುವನು.

**ವಚನಃ**— ೧೧೪. ವಿಶ್ವಾಸವೇ ಭಕ್ತಿ, ಗುರುಲಿಂಗಜಂಗಮ ಒಂದೆಂದರಿವುದೇ ಜ್ಞಾನ, ತ್ರಿವಿಧದಲ್ಲಿ ನಿರ್ವಂಚನೆಯೇ ವೈರಾಗ್ಯ, ಪ್ರಸಾ



ದವೇ ಮುಕ್ತಿ. ಇದು ಸತ್ಯ ಶಿವ ಬಲ್ಲ ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ವಿಶ್ವಾಸವುಳ್ಳವನಾಗಿರಬೇಕು. ಗುರುಲಿಂಗ ಜಂಗಮಗಳು ಒಂದೇ ಎಂದು ಅರಿಯಬೇಕು. ಅವುಗಳಲ್ಲಿ ನಿರ್ವಂಚಕನಾಗಿ ವ್ಯವಹರಿಸಬೇಕು. ಇದೇ ವೈರಾಗ್ಯವು. ಅವುಗಳ ಪ್ರಸಾದಸೇವನೆಯೇ ಮುಕ್ತಿ. ಇದು ಸತ್ಯವೆಂದು ವಚನಕಾರನು ಇಲ್ಲಿ ಹೇಳುತ್ತಾನೆ.

# ಕರಣಾರ್ಪಣ.

ವಿವರಣೆ:— ಗುರುಲಿಂಗ ಜಂಗಮದಲ್ಲಿ ಸಮರಸವಾದವನಲ್ಲಿ ಲಿಂಗವು ನೆಲೆಗೊಳ್ಳುವದು. ಈ ಸ್ಥಿತಿಯಲ್ಲಿ ಅವನ ಷಡಿಂದ್ರಿಯ ವಿಷಯಗಳು ಆಯಾ ಇಂದ್ರಿಯಗಳ ಮುಖಾಂತರವಾಗಿ ಆಯಾ ಲಿಂಗಗಳಿಗೆ ಅರ್ಪಿತವಾಗುತ್ತವೆ. ಹೀಗೆ ಅರ್ಪಿತವಾಗಿ ಅನುಭವಿಸಿದ್ದಾದರೆ ಲೌಕಿಕೇಚ್ಛೆಗಳು ಉಳಿಯವು. ಸಹಜಸುಖವೆಂಬುದು ನೆಲೆಗೊಳ್ಳುವದು. ಹಾಗೂ ಷಟ್‌ಸ್ಥಲಗಳು ಅವನಲ್ಲಿ ಪರಿಪೂರ್ಣತೆಯನ್ನು ಹೊಂದುವವು.

ವಚನ:— ೧೧೫. ಪೃಥ್ವಿಯಂಗ ಚಿತ್ತ ಹಸ್ತ ನಾಸಿಕ ಮುಖ ಗಂಧ ಪದಾರ್ಥ ಆಚಾರಲಿಂಗಕರ್ಪಿತ, ಭಕ್ತ. ಅಪ್ಪುವಂಗ ಬುದ್ಧಿ ಹಸ್ತ ಜಿಹ್ವೆ ಮುಖ ರುಚಿ ಪದಾರ್ಥ ಗುರುಲಿಂಗಕರ್ಪಿತ, ಮಹೇಶ್ವರ. ಅನಲನಂಗ ನಿರಹಂಕಾರ ಹಸ್ತ ನೇತ್ರ ಮುಖ ರೂಪು ಪದಾರ್ಥ ಶಿವಲಿಂಗಕರ್ಪಿತ, ಪ್ರಸಾದಿ. ಪವನನಂಗ, ತ್ವಕ್ಕು ಮುಖ, ಸ್ಪರ್ಶ ಪದಾರ್ಥ ಜಂಗಮಲಿಂಗಕರ್ಪಿತ, ಪ್ರಾಣಲಿಂಗಿ. ವ್ಯೋಮಾಂಗ ಜ್ಞಾನಹಸ್ತ ಶ್ರೋತ್ರ ಮುಖ ಶಬ್ದ ಪದಾರ್ಥ ಪ್ರಸಾದಲಿಂಗಕರ್ಪಿತ, ಶರಣ. ಹೃದಯಾಂಗ ಭಾವ ಹಸ್ತ, ಅರ್ಥಮುಖ, ಪರಿಣಾಮ ಪದಾರ್ಥ, ಮಹಾಲಿಂಗಕರ್ಪಿತ, ಐಕ್ಯ. ಇಂತೀ ಷಟ್‌ಸ್ಥಲವಳವಟ್ಟಾತನು ಪರಶಕ್ತಿ ಸ್ವರೂಪನು ಆತನು ನಿಜ ಶಿವಯೋಗಸಂಪನ್ನನು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ:— ಗಂಧ, ರುಚಿ, ರೂಪು, ಸ್ಪರ್ಶ, ಶಬ್ದ, ಮತ್ತು ಪರಿಣಾಮಗಳು ಮನುಷ್ಯನಿಗೆ ತಟ್ಟುತ್ತವೆ. ಅವು ತಟ್ಟಿದ ಹಾಗೆ ಅವುಗಳಲ್ಲಿ ಲೋಲುಪನಾಗದೆ ಅವುಗಳನ್ನು ಲಿಂಗಗಳಿಗೆ ಅರ್ಪಿಸಿ ಅನುಭವಿಸಬೇಕು. ಈ ಅರ್ಪಣವನ್ನು ನಾಸಿಕಮುಖವಾದ ಆಚಾರಲಿಂಗ, ಜಿಹ್ವಾಮುಖವಾದ ಗುರುಲಿಂಗ, ನೇತ್ರಮುಖವಾದ ಶಿವಲಿಂಗ, ತ್ವಕ್ಕುಮುಖವಾದ ಜಂಗಮಲಿಂಗ, ಶ್ರೋತ್ರಮುಖವಾದ ಪ್ರಸಾದಲಿಂಗ, ಅರ್ಥಮುಖವಾದ ಮಹಾಲಿಂಗ ಇವುಗಳಿಗೆ ಮಾಡಬೇಕು. ಹೀಗೆ ಅರ್ಪಣ ಮಾಡುವಲ್ಲಿ ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ, ಭಾವ ಇವುಗಳ ಕ್ರಿಯೆಗಳಿಂದಲೇ ಅದು ಆಗಬೇಕು. ಹೀಗೆ ಮಾಡಿದ್ದಾದರೆ ಪಂಚ ಭೂತಗಳಿಂದ ಆದ ಶರೀರವು ನಷ್ಟವಾಗಿ ಷಟ್‌ಸ್ಥಲಗಳು ಅವನಲ್ಲಿ ನೆಲೆಗೊಳ್ಳುತ್ತವೆ. ಹೀಗೆ ಆಚರಿಸುವವನೇ ಶಿವಯೋಗಿಯು ಎಂದು ವಚನಕಾರನು ಹೇಳಿದ್ದಾನೆ.



ವಚನ:— ೧೧೬. ನೇತ್ರದಲ್ಲಿ ಷಡುವರ್ಣ ಸಂಬಂಧವಹ ಪವಿತ್ರ ಅಪವಿತ್ರವನರಿದು ಮಹತ್ಪವಿತ್ರವ ಮಾಡಿ ನೇತ್ರದ ಕೈಯ್ಯಲ್ಲಿ ಲಿಂಗನೇತ್ರಕ್ಕೆ ಅರ್ಪಿಸುಳಿವಲ್ಲಿ ನೇತ್ರೋದಕವು. ಶ್ರೋತ್ರದಲ್ಲಿ ಶಬ್ದ ಕುಶಬ್ದವನರಿದು ಮಹಾಶಬ್ದದಲ್ಲಿ ವರ್ತಿಸಿ ಶ್ರೋತ್ರದ ಕೈಯಲ್ಲಿ ಲಿಂಗಶ್ರೋತ್ರಕ್ಕೆ ಅರ್ಪಿಸುವಲ್ಲಿ ಶ್ರೋತ್ರೋದಕವು. ಘ್ರಾಣದಿಂದ ಸುಗಂಧ ದುರ್ಗಂಧವನರಿದು ಮಹಾಗಂಧವ ಮಾಡಿ ಘ್ರಾಣದ ಕೈಯ್ಯಲ್ಲಿ ಲಿಂಗ ಘ್ರಾಣಕ್ಕರ್ಪಿಸುವಲ್ಲಿ ಘ್ರಾಣೋದಕವು. ಜಿಹ್ವೆಯಿಂದ ಮಧುರ ಆಮ್ಲ ಲವಣ ತಿಕ್ತ ಕಟು ಕಷಾಯವೆಂಬ ಷಡ್ರುಚಿಯನರಿದು ಮಹಾ ರುಚಿಯ ಮಾಡಿ ಜಿಹ್ವೆಯ ಕೈಯ್ಯಲ್ಲಿ ಲಿಂಗ ಜಿಹ್ವೆಗರ್ಪಿಸುವಲ್ಲಿ ಜಿಹ್ವೋದಕವು ಸ್ಪರ್ಶನದಿಂದ ಸುಶೀತೋಷ್ಣವನರಿದು ಇಚ್ಛೆಯ ಕಾಲವನರಿದು ಮಹಾ ಸ್ಪರ್ಶನವ ಮಾಡಿ ಸ್ಪರ್ಶನದ ಕೈಯ್ಯಲ್ಲಿ ಲಿಂಗಸ್ಪರ್ಶನಕ್ಕರ್ಪಿಸುವಲ್ಲಿ ಸ್ಪರ್ಶನೋದಕವು. ಸದ್ಭಕ್ತಿಯಿಂದ ಪಾದಾರ್ಚನೆಯ ಮಾಡುವಲ್ಲಿ ಪಾದೋದಕವು. ಸ್ನೇಹದಿಂದ ಮಜ್ಜನಕ್ಕೆರೆವಲ್ಲಿ ಮಜ್ಜನೋದಕವು. ಆರೋಗಣೆಯಲ್ಲಿ ಅರ್ಪಿಸಿದುದು ಅರ್ಪಿತೋದಕವು. ಆರೋಗಣೆಯ ಮೇಲೆ ಹಸ್ತಕ್ಕೆರೆದುದು ಹಸ್ತೋದಕವು. ಗುರುಲಿಂಗ ಶಿವಲಿಂಗ ಜಂಗಮಲಿಂಗ ಒಂದೇ ಎಂದರಿದು ಸರ್ವಕ್ರಿಯಾಕರ್ಮವೆಲ್ಲ ಸಂಬಂಧವ ಮಾಡಿ ಪ್ರಯೋಗಿಸುವುದು ಸತ್ಯೋದಕವು. ಈ ದಶೋದಕದ ಕ್ರಮವರಿದು ವರ್ತಿಸುವುದು ಆಗಮಾಚಾರ, ಕ್ರಿಯಾಸಂಪತ್ತು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ:— ಈ ವಚನವು ಕ್ರಿಯಾ ವಿಷಯಕವಾಗಿರುವದು. ಅರ್ಪಣವನ್ನು ಪೂಜಾ ಕಾಲದಲ್ಲಿ ಹೇಗೆ ಮಾಡಬೇಕೆಂಬದನ್ನು ಇಲ್ಲಿ ವಚನಕಾರನು ವಿವರಿಸಿದ್ದಾನೆ. ಉದಕದ ಮುಖಾಂತರ ಅರ್ಪಣ ಮಾಡುವ ವಿಧವು ಇದರಲ್ಲಿ ಹೇಳಲ್ಪಟ್ಟಿವೆ. ಈ ಉದಕವು ಪೂಜಾ ಕಾಲದಲ್ಲಿ ಹತ್ತು ವಿಧವಾಗುತ್ತದೆ. ಈ ವಿಧಗಳು ಯಾವವೆಂದರೆ, ನೇತ್ರೋದಕ ಶ್ರೋತ್ರೋದಕ, ಘ್ರಾಣೋದಕ, ಜಿಹ್ವೋದಕ, ಸ್ಪರ್ಶನೋದಕ, ಪಾದೋದಕ, ಮಜ್ಜನೋದಕ, ಅರ್ಪಿತೋದಕ, ಹಸ್ತೋದಕ, ಸತ್ಯೋದಕ ಎಂದು ಇವೆ.

ವಚನ:— ೧೧೭. ಸ್ತನಾಮೃತವ ಸೇವಿಸುವ ಶಿಸು ಸಕ್ಕರೆಯ ನಿಚ್ಛೈಸುವುದೇ? ಪರುಷ ದೊರೆಕೊಂಡ ಪುರುಷನು ಜಲಗರವ ತೊಳೆಯ ಲಿಚ್ಛೈಸುವನೇ? ಸೋಹವ ಮಾಡುವ ಭಕ್ತನು ಮುಕ್ತಿಯನಿಚ್ಛೈಸುವನೇ? ಇವರು ಮೂವರಿಗಿನ್ನಾವುದೂ ಇಚ್ಛೆ ಇಲ್ಲ. ರುಚಿ ಪದಾರ್ಥವಿದ್ದಂತೆ ಇದ್ದ ಪರಿಯು ಸಹಜ ಸುಖವಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಉಚ್ಚ ಧ್ಯೇಯವುಳ್ಳವನು ಕಿರಿದಾದುದನ್ನು ಬಯಸನು. ಕಿರಿದಾದುದನ್ನು ತನ್ನ ಮೇಲ್ಮೆಗಾಗಿ ಉಪಯೋಗಿಸುವನೇ ಹೊರ್ತು ಅದರೊಳಗಿರುವದಿಲ್ಲ. ಇದೇ ಅವನ ಸಹಜ ಸುಖವಾಗಿದೆ.

**ವಚನಃ**— ೧೧೮. ಆಸರಿನ ಭಕ್ತಿಯ ಜಡರುಗಳು ಬೇಸತ್ತು ಜಂಗಮಕ್ಕೆರಗಿ ಪಾದಪ್ರಕ್ಷಾಲನವಂ ಮಾಡಿ ಪಾದೋದಕವ ಧರಿಸುತ್ತಿಪ್ಪರು. ಆವುದು ಕ್ರಮವೆಂದರಿಯರು. ಅರಿವರೆ ಪಾದೋದಕ. ಅರಿಯದಿದ್ದರೆ ಬರಿ ನೀರೆಂದರಿಯರು. ಅರಿದರಿದು ಬರುದೊರೆವೋದರು ಮಾನವರೆಲ್ಲರು. ಅರಿವು ಸಾಮಾನ್ಯವೆ? ಅಂದೆಂತೆಂದರೆ, ಶಿವಾತ್ಮಕ ಪದದ್ವಂದ್ವಂ। ಪ್ರಕ್ಷಾಲನ ಜಲಂ ನರಾಃ। ಏ ಪಿಬಂತಿ ಪುನಸ್ತಸ್ಯ। ನ ಪಿಬಂತಿ ಕದಾಚನ। ಇಂತೆಂದುದಾಗಿ ಇದ ಕೇಳಿ ನಂಬುವುದು. ನಂಬದಿರ್ದಡೆ ಮುಂದೆ ಭವ ಘೋರ ನರಕ ತಪ್ಪದು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ**— ಉಚ್ಚ ನೀಚ ಭಾವವು ಮನಸಿದ್ದಂತೆ ಇರುತ್ತದೆ. ಪಾದೋದಕದ ರೀತಿಯು ಹೀಗೆಯೇ ಇದೆ. ನಂಬಿದರೆ ಅದು ಪಾದೋದಕವೆನಿಸಿಕೊಳ್ಳುವದು. ಅದೊಂದು ಶ್ರೇಷ್ಠ ವಸ್ತುವು. ನಂಬದಿದ್ದರೆ ಅದು ಬರೀ ನೀರು. ನಂಬದೆ ಪಾದೋದಕವನ್ನು ಕೊಂಡರೆ ನಾಯಕ ನರಕ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನಃ**— ೧೧೯. ಅರಿಷಡ್ವರ್ಗದುರವಣೆಗೊಳಗಾಗನಾಗಿ ಭಕ್ತ ಕಾಯನಾದ. ಪಂಚೇಂದ್ರಿಯಂಗಳ ಬಳಸನಾಗಿ ಗುರು ಭಕ್ತನಾದ. ಸಪ್ತ ಧಾತುವಿನ ಗುಣವಿಡಿಯನಾಗಿ ಸಮಯಾಚಾರಿಯಾದ. ಅಷ್ಟ ಮದಗಜದ ಬಟ್ಟೆಯ ಮೆಟ್ಟನಾಗಿ ಆಚಾರವಂತನಾದ. ಕರ್ಮಕಾಂಡದಲ್ಲಿ ಬಳಿಸಲ್ಲನಾಗಿ ಸತ್ಯ ನಿತ್ಯ ನಿರ್ಮಳನಾದ. ಜ್ಞಾನಕಾಂಡದಲ್ಲಿ ಹೊಣು ಹೊಕ್ಕನಾಗಿ ಭಕ್ತಿಯೆಂಬಚ್ಚಾದ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಯ್ಯನು.

**ಭಾವಃ**— ಮನುಷ್ಯನನ್ನು ಅರಿಷಡ್ವರ್ಗಗಳು, ಪಂಚೇಂದ್ರಿಯಗಳು, ಅಷ್ಟಮದಗಳು, ನಾನಾ ಬಗೆಯ ಕರ್ಮಗಳು ಸುತ್ತಿ ಬಳಲಿಸುತ್ತವೆ. ಆದರೆ ಶರಣನು ಇವುಗಳ ಹಿಡಿತಕ್ಕೆ ಒಳಗಾಗದೆ, ಜ್ಞಾನದಲ್ಲಿ ಸುಳಿಯುತ್ತಾನೆ. ಮತ್ತು ಭಕ್ತಿಯಲ್ಲಿ ನೆಲೆಯೂರಿರುತ್ತಾನೆಂದು ಇಲ್ಲಿ ವಚನಕಾರನು ಹೇಳಿದ್ದಾನೆ.

## ಜಾತಿಭೇದ.

**ವಿವರಣೆಃ**—ವೀರಶೈವರಲ್ಲಿ ಜಾತಿ ಭೇದವಿಲ್ಲ. ಈ ಅಭಿಪ್ರಾಯವನ್ನು ಎಲ್ಲ ವಚನಕಾರರು ತಮ್ಮ ವಚನಗಳಲ್ಲಿ ಸಮರ್ಥಿಸುವದುಂಟು. ಅವರಲ್ಲಿ ಈ ಬಗ್ಗೆ ಯಾವ ಬಗೆಯ ಮತಭೇದವು ಇರುವದಿಲ್ಲ. ಉರಿಲಿಂಗ ಪೆದ್ದಿಯು ಈ ವಿಷಯದ ಬಗ್ಗೆ ಕೆಳಗಿನ ವಚನಗಳಲ್ಲಿ ಅನೇಕ ಆಧಾರಗಳೊಡನೆ ಹೇಳಿರುವನು.

**ವಚನಃ**— ೧೨೦. ವಶಿಷ್ಠಗೋತ್ರದಲ್ಲಿ ಹುಟ್ಟಿದವನು ವಶಿಷ್ಠ ಗೋತ್ರನೆಂಬಂತೆ, ಬಾರದ್ವಾಜಗೋತ್ರದಲ್ಲಿ ಹುಟ್ಟಿದವನು ಭಾರದ್ವಾಜ ಗೋತ್ರದವನೆಂಬಂತೆ, ಕಾಶ್ಯಪ ಗೋತ್ರದಲ್ಲಿ ಹುಟ್ಟಿದವನು ಕಾಶ್ಯಪ ಗೋತ್ರದವನೆಂಬಂತೆ, ವಿಶ್ವಾಮಿತ್ರ ಗೋತ್ರದಲ್ಲಿ ಹುಟ್ಟಿದವನು ವಿಶ್ವಾಮಿತ್ರ ಗೋತ್ರದವನೆಂಬಂತೆ, ಆ ಪರಿ ಆವಾವ ಗೋತ್ರದಲ್ಲಿ ಆವಾವ ಋಷಿಗಳ ವಂಶದಲ್ಲಿ ಜನಿಸಿದವರನು ಆ ಗೋತ್ರ, ಆ ಸಂತತಿ, ಆ ಸುತನು ಎಂಬುದು ಉಪಚರ್ಯವೇ? ಅಸತ್ಯವೇ ಹೇಳಿರಣ್ಣಾ? ಅದು ತಾತ್ಪರ್ಯ, ಅದು ಸತ್ಯ. ಆ ಪರಿ ಬ್ರಾಹ್ಮಣನ ಮಗ ಬ್ರಾಹ್ಮಣನು; ಕ್ಷತ್ರಿಯನ ಮಗ ಕ್ಷತ್ರಿಯನು; ವೈಶ್ಯನ ಮಗ ವೈಶ್ಯನು; ಶೂದ್ರನ ಮಗ ಶೂದ್ರನು; ಆ ಪರಿ ತಪ್ಪದು. ದಿಟದಿಟ ವಿಚಾರಿಸಿ ನೋಡಿರೇ. ಅದು ಹೇಗೆಂದರೆ! ಶೃತಿ ॥ಶ್ಲೋ॥ "ಮಹಾ ಬ್ರಾಹ್ಮಣ ಮೀಶಾನಂ" ಎಂದುದಾಗಿ ಮತ್ತಂ। "ವಿರೂಪಾಕ್ಷಂ ದ್ವಿಜೋತ್ತಮಂ" ಎಂದುದಾಗಿ ಮಹಾಬ್ರಾಹ್ಮಣನೇ ಮಹಾದೇವನು. ಇದಕ್ಕೆ ಮತ್ತೆ ಶಿವರಹಸ್ಯದಲ್ಲಿ ॥ ಗುರುದೇವೊ ಮಹಾದೇವೋ ಗುರುದೇವಸ್ಸದಾಶಿವಃ। ಗುರುದೇವಃ ಪರಂ ತತ್ವಂ ತಸ್ಮೈ ಶ್ರೀಗುರವೆ ನಮಃ ಎಂದುದಾಗಿ, ಮಹಾದೇವನೇ ಶ್ರೀಗುರು ಕಾಣರಣ್ಣಾ! ಆ ಶ್ರೀಗುರುವಿನ ಕರಕಮಲದಲ್ಲಿ ಉದ್ಭವಿಸಿದ ತಚ್ಛಿಷ್ಯನೇ ಮಹಾ ಬ್ರಾಹ್ಮಣನು ಇಂತೆಂಬುದು ಹುಸಿಯಲ್ಲ, ಜಾತಿ ಅಜಾತಿ ಎಂದು ಅಷ್ಟಾದಶಜಾತಿಯೊಳಗೆ ಇಕ್ಕಲಾಗದು. ಅಷ್ಟಾದಶ ಜಾತಿಯೊಳಗೊಂದೂ ಭಾವಿಸಲಾಗದು. ಆ ಮಹಿಮನೇ ಸತ್ಕುಲಜನು. ಇದಕ್ಕೆ ಮತ್ತಂ "ಬ್ರಹ್ಮಚರತಿ ಬ್ರಾಹ್ಮಣಃ" ಎಂದುದಾಗಿ ಆ ಮಹಾಮಹಿಮನು ಬ್ರಹ್ಮವ ಆಚರಿಸುವನಾತ ಬ್ರಾಹ್ಮಣ. ಮತ್ತಂ ಕೂರ್ಮ ಪೂರಾಣದಲ್ಲಿ ॥ " ಸ ಏವ ಭಸ್ಮ

ಜ್ಯೋತಿಃ" ಎಂದುದಾಗಿ ವಿಭೂತಿಯ ಧರಿಸಿಪ್ಪವನಾಗಿ ಆ ಮಹಾತ್ಮನೇ ಜ್ಯೋತಿರ್ಲಿಂಗವು. ಮತ್ತಂ ಶಿವಧರ್ಮದಲ್ಲಿ "ರುದ್ರಾಕ್ಷಂ ಧಾರಯನ್ನಿತ್ಯಂ ರುದ್ರಸ್ಸಾಕ್ಷಾದಿವ ಸ್ಮೃತಃ" ಎಂದುದಾಗಿ ರುದ್ರಾಕ್ಷಿಯಂ ಧರಿಸಿಪ್ಪನಾಗಿ ಆ ಮಹಾಮಹಿಮನೇ ರುದ್ರನು. ಮತ್ತಂ ಕಾಳಿಕಾಗಮದಲ್ಲಿ "ತಸ್ಮಿನ್ವೇದಾಶ್ಚ ಶಾಸ್ತ್ರಾಣಿ ಮಂತ್ರ ಪಂಚಾಕ್ಷರೀ ತಥಾ" ಎಂದುದಾಗಿ ಶ್ರೀಪಂಚಾಕ್ಷರಿಯ ಜಪಿಸುವನಾಗಿ ಆ ಮಹಾಮಹಿಮನೇ ವೇದವಿತ್ತು, ಶಾಸ್ತ್ರಜ್ಞನು. ಮತ್ತಂ ಲೈಂಗ್ಯೆ ॥ಶ್ಲೋ॥ ಮೂಢನಾಮಪ್ಯಯುಕ್ತಾನಾಂ ಪಾಪಿನಾಂ ಚಾಭಿಚಾರಿಣಾಂ॥ ಯಮಲೋಕೋ ನ ವಿದ್ಯತೆ ಸದಾ ವೈ ಲಿಂಗ ಧಾರಣಾತ್ ॥ ಎಂದುದಾಗಿ ಲಿಂಗವ ಧರಿಸಿಪ್ಪನಾಗಿ ಆ ಮಹಾಮಹಿಮನೇ ಲಿಂಗದೇಹಿ, ಲಿಂಗಕಾಯನು, ಲಿಂಗಪ್ರಾಣನು. ಶಿವಲಿಂಗಾರ್ಚನೆಯಂ ಮಾಡುವನಾಗಿ ಆ ಮಹಾಮಹಿಮನೇ ಶಿವನು. ಮತ್ತಂ, ಆದಿತ್ಯ ಪುರಾಣೇ "ಅಕೃತ್ವಾ ಪೂಜನಂ ಶಂಭೋಃ ಯೋ ಭುಂಕ್ತೆ ಪಾಪಕೃದ್ದ್ವಿಜಃ। ಕುಣಪಂಚ ಮಲಂ ಚೈವ ಸಮಶ್ನಾತಿ ದಿನೇ ದಿನೇ" ಎಂದುದಾಗಿ ಶಿವ ಲಿಂಗಕ್ಕೆ ಅರ್ಪಿಸದೆ ಕೊಳ್ಳನಾಗಿ ಆ ಮಹಾ ಮಹಿಮನೇ ರುದ್ರನು. ಮತ್ತಂ ಶಾಂಕರ ಸಂಹಿತೆಯಲ್ಲಿ ॥ಶ್ಲೋ॥ ತಿಲಷೋಡಶಭಾಗಂ ತು ತೃಣಾಗ್ರಾಂಬು ಕಣೋಪಮಂ। ಪಾದೋದಕ ಪ್ರಸಾದಾನಾಂ ಸೇವನಾನ್ಮೋಕ್ಷಮಾಪ್ನುಯಾತ್ ॥ ಎಂದುದಾಗಿ ಪಾದೋದಕ ಪ್ರಸಾದವಂ ಕೊಂಬನಾಗಿ ಆ ಮಹಾತ್ಮನು ತಾನೇ ಲಿಂಗೈಕ್ಯನು. ಇನ್ನು ನಾನಾ ವೇದ ಶಾಸ್ತ್ರ ಪುರಾಣಾಗಮಂಗಳ ಸಮ್ಮತ ದೃಷ್ಟ ವಾಕ್ಯಂಗಳನು ವಿಚಾರಿಸಿ ನೋಡಿದರೆಯೂ ಶಿವಭಕ್ತನೇ ಕುಲಜನು. ಶಿವಭಕ್ತನೇ ಉತ್ತಮನು. ಇಂಥಾ ಶಿವಭಕ್ತನನು ಜಾತಿ ವಿಜಾತಿ ಎಂದು ಭಾವಿಸಿದರೆ, ಮರ್ತ್ಯನೆಂದು ಭಾವಿಸಿದರೆ, ನರಕ ತಪ್ಪದು. ವಶಿಷ್ಠ ಪುರಾಣದಲ್ಲಿ ಕೇಳಿರೇ ॥ಶ್ಲೋ॥ ಮರ್ತ್ಯವನ್ಮನುತೆ ಯಸ್ತು ಶಿವನಿಷ್ಠಂ ದ್ವಿಜಂ ನರಃ। ಕುಂಭೀಪಾಕೇಷು ಪತತಿ ನರಕೆ ಕಾಲಮಕ್ಷಯಂ॥ ಎಂದುದಾಗಿ ಇದು ಕಾರಣ ಅಷ್ಟಾದಶ ವಿದ್ಯಂಗಳನು ವಿಚಾರಿಸಿ ತಿಳಿದು ನೋಡಿದರೆ ಋಷಿ ಪುತ್ರನ ಋಷಿ ಎಂಬಂತೆ ಶ್ರೀಗುರು ಪುತ್ರನನು ಶ್ರೀಗುರು ಎಂಬುದಯ್ಯಾ. ಆ ಮಹಾನುಹಿಮನ ದರ್ಶನವ ಮಾಡಿ ಪಾದೋದಕ ಪ್ರಸಾದವ ಕೊಂಡು ಮುಕ್ತರಪ್ಪುದಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.



**ಭಾವ:**— ವಚನಕಾರನು ಯಾರಲ್ಲಿ ಯಾವನು ಹುಟ್ಟಿರುವನೋ ಅವನು ಅವರ ಮಗನೆನ್ನುವದು ಸತ್ಯವು ಎಂದು ಹೇಳಿ, ವೀರಶೈವನು ಗುರುವಿನಲ್ಲಿ ಹುಟ್ಟಿರುವನಾದ್ದರಿಂದ ಅವನು ಗುರುವಿನ ಮಗನಾಗುವನು. ಇಂಥವನನ್ನು ಹದಿನೆಂಟು ಜಾತಿಗಳಲ್ಲಿ ಒಂದು ಜಾತಿಯವನೆಂದು ಭಾವಿಸಬಾರದು. ಅವನು ಶ್ರೇಷ್ಠ ಕುಲದವನು. ಅವನು ಲಿಂಗದೇಹಿಯಾದ್ದರಿಂದ ಅವನು ಮಹಿಮನೆಂದು ತಿಳಿಯಬೇಕು. ಅವನ ಪಾದೋದಕವನ್ನು ಸ್ವೀಕಸಬೇಕೆಂದು ಇಲ್ಲಿ ಹೇಳಿರುವನು.

**ವಚನಃ**— ೧೨೧. ಶಿವಶಿವಾ ಭಕ್ತಿ ಹೀನನ ಒಟ್ಟಿಯಲ್ಲಿ ಕಂಡು ನೆಟ್ಟನೆ ಶಿವಭಕ್ತ ಜೋಹಾರ ಎಂದಡೆ, ಸುರಾಪಾನದಲ್ಲಿ ಮಜ್ಜನ ಮಾಡಿದಂತಾಯಿತ್ತು ಅವನ ಶಿವಪೂಜೆ. ಕಟ್ಟಿದ ಕೆರೆಯನೊಡೆದಂತಾಯಿತ್ತವನ ಶಿವಪೂಜೆ. ಅಮೇಧ್ಯವ ಭುಂಜಿಸಿದಂತಾಯಿತ್ತು ಅವನ ಶಿವ ಪೂಜೆ. ಹೇರೊಳಗಣ ಹುಳುವ ಕೋಳಿ ಕೆದರಿದಂತಾಯಿತ್ತದವನ ಶಿವ ಪೂಜೆ. ಒಣಗಿದೆಲುವ ಸೊಣಗ ಕಡಿದು ತನ್ನ ರಕ್ತವ ತಾನೇ ಭುಂಜಿಸಿದಂತಾಯಿತ್ತವನ ಶಿವಪೂಜೆ. ಅವನ ಸರ್ವಾಂಗವು ಪಾಕುಳದ ಕುಳಿಯಂತಾಯಿತ್ತು, ಕನ್ನಡಿಯ ಮೇಲೆ ಉದ್ದುರುಳಿದಂತಾಯಿತ್ತವನ ಶಿವಪೂಜೆ. ಅರೆಯ ಮೇಲೆ ಅಡು ಹಿಕ್ಕೆಯನಿಟ್ಟಂತಾಯಿತ್ತು ಅವನ ಶಿವಪೂಜೆ. ಲೋಳಿಸರದ ಮೇಲೆ ಬಂಡಿ ಹರಿದಂತಾಯಿತ್ತವನ ಶಿವಪೂಜೆ. ಅದೆಂತೆಂದಡೆ, ವಿಷ್ಣು ಪುರಾಣೆ ॥ಶ್ಲೋ॥ ಬ್ರಹ್ಮಬೀಜ ತೃಣಂ ನಾಸ್ತಿ ಕೇಶವೊ ಅಧಿದೇವತಾ ಗುರುಭ್ರಷ್ಟಶ್ಚ ಚಾಂಡಾಲೋ ವಿಪ್ರಶ್ವಾನೋಪಿ ಜಾಯತೆ॥ ಬ್ರಾಹ್ಮಣಂ ದರ್ಶನಂ ಚೈವ ಪಾಪಪಂಜರಮೇವ ಚ। ಬ್ರಾಹ್ಮಣಂ ವಂದನಂ ಚೈವ ಕೋಟಿ ಜನ್ಮಸು ಸೂಕರಃ॥ ಎಂದುದಾಗಿ ರೇಣುಕಾದೇವಿಯ ಮಗನೇ ಬ್ರಾಹ್ಮಣನು. ಮಾತಂಗಿಯ ಮಗನೇ ಹೊಲೆಯನು. ಇವರಿಬ್ಬರೂ ಜಮದಗ್ನಿಗೆ ಹುಟ್ಟಿದರಾಗಿ. ಇದಕ್ಕೆ ಸಾಕ್ಷಿ, ಭಾರದ್ವಾಜ ವಿಶ್ವಾಮಿತ್ರ ಆಗಸ್ತ್ಯ ನಾರದ ಕೌಂಡಿಲ್ಯ ಈಯೈವರು ಸಾಕ್ಷಿಯಲ್ಲಿ ನಿಮ್ಮೊಳಗೆ ನೀವು ಸಂವಾದವು ಬೇಡೆಂದು ವಿಭಾಗವಂ ಮಾಡಿಕೊಟ್ಟ ವಿವರಮಂ ಕೇಳಿರಣ್ಣಾ! ಗ್ರಾಮದೊಳಗಣ ಸೀಮೆಯ ಗೃಹವನೇ ಹೊಲೆಯರಿಗೆ ಕೊಟ್ಟರು. ಸತ್ತ ಹಸುವ ನೆಳದುಕೊಂಡು ಹೋಹವರನೇ ಹೊಲೆಯರ ಮಾಡಿದರು ಜೀವದ ಹಸುವ ಹದಿನೆಂಟು ಜಾತಿಯ ಮಂಚದಡಿಯಲ್ಲಿ ನುಸಿದು ಗೋದಾನ ಮುಖದಲ್ಲಿ ಕೊಂಡು ಹೋಹರನೇ ಬ್ರಾಹ್ಮಣರ ಮಾಡಿದರು.

ಇನ್ನು ನಿಮಗೂ ತಮಗೂ ಸೊಮ್ಮು ಸಂಬಂಧವಿಲ್ಲವೆಂದು ಕಂಡಾಗ ತೊಲಗುವಂತೆ ಸಂಭೋಳಿಯೆಂಬ ನಾಮಾಂಕಿತವಂ ಕೊಟ್ಟು ತೊರೆ ಪತ್ರವಂ ಬರೆದರಾಗಿ. ಇದನರಿಯದಿದ್ದರೆ ಇನ್ನು ಕೇಳಿರಣ್ಣ. ನಳ ಚಕ್ರವರ್ತಿರಾಯನು ಪಿಂಡ ಪಿತೃ ಕಾರ್ಯವ ಮಾಡುವಲ್ಲಿ ಹೊನ್ನ ಗೋವಂ ತಂದು ಬಿನ್ನಾಣದಲ್ಲಿ ದಾನವ ಕೊಟ್ಟಲ್ಲಿ ಹೊಲೆಯರು ನಾಡಕೂಟ ವಕೂಡಿ ಆಸ್ಥಲ ತಾರ್ಕಣೆಯಲ್ಲಿ ಪೂರ್ವಸಾಧನ ಸಂಬಂಧದಿಂದ ನ್ಯಾಯವ ನಾಡಿ ಇತ್ತಂಡವ ಹಂಚಿಕೊಂಡ ವಿವರವ ಕೇಳಿರಣ್ಣಾ. ಕೊಂಬು ಕೊಳಗನೇ ತೆಗೆದು ಏಳುನೂರೆಪ್ಪತ್ತು ತೂಕ ಚಿನ್ನವ ಹಂಚಿಕೊಂಡು ಉಳಿದ ಕೊಂಬು ಕೊಳಗವ ವಿಪ್ರರು ಎತ್ತಿಕೊಂಡರಾಗಿ, ಈ ಹೊನ್ನು ಗೋವನಳಿದು ತಿಂಬ ಕುನ್ನಿಗಳ ಕಂಡು ಕೇಳಿಯೂ ಅರಿದು ಮರೆದು ಉತ್ತಮ ಕುಲ ದ್ವಿಜರೆಂದು ಅಲ್ಲಿ ಉಪದೇಶವಂ ಕೊಂಡು ನಮಸ್ಕರಿಸುವ ಅಜ್ಞಾನಿ ಹೊಲೆಯರ ನಾನೇನೆಂಬೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾವಃ**— ಭಕ್ತಿಯುಳ್ಳವನೇ ಶ್ರೇಷ್ಠನು. ಅವನ ಪೂಜೆಯೇ ನಿಜ ವಾದ ಪೂಜೆಯು. ಭಕ್ತಿ ಹೀನನ ಪೂಜೆಯು ಯಾತಕ್ಕೂ ಬಾರದೆಂದು ವಚನಕಾರನು ಬಹು ದೃಢವಾಗಿ ಇಲ್ಲಿ ಹೇಳಿರುವನು. ಇಲ್ಲಿ ಬ್ರಾಹ್ಮಣರ ಕರ್ಮಗಳು ಮತ್ತು ನಿಜಭಕ್ತರ ಕರ್ಮಗಳು ಇವುಗಳಲ್ಲಿರುವ ತಾರತಮ್ಯವನ್ನು ಅನೇಕ ಪುರಾಣೋಕ್ತಿಗಳಿಂದ ವಿವರಿಸಿ ಹೇಳಿರುವನು.

---

## ಏಕಭುಕ್ತೋಪವಾಸಾದಿಗಳು.

**ವಿವರಣೆಃ**— ವೀರಶೈವನಿಗೆ ಒಪ್ಪತ್ತು ಉಣ್ಣುವದು ಉಪವಾಸ ಮಾಡುವದು ಇಂಥ ಕ್ರಿಯೆಗಳು ಸಲ್ಲವು. ಯಾಕಂದರೆ ಅವನ ಕ್ರಿಯಾ ಕರ್ಮಗಳು ಭಿನ್ನಾಚಾರಿಗಳಿಂದ ತೀರ ಬೇರೆ ವಿಧವಾಗಿರುತ್ತವೆ. ಅವನು ಲಿಂಗ ದೇಹಿಯು. ಆದ್ದರಿಂದ ಇಂಥವನ ಕ್ರಿಯೆಗಳಲ್ಲಿ ಲಿಂಗಾಂಗ ಸಮರಸ ಭಾವವಿರುತ್ತದೆ. ಇವನು ಪ್ರಸಾದವನ್ನು ಸ್ವೀಕರಿಸಿ ಲಿಂಗಭೋಗೋಪ ಭೋಗಿಯಾಗಿರಬೇಕು.

**ವಚನಃ**— ೧೨೨. ಪ್ರಾಣಲಿಂಗಿ ಸಂಬಂಧಿಯಾದ ಲಿಂಗವಂತನು ಏಕಭುಕ್ತ ಉಪವಾಸಂಗಳನ್ನು ಮಾಡಲಾಗದು. ಅದೇನುಕಾರಣವೆಂದಡೆ, ದೇವರಾರೋಗಣೆ ತಪ್ಪುವದಾಗಿ, ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳು ತಪ್ಪುವದಾಗಿ, ಆಗಮ ಮಾರ್ಗವು ತಪ್ಪುವದಾಗಿ, ಶ್ರೀಗುರು ವಿನಾಜ್ಞೆಯು ತಪ್ಪುವದಾಗಿ, ತನಗೆ ಮುಂದೆ ಪ್ರಸಾದವಿಲ್ಲವಾಗಿ, ಮುಕ್ತಿ ಇಲ್ಲ, ದೋಷಕಾರಿಯಪ್ಪನು ಕೇಳಿರಣ್ಣಾ. ಅದೆಂತೆಂದಡೆ, ॥ಶ್ಲೋ॥ ಪ್ರಾಣಲಿಂಗ ಸಮಾಯುಕ್ತಸ್ಯೈಕಭುಕ್ತೋಪವಾಸಿನಃ। ಪ್ರಸಾದ ನಿಷ್ಫಲಂ ಚೈವ ರೌರವಂ ನರಕಂ ವ್ರಜೇತ್ ॥ ಎಂದುದಾಗಿ ಇದು ಕಾರಣ ನಿತ್ಯ ನೈಮಿತ್ತಿಕ ಪಂಚಪರ್ವತಿಥಿಗಳಲ್ಲಿ ಆವ ದಿನದಲ್ಲಿಯೂ ಎಂದೆಂದೂ ಅಷ್ಟ ವಿಧಾರ್ಚನೆ ಷೋಡಶೋಪಚಾರವೇ ಕರ್ತವ್ಯ ನೋಡಾ. ದೇವರಾರೋ ಗಣೆಯಂ ಮಾಡಿಸಿ ಪ್ರಸನ್ನತ್ವವಂ ಪಡೆದು ಪ್ರಸಾದಮಂ ಧರಿಸಿ ಮುಕ್ತ ರಪ್ಪರಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಪ್ರಾಣಲಿಂಗಿಯಾದವನು ಜಪ ಏಕಭುಕ್ತ ಉಪವಾಸಗಳನ್ನು ಮಾಡಕೂಡದು. ಯಾಕಂದರೆ ಇದರಿಂದ ಅವನಿಗೆ ಪ್ರಸಾದವು ತಪ್ಪುವದು. ಪ್ರಸಾದವು ತಪ್ಪಿದಲ್ಲಿ ತನ್ನಲ್ಲಿರುವ ಆಚಾರಲಿಂಗ, ಗುರುಲಿಂಗ ಮೊದಲಾದ ಲಿಂಗಗಳಲ್ಲಿ ಜಾಗ್ರತಿಯನ್ನುಂಟು ಮಾಡುವ ಕಾರ್ಯವೂ ತಪ್ಪುವದು. ಇದು ಆಗಮ ಮಾರ್ಗವಲ್ಲ, ಗುರುವಾಜ್ಞೆಯಲ್ಲ. ಎಂಥ ಪರ್ವತಿಥಿಗಳಲ್ಲಿಯೂ ಕೂಡ ಅಷ್ಟವಿಧಾರ್ಚನೆ ಷೋಡಶೋಪಚಾರಗಳನ್ನು ಮಾಡಬೇಕಾದುದು ಅವಶ್ಯವು. ಆದರೆ ಏಕಭುಕ್ತೋಪವಾಸಾದಿಗಳನ್ನು ಮಾಡಿದ್ದಾದರೆ ಪ್ರಸಾದವು ತಪ್ಪಿ ಹೋಗುವದು. ಆದ್ದರಿಂದ ಈ ಬಗೆಯ ಭಿನ್ನಕ್ರಿಯಾಚರಣೆಯು ವೀರಶೈವರಿಗೆ ಸಲ್ಲದ್ದು ಎಂದು ವಚನಕಾರನ ಮುಖ್ಯ ಅಭಿಪ್ರಾಯವು.

# ವಿಭೂತಿಯು ಮಹತ್ವ.

**ವಚನಃ**— ೧೨೩. ಅನಾದಿ ಶಾಶ್ವತಂ ನಿತ್ಯಂ ಚೈತನ್ಯಂ ಚಿತ್ಸ್ವರೂಪಕಂ। ಚಿದಂಗ ವೃಷಭಾಕಾರಂ ಚಿದ್ಭಸ್ಮ ಲಿಂಗಧಾರಣಂ॥ ಪ್ರಥಮ ಗೂಢನಿರ್ನಾಮಂ ದ್ವಿತೀಯಂ ಚಿತ್ಸ್ವರೂಪಕಂ। ತೃತೀಯಂ ಚಿದ್ವಿಲಾಸಂ ಚ ಚತುರ್ಥಂ ಭಸ್ಮಧಾರಣಾತ್ ॥೧॥ ರೋಮ ರೋಮೆ ಭವೇತ್ ಶಿವಂ ಸ್ವಕಾರ್ಯಮುಚ್ಯತೆ ಲಿಂಗಂ ವಿಭೂತಿಧೂಳನಾದ್ಭವೇತ್ ॥೨॥ ಎಂದುದಾಗಿ ಬಸವಾ ಬಸವಾ ಎನುತಿಪ್ಪವರೆಲ್ಲರು ಬಸವನ ಘನವನಾರು ಅರಿಯರಲ್ಲಾ. ಅನಾದಿ ಪರಶಿವನಲ್ಲಿ ಅಂತರ್ಗತವಾಗಿರ್ದ ಮಹಾ ಪ್ರಕಾಶವೇ ಬಹಿಷ್ಕರಿಸಿ ಚಿತ್ತು ಎನಿಸಿತ್ತು. ಆ ಚಿತ್ತು ಚಿದಂಗ ಬಸವ. ಆ ಚಿದಂಗ ಬಸವನಿಂದುದಯಿಸಿದ ಚಿದ್ವಿಭೂತಿಯನೊಲಿದು ಧರಿಸಿದ ಶರಣರೆಲ್ಲರೂ ಜ್ಯೋತಿರ್ಮಯ ಲಿಂಗವಪ್ಪುದು ತಪ್ಪದು ಕಾಣಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಅನಾದಿ ಪರಶಿವನಲ್ಲಿ ಅಂತರ್ಗತವಾದ ಮಹಾ ಪ್ರಕಾಶವೇ ಚಿತ್ ಎನಿಸಿಕೊಂಡಿತ್ತು. ಈ ಚಿತ್ತಿನ ಅಂಗಸ್ವರೂಪವೇ ಚಿದ್ವಿಭೂತಿಯು. ಈ ವಿಭೂತಿಯ ಮೂಲಕವಾಗಿಯೇ ಲಿಂಗ ಪ್ರಕಾಶವು ಭಕ್ತನಲ್ಲಿ ಬೆಳಗುವದು.

---

# ಮಂತ್ರ.

**ವಿವರಣೆಃ**— ಷಟ್‌ಸ್ಥಲ ಶಾಸ್ತ್ರದಲ್ಲಿ ಪಂಚಾಕ್ಷರಿಯ ಮಹತ್ವವು ವಿಶೇಷವಾಗಿದೆ. ಅದರ ಉಲ್ಲೇಖವು ವಚನ ಗ್ರಂಥಗಳಲ್ಲಿ ಮೇಲಿಂದ ಮೇಲೆ ಬರುತ್ತದೆ. ಆದರೆ ಅದರ ಮರ್ಮವನ್ನು ವಚನಕಾರರು ಬಹಿರಂಗಗೊಳಿಸಲು ಇಷ್ಟ ಪಡುವದಿಲ್ಲ. ಅದನ್ನು ಅವರು ಗೂಢವಾಗಿಟ್ಟುಕೊಂಡಿರುತ್ತಾರೆ. ಗುರುಮುಖದಿಂದಲೇ ಅದನ್ನು ಅರಿಯಬೇಕೆಂದು ಅವರ ಅಭಿಪ್ರಾಯವಿರುತ್ತದೆ. ಆದ್ದರಿಂದ ಪಂಚಾಕ್ಷರಿಯ ವಿವರಣೆ ಮಾಡುವಲ್ಲಿ ವಚನಕಾರರು ಸಾಮಾನ್ಯವಾಗಿ ಅದರ ಮಹತ್ವವನ್ನು ಮಾತ್ರ ವಿವರಿಸುವದುಂಟು. ಅಂತರ್ಗತ ವಿಷಯಗಳನ್ನು ಹೇಳುವದಿಲ್ಲ.

**ವಚನಃ**— ೧೨೪. ನಿರಾಳದ ಅಷ್ಟದಳಕಮಲದೊಳಗೆ ನಿರಂಜನ ಚೌಕ ಮಧ್ಯನೋಡಾ! ಇದರ ಬೀಜಾಕ್ಷರದ ಭೇದವನರಿಯೆ, ನಿರಂಜನ ಪ್ರಣಮ, ಅವಾಚ್ಯ ಪ್ರಣಮ, ಕಲಾಪ್ರಣಮ, ಆದಿಪ್ರಣಮ, ಅನಾದಿ ಪ್ರಣಮ, ಅಕಾರಪ್ರಣಮ, ಉಕಾರಪ್ರಣಮ, ಮಕಾರಪ್ರಣಮ, ಜ್ಯೋತಿ ಪ್ರಣಮ, ಅಖಂಡಜ್ಯೋತಿಪ್ರಣಮ, ಅಖಂಡಮಹಾಜ್ಯೋತಿಪ್ರಣಮ, ಗೋಳಾಕಾಕಾರಪ್ರಣಮ, ಅಖಂಡಗೋಳಕಾಕಾರಪ್ರಣಮ, ಅಖಂಡಮಹಾಗೋಳಕಾಕಾರಪ್ರಣಮ, ಇಂತೀ ನಿರಾಳದ ಅಷ್ಟದಳ ಕಮಲದೊಳಗೆ ನಿರಂಜನ ಚೌಕಮಧ್ಯ ನೋಡಾ! ಇದರ ಬೀಜಾಕ್ಷರದ ಭೇದವನೆನಗೆ ಕರುಣಿಸಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಇಲ್ಲಿ ವಚನಕಾರರು ಪ್ರಣಮಗಳ ಅನೇಕ ವಿಧಗಳನ್ನು ಹೇಳಿರುವನು. ಅವುಗಳ ಸ್ವರೂಪವನ್ನು ಅವನು ತಿಳಿಸದೆ ಗುಪ್ತವಾಗಿಟ್ಟಿರುವನು. ಇಂಥ ವಿಷಯಗಳನ್ನು ಗುರುಮುಖದಿಂದಲೇ ಅರಿಯಬೇಕೆಂದು ಆತನನ್ನು ಬೇಡಿಕೊಳ್ಳುತ್ತಾನೆ.

**ವಚನ:**— ೧೨೫. ಶ್ರೀಪಂಚಾಕ್ಷರಿಯೇ ಸರ್ವ ಮಂತ್ರವೆಲ್ಲಕ್ಕೆ ಉತ್ಪತ್ತಿ ಸ್ಥಿತಿಲಯಸ್ಥಾನ, ಸರ್ವ ಕಾರಣಕ್ಕೆ ಮೂಲ. ಅದೆಂತೆಂದಡೆ ಸಪ್ತಕೋಟಿ ಮಹಾ ಮಂತ್ರಂ ಉಪಮಂತ್ರಸ್ಸನೇಕಧಾ। ಪಂಚಾಕ್ಷರೀ ಪ್ರಲೀಯಂತೆ। ಘನಸ್ತತ್ರೈವ ನಿರ್ಗತಃ। ತಸ್ಮಾತ್‌ವೇದಾಶ್ಚ ಶಾಸ್ತ್ರಾಣಿ। ಮಂತ್ರೆ ಪಂಚಾಕ್ಷರೀ ಸ್ಥಿತಾ। ಎಂದುದಾಗಿ, ಇದುಕಾರಣ ಶ್ರೀ ಪಂಚಾ

ಕ್ಷರಿಯುಳ್ಳ ಸದ್ಭಕ್ತನೇ ವೇದವಿತ್ತು. ಆ ಸದ್ಭಕ್ತನೇ ಶಾಸ್ತ್ರವಾನ್ ಆ ಮಹಾ ಮಹಿಮನೇ ಪುರಾಣಿಕನು, ಆಗಮಿಕನು, ಆತನೇ ಸರ್ವಜ್ಞನಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಮಂತ್ರದ ಅರ್ಥವನ್ನು ತಿಳಿಯಬೇಕು. ಅದನ್ನು ಬರೇ ಜಪಿಸುವದರಿಂದ ಏನೂ ಪರಿಣಾಮವಾಗಲಾರದು. ಆದರೆ ಅರ್ಥವನ್ನು ತಿಳಿದು ಆಚರಿಸಿದ್ದಾದರೆ, ಅವನು ಮಹಿಮನಾಗುವನು. ಮತ್ತು ಎಲ್ಲ ಶಾಸ್ತ್ರಗಳಲ್ಲಿ ಬಲ್ಲಿದನೂ ಆಗುವನು.

ವಚನಃ— ೧೨೬. ಓಂಕಾರವೆಂಬ ವೃಕ್ಷದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಅಥರ್ವಣವೇದಗಳೆಂಬ ನಾಲ್ಕು ಶಾಖೆಗಳು ವೇದಾಂಗಗಳೆಂಬ ಉಪಶಾಖೆಗಳು ಶಾಸ್ತ್ರಂಗಳೆಂಬ ಅಂಕುರಪಲ್ಲವಗಳು ಪುರಾಣಂಗಳೆಂಬ ಪುಷ್ಪಗಳು ಆಗಮಂಗಳೆಂಬ ಕಾಯಿ ಬಲಿದು ಶ್ರೀ ಪಂಚಾಕ್ಷರಿ ಎಂಬ ಮಧುರಸ ಹಣ್ಣುಗಳು ಅಗಣಿತ ಫಲವನು ಅನಂತಕಾಲ ಭೋಗಿಸಲು ಮತ್ತು ಜಿಹ್ವೆಯೊಳಗೆ ಬಂದಿರಲು ಭೋಗಿಸಿ ಸುಖಿಯಹುದಲ್ಲದೆ ಇತರ ವಿದ್ಯಂಗಳೆಂಬ ಸಸಿಯ ಸಾಕಿ ಸಲಹಲುಂಟೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

ಭಾವಃ— ಈ ವಚನದಲ್ಲಿ ಪಂಚಾಕ್ಷರಿಯ ಮಹತ್ವವನ್ನು ಹೇಳಿರುವನು. ಪಂಚಾಕ್ಷರಿಯನ್ನು ತಿಳಿಯುವದೆಂದರೆ ಮಧುರವಾದ ಹಣ್ಣಿನ ರಸವನ್ನು ಆಸ್ವಾದಿಸಿದಂತೆಯೇ ಸರಿ. ಈ ಆಸ್ವಾದನೆಯ ಸುಖವು ಎಂದಿಗೂ ಹೊಗಲಾರದು. ಇದೇ ನಿಜವಾದ ಸುಖವು.

ವಚನಃ— ೧೨೭. ಓಂ ನಮಃ ಶಿವಾಯ ಎಂಬುದೇ ತಂದೆ, ಓಂ ನಮಃ ಶಿವಾಯ ಎಂಬುದೇ ಋಷಿ, ಓಂ ನಮಃ ಶಿವಾಯ ಎಂಬುದೇ ಅಧಿದೇವತೆ. ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎಂದೆನಲು ಸದ್ಯೋನ್ಮುಕ್ತಿ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಪಂಚಾಕ್ಷರೀ ಮಂತ್ರವೇ ನಿಜವಾದ ದೇವತೆಯು ಅದರಲ್ಲಿ ಎಲ್ಲ ದೇವತೆಗಳು ಅಡಗಿರುವವು. ಅದರ ಮೂಲಕವಾಗಿ ಮುಕ್ತಿಯು ಲಭಿಸುವದು.



ವಚನಃ— ೧೨೮. ಓಂನಮಃ ಶಿವಾಯ ಎಂಬುದೇ ಆಚಾರಲಿಂಗ ಓಂನಮಃಶಿವಾಯ ಎಂಬುದೇ ಗುರುಲಿಂಗ, ಓಂನಮಃಶಿವಾಯ ಎಂಬುದೇ ಶಿವಲಿಂಗ, ಓಂನಮಃಶಿವಾಯ ಎಂಬುದೇ ಚರಲಿಂಗ, ಓಂನಮಃಶಿವಾಯ ಎಂಬುದೇ ಪ್ರಸಾದಲಿಂಗ, ಓಂನಮಃಶಿವಾಯ ಎಂಬುದೇ ಮಹಾಲಿಂಗ, ಓಂನಮಃಶಿವಾಯ ಎಂದೆನಲು ಪರಶಿವನು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಷಟ್‌ಸ್ಥಲ ಜ್ಞಾನವು ಅತ್ಯಂತ ಮಹತ್ತರವಾದದ್ದು. ಇದು ಪಂಚಾಕ್ಷರಿಯ ಜ್ಞಾನದ ಮೂಲಕ ದೃಢಪಡುವದು. ಭಕ್ತನಲ್ಲಿರುವ ಎಲ್ಲ ಲಿಂಗಗಳು ಪಂಚಾಕ್ಷರಿಯ ಸ್ವರೂಪದವೇ ಇರುತ್ತವೆ. ಅದನ್ನು ಧ್ಯಾನಿಸುವದರಿಂದ ಆಯಾ ಲಿಂಗಗಳು ವ್ಯಕ್ತವಾಗುವವು.

ವಚನಃ— ೧೨೯. "ಸದ್ಗುರು ಶ್ಶಿವಲಿಂಗಂಚ ಜಂಗಮಂಚ ಪ್ರಸಾದಕಂ। ಚತುರ್ವಿಧಂ ಷಡಕ್ಷರಂ ಮಂತ್ರಂ ಸಾಕ್ಷಾತ್ ಪರಶಿವಃ" ಓಂ ನಮಃಶಿವಾಯ, ಓಂನಮಃಶಿವಾಯ ಎನ್ನದಿರ್ದೊಡೆ ಬಂಧನ. ಓಂನಮಃ ಶಿವಾಯ ಎಂದೊಡೆ ಮೋಕ್ಷ. "ಷಡಕ್ಷರ ಜಪಂ ನಾಸ್ತಿ ಸರ್ವೇಷಾ" ಬಂಧನಂ ತಥಾ। ತನ್ಮಂತ್ರ ಜಪತೋ ಭಕ್ತಃ ಸದ್ಯೋನ್ಮೋಕ್ಷ ನ ಸಂಶಯಃ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಯ್ಯ ಬಂಧ ಮೋಕ್ಷ ತಾನೇ ಓಂನಮಃ ಶಿವಾಯ.

ಭಾವಃ— ಇಲ್ಲಿ ಪಂಚಾಕ್ಷರಿಯ ಮಹತ್ವವನ್ನು ಪುನಃ ವಿವರಿಸಿರುವನು. ಅದರಿಂದ ಬಂಧನವು ದೂರಾಗಿ ಮೋಕ್ಷವು ಘಟಿಸುವದು.

ವಚನಃ— ೧೩೦. ಶ್ರೀ ಮಹಾ ಪಂಚಾಕ್ಷರಿಯೇ ಸರ್ವ ಮಂತ್ರವೆಲ್ಲಕ್ಕೆಯೂ ಉತ್ಪತ್ತಿ ಸ್ಥಿತಿ ಲಯ ಸ್ಥಾನ. ಸರ್ವ ಕಾರಣವೆಲ್ಲಕ್ಕೆಯೂ ಮೂಲವು ಶ್ರೀಪಂಚಾಕ್ಷರಿ. ಅದಂತೆಂದಡೆ॥ ಕಾಮಿಕಾಗಮೇ ॥ ಶ್ಲೋ ॥ ಸಪ್ತಕೋಟಿ ಮಹಾಮಂತ್ರಾ ಉಪಮಂತ್ರಾಸ್ತ್ವನೇಕಥಾ। ಪಂಚಾಕ್ಷರ್ಯಾಂ ಪ್ರಲೀಯಂತೆ ಪುನಸ್ತತ್ರವಿನಿರ್ಗತಾಃ ॥ ತಸ್ಮಿನ್ವೇದಾಶ್ಚ ಶಾಸ್ತ್ರಾಣಿ ಮಂತ್ರ ಪಂಚಾಕ್ಷರೀ ತಥಾ। ಎಂದುದಾಗಿ ಇದು ಕಾರಣ ಶ್ರೀಪಂಚಾಕ್ಷರಿಯುಳ್ಳ ಸದ್ಭಕ್ತನೇ ವೇದವಿತ್ತು, ಆ ಸದ್ಭಕ್ತನೇ ಶಾಸ್ತ್ರವಾನ್, ಆ ಮಹಾಮಹಿಮನೇ ಪುರಾಣಿಕನು, ಆ ಮಹಾಮಹಿಮನೇ ಆಗಮಿಕನು, ಆ ಮಹಾ ಮಹಿಮನೇ ಸರ್ವಜ್ಞನಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ—** ಎಲ್ಲ ಮಂತ್ರಗಳು ಪಂಚಾಕ್ಷರಿಯಿಂದಲೇ ಹುಟ್ಟಿವೆ. ಪಂಚಾಕ್ಷರಿಯುಳ್ಳವನೇ ನಿಜವಾದ ಭಕ್ತನು. ಅವನೇ ವೇದಜ್ಞನು, ಮಹಿಮನು, ಸರ್ವಜ್ಞನು ಎಂದು ಇಲ್ಲಿ ವಚನಕಾರನು ಹೇಳುತ್ತಾನೆ.

**ವಚನಃ—** ೧೩೧. ವೇದವಾವುದು ವೇದ್ಯವಾವುದು ಎಂಬುದನರಿತು ನಿಂದಾತನೇ ಕೃತಾರ್ಥನು, ವೇದವಿತ್ತು. ವೇದ್ಯನಿಂತಹನೆಂದರಿದು ವೇದಿಸಿದರು ನಮ್ಮ ಪುರಾತನರು. ಓಂನಮಃಶಿವಾಯ ಎಂಬ ಮಂತ್ರ ವೇದ್ಯರು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಯ್ಯನ ಶರಣರು.

**ಭಾವಃ—** ನಿಜವಾದ ಶರಣರು ಪಂಚಾಕ್ಷರಿಯನ್ನು ಬಲ್ಲವರಿರುತ್ತಾರೆ. ಅವರೇ ಕೃತಾರ್ಥರು ನಿಜವಾದ ವೇದವಿತ್ತುಗಳು ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನಃ—** ೧೩೨. ಓಂ ನಮಃಶಿವಾಯ ಎಂಬುದೇ ಮಂತ್ರ. ಓಂ ನಮಃಶಿವಾಯ ಎಂಬುದೇ ತಂತ್ರ, ಓಂನಮಃಶಿವಾಯ ಎಂಬುದೇ ಯಂತ್ರ, ಓಂನಮಃಶಿವಾಯ ಎಂಬುದೇ ವಶ್ಯ. ಇದು ಕಾರಣ ಓಂ ನಮಃಶಿವಾಯ ಎಂಬುದೇ ಸಕಲಸಿದ್ಧಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವಃ—** ಪಂಚಾಕ್ಷರವೇ ನಿಜವಾದ ಮಂತ್ರ, ತಂತ್ರ, ಯಂತ್ರ, ವಶ್ಯವಿದೆ. ಇದರಿಂದಲೇ ಸಕಲ ಸಿದ್ಧಿ ಎಂದು ಹೇಳಿರುವನು.

**ವಚನಃ—** ೧೩೩. ಓಂನಮಃಶಿವಾಯ ಎಂಬುದೇ ವೇದ, ಓಂ ನಮಃಶಿವಾಯ ಎಂಬುದೇ ಶಾಸ್ತ್ರ, ಓಂನಮಃಶಿವಾಯ ಎಂಬುದೇ ಆಗಮ, ಓಂನಮಃಶಿವಾಯ ಎಂಬುದೇ ಪುರಾಣ, ಓಂನಮಃಶಿವಾಯ ಎಂಬುದೇ ಸಕಲ ಕಳೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ—** ಈ ಪಂಚಾಕ್ಷರಿಯೇ ವೇದ ಶಾಸ್ತ್ರಾಗಮಂಗಳು. ಅದೇ ಸಕಲ ಕಳೆ ಎಂದು ಹೇಳಿರುವನು.

**ವಚನಃ—** ೧೩೪. ಶ್ರೀ ಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದಿಂದ ಉಪಮನ್ಯುವಿಂಗೆ ಶಿವಜ್ಞಾನ ಸಿದ್ಧಿಸಿತ್ತು. ಶ್ರೀ ಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದ ಸಾಧನದಿಂದ ವಶಿಷ್ಠ, ವಾಮದೇವ ಮೊದಲಾದ ಸಮಸ್ತ ಋಷಿಗಳಿಗೆ ಹಿರಿದಪ್ಪ ಪಾಪದೋಷವು ಪರಿಹರಿಸಿತ್ತು. ಶ್ರೀ ಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದ ಸಾಧನದಿಂದ ಬ್ರಹ್ಮ ವಿಷ್ಣ್ವಾದಿಗಳಿಗೆ ಜಗತ್ಸೃಷ್ಟಿರಕ್ಷಾಪತಿತ್ವ ಸಾಧ್ಯವಾಯಿತ್ತು. ಅದೆಂತೆಂದಡೆ, ಬ್ರಹ್ಮಾಂಡ ಪುರಾಣದಲ್ಲಿ ॥ ಶ್ಲೋ ॥ ಉಪಮನ್ಯುಃ ಪುರಾ ಯೋಗೀ ಮಂತ್ರೇಣಾನೇನ ಸಿದ್ಧಿವಾನ್। ಲಬ್ಧವಾನ್ಪರಮೇಶಾನಾಚ್ಛೈವಶಾಸ್ತ್ರ ಪ್ರವಕ್ತೃತಾಂ। ಮತ್ತಂ॥ ವಿಷ್ಣು ಪುರಾಣದಲ್ಲಿ ॥ ಶ್ಲೋ ॥ ವಶಿಷ್ಠವಾಮದೇವಾದ್ಯಮುಾ ನಮೋ ಮುಕ್ತ ಕಿಲ್ಬಿಷಾಃ। ಮಂತ್ರೇಣಾನೇನ ಸಂಸಿದ್ಧಾ ಮಹಾತೇಜಸ್ವಿನೋ ಭವನ್। ಎಂದುದಾಗಿ, ಮತ್ತಂ ಕೂರ್ಮ ಪುರಾಣದಲ್ಲಿ ॥ ಶ್ಲೋ ॥ ಬ್ರಹ್ಮಾದೀನಾಂಚ ದೇವಾನಾಂ ಜಗತ್ಸೃಷ್ಟ್ಯರ್ಥಕಾರಣಂ। ಮಂತ್ರಸ್ಯಾಸ್ಯೈವಮಾಹಾತ್ಮ್ಯಾತ್ಸಾಮರ್ಥ್ಯ ಮುಪಜಾಯತೆ ಎಂದುದಾಗಿ ಇಂತಪ್ಪ ಪುರಾಣವಾಕ್ಯಂಗಳನರಿದು ವಿಪ್ರರೆಲ್ಲರು ಶ್ರೀ ಪಂಚಾಕ್ಷರಿಯ ಜಪಿಸಿರೋ, ಜಪಿಸಿರೋ! ಮಂತ್ರಂಗಳುಂಟೆಂದು ಕೆಡಬೇಡಿ ಕೆಡಬೇಡಿ. ಮರೆಯದಿರಿ ಮಹತ್ತಪ್ಪ ಪದವಿಯ ಪಡೆವೊಡೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರ ದೇವರ ದಿವ್ಯ ನಾಮವನು.



**ಭಾವಃ—** ಮಹತ್ತರವಾದ ಮೋಕ್ಷ ಪದವಿಯನ್ನು ಹೊಂದಬೇಕಾದರೆ ಪರಮಾತ್ಮನ ದಿವ್ಯ ನಾಮವನ್ನು ಪಂಚಾಕ್ಷರಿಯ ಮೂಲಕ ವಿಶ್ವಾಸಪೂರ್ವಕವಾಗಿ ಉಚ್ಚರಿಸಬೇಕು. ಹೀಗೆ ಈ ಮಂತ್ರವನ್ನು ಉಚ್ಚರಿಸಿ ವಶಿಷ್ಠ, ವಾಮದೇವಾದಿ ಋಷಿಗಳೂ ಬ್ರಹ್ಮ ವಿಷ್ಣ್ವಾದಿ ದೇವತೆಗಳೂ ಶ್ರೇಷ್ಠ ಪದವಿಯುಗಳನ್ನು ಹೊಂದಿದ್ದರ ಉದಾಹರಣೆಗಳನ್ನು ಇಲ್ಲಿ ಕೊಟ್ಟಿರುವನು.

**ವಚನಃ—** ೧೩೫. ಓಂನಮಃಶಿವಾಯ ಓಂನಮಃಶಿವಾಯ ಎನ್ನದಿದ್ದರೆ ಬಂಧನ. ಓಂನಮಃಶಿವಾಯ ಓಂನಮಃಶಿವಾಯ ಎಂದರೆ ಮೋಕ್ಷ. ಷಡಕ್ಷರೀ ಜಪಂ ನಾಸ್ತಿ ಸರ್ವೇಷಾಂ ಬಂಧನಂ ತಥಾ। ತನ್ಮಂತ್ರ ಜಪತೋ ಭಕ್ತ್ಯಾ ಸದ್ಯೋ ಮೋಕ್ಷಂ ನ ಸಂಶಯಃ ಎಂದುದಾಗಿ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಯ್ಯ ಬಂಧ ಮೋಕ್ಷವು ಓಂನಮಃಶಿವಾಯ.

**ಭಾವಃ—** ಪಂಚಾಕ್ಷರೀ ಮಂತ್ರ ಜಪದಿಂದ ಮೋಕ್ಷವು, ಮತ್ತು ಅದನ್ನು ಜಪಿಸದೆ ಇರುವದರಿಂದ ಬಂಧನವು, ಎಂದು ಹೇಳಿ ಇದರ ಸಮರ್ಥನಕ್ಕಾಗಿ ಉಕ್ತಿಗಳನ್ನು ಉದಹರಿಸಿರುವನು.

**ವಚನಃ—** ೧೩೬. ಅಗ್ರಜನಾಗಲಿ, ಅಂತ್ಯಜನಾಗಲಿ, ಮೂರ್ಖನಾಗಲಿ, ಪಂಡಿತನಾಗಲಿ, ಪಿಜಸುವುದು ಪಂಚಾಕ್ಷರಿಯ. ಜಪದಿಂದ

ರುದ್ರನಪ್ಪುದು ತಪ್ಪದು. ಅದೆಂತೆಂದಡೆ ಲೈಂಗ್ಯೆ, ಅಗ್ರಜೋ ಅಂತ್ಯಜೋ ವಾಪಿ ಮೂರ್ಖೋ ವಾ ಪಂಡಿತೋಪಿ ವಾ ಜಪೇತ್ಪಂಚಾಕ್ಷರೀ ಮಂತ್ರಂ ಸ ರುದ್ರೋ ನಾತ್ರಸಂಶಯಃ. ಇದಕ್ಕೆ ಶಪಥವ ಮಾಡಿದೆನು ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

**ಭಾವಃ**— ಪಂಚಾಕ್ಷರಿಯನ್ನು ಯಾವನು ವಿಶ್ವಾಸಪೂರ್ವಕವಾಗಿ ಜಪಿಸುತ್ತಾನೋ ಅವನು ರುದ್ರನಾಗುವನೆಂದು ಹೇಳಿ ಅದಕ್ಕೋಸ್ಕರ ವಚನಕಾರನು ಒಂದು ಉಕ್ತಿಯನ್ನು ಉದಹರಿಸಿರುವನು. ಈ ಮಂತ್ರವನ್ನು ಎಂಥ ಜಾತಿಯವನಾದರೂ ಜಪಿಸಿ ಶ್ರೇಷ್ಠಪದವನ್ನು ಹೊಂದಬಹುದೆಂದು ಹೇಳಿರುವನು.

---

# ರುದ್ರಾಕ್ಷಿ.

**ವಿವರಣೆಃ**— ರುದ್ರಾಕ್ಷಿಯು ಈಶ್ವರನ ಚಿನ್ಹವಾಗಿದೆ. ಅದನ್ನು ವೀರಶೈವನು ತನ್ನ ದೇಹದಮೇಲೆ ಧರಿಸತಕ್ಕದ್ದೆಂದು ವಚನಕಾರನು ಮುಂದಿನ ವಚನಗಳಲ್ಲಿ ಹೇಳಿರುವನು.

**ವಚನಃ**— ೧೩೭. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಪಂಚಬ್ರಹ್ಮವೊದಲಾದ ಪಂಚಮುಖದ ರುದ್ರಾಕ್ಷಿಯ ಹಸ್ತ, ಬಾಹು, ಕರ್ಣ, ಕಂಠ, ಉರುಮಸ್ತಕಂಗಳಲ್ಲಿ ಧರಿಸಿಪ್ಪಾತನೇ ರುದ್ರನು. ಆ ಸದ್ಭಕ್ತನ ದರ್ಶನ ಸ್ಪರ್ಶನವ ಮಾಡಿದವರಿಗೆ ಭವರೋಗ ದುರಿತ ಮುಟ್ಟಲಮ್ಮವು ನೋಡಾ ಶೃತಿ. ॥ ಅತ ಏವ ರುದ್ರಾಕ್ಷಧಾರಣಾದೇವ ರುದ್ರಃ ಎಂದುದಾಗಿ ರುದ್ರಪದವಿಯನೀವ ರುದ್ರಾಕ್ಷಿಯ ಧರಿಸಿಪ್ಪ ಶಿವಭಕ್ತಂಗೆ ಶರಣೆಂಬೆನಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಕೆಲವು ರುದ್ರಾಕ್ಷಿಗಳಿಗೆ ಪಂಚಮುಖಗಳಿರುವವು. ಈ ಮುಖಗಳು ಪಂಚಬ್ರಹ್ಮದ ಗುರ್ತುಗಳಾಗಿವೆ. ಇಂಥ ರುದ್ರಾಕ್ಷಿಗಳನ್ನು ಧರಿಸಿದರೆ ಭವರೋಗವು ಭಕ್ತನನ್ನು ಹೊದ್ದಲಾರದೆಂದು ಇಲ್ಲಿ ಹೇಳಿರುವನು.

**ವಚನಃ**—೧೩೮. ಘನಕ್ಕೆ ಘನ ಮಹಿಮೆಯ ಪಡೆವರೆ ಶ್ರೀರುದ್ರಾಕ್ಷಿಯನೆ ಧರಿಸುವುದು. ರುದ್ರಾಕ್ಷಿಯ ಧರಿಸಿಪ್ಪಾತನು ಮರ್ತ್ಯನಲ್ಲ ನೋಡಿರೇ. ಪಶ್ಚಿಮದಲ್ಲಿ ಒಂದು, ಶಿಖಿಯಲ್ಲಿ ಮೂರು, ಶಿಖೆಯಲ್ಲಿ ಮೂವತ್ತಾರು, ಗಳದಲ್ಲಿ ಮೂವತ್ತೆರಡು, ಕರ್ಣದ್ವಯದಲ್ಲಿ ಎರಡು, ಹಾರದಲ್ಲಿ ನೂರೆಂಟು, ತೋಳುಗಳಲ್ಲಿ ಹದಿನಾರು ಹದಿನಾರು, ಕರಗಳಲ್ಲಿ ಹನ್ನೆರಡು ಹನ್ನೆರಡು ಉರದಲ್ಲಿ ಐವತ್ತು, ಜಪದಲ್ಲಿ ಇಪ್ಪತ್ತೆಂಟು, ಈ ಕ್ರಮವನರಿದು ರುದ್ರಾಕ್ಷಿಯ ಧರಿಸಿದಾತನೇ ರುದ್ರನು. ಆತನೇ ಸದ್ಯೋನ್ಮುಕ್ತನು. ಆತನೇ ಇಹಲೋಕ ಪೂಜ್ಯನು. ಆತನ ದರ್ಶನ ಸ್ಪರ್ಶನದಿಂದಲಾನು ನಿತ್ಯ ಮುಕ್ತನಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ವಚನಕಾರನು ಈ ವಚನದಲ್ಲಿ ರುದ್ರಾಕ್ಷಿಯನ್ನು ಶರೀರದ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಧರಿಸಬೇಕೆಂಬದನ್ನು ವಿಶದಪಡಿಸಿರುವನು. ಹೀಗೆ ಧರಿಸುವವನು ಮೋಕ್ಷವನ್ನೈದುವನೆಂದು ಇಲ್ಲಿ ಹೇಳಿದ್ದಾನೆ.

**ವಚನಃ**—೧೩೯. ಸದ್ಯೋಜಾತ ವಾಮದೇವ ಮೊದಲಾದ ಪಂಚಮುಖವೇ ಪಂಚಮುಖದ ರುದ್ರಾಕ್ಷಿ; ಆ ರುದ್ರಾಕ್ಷಿಯ ಹಸ್ತ ತೋಳು ಉರ ಕಂಠ ಕರ್ಣ ಮಸ್ತಕದಲ್ಲಿ ಧರಿಸಿಪ್ಪ ಶಿವಭಕ್ತನೇ ರುದ್ರನು. ಆತನ ದರ್ಶನ ಸ್ಪರ್ಶನದಿಂದ ಭವರೋಗ ದುರಿತವಿರಲಮ್ಮವು ನೋಡಾ. "ಅಥ ಏವ ರುದ್ರಾಕ್ಷಿಧಾರಣಾತ್ ರುದ್ರೋಭವತಿ" ಇಂತೆಂದುದಾಗಿ ರುದ್ರಾಕ್ಷಿ ಧರಿಸಿಪ್ಪ ಶರಣರಿಗೆ ಶರಣೆಂಬೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವಃ**— ಇಲ್ಲಿ ರುದಾಕ್ಷಿಯ ಮಹತ್ವವನ್ನು ವಚನಕಾರನು ವಿವರಿಸಿರುವನು.

**ವಚನಃ**— ೧೪೦. ಘನಕ್ಕೆ ಘನಮಹಿಮೆಯ ಪಡೆವರೆ ರುದ್ರಾಕ್ಷಿಯ ಧರಿಸಿಪ್ಪ ಸದ್ಭಕ್ತನು ಮನುಜನಲ್ಲ, ನೋಡಿರೇ. ಮುನ್ನಲೊಬ್ಬ ವ್ಯಾಧನು ಶ್ವಾನನ ಕೊರಳಲ್ಲಿ ರುದ್ರಾಕ್ಷಿಯ ಕಟ್ಟಲು, ಆ ಶ್ವಾನ ರುದ್ರಲೋಕವನ್ನೈದಿತ್ತೆಂಬುದಕ್ಕೆ ಶಿವಧರ್ಮ ಪುರಾಣ ಪ್ರಸಿದ್ಧ ನೋಡಿರೇ. ॥ ರುದ್ರಾಕ್ಷ ಕಂಠಮಾಶ್ರಿತ್ಯ ಶ್ವಾನೋಪಿ ಮ್ರಿಯತೆ ಯದಿ ॥ ಸೋಪಿ ರುದ್ರತ್ವಮಾಪ್ನೋತಿ ಕಿಂ ಪುನರ್ಮಾನುಷಾದಯಃ ॥ ಎಂದುದಾಗಿ ಮತ್ತೆ ಶಿಖಾಯಾಂ ಧಾರಯೇದೇಕಂ ಶಿರಸಿ ತ್ರೀಣಿ ಧಾರಯೇತ್ । ಷಟ್ತ್ರಿಂಶದ್ಧಾರಯೇನ್ಮೂರ್ಧ್ನಿ ಏಕೈಕಂ ಕರ್ಣಯೋರ್ದ್ವಯಂ । ದ್ವಾತ್ರಿಂಶತ್ಕಂಠಮಾಲಾಯಾಂ ಪಂಚಾಶನ್ಮಾಲಿಕಾಂ ಹೃದಿ । ಬಾಹ್ವೋಶ್ಚ ಷೋಡಶಶ್ಚೈವ ದ್ವಾದಶೈವ ಪ್ರಕೋಷ್ಠಕೆ । ಅಷ್ಟೋತ್ತರ ಶತಂ ಮಾಲಾ ರುದ್ರಾಕ್ಷೈರುಪವೀತಕಂ । ಪದೇ ಪದೇಶ್ವಮೇಧಸ್ಯ ಫಲಂ ಪ್ರಾಪ್ನೋತಿ ಶಾಶ್ವತಂ ॥ ಎಂದುದಾಗಿ ಶಿಖಿಯಲ್ಲಿ ಒಂದು, ಶಿರಸ್ಸಿನಲ್ಲಿ ಮೂರು, ಮಂಡೆಯ ಸುತ್ತಲು ಮೂವತ್ತಾರು, ಎರಡು ಕಿವಿಗಳಲ್ಲಿ ಒಂದೊಂದು, ಕೊರಳಲ್ಲಿ ಮೂವತ್ತೆರಡು, ಹೃದಯದಲ್ಲಿ ಐವತ್ತು, ಎರಡು ತೋಳುಗಳಲ್ಲಿ ಹದಿನಾರು ಹದಿನಾರು, ಎರಡು ಮುಂಗೈಗಳಲ್ಲಿ ಹನ್ನೆರಡು ಹನ್ನೆರಡು, ಯಜ್ಞೋಪವೀತವಾಗಿ ನೂರೆಂಟು ಮಣಿಗಳಿಂದ ಅಕ್ಷಮಾಲೆಯಂ ಮಾಡಿ ಧರಿಸುವುದು. ಈ ರೀತಿಯಲ್ಲಿ ಧರಿಸಿದಾತನು ಹೆಜ್ಜೆ ಹೆಜ್ಜೆಯಲ್ಲಿ ಅಶ್ವಮೇಧಯಾಗದ ಫಲವನ್ನೈದುವನು. ಸಂಶಯವಿಲ್ಲಾಗಿ ಇಂತಪ್ಪ ಮಹಾಮಹಿಮನು ಇಹಲೋಕ ಪೂಜ್ಯನು, ಪರಲೋಕ ಪೂಜ್ಯನು. ಆ ಸದ್ಭಕ್ತನ ದರ್ಶನ ಸ್ಪರ್ಶನದಿಂದ ಪಾಪಕ್ಷಯವಹುದು. ಈ ಕ್ರಮವನರಿಯದೆ ರುದ್ರಾಕ್ಷಿಯ ಧರಿಸಿದಡೆ ಕತ್ತೆ ರುದ್ರಾಕ್ಷಿಯ ಹೊತ್ತು ಬಂದಂತೆ ಕಾಣಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.



**ಭಾವಃ**— ಇಲ್ಲಿ ವಚನಕಾರನು ರುದ್ರಾಕ್ಷಿಯ ಮಹಿಮೆಯನ್ನು ವರ್ಣಿಸಿ ಅದನ್ನು 'ಶರೀರದ ಯಾವ ಯಾವ ಭಾಗಗಳಲ್ಲಿ ಎಷ್ಟು ಎಷ್ಟು ಧರಿಸಬೇಕೆಂಬುದನ್ನು ಹೇಳಿರುವನು.

---

## ಮೋಕ್ಷ.

**ವಿವರಣೆ**— ಮುಂದಿನ ವಚನಗಳಲ್ಲಿ ಲಿಂಗಾಂಗಿಯು ಮೋಕ್ಷವನ್ನು ಹೊಂದುವ ರೀತಿಯನ್ನು ಹೇಳಿದ್ದಾನೆ. ಅವನು ತನ್ನ ಆಚರಣೆ, ಮತ್ತು ರೀತಿ ನಡತೆಗಳಿಂದ ತನ್ನಲ್ಲಿ ಲಿಂಗದ ಕಳೆಯನ್ನು ಬರಮಾಡಿಕೊಳ್ಳತಕ್ಕದ್ದು. ಉಚ್ಚ ವಿಚಾರ ಆಚಾರಗಳ ಆವಿರ್ಭಾವವೇ ಈ ಲಿಂಗದ ಕಳೆಯ ಉತ್ಪಾದನೆಯ ಕುರುಹು ಎಂದು ಹೇಳಬಹುದು. ಪರಮಾತ್ಮನು ತನ್ನಿಂದ ಬಿಟ್ಟು ಬೇರೆ ಇಲ್ಲ. ಆದ್ದರಿಂದ ಅವನನ್ನು ತನ್ನಲ್ಲಿಯೇ ಹುಡುಕಬೇಕು ಮತ್ತು ಕಾಣಬೇಕು. ಅವನು ತನ್ನಲ್ಲಿ ಯಾವಾಗಲೂ ಗೂಢ ಸ್ಥಿತಿಯಲ್ಲಿರುತ್ತಾನೆ. ಈ ಸ್ಥಿತಿಯಲ್ಲಿದ್ದ ಪರಮಾತ್ಮನನ್ನು ತನ್ನಲ್ಲಿ ಪ್ರಕಟಗೊಳಿಸಬೇಕು. ಹೀಗೆ ಪ್ರಕಟ ಮಾಡುವದೇ ಮನುಷ್ಯನ ಪ್ರಗತಿ ಎಂದೆನಿಸಿಕೊಳ್ಳುತ್ತದೆ. ಹೀಗೆ ಲಿಂಗವು ಕ್ರಮೇಣ ಪ್ರಕಟಗೊಳ್ಳುತ್ತ ಹೋದ ಹಾಗೆ ಶರೀರದ ಭೋಗಗಳೇ ಲಿಂಗಕ್ಕೆ ಪೂಜಾ ಸಾಧನಗಳಾಗುತ್ತವೆ. ಈ ಸ್ಥಿತಿಯಲ್ಲಿ ಅಂಗ ಲಿಂಗ ಎಂಬ ಭೇದ ಭಾವವು ಉಳಿಯಲಾರದು. ಅವುಗಳಲ್ಲಿ ಸಾಮರಸ್ಯತ್ವವು ಉಂಟಾಗಹತ್ತುತ್ತದೆ. ಈ ಸಾಮರಸ್ಯ ಸ್ಥಿತಿಯೇ ಮೋಕ್ಷವೆಂದೆನಿಸಿಕೊಳ್ಳುತ್ತದೆ. ಈ ವಿಚಾರಗಳು ಕೆಳಗಿನ ವಚನಗಳಲ್ಲಿ ಬಂದಿವೆ.

**ವಚನ**:— ೧೪೧. ಎನ್ನ ಮನಸ್ಸು ಮತ್ತೊಂದ ನೆನೆಯಲರಿಯದು, ನೀವು ನೆನಹು ರೂಪಾಗಿ ಎನ್ನ ಮನವ ಗ್ರಹಿಸಿದಿರಾಗಿ, ಆ ಮನಸ್ಸು ನಿಮ್ಮನವಗ್ರಹಿಸಿತ್ತಾಗಿ ಎನ್ನ ವಾಕ್ಕು ಮತ್ತೊಂದ ನುಡಿಯಲರಿಯದು, ನೀವು ಮಹಾಮಂತ್ರ ರೂಪಾಗಿ, ಎನ್ನ ವಾಕ್ಕನವಗ್ರಹಿಸಿದಿರಾಗಿ, ಆ ವಾಕ್ಕು ನಿಮ್ಮನವ ಗ್ರಹಿಸಿತ್ತಾಗಿ, ಎನ್ನ ಕಾಯ ಮತ್ತೊಂದ ಭೋಗಿಸಲರಿಯದು, ನೀವು ಪ್ರಸಾದ ರೂಪಾಗಿ ಎನ್ನ ಕಾಯವನವಗ್ರಹಿಸಿದಿರಾಗಿ, ಆ ಕಾಯ ನಿಮ್ಮನವಗ್ರಹಿಸಿತ್ತಾಗಿ ಎನ್ನ ಮನೋವಾಕ್ಕಾಯದ ಅಂತರಂಗ ಬಹಿರಂಗ ಸರ್ವಾಂಗವು ಇತರ ದೇವತೆಗಳ ವಾಙ್ಮನಕ್ಕತೀತನನವಗ್ರಹಿಸಿತ್ತಾಗಿ, ಎನ್ನ ಮನೋವಾಕ್ಕಾಯದ ಸ್ಥಿತಿ ಗತಿ ನೀನೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ**:— ಪರಮಾತ್ಮನು ನೆನಹು ರೂಪಾಗಿ ಮನಸ್ಸನ್ನು ಅವಗ್ರಹಿಸಿದ ಕಾರಣ ಮನಸ್ಸು ಪರಮಾತ್ಮನನ್ನು ಬಿಟ್ಟು ಮತ್ತೊಂದನ್ನು ನೆನೆಯಲರಿಯದು. ಹಾಗೆಯೇ ವಾಕ್ಕಿನಲ್ಲಿ ಮಂತ್ರ ತುಂಬಿದ್ದರಿಂದ ವಾಕ್ಕು ಆ ಮಂತ್ರವನ್ನು ಬಿಟ್ಟು ಮತ್ತೊಂದನ್ನು ನುಡಿಯಲರಿಯದು. ಶರೀರದಲ್ಲಿ ಪ್ರಸಾದವು ತುಂಬಿದ್ದರಿಂದ ಅದನ್ನು ಬಿಟ್ಟು ಕಾಯುವು ಮತ್ತೊಂದನ್ನು ಭೋಗಿಸಲರಿಯದು. ಹೀಗೆ ಮನಸ್ಸು, ವಾಕ್ಕು ಮತ್ತು ಕಾಯ ಇವುಗಳೆಲ್ಲವೂ ನೀನೇಯಾಗಿರುತ್ತೀ ಎಂದು ಪರಮಾತ್ಮನನ್ನು ಕುರಿತು ವಚನಕಾರನು ಇಲ್ಲಿ ಹೇಳಿಕೊಳ್ಳುತ್ತಾನೆ.

**ವಚನ**:— ೧೪೨. ಎನ್ನಂಗದಲ್ಲಿ ನಿನಗೆ ಮಜ್ಜನ, ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ, ಎನ್ನ ತುರುಬಿನಲ್ಲಿ ನಿನಗೆ ಕುಸುಮ ಪೂಜೆ. ಎನ್ನ ನೇತ್ರದಲ್ಲಿ ನಿನಗೆ ನಾನಾ ರೂಪು ವಿಚಿತ್ರ ವಿನೋದ, ಎನ್ನ ಶ್ರೋತ್ರದಲ್ಲಿ ನಿನಗೆ ಪಂಚ ಮಹಾ ವಾದ್ಯ ಕೇಳಿರೇ. ಎನ್ನ ನಾಸಿಕದಲ್ಲಿ ನಿನಗೆ ಸುಗಂಧ ಧೂಪ ಪರಿಮಳ, ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ, ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣ ಅಲಂಕಾರ ಪೂಜೆ, ಎನ್ನ ಸಚ್ಚಿದಾನಂದವೆಂಬ ಸೆಜ್ಜೆ ಗೃಹದಲ್ಲಿ ನೀನು ಸ್ಪರ್ಶನಂಗೈದು ನೆರೆದಿಪ್ಪಯಾಗಿ, ನೀ ನಾನೆಂಬೆರಡಳಿದು ತಾನು ತಾನಾದ ಘನವನೇನೆಂಬೆನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ**:— ಪ್ರಸಾದ ಕಾಯನಾದ ಲಿಂಗಾಂಗಿಯ ಪೂಜಾವಿಧವನ್ನು ಇಲ್ಲಿ ವಚನಕಾರನು ವರ್ಣಿಸಿದ್ದಾನೆ. ಮನುಷ್ಯನು ಆನಂದಪಡುವ ವಸ್ತುಗಳನ್ನೆಲ್ಲ ಅವನು ಪ್ರಸಾದ ರೂಪಾಗಿ ಪರಿಗ್ರಹಿಸುವದರಿಂದ ಅವೆಲ್ಲವೂ ಪರಮಾತ್ಮನ ಪೂಜೆಯ ಕ್ರಿಯೆಗಳಂತೆ ಪರಿಣಮಿಸುವವೆಂದು ವಚನಕಾರನು ಇಲ್ಲಿ ವಿವರಿಸಿರುವನು.

**ವಚನ**:— ೧೪೩. ಸಾಲೋಕ್ಯವೆಂದೇನು ಅಂಗದ ಮೇಲೆ ಲಿಂಗ ಸಂಬಂಧಿಯಾಗಿರುತ್ತಿರಲು? ಸಾಮೀಪ್ಯವೆಂದೇನು ಗುರುಲಿಂಗಜಂಗಮದ ದಾಸೋಹದ ಸನ್ನಿಧಿಯೊಳಿರುತ್ತಿರಲು? ಸಾರೂಪ್ಯವೆಂದೇನು ಅನವರತ ಅರ್ಚನೆಯೊಳಿರುತ್ತಿರಲು? ಸಾಯುಜ್ಯವೆಂದೇನು ಚತುರ್ದಶ ಭುವನವ ಒಳಕೊಂಡ ಮಹಾಘನವ ಮನವಸಂಗವಿ[illegible] ನೆನೆಯುತ್ತಿರಲು? ಇಂತೀ ಚತುರ್ವಿಧಪದವೆಂದೇನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ನಾಗನೂರ ಶ್ರೀ ರುದ್ರಾಕ್ಷಿಮಠ

**ಭಾವ**:— ಮೋಕ್ಷ ಪದದಲ್ಲಿ ಸಾಲೋಕ್ಯ ಸಾಮೀಪ್ಯ, ಸಾರೂಪ್ಯ, ಸಾಯುಜ್ಯಗಳೆಂದು ನಾಲ್ಕು ವಿಧಗಳನ್ನು ಮಾಡುವದುಂಟು. ಈ ವಿಧಗಳೆಲ್ಲವು ಲಿಂಗಾಂಗಿಯ ವರ್ತನೆಯಲ್ಲಿ ಹ್ಯಾಗೆ ಉಂಟಾಗುತ್ತವೆಂಬದನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಅಂಗಲಿಂಗ ಸಂಬಂಧವು ಸಾಲೋಕ್ಯಪದವೆಂತಲೂ, ದಾಸೋಹ ಪದವು ಸಾಮೀಪ್ಯವೆಂತಲೂ, ಅನವರತ ಅರ್ಚನೆ ಮಾಡುವದು ಸಾರೂಪ್ಯಪದವೆಂತಲೂ, ಮಹಾಘನ ವಸ್ತುವಾದ ಲಿಂಗವು ಮನವನವಗವಿಸಿದ್ದು ಸಾಯುಜ್ಯಪದವೆಂತಲೂ ವಚನಕಾರನು ಇಲ್ಲಿ ಹೇಳಿರುವನು.

**ವಚನ**:— ೧೪೪. ಎನ್ನ ಸರ್ವಾಂಗದಲ್ಲಿ ಲಿಂಗವೈದಾನೆ, ಅಯ್ಯಾನೆ. ಎನ್ನ ಮನವರಿಯದೆ ಕೆಟ್ಟೆಕೆಟ್ಟೆನಯ್ಯಾ. ಎನ್ನಂತರಂಗ ಬಹಿರಂಗದಲ್ಲಿ ಲಿಂಗ ವೈದಾನೆ. ಮನವರಿಯದೆ ಕೆಟ್ಟೆಕೆಟ್ಟೆ. ವಿಶ್ವಾಸದಿಂದ ಗ್ರಹಿಸಲೊಲ್ಲದೆ ಕೆಟ್ಟೆಕೆಟ್ಟೆನಯ್ಯಾ. ಈ ಮನ ವಿಶ್ವಾಸದಿಂದ ಗ್ರಹಿಸಿದೊಡೆ ಸತ್ಯನಹೆ ನಿತ್ಯನಹೆ ಮುಕ್ತನಹೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವ**:— ತಮ್ಮಲ್ಲಿಯೇ ಲಿಂಗವಿದೆಂದು ಸಾಮಾನ್ಯ ಜನರು ನಂಬುವದಿಲ್ಲ. ಇದರಿಂದ ಅವರು ಕೆಡುವರು. ಆದರೆ ವಿಶ್ವಾಸಭಾವವುಳ್ಳವರಾಗಿ ಅವರು ಹೀಗೆ ನಂಬಿದಲ್ಲಿ ಸಾಯುಜ್ಯ ಪದವನ್ನು ಅವರು ನಿಜನಾಗಿ ಹೊಂದುವರೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನ**:— ೧೪೫. ಶಿವ ಶಿವಾ ನೀನೆನ್ನ ಮನವ ನೋಡಿಹೆನೆಂಬೆ. ಎನ್ನ ಗುಣಾವಗುಣವ ಹಿಡಿದಿಹೆನೆಂಬೆ. ಮನವಾರು, ನೀನಾರು ಎಂಬುದನರಿಯಾ? ನೀನರಿಯದಿರ್ದೊಡೆ ನಾನರಿಯೆನೆ? ನಾನರಿಯದಿರ್ದೊಡೆ ನೀನರಿಯಾ? ಎಂದೆನಗೆ ನೀನು ಪ್ರಾಣ ಲಿಂಗವಾದೆ, ಅಂದೇ ನಾನು ಲಿಂಗ ಪ್ರಾಣಿಯಾದೆನು. ಇನ್ನು ಮನಸ್ಸಿನ್ನಾರದು ಹೇಳಾ? ಇದು ಕಾರಣ ದ್ವಂದ್ವ ಕರ್ಮ ಮುನ್ನವೇ ನಾಸ್ತಿ ಶ್ರೀಗುರುಲಿಂಗ ಜಂಗಮ ಪ್ರಸಾದ. ವೇದಶಾಸ್ತ್ರಾಗಮ ಪುರಾಣಂಗಳು ಈಸುವ ಬಲ್ಲುದ ನಾ ತೋರಲೇಕಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ?

**ಭಾವ**:— ಭಕ್ತನಿಗೆ ದ್ವಂದ್ವ ಕರ್ಮಗಳೆಂಬುವಿಲ್ಲ. ಪರಮಾತ್ಮನು ಭಕ್ತನಲ್ಲಿ ಪ್ರಾಣಲಿಂಗವಾದೊಡನೆ, ಭಕ್ತನೂ ಲಿಂಗ ಪ್ರಾಣಿಯಾಗುವನು.



ಹೀಗೆ ಲಿಂಗಪ್ರಾಣಿಯಾದೊಡನೆ ಗುಣ, ಅವಗುಣ, ಅರಿವು, ಅಜ್ಞಾನ ಎಂದು ಮೊದಲಾಗಿ ಭೇದ ಭಾವಗಳಿರಲಾರವು.

**ವಚನ**:— ೧೪೬. ಪಾಪ ನನ್ನದೇ ಪುಣ್ಯ ನಿನ್ನದೇ ಅಯ್ಯಾ? ದ್ವಂದ್ವ ಕರ್ಮ ಎನಗೆ ಬೇರಾದ ಪರಿ ಎಂತಯ್ಯಾ? ವಿಚಾರವಾದ ಬಳಿಕ ನಾನು ಲಿಂಗ ಪ್ರಾಣಿ, ನೀನು ಭಕ್ತಕಾಯನು. ಇದು ಕಾರಣ ದ್ವಂದ್ವ ಕರ್ಮ ಮುನ್ನವೇ ನಾಸ್ತಿ. ಇನ್ನು ಭಾವಭೇದವೆಂದಡೆ ನಗೆಗೆಡೆಯಪ್ಪದು. ಹೆಚ್ಚು ಕುಂದು ಎನ್ನದಲ್ಲ, ನಿನ್ನದಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ**:— ಭಕ್ತನ ಸಮರಸಾಚಾರದ ವಿವರವನ್ನು ವಚನಕಾರನು ಬಹು ಸುಂದರವಾಗಿ ಇಲ್ಲಿ ಹೇಳಿದ್ದಾನೆ. ಪಾಪ, ಪುಣ್ಯಗಳೆರಡೂ ಮುಕ್ತನ ಸ್ಥಿತಿಯಲ್ಲಿ ಲಯವಾಗಿ ಹೋಗುವವು.

**ವಚನ**:— ೧೪೭. ಎನ್ನ ಗತಿ ನಿನ್ನ ಗತಿ, ಎನ್ನ ಕೇಳಿಕೆ ನಿನ್ನಕೇಳಿಕೆ, ಎನ್ನ ನೋಟ ನಿನ್ನ ನೋಟ, ಎನ್ನಂಗಸ್ಪರ್ಶನ ನಿನ್ನಂಗಸ್ಪರ್ಶನ, ಎನ್ನ ಸುಖ ಭೋಗವೆಲ್ಲ ನಿನ್ನ ಸುಖಭೋಗ, ಎನ್ನೊಳಗೆ ನೀನು ನಿನ್ನೊಳಗೆ ನಾನು, ಎನ್ನ ಪ್ರಾಣ ನೀನು ನಿನ್ನ ಪ್ರಾಣ ನಾನಾದ ಕಾರಣ ಎನ್ನ ಸೋಂಕಿತ್ತೆಲ್ಲ ನಿನ್ನ ಪೂಜೆಯಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

**ಭಾವ**:— ವಚನಕಾರನು ಸಮರಸಾಚಾರದ ವರ್ತನೆಯನ್ನು ವರ್ಣಿಸಿರುವನು.

**ವಚನ**:— ೧೪೮. ಎನಗೆ ನೀನು ಪ್ರಾಣ, ನಿನಗೆ ನಾನು ಪ್ರಾಣ ಇನ್ನೇನೋ ಇನ್ನೇನೋ? ಹಂಗಿಲ್ಲ ಹರಿಇಲ್ಲ, ಮತ್ತೇನು ಪ್ರಪಂಚಿಲ್ಲವಾಗಿ. ನೀ ನಡಿಸಿದಂತೆ ನಡೆದೆ, ನೀ ನುಡಿಸಿದಂತೆ ನುಡಿದೆ. ನೀ ನೋಡಿಸಿದಂತೆ ನೋಡಿದೆ. ನೀನಾಡಿಸಿದಂತೆ ಯಾಡಿದೆ. ನೀ ಮಾಡಿಸಿದಂತೆ ಮಾಡಿದೆ. ಈ ಪುಣ್ಯಪಾಪ ಸುಖದುಃಖಾತ್ಮಕನು ನೀನೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

**ಭಾವ**:— ಭಕ್ತ ಮತ್ತು ಲಿಂಗ ಇವುಗಳಲ್ಲಿ ಏಕಾತ್ಮ ಭಾವವು ಉಂಟಾದ್ದರಿಂದ ಪರಮಾತ್ಮನು ಆಡಿಸಿದಂತೆ ಆತ್ಮನು ಆಡುವನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**ವಚನಃ** — ೧೪೯. ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ. ದೇವ ನಿನಲ್ಲದಿಲ್ಲ, ಭಕ್ತ ನಾನಲ್ಲದಿಲ್ಲ. ಈ ಪರಿಯಲ್ಲಿ ಮಾಡುವರಿನ್ನಾರು ಹೇಳಾ? ಎನಗೆ ನೀನೆ ಗತಿ, ನಿನಗೆ ನಾನೇ ಗತಿ ಇನ್ನೇಕೆ ಜವನಿಕೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ?

**ಭಾವಃ** — ವಚನಕಾರನು ಪರಿಪೂರ್ಣಾವಸ್ಥೆಯನ್ನು ಇಲ್ಲಿ ವಿವರಿಸಿರುವನು.

521.